ಮುಕ್ರಿಯರ ಸಾಮಾಜಿಕ ಸಂಕಥನ
(ಉತ್ತರಕನ್ನಡ ಜಿಲ್ಲೆಯನ್ನು ಪರಿಗಣಿಸಿ)

ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಈರಪ್ಪ ಅಂಬ್ಲಯ್ಯ

ಮಾರ್ಗದರ್ಶಕರು
ಡಾ. ಹಿ.ಚಿ. ಬೋರಲಿಂಗಯ್ಯ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೮

ಮುಕ್ರಿಯರ ಸಾಮಾಜಿಕ ಸಂಕಥನ

(ಉತ್ತರಕನ್ನಡ ಜಿಲ್ಲೆಯನ್ನು ಪರಿಗಣಿಸಿ)

ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಈರಪ್ಪ ಅಂಬ್ಲಯ್ಯ

ಮಾರ್ಗದರ್ಶಕರು
ಡಾ. ಹಿ.ಚಿ. ಬೋರಲಿಂಗಯ್ಯ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

ಈರಪ್ಪ ಅಂಬ್ಲಯ್ಯ ಅವರು **ಮುಕ್ರಿಯವರ ಸಾಮಾಜಿಕ ಸಂಕಥನ** (ಉತ್ತರಕನ್ನಡ ಜಿಲ್ಲೆಯನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ :

ಸ್ಥಳ : ವಿದ್ಯಾರಣ್ಯ

(ಡಾ. ಹಿ.ಚಿ. ಬೋರಲಿಂಗಯ್ಯ)
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಮುಕ್ರಿಯವರ ಸಾಮಾಜಿಕ ಸಂಕಥನ (ಉತ್ತರಕನ್ನಡ ಜಿಲ್ಲೆಯನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಹಿ.ಚಿ. ಬೋರಲಿಂಗಯ್ಯ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ :

ಸ್ಥಳ : ವಿದ್ಯಾರಣ್ಯ

(ಈರಪ್ಪ ಅಂಬ್ಲಯ್ಯ)
ಸಂಶೋಧಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಪರಿಶಿಷ್ಟಗಳು

ಕೋಷ್ಟಕ

ವೃತ್ತಚಿತ್ರ

ಲಂಬಚಿತ್ರ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪ್ರವೇಶ

ಅಧ್ಯಯನದ ಉದ್ದೇಶ

ಅಧ್ಯಯನದ ವ್ಯಾಪ್ತಿ

ಅಧ್ಯಯನದ ವಿಧಾನ

ಅಧ್ಯಯನದ ಸ್ವರೂಪ

ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ಸ್ವರೂಪ

ಪ್ರಸ್ತಾವನೆ

ಉತ್ತರ ಕನ್ನಡ ಜಿಲ್ಲೆ ಕರ್ನಾಟಕದಲ್ಲಿ ಹಲವು ಕಾರಣಗಳಿಗಾಗಿ ಮಹತ್ವದ ಜಿಲ್ಲೆ. ಅಲ್ಲಿನ ಜೀವ ವೈವಿಧ್ಯ, ಅಬೇಧ್ಯ ಕಾಡು, ನೈಸರ್ಗಿಕ ಸಂಪನ್ಮೂಲ ಮತ್ತು ಸಂಪದ್ಭರಿತ ಕಡಲ ಕಿನಾರೆಗಳಿಗೆ ಈ ಜಿಲ್ಲೆ ಹೆಸರುವಾಸಿ. ಇದಲ್ಲದೆ, ಉತ್ತರ ಕನ್ನಡ ಕರ್ನಾಟಕದಲ್ಲಿಯೇ ಅತ್ಯಂತ ಹೆಚ್ಚು ವೈವಿಧ್ಯಮಯ ಜನಸಮುದಾಯಗಳು ವಾಸಿಸುತ್ತಿರುವ ಪ್ರದೇಶವೂ ಹೌದು. ಪ್ರಾಯಶಃ ಕರ್ನಾಟಕದ ಯಾವ ಜಿಲ್ಲೆಗಳಲ್ಲೂ ಸಿಗದಷ್ಟು ಬಹುಸಂಸ್ಕೃತಿಯ ಸಮುದಾಯಗಳು ಈ ಜಿಲ್ಲೆಯಲ್ಲಿ ವಾಸಿಸುತ್ತಿವೆ. ಬೇಟೆಗಾರರು, ಆಹಾರ ಸಂಗ್ರಾಹಕರು, ಪಶುಪಾಲಕರು, ಪಾರಂಪರಿಕ ಕೃಷಿಕರು, ಮೀನುಗಾರರು, ಅಲೆಮಾರಿಗಳು, ವಿಶಿಷ್ಟ ಕರಕುಶಲ ಕರ್ಮಿಗಳು, ಸೇವಕ ಸಮುದಾಯಗಳು ಮತ್ತು ವಲಸೆಗಾರ ಸಮುದಾಯಗಳ ತವರು ಈ ಉತ್ತರ ಕನ್ನಡ ಜಿಲ್ಲೆ. ಇಲ್ಲಿ, ಹಾಲಕ್ಕಿಗಳು, ಕುಣಬಿ, ಸಿದ್ದಿ, ಕೋಮರಪಂತ, ಹರಿಕಾಂತ, ಕರೇಒಕ್ಕಲು, ದೀವರು, ಕುಮ್ರಿ ಮರಾಠಿ, ಗೊಂಡರು, ಹಸಲರು, ಗೌಳಿಗರು ಇತ್ಯಾದಿ ಅಪರೂಪದ ಸಮುದಾಯಗಳು ಶತಮಾನಗಳಿಂದ ಬದುಕುತ್ತಿವೆ. ಈ ಸಮುದಾಯಗಳ ಜೀವನ ವೈವಿಧ್ಯ ಈ ಜಿಲ್ಲೆಯ ವೈಶಿಷ್ಟ್ಯವನ್ನು ಜೀವಂತವಾಗಿಟ್ಟಿದೆ. ಇಂತಹ ಸಮುದಾಯಗಳಲ್ಲಿ 'ಮುಕ್ರಿ' ಎನ್ನುವ ವಿಶಿಷ್ಟ ದಲಿತ ಬುಡಕಟ್ಟು ಸಮುದಾಯವೊಂದು ಈ ಜಿಲ್ಲೆಯಲ್ಲಿ ವಾಸಿಸುತ್ತಿದೆ. ಸಾಂಸ್ಕೃತಿಕವಾಗಿ ಬುಡಕಟ್ಟು ಲಕ್ಷಣಗಳನ್ನು ಹೊಂದಿರುವ ಈ ಸಮುದಾಯವನ್ನು ದಲಿತ ಸಮುದಾಯವೆಂದೇ ಉತ್ತರಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಗುರುತಿಸಲಾಗುತ್ತದೆ. ಕರ್ನಾಟಕದಲ್ಲಿ ವಿಶೇಷವಾಗಿ

ಉತ್ತರಕನ್ನಡ ಜಿಲ್ಲೆಯಲ್ಲಿ ಮಾತ್ರ ಕಂಡುಬರುವ ಈ ಸಮುದಾಯವು ಕರ್ನಾಟಕದ ಇತರ ಭಾಗಗಳಲ್ಲಿ ಅತ್ಯಂತ ಬೆರಳೆಣಿಕೆಯಷ್ಟು ಜನ ಮಾತ್ರ ನೆಲೆಸಿರಬಹುದು. ಹೀಗೆ ನೆಲೆಸಿದವರು ಹೊಟ್ಟೆಪಾಡಿಗಾಗಿ ಸರ್ಕಾರಿ ಹುದ್ದೆಯನ್ನು ನೆಚ್ಚಿಕೊಂಡು ಮಾತ್ರ ಹೋದವರಾಗಿದ್ದಾರೆ. ಇದರ ಹೊರತಾಗಿ ಉತ್ತರಕನ್ನಡದ ಕಾರವಾರಕ್ಕೆ ಅಂಟಿಕೊಂಡಿರುವ ಗೋವಾ ರಾಜ್ಯಕ್ಕೆ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ದುಡಿಮೆಯನ್ನು ಅರಸಿಕೊಂಡು ಹೋಗಿರುವುದಾಗಿ ತಿಳಿದುಬರುತ್ತದೆ. ಮುಕ್ರಿಯರ ಮನೆಮಾತು ಕನ್ನಡವಾಗಿದ್ದರೂ ವಿಶಿಷ್ಟವಾದ ಕೊಂಕಣಿ ಮಿಶ್ರಿತ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಸ್ಥಳೀಯವಾಗಿ ಕೊಂಕಣಿಯ ಪ್ರಭಾವ ಹೆಚ್ಚಾಗಿರುವುದರಿಂದ ಮುಕ್ರಿಯರ ಮೇಲು ಕೊಂಕಣಿ ಭಾಷೆಯ ಪ್ರಭಾವವಾಗಿರುವ ಸಾಧ್ಯತೆ ಇದೆ. ಹಾಲಕ್ಕಿ ಒಕ್ಕಲಿಗರಿಗೆ ಈ ಸಮುದಾಯದ ಉಡುಗೆ ತೊಡುಗೆಗಳು ಹೋಲಿಕೆಯಾಗುವವಾದರೂ ಸಾಮಾಜಿಕವಾಗಿ ಹಾಲಕ್ಕಿಗಳಿಗಿಂತ ತೀರಾ ಕೆಳಸ್ಥರದ ಸ್ಥಾನ ಇವರದಾಗಿದೆ. ಉತ್ತರಕನ್ನಡದ ಎಲ್ಲಾ ತಾಲೂಕುಗಳಲ್ಲಿ ಮುಕ್ರಿಗಳು ಕಂಡುಬರುತ್ತಾರೆ. ಇವರ ಕೊಪ್ಪಗಳು ಊರಿನಿಂದ ದೂರದಲ್ಲ ಕಾಡಿಗೆ ಹೊಂದಿಕೊಂಡ ಪ್ರದೇಶದಲ್ಲಿ ಇವರು ಕೊಪ್ಪವನ್ನು ರಚಿಸಿಕೊಂಡು ನೆಲೆಸಿದ್ದಾರೆ. ಇಂದಿಗೂ ಇವರಿಗೆ ಸರಿಯಾದ ನೆಲೆಯಿಲ್ಲ. ಕೃಷಿಕೂಲಿಯನ್ನು ನಂಬಿಯೇ ಜೀವನ ಸಾಗಿಸುವ ಮುಕ್ರಿಗಳು ಇಂದಿಗೂ ಭೂಒಡೆಯರಾಗಲು ಸಾಧ್ಯವಾಗಿಲ್ಲ. ಉತ್ತರಕನ್ನಡದಲ್ಲಿ ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿಯೇ ಈ ಸಮುದಾಯ ನೆಲೆಯನ್ನು ಕಂಡುಕೊಂಡಿದೆ. ನಗರಪ್ರದೇಶದಲ್ಲಿ ಈ ಸಮುದಾಯ ಇಲ್ಲವೆನ್ನುವಷ್ಟು ಕಡಿಮೆ ಪ್ರಮಾಣದಲ್ಲಿ ನೆಲೆಸಿದೆ. ದಲಿತ ಸಮುದಾಯಗಳಲ್ಲೊಂದಾದ ಮುಕ್ರಿಗಳಿಗೆ ಇಂದಿಗೂ ಮೂಲಭೂತ ಸೌಲಭ್ಯದ ಕೊರತೆಯಿರುವುದನ್ನು ಅವರು ನೆಲೆಸಿರುವ ಕೊಪ್ಪಗಳೇ ಹೇಳುತ್ತವೆ.

ಮುಕ್ರಿ ಸಮುದಾಯವು ತಾವು ಹಾಲಕ್ಕಿ ಒಕ್ಕಲಿಗರಿಗೆ ಸಹೋದರರಾಗುತ್ತೇವೆ, ತಾವು ಅವರು ಅಣ್ಣ-ತಮ್ಮಂದಿರೆಂದು ಹೇಳಿಕೊಳ್ಳತ್ತಾರಾದರೂ ಇವರ ಮಾತನ್ನು ಹಾಲಕ್ಕಿಗಳು ಒಪ್ಪಿಕೊಳ್ಳುವುದಿಲ್ಲ. ಮುಕ್ರಿಯರನ್ನು ಇಂದಿಗೂ ಜೀತಗಾರ ಸಮುದಾಯವೆಂದೇ ಮೇಲ್ಜಾತಿಗಳಿಂದ ಗುರುತಿಸಲಾಗುತ್ತದೆ. ಮುಕ್ರಿಯರು ಒಂದೊಂದು ಗುಂಪಾಗಿ ಕೊಪ್ಪಗಳನ್ನು ರಚಿಸಿಕೊಂಡು ಜೀವಿಸುವ ಸಮುದಾಯವಾಗಿದೆ. ಇವರ ಕೊಪ್ಪಗಳನ್ನು ಕರ್ನಾಟಕದ ಇತರ ಪ್ರದೇಶಗಳಲ್ಲಿ ನೆಲೆಸಿರುವ ಹೊಲೆ ಮಾದಿಗರ ಕೇರಿಗೆ ಸಮಾನಾಂತರವಾಗಿವೆ. ಕಾಡನ್ನೇ ನಂಬಿಕೊಂಡು ಜೀವನ ಕಟ್ಟಿಕೊಂಡಿದ್ದ ಮುಕ್ರಿಗಳ ಆಚರಣೆಗಳೆಲ್ಲಾ ಬಹುತೇಕ ಕೃಷಿ ಸಂಬಂಧೀ ಆಚರಣೆಗಳಾಗಿವೆ. ಆದರೆ ಕೃಷಿ ಮಾಡುವ ಭೂಮಿಯೇ ಇವರ ಬಳಿ ಇಲ್ಲ. ಮುಕ್ರಿಯರನ್ನು ಈ ಕುರಿತು ಕೇಳಿದರೆ ತಮ್ಮ ಪೂರ್ವಜರು ಕಾಡಂಚಿನ ಇಳಿಜಾರು ಪ್ರದೇಶಗಳಲ್ಲಿ ಕುಮ್ರಿ ಪದ್ಧತಿಯ

ಬೇಸಾಯವನ್ನು ಮಾಡುತ್ತಿದ್ದರು. ತಮ್ಮ ಬದುಕಿಗೆ ಅವಶ್ಯವಾದ ರಾಗಿಯಂತಹ ಸಿರಿಧಾನ್ಯಗಳನ್ನು ಬೆಳೆಯುತ್ತಿದ್ದರು. ಆದರೆ ಕಾಡಿಗೆ ಸಂಬಂಧಿಸಿದ ನೀತಿ ನಿಯಮಗಳು, ಪ್ರತ್ಯೇಕ ಇಲಾಖೆ ಪ್ರಾರಂಭಗೊಂಡ ತರುವಾಯ ತಾವು ತಬ್ಬಲಿಗಳಾಗಬೇಕಾಯಿತೆಂದು ಹೇಳುತ್ತಾರೆ. ಇವರು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಕುಮ್ರಿ ಬೇಸಾಯದಂತೆ ಬೇಟೆಯನ್ನು ಮತ್ತು ಕಾಡಿನೋತ್ಪನ್ನ ಸಂಗ್ರಹಣೆಯನ್ನು ನೆಚ್ಚಿಕೊಂಡಿದ್ದರು. ಆದರೆ ಅರಣ್ಯ ನೀತಿಯಿಂದಾಗಿ ಕಾಡು ಮತ್ತು ಇವರು ನಡುವೆ ಇದ್ದ ಅವಿನಾಭಾವ ಸಂಬಂಧಗಳು ಕಳಚಿಹೋಗಿವೆ. ಬೇಟೆಯಾಡುವುದು ಇರಲಿ, ಕಾಡಿನ ಕಿರುಉತ್ಪನ್ನಗಳನ್ನು ಸಂಗ್ರಹಿಸಿ ಮಾರುವುದಕ್ಕೂ ಅರಣ್ಯ ಇಲಾಖೆ ತಡೆಯೊಡ್ಡಿತು. ಹೀಗಾಗಿ ಕೇವಲ ಕೃಷಿಕೂಲಿಯಾಗಿ, ಜೀತದಾಳಾಗಿ ಬದುಕನ್ನು ಸಾಗಿಸುವಂತಹ ಹೀನಾಯ ಸ್ಥಿತಿ ಮುಕ್ರಿಗಳದಾಯಿತು.

ದೈಹಿಕವಾಗಿ ಬಲಿಷ್ಠರು, ಮಧ್ಯಮ ನಿಲುವುಳ್ಳವರಾದ ಮುಕ್ರಿಯರು ನೋಡಲು ವಿಶಿಷ್ಟ ದೈಹಿಕ ಲಕ್ಷಣಗಳನ್ನು ಹೊಂದಿದ್ದಾರೆ. ಹಳೆತಲೆಮಾರಿನ ಪುರುಷರು ಮೊಂಡು ದೋತರ, ತಲೆಮೇಲೊಂದು ಮುಂಡಾಸು ಸುತ್ತಿಕೊಂಡು ಅರೆಬೆತ್ತಲೆಯಾಗಿರುತ್ತಿದ್ದರು. ವಿಶೇಷ ದಿನಗಳಲ್ಲಿ ಅರೆತೋಳಿನ ಕಸೆ ಅಂಗಿಗಳನ್ನು ತೊಡುತ್ತಾರೆ. ಸಾಮಾನ್ಯವಾಗಿ ಕೂದಲು ಕತ್ತರಿಸದೆ ಪುರುಷರು ಸಹ ಉದ್ದನೆಯ ಕೂದಲನ್ನು ಬಿಟ್ಟಿರುತ್ತಾರೆ. ಇತ್ತೀಚಿನ ಯುವಕರು ಕೂದಲನ್ನು ಕತ್ತರಿಸಿಕೊಳ್ಳುವುದು, ಪ್ಯಾಂಟ್ ಷರ್ಟ್‌ಗಳನ್ನು ತೊಡುವುದನ್ನು ನೋಡುತ್ತೇವೆ. ಮಹಿಳೆಯರು ಹಾಲಕ್ಕಿಗರಂತೆ ಸೀರೆಯನ್ನು ಕತ್ತರಿಯಾಕಾರದಲ್ಲಿ ಕೊರಳಿಗೆ ಕಟ್ಟಿಕೊಳ್ಳುತ್ತಾರೆ. ಮೊಣಕಾಲಿಗಿಂತ ಸ್ವಲ್ಪ ಕೆಳಗೆ ಬರುವಂತೆ ಸೀರೆ ಉಡುತ್ತಾರೆ. ಕುಪ್ಪಸ ತೊಡುವುದಿಲ್ಲ. ಕಡಿಮೆ ಬೆಲೆಯ ಲೋಹದ ಆಭರಣಗಳನ್ನು ಕಿವಿಗೆ ಧರಿಸುತ್ತಾರೆ. ಕೊರಳೊಳಗೆ ಹಾಲಕ್ಕಿಗರಂತೆ ಮಣಿಸರಗಳ ಗುಚ್ಚಿನ ಸರಗಳನ್ನು ಹಾಕಿಕೊಳ್ಳುತ್ತಾರೆ. ಬಹುತೇಕ ಇವರ ಉಡುಗೆ ತೊಡುಗೆಗಳು ಹಾಲಕ್ಕಿ ಒಕ್ಕಲಿಗರನ್ನು ಹೋಲುತ್ತದೆ.

ಮುಕ್ರಿ ಸಮುದಾಯದಲ್ಲಿ ಇಂದಿಗೂ ಬಾಲ್ಯವಿವಾಹ ಪದ್ಧತಿ ಕಂಡುಬರುತ್ತಿದೆ. ಸಾಮಾನ್ಯವಾಗಿ ಸೋದರತ್ತೆ ಮಗಳು ಅಥವಾ ಸೋದರಮಾವನ ಮಗಳನ್ನು ಮದುವೆ ಯಾಗುವುದೇ ಹೆಚ್ಚು. ವಿಧವಾವಿವಾಹ ಪದ್ಧತಿ ಇವರಲ್ಲಿದೆ. ಇವರಲ್ಲಿ ಮದುವೆ ನಡೆಯುವುದು ಬಹುತೇಕ ಬೆಡಗುಗಳ ಆಧಾರದಲ್ಲಿ. ಬೆಡಗುಗಳನ್ನು ಇವರು ಬಳಿಯೆಂದು ಕರೆಯುತ್ತಾರೆ. ಪ್ರಾಣಿ ಹಾಗೂ ಸಸ್ಯಗಳ ಹೆಸರಿನಿಂದ ಕೂಡಿದ ಬಳಿ ಇವರಲ್ಲಿದೆ. ಯಾರು ಯಾವ ಪ್ರಾಣಿ ಹೆಸರಿನ ಬಳಿಯನ್ನು ಹೊಂದಿರುತ್ತಾರೆಯೋ ಅವರು ಆ ಪ್ರಾಣಿ ತಿನ್ನುವುದಿಲ್ಲ ಮತ್ತು ಆ ಪ್ರಾಣಿಯನ್ನು ದೈವವೆಂದೇ ಭಾವಿಸುತ್ತಾರೆ. ಅದೇ ರೀತಿಯಾಗಿ ಯಾವುದಾದರೂ ಸಸ್ಯದ ಹೆಸರನ್ನು

ಹೊಂದಿದ ಬಳಿಯವರಿದ್ದರೆ ಆ ಸಸ್ಯವನ್ನು ಉರುವಲು ಇತ್ಯಾದಿಗಾಗಿ ಕಡಿಯುವುದಿಲ್ಲ ಮತ್ತು ಆ ಸಸ್ಯ ಮೂಲದ ಪದಾರ್ಥಗಳನ್ನು ಉಪಯೋಗಿಸುವುದಿಲ್ಲ. ಉದಾಹರಣೆಗೆ ಶೆಂಡಿ ಮರದ ಬೆಡಗಿನವರು ಆ ಮೂಲದ ಶೇಂದಿಯನ್ನು ಕುಡಿಯುವುದಿಲ್ಲ. ಆ ಮರದ ನೆರಳನ್ನೂ ಆಶ್ರಯಿಸುವುದಿಲ್ಲ. ಶೆಂಡಿ ಬಳಿಯವರಿಗೆ ಶೆಂಡಿ ಮರ ದೈವತ್ವಕ್ಕೆ ಸಮಾನವೆಂದು ಭಾವಿಸುತ್ತಾರೆ.

ವಿಜಾತಿ ಬೆಡಗುಗಳ ಮಧ್ಯದಲ್ಲಿ ಮಾತ್ರ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿ ಕೊಳ್ಳುತ್ತಾರೆ. ಮದುವೆಯಲ್ಲಿ ಬ್ರಾಹ್ಮಣ ಪುರೋಹಿತನಿಗೆ ಪ್ರವೇಶವಿಲ್ಲ. ಕುಲದ ಹಿರಿಯ ಅಥವಾ ಬುದುವಂತನೇ ಮದುವೆಯನ್ನು ಮಾಡಿಸುತ್ತಾನೆ. ಇವರಲ್ಲಿ ಒಳಾಡಳಿತ ಪದ್ಧತಿ ಇದೆ. ಪ್ರತಿ ಊರಿಗೂ ಒಬ್ಬ ಬುದುವಂತನಿರುತ್ತಾನೆ. ಹಾಗೆ ಅವನೊಂದಿಗೆ ಕೋಲ್ಕಾರ ಮುಂತಾದ ದೈವದ ಹಿರಿಯರಿರುತ್ತಾರೆ. ಸಮುದಾಯದಲ್ಲಿ ನಡೆಯುವ ಪ್ರತಿಯೊಂದು ಕಾರ್ಯವನ್ನೂ ಅವರ ಸಮ್ಮುಖದಲ್ಲಿಯೇ ಮಾಡಬೇಕು. ಯಾವುದೇ ವ್ಯಕ್ತಿ ತಪ್ಪು ಮಾಡಿದರೆ ಶಿಕ್ಷೆಕೊಡುವ ಮತ್ತು ದಂಡ ವಿಧಿಸುವ ಹಕ್ಕು ಅವರಿಗಿದೆ. ಮದುವೆ, ಸಾವು ಮುಂತಾದ ಪ್ರತಿಯೊಂದು ಕಾರ್ಯವೂ ಅವರ ಸಮ್ಮುಖದಲ್ಲಿಯೇ ನಡೆಯಬೇಕು. ಸಾವಿಗೆ ಸಂಬಂಧಿಸಿದಂತೆ ವಿಶಿಷ್ಟವಾದ ಆಚರಣೆಗಳು ಇವರಲ್ಲಿವೆ. ಹೆಣವನ್ನು ತೆಂಗಿನ ಗರಿಯಲ್ಲಿ ಮುಚ್ಚಿ ಹೊತ್ತೊಯ್ಯುವ ಪದ್ಧತಿ ಇದೆ. ಬಲಿ ಸಂಪ್ರದಾಯವಿದೆ. ಮುಕ್ರಿಯರು ಜಟಿಗನನ್ನು ತಮ್ಮ ಸಾಂಸ್ಕೃತಿಕ ನಾಯಕನೆಂದು ತಿಳಿದಿದ್ದಾರೆ. ಪ್ರತಿಯೊಂದು ಕೊಪ್ಪದಲ್ಲಿಯು ಜಟಿಗ ಇರಲೇಬೇಕು. ತಮ್ಮ ಕೊಪ್ಪವನ್ನು ಕಾಯುವವನು ಜಟಿಗನೆಂದು ನಂಬುತ್ತಾರೆ. ಮುಕ್ರಿಯರು ಚಂದಾವರದ ಹನುಮಂತ, ಕಲಿವೀರಭದ್ರನಂತಹ ಪುರುಷ ದೈವಗಳ ಆರಾಧಕರಾದಂತೆಯೇ ಶಿರಸಿಯ ಮಾರಿ ಮತ್ತು ಇತರ ಸ್ತ್ರೀದೈವ ಆರಾಧಕರು ಆಗಿದ್ದಾರೆ. ವೈಷ್ಣವಾರಾಧನೆಯ ಪ್ರಭಾವ ಇವರ ಮೇಲಾಗಿದೆ. ಹೀಗಾಗಿ ತಿರುಪತಿ ತಿಮ್ಮಪ್ಪನನ್ನು, ತುಳಸಿಯನ್ನು ಆರಾಧಿಸುತ್ತಾರೆ.

ಪೂರ್ವದಲ್ಲಿ ಕಾಡಿನಲ್ಲಿ ಬೇಟೆಯಾಡಿದ ಪ್ರಾಣಿಗಳನ್ನು ಆಹಾರವಾಗಿ ಬಳಸುತ್ತಿದ್ದರಂತೆ. ಆದರೆ ಮುಕ್ರಿಯರು ಬೇಟೆಯಿಂದ ಪ್ರಸ್ತುತ ದೂರವಾಗಿದ್ದಾರೆ. ರಾಗಿ ಅಂಬಲಿಯೋ, ನುಚ್ಚಕ್ಕಿಯ ಗಂಜಿಯೇ ಇವರ ಪ್ರಧಾನ ಆಹಾರ. ಜೊತೆಗೊಂದಿಷ್ಟು ಸುಟ್ಟ ಒಣಮೀನಿನ ತುಂಡೊಂದಿದ್ದರೆ ಇವರ ಊಟ ಮುಗಿಯಿತು. ವಿಶೇಷ ದಿನಗಳಲ್ಲಿ ಮಾತ್ರ ತಾವು ಸಾಕಿದ ಕೋಳಿಯನ್ನು ಆಹಾರಕ್ಕಾಗಿ ಬಳಕೆ ಮಾಡುವುದುಂಟು. ಕುರಿ ಮುಂತಾದ ಪ್ರಾಣಿಗಳ ಮಾಂಸ ತಿನ್ನುವ ಆಸೆಯಿದ್ದರೂ ಮುಕ್ರಿಯರ ಆರ್ಥಿಕ ಸ್ಥಿತಿ ಅದಕ್ಕೆ ಅಡ್ಡಿಯಾಗಿದೆ.

ಮುಕ್ರಿ ಸಮುದಾಯದ ಕುರಿತು ಎಂಥೋವನ್, ಕೆ.ಎಸ್. ಸಿಂಗ್ ರಂತಹ ಕೆಲವೇ ಕೆಲವು ವಿದ್ವಾಂಸರು ತಮ್ಮ ಕೃತಿಗಳಲ್ಲಿ ಮಾಹಿತಿಗಳನ್ನು ನೀಡಿದ್ದಾರೆ. ಹಾಗೆಯೇ

ಉತ್ತರಕನ್ನಡದವರಾದ ಎನ್.ಆರ್. ನಾಯಕರಂತಹ ಕೆಲವರು ಮಾತ್ರ ಮುಕ್ರಿಯರ ಕುರಿತು ಸಂಕ್ಷಿಪ್ತವಾಗಿ ಬರೆದಿದ್ದಾರೆ. ಇತ್ತೀಚೆಗೆ ಮೋಹನ ಎಚ್.ಎಸ್. ಅವರು ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ಯೋಜನೆಯೊಂದಕ್ಕಾಗಿ ಅಧ್ಯಯನ ನಡೆಸಿ ರಚಿಸಿದ ಕೃತಿಯೊಂದು ಪ್ರಕಟವಾಗಿದೆ. ಆದರೆ ಆ ಕೃತಿಯು ಮುಕ್ರಿ ಸಮುದಾಯವನ್ನು ಅರ್ಥೈಸಿಕೊಳ್ಳಲು ಪೂರ್ಣವಾಗಿ ಸಹಾಯ ಮಾಡಲಾರದು. ಮುಕ್ರಿ ಸಮುದಾಯದ ಕುರಿತು ಸಮಗ್ರ ಮಾಹಿತಿಯನ್ನು ನೀಡುವ ಮಹತ್ವದ ಅಧ್ಯಯನಗಳಾವು ಇಲ್ಲಿಯವರೆಗೂ ನಡೆದಿರುವುದಿಲ್ಲ.

ಡಿಸ್‌ಕೋರ್ಸ್ ಪರಿಕಲ್ಪನೆ

ಡಿಸ್‌ಕೋರ್ಸನ್ನು ಕನ್ನಡದಲ್ಲಿ ಸಂಕಥನ ಎಂದು ಅರ್ಥೈಸಲಾಗುತ್ತಿದೆ. ಮೈಸೂರು ವಿಶ್ವವಿದ್ಯಾಲಯವು ಹೊರತಂದಿರುವ ಇಂಗ್ಲೀಷ್ ಕನ್ನಡ ನಿಘಂಟು ಡಿಸ್‌ಕೋರ್ಸ್ ಪದದ ಅರ್ಥವನ್ನು ಹೀಗೆ ಗುರುತಿಸುತ್ತದೆ. "ಸಂಭಾಷಣೆ, ಸಂವಾದ, ಭಾಷಣ, ಪ್ರಬಂಧ, ಪ್ರವಚನ, ವ್ಯಾಖ್ಯಾನ, ಉಪದೇಶ... ಇತ್ಯಾದಿ. ಆದರೆ ಇವುಗಳಿಗೆ ಹೊರತಾದ ವಿಶಿಷ್ಟ ಅರ್ಥದಲ್ಲಿ ಈ ಪದವನ್ನು ರಾಚನಿಕೋತ್ತರ ಚಿಂತಕರು ಬಳಸುತ್ತಾರೆ.

ಇಂಗ್ಲೀಷಿನಲ್ಲಿ ಬಳಕೆಗೊಳ್ಳುವ ಡಿಸ್‌ಕೋರ್ಸ್ ಪದವು ಮೂಲತಃ ಲ್ಯಾಟೀನ್ ಭಾಷೆಯಿಂದ ಇಂಗ್ಲೀಷಿಗೆ ಬಂದಿದೆ. ಲ್ಯಾಟೀನಿನಲ್ಲಿ Dis+Currere ಎನ್ನುವ ಎರಡು ಪದಗಳಿವೆ. Dis ಎಂದರೆ ದಿಕ್ಕು ಎಂದರ್ಥ, Currere ಎಂದರೆ ಓಡುವುದು ಎಂದರ್ಥ. ಈ ಎರಡೂ ಪದಗಳ ಸಂಯೋಗದಿಂದಾಗಿ ಹುಟ್ಟಿದ ಪದವೇ ಡಿಸ್‌ಕೋರ್ಸ್ ಆಗಿದೆ.

ಡಿಸ್‌ಕೋರ್ಸ್ ಪದವನ್ನು ಬಳಕೆ ಮಾಡಿದ ಪ್ರಮುಖ ವಿದ್ವಾಂಸರಲ್ಲಿ ಮಿಶೆಲ್ ಫುಕೋ (೧೯೨೬-೮೪) ಪ್ರಮುಖನು. ಫ್ರೆಂಚಿನ ತತ್ವಶಾಸ್ತ್ರಜ್ಞ ಹಾಗೂ ಇತಿಹಾಸಕಾರನೆಂದು ಗುರುತಿಸಲಾಗುವ ಫುಕೋನು ತನ್ನ ಹಿಂದಿನವರು ರೂಢಿಸಿಕೊಂಡು ಬಂದಿದ್ದ ಅನೇಕ ವಿಚಾರಗಳನ್ನು ಮತ್ತು ನಿಲುವುಗಳನ್ನು ವಿರೋಧಿಸಿದನು. ಅವನ ಮ್ಯಾಡ್‌ನೆಸ್ ಅಂಡ್ ಸಿವಿಲೈಜೇಶನ್ (೧೯೬೧), ದ ಆರ್ಡರ್ ಆಫ್ ಥಿಂಗ್ಸ್ (೧೯೬೬) ದ ಅರ್ಕಾಲೋಜಿ ಆಫ್ ನಾಲೆಡ್ಜ್ (೧೯೬೯) ಹಿಸ್ಟೋರಿ ಆಫ್ ಸೆಕ್ಸುಯಾಲಿಟಿ (೧೯೮೪) ಇತ್ಯಾದಿ ಕೃತಿಗಳಲ್ಲಿ ಅವನ ವೈಚಾರಿಕತೆಯಾಗಿ ಡಿಸ್‌ಕೋರ್ಸ್ ಪರಿಕಲ್ಪನೆ ಎದ್ದುಕಾಣುತ್ತದೆ.

"ಪಾಶ್ಚಿಮಾತ್ಯ ಭಾಷಾವಿಜ್ಞಾನಿಗಳೂ ಡಿಸ್ಕೋರ್ಸ್ ಎನ್ನುವ ಪದವನ್ನು ವಿಫುಲವಾಗಿ ಬಳಸುತ್ತಾರೆ. ಹಳೆ ತಲೆಮಾರಿನ ಭಾಷಾಶಾಸ್ತ್ರಜ್ಞರ ಪ್ರಕಾರ ಡಿಸ್‌ಕೋರ್ಸ್ ಎಂಬುದು ಸಂವಾದ ಪದಕ್ಕೆ ಸಮಾನಾರ್ಥಕ ಪದವಾಗಿದೆ. ಯಾವುದೇ ವಾಕ್ಯವನ್ನು ವಿಶ್ಲೇಷಣೆಯ ಹಾಗೂ ವ್ಯಾಖ್ಯಾನದ ಅಚಿತಿಮ ಘಟಕವಾಗಿ ಪರಿಗಣಿಸಿದ್ದಾರೆ. ಫರ್ತ್, ಹ್ಯಾರೀಸ್, ಲಬೋವ್

ಇತ್ಯಾದಿ ಇತ್ತೀಚಿಗಿನ ಭಾಷಾವಿಜ್ಞಾನಿಗಳು ಇಂತಹ ವಾಕ್ಯ ಕೇಂದ್ರಿತ ವ್ಯಾಕರಣವನ್ನು ಸೀಮಿತವಾದುದೆಂದು ವಾದಿಸುತ್ತಾರೆ. ವಾಕ್ಯವನ್ನು ಮೀರುವ ಘಟಕವನ್ನು ಅವರು ಡಿಸ್‌ಕೋರ್ಸ್ ಎಂದು ಕರೆಯುತ್ತಾರೆ" (ರಾಮಚಂದ್ರನ್ ಸಿ ಎನ್: ವಸಾಹತ್ತೋರ ಚಿಂತನೆ: ೨೦೦೨:೧೪-೧೫) ಹ್ಯಾರೀಸ್ ಸ್ಟಬ್ಸ್ ತನ್ನ ಡಿಸ್‌ಕೋರ್ಸ್ ಅನಾಲಿಸಿಸ್ (೧೯೮೩) ಕೃತಿಯಲ್ಲಿ "ಯಾವ ಅಧ್ಯಯನವು ಸ್ವತಂತ್ರ ವಾಕ್ಯಗಳಿಗೆ ಮತ್ತು ಭಾಷಾ ವಿಜ್ಞಾನಿ ಸೃಷ್ಟಿಸಿದ ವಾಕ್ಯಗಳಿಗೆ ಸೀಮಿತವಾಗಿಲ್ಲವೋ ಮತ್ತು ವಾಕ್ಯಗಳ ಸಂದರ್ಭವನ್ನು ಮುಖ್ಯವಾಗಿ ಪರಿಗಣಿಸಲಾಗುವುದೋ ಅದನ್ನು ಸಂವಾದ ವಿಶ್ಲೇಷಣೆ" (ಹ್ಯಾರೀಸ್ ಸ್ಟಬ್ಸ್: ೧೯೮೩:೭) ಎಂದು ಕರೆಯಬಹುದು ಎನ್ನುತ್ತಾನೆ. ಭಾಷಾ ವಿಜ್ಞಾನಿಗಳ ಸಂವಾದ ವಿಶ್ಲೇಷಕರು ಪಠ್ಯ ಮತ್ತು ಡಿಸ್‌ಕೋರ್ಸ್ ಎರಡನ್ನೂ ಭಿನ್ನವಾಗಿಯೇ ಪರಿಗಣಿಸುತ್ತಾರೆ. ಯಾವುದೇ ಒಂದು ಪಠ್ಯವು ಕೇವಲ ಪಠ್ಯವಾಗಿ ಮಾತ್ರ ಉಳಿಯಬಹುದು. ಪಠ್ಯಕ್ಕೆ ನಿಜವಾದ ಅರ್ಥ ದೊರೆಯುವುದು ಅದು ಬಳಕೆಗೊಳ್ಳುವ ಸಂದರ್ಭ ಹಾಗೂ ಕಾಲಗಳಲ್ಲಿ. ಅಂದರೆ ಒಬ್ಬ ನಂಬರ್ ಪ್ಲೇಟ್ ರಚಿಸುವ ತಂತ್ರಜ್ಞನನ ಅಂಗಡಿಯಲ್ಲಿ ನೂರಾರು ನಂಬರ್ ಪ್ಲೇಟುಗಳು ತೂಗಾಡುತ್ತಿರುತ್ತವೆ. ಅವುಗಳು ಅಂಗಡಿಯಲ್ಲಿರುವವರೆಗೂ ಕೇವಲ ಪಠ್ಯಗಳಾಗಿ ಮಾತ್ರ ಇರಬಲ್ಲುವು. ಅವೇ ನಂಬರ್ ಪ್ಲೇಟ್‌ಗಳು ವಾಹನಗಳಿಗೆ ಜೋಡಿಸಿದಾಗ ನಂಬರ್ ಪ್ಲೇಟುಗಳಿಗೆ ಅರ್ಥವಂತಿಕೆ ಬರುತ್ತದೆ. ವಾಹನದ ಯಜಮಾನನು ಆ ನಂಬರ್ ಪ್ಲೇಟುಗಳ ಮೂಲಕವೇ ತನ್ನ ವಾಹನವನ್ನು ಗುರುತಿಸಿಕೊಳ್ಳಬಲ್ಲನು. ಅಂದರೆ ಅಂಗಡಿಯಲ್ಲಿರುವ ನಂಬರ್ ಪ್ಲೇಟುಗಳಿಗೆ ಜೀವಂತಿಕೆ ಮೂಡುವುದೇ ಅದು ವಾಹನದ ಮೇಲೆ ರಾರಾಜಿಸಿದಾಗ. ಇದನ್ನೇ ಡಿಸ್‌ಕೋರ್ಸ್ ಎನ್ನುವುದು.

ಸಾಹಿತ್ಯ ವಿಮರ್ಶೆಯಲ್ಲಿಯೂ ಅದರಲ್ಲೂ ವಿಶೇಷವಾಗಿ ಪಾಶ್ಚತ್ಯ ಸಾಹಿತ್ಯ ವಿಮರ್ಶೆಯಲ್ಲಿ ಡಿಸ್‌ಕೋರ್ಸ್ ಪದ ಬಳಕೆಯಾಗುತ್ತಿದೆ. ಜೋನಾಥನ್ ಕಲರ್ ಅವರು ತನ್ನ ರಾಚನಿಕ ಕಾವ್ಯ ಮಿಮಾಂಸೆ (೧೯೭೫) ಕೃತಿಯಲ್ಲಿ ಡಿಸ್‌ಕೋರ್ಸ್ ಕುರಿತು ತಿಳಿಸುತ್ತಾನೆ. "ಯಾವುದೇ ಒಂದು ಕೃತಿಯನ್ನು ಶೂನ್ಯ ಮನಸ್ಥಿತಿಯಿಂದ ಓದಿದರೆ ಆ ಓದಿಗೆ ಅರ್ಥವಿರುವುದಿಲ್ಲ. ಯಾವುದೇ ಓದುಗನು ಒಂದು ಕೃತಿಯಿಂದ ಕೆಲವು ನಿರೀಕ್ಷೆಗಳನ್ನಿರಿಸಿಕೊಂಡಿರುತ್ತಾನೆ. ಅಂತಹ ನಿರೀಕ್ಷೆಗಳನ್ನು ಓದುಗನಿಗೆ ತಲುಪಿಸುವ ಕಾರ್ಯವನ್ನು ಮಾಡುವುದೇ ಡಿಸ್‌ಕೋರ್ಸ್ ಎನ್ನುತ್ತಾನೆ"(ಜೋನಾಥನ್ ಕಲರ್: ೧೯೭೫: ೧೧೩-೧೪)

ಜೋನಾಥನ್ನನ ಡಿಸ್‌ಕೋರ್ಸ್ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಸಂಹಿತೆ ಎನ್ನುವ ಪದವನ್ನು ಬಳಸಬಹುದೆಂದು ಸಿ ಎನ್ ರಾಮಚಂದ್ರನ್(ವಸಾಹತ್ತೋತ್ತರ ಚಿಂತನೆ: ೨೦೦೨:೧೭) ಅಭಿಪ್ರಾಯಪಡುತ್ತಾರೆ. "ಜಫ್ರಿ ಲೀಚನು ಕಥನಶಾಸ್ತ್ರಕ್ಕೆ ಸಂಬಂಧಿಸಿದಂತೆ ಹೇಳುವಾಗ ಕಥನ ಮತ್ತು ವ್ಯಾಖ್ಯಾನಗಳ ಭಿನ್ನತೆಯನ್ನು ತಿಳಿಸಲು ನೆರೇಷನ್ ಹಾಗೂ ಡಿಸ್‌ಕೋರ್ಸ್ ಎನ್ನುವ

ಪದಗಳನ್ನು ಬಳಕೆ ಮಾಡಿದ್ದಾನೆ. ಇದನ್ನೇ ಚಾಟ್‌ಮನ್‌ನೂ ಅನುಸರಿಸಿದ್ದಾನೆ" (ರಾಮಚಂದ್ರನ್:೨೦೦೨:೧೭) ಆದರೆ ಫುಕೋನಂತಹ ರಾಚನಿಕ ಚಿಂತಕರು ಡಿಸ್‌ಕೋರ್ಸ್ ಪದವನ್ನು ಭಿನ್ನ ದೃಷ್ಟಿಕೋನದಲ್ಲಿ ಬಳಕೆ ಮಾಡಿರುವರು. ಖಿಸ್‌ಕೋರ್ಸ್‌ನ್ನು ಭಾಷೆ ಮತ್ತು ಸಾಮಾಜಿಕ ಸಂಸ್ಥೆಗಳ ನಡುವಿನ ಸಂಬಂಧ ಎಂದು ವ್ಯಾಖ್ಯಾನಿಸಬಹುದು ಎಂದು ಹೇಳಲಾಗುತ್ತದೆ. ಅಂದರೆ "ಡಿಸ್‌ಕೋರ್ಸ್ ವಿಶ್ಲೇಷಣೆಯಂದರೆ ವಿಶಿಷ್ಟ ಸೂಚನಾ ಪ್ರಕ್ರಿಯೆಯನ್ನು, ಪರಿಣಾಮತಃ ಜ್ಞಾನದ ವಿಶಿಷ್ಟ ರೂಪಗಳನ್ನು ಸಾಧ್ಯವಾಗಿಸುವ ಸಾಂಸ್ಥಿಕ ನಿಯಮ ನಿಬಂಧನೆಗಳನ್ನು ಗುರುತಿಸುವುದು" (ರಾಮಚಂದ್ರನ್: ೨೦೦೨:೧೮)ಎಂದು ವ್ಯಾಖ್ಯಾನಿಸಲಾಗಿದೆ.

ಪರಂಪರಾಗತ ಆಲೋಚನಾ ಕ್ರಮವನ್ನು ವಸಾಹತುಶಾಹಿ ಆಧುನಿಕ ಆಲೋಚನಾ ಕ್ರಮ ಆಕ್ರಮಿಸಿತು. ಅದೇ ರೀತಿ ೨೦ನೇ ಶತಮಾನದ ಸುಮಾರಿಗೆ ಪರಿಚಿತಗೊಂಡ ಜಾಗತೀಕರಣವು ವಸಾಹತುಶಾಹಿ ಆಧುನಿಕ ಆಲೋಚನಾ ಕ್ರಮ ಆಕ್ರಮಿಸಿತು. ಈ ಮೂರು ತಲೆಮಾರುಗಳ ಆಲೋಚನಾ ಕ್ರಮ ಒಂದಕ್ಕೊಂದು ಭಿನ್ನವಾಗಿಯೇ ಇರುತ್ತವೆ ಮತ್ತು ಇವೆ. ಆಯಾ ಕಾಲದ ಆಲೋಚನಾ ಕ್ರಮಗಳೇ ಡಿಸ್‌ಕೋರ್ಸ್‌ಗಳನ್ನು ಸೃಷ್ಟಿಸುವಂಥವುಗಳಾಗಿರುತ್ತವೆ. "ಇಂತಹ ಪ್ರಮಾಣ ಸಂಹಿತೆಗಳೇ ನಮ್ಮ ಇಂದ್ರಿಯಾನುಭವ ಗ್ರಹಿಕೆಗಳಿಗೆ ವಸ್ತುನಿಷ್ಠ ಸತ್ಯದ ಸ್ಥಾನವನ್ನು ನೀಡಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಡಿಸ್‌ಕೋರ್ಸ್‌ಗಳನ್ನು ಸೃಷ್ಟಿಸುತ್ತದೆ. ಏನನ್ನು ಹೇಳಬಹುದು ಮತ್ತು ಯಾವ ಪ್ರಕಾರದಲ್ಲಿ? ಒಂದು ಸಂದರ್ಭದಲ್ಲಿ ಯಾವುದು ಉಚಿತ ಮತ್ತು ಯಾವುದು ಅನುಚಿತ? ಯಾರಿಗೆ ಏನನ್ನು ಹೇಳುವ ಅಧಿಕಾರವಿದೆ? ಇವೆಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಡಿಸ್‌ಕೋರ್ಸ್‌ಗಳು, ಅಥವಾ ಅವನ್ನು ರೂಪಿಸುವ ಆಚರಣೆಗಳು ಮತ್ತು ವಿಧಿನಿಷೇಧಗಳು ನಿರ್ಧರಿಸುತ್ತವೆ (ಸೈಮನ್ಸ್: ೧೯೭೨: ೨೪). ಉದಾಹರಣೆಗೆ ಹೇಳುವುದಾದರೆ ಈ ಭೌತಿಕ ಪ್ರಪಂಚಕ್ಕೆ ಸ್ವತಂತ್ರವಾದ ಅಸ್ತಿತ್ವ ಇದೆ. ಅದರೊಡನಾಡುವ ನಮಗೆ ನಾನಾ ಅನುಭವಗಳಾಗುತ್ತವೆ. ಆ ಅನುಭವಗಳನ್ನು ಹೊರಹೊಮ್ಮಿಸಲು ಭಾಷೆಯನ್ನು ಸಂವಹನವಾಗಿ ಬಳಕೆ ಮಾಡಲಾಗುತ್ತದೆ. ಅಂದರೆ ಭೌತಿಕ ಪ್ರಪಂಚದೊಡನಾಡುವ ನಮಗೆ ಉಂಟಾಗುವ ಪರಿಣಾಮಗಳ ಅನುಭವಗಳನ್ನು ಹಂಚಿಕೊಳ್ಳುವ ಮಾಧ್ಯಮವಾಗಿ ಭಾಷೆ ಕಾರ್ಯಮಾಡುತ್ತದೆ. ಭಾಷೆಯಿರದೆ ಅನುಭವ ಹಂಚಿಕೊಳ್ಳುವ ಕ್ರಮ ಅರಿತಿಲ್ಲ. ಹೀಗಾಗಿ ಭಾಷೆ ಅನುಭವವನ್ನು ಅರ್ಥಮಾಡಿಸುವ ಸಂವಹನ ಮಾರ್ಗವಾಗಿದೆ. ಅಂದರೆ ಭಾಷೆಯಿಂದ ಹೊರತಾದ ಸ್ವತಂತ್ರ ಅಸ್ತಿತ್ವ ವಸ್ತುವಿಗೂ ಇಲ್ಲ, ಅನುಭವಕ್ಕೂ ಇಲ್ಲ. ವಸ್ತು ಮತ್ತು ಅನುಭವಗಳಿಗೆ ರೂಪುಕೊಡುವುದು ಭಾಷೆಯನ್ನು ಸಾಮಾಜಿಕ ಸಂಸ್ಥೆಗಳು ನಿಯಂತ್ರಿಸುತ್ತವೆ. "ಸಾಂಸ್ಥಿಕ ನಿಯಂತ್ರಣದಿಂದಾಗಿ ಜನ್ಮಿಸುವ ಭಾಷೆಯು ರೂಪಿಸುವ ನಮ್ಮ ಗ್ರಹಿಕೆಯನ್ನು ಫುಕೋ ಡಿಸ್‌ಕೋರ್ಸ್ ಎಂದು ಕರೆಯುತ್ತಾನೆ. ಡಿಸ್‌ಕೋರ್ಸಿ ನಿಂದ ಮುಕ್ತವಾದ, ಎಂದರೆ ಸಾಂಸ್ಥಿಕ ನಿಯಂತ್ರಣ, ಒತ್ತಡಗಳಿಲ್ಲದ ಯಾವ ಜ್ಞಾನವೂ,

ಜ್ಞಾನಮಾರ್ಗವೂ ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ, ಮತ್ತು ಯಾವ ಗ್ರಹಿಕೆಯೂ ಸಾಧ್ಯವಿಲ್ಲ" (ರಾಮಚಂದ್ರನ್ ಸಿ ಎನ್: ೨೦೦೨: ೧೯).

ಫುಕೋನ ಸಮಕಾಲೀನನಾದ ಪೆಶೋ(Pecheux) ಡಿಸ್‌ಕೋರ್ಸ್ ವಾದಕ್ಕೆ ಸಂಬಂಧಿಸಿದಂತೆ ಅನೇಕ ಪ್ರಯೋಗಗಳನ್ನು ಮಾಡಿರುವನು. ಅವನ ಪ್ರಕಾರ ಪದ-ವಾಕ್ಯಗಳಿಗೆ ತಮ್ಮದೇ ಆದ ಸ್ವತಂತ್ರ ಅರ್ಥವೆಂಬುದಿಲ್ಲ. ಅರ್ಥಗಳು ಸಾಮಾಜಿಕ ಸಂದರ್ಭಗಳ ಉತ್ಪನ್ನಗಳು(Meanings are socially constructed) ಎಂದು ಹೇಳುತ್ತಾನೆ. (ರಾಮಚಂದ್ರನ್ ಸಿ ಎನ್: ೨೦೦೨: ೨೫). ಡಿಸ್‌ಕೋರ್ಸ್ ಎಂಬುದು ಭೌತಿಕ ಹಾಗೂ ಮಾನಸಿಕ ಅಭಿವ್ಯಕ್ತಿಯ ಅನುಭವಗಳ ಮಧ್ಯದ ಸಂಬಂಧಗಳಿಂದ ಕೂಡಿರುತ್ತದೆ. ಅದು ಪ್ರತಿಯೊಂದೂ ಭಾಷೆ, ಜಾತಿ, ಸಮುದಾಯಗಳ ಸಂಸ್ಕೃತಿಗಳನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ.

ಪ್ರಸ್ತುತ ಈ ಪ್ರಬಂಧದಲ್ಲಿ ಮುಕ್ರಿ ಸಮುದಾಯದ ಪಾರಂಪರಿಕ ವೃತ್ತಿ ಹಾಗೂ ಪ್ರಸ್ತುತ ಅವರು ಅನುಸರಿಸುತ್ತಿರುವ ವೃತ್ತಿ, ಅವರ ಸಾಮಾಜಿಕ ಆರ್ಥಿಕ, ಶೈಕ್ಷಣಿಕ, ರಾಜಕೀಯ ಸಂಕಥನಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಹಾಗೆಯೇ ಅವರಲ್ಲಿರುವ ಜನಪದೀಯ ಅಂಶಗಳನ್ನು ಗುರುತಿಸುವುದು ಹಾಗೂ ಮುಕ್ರಿ ಸಮುದಾಯದ ಮೇಲೆ ಆಧುನಿಕತೆಯ ಪ್ರಭಾವ ಯಾವ ರೀತಿಯಲ್ಲಿ ಆಗಿದೆ ಎಂಬುದನ್ನು ವಿವರಿಸಲಾಗಿದೆ.

೧.೧ ಅಧ್ಯಯನದ ಉದ್ದೇಶಗಳು

ಪರಿಶಿಷ್ಟ ಜಾತಿ ಸಮುದಾಯಗಳಲ್ಲಿಯೇ ಜನಸಂಖ್ಯಾ ಅಲ್ಪಸಂಖ್ಯಾತವಾದ ಮುಕ್ರಿಯರು ಆರ್ಥಿಕವಾಗಿ ದುರ್ಬಲರಿದ್ದು ಸಾಂಸ್ಕೃತಿಕವಾಗಿ ತುಂಬಾ ಸಂಪತ್ಭರಿತವಾಗಿದ್ದಾರೆ. ಈ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಗಳನ್ನು ನೋಡುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಉದ್ದೇಶಗಳು

೧. ಉತ್ತರಕನ್ನಡ ಜಿಲ್ಲೆಯ ಪರಿಶಿಷ್ಟ ಜಾತಿಯ ಮುಕ್ರಿ ಸಮುದಾಯದ ಸಾಮಾಜಿಕ ಸ್ವರೂಪವನ್ನು ತಿಳಿಸಲಾಗಿದೆ.

೨. ಮುಕ್ರಿ ಸಮುದಾಯದ ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಗಳನ್ನು ಅರಿಯಲಾಗಿದೆ.

೩. ಮುಕ್ರಿ ಸಮುದಾಯದ ಭಾಷೆ, ಅವರಲ್ಲಿ ಬಳಕೆಯಿರುವ ಹಾಡು, ಕಥೆ, ಒಗಟು, ಗಾದೆ ಮುಂತಾದವುಗಳನ್ನು ಅವಲೋಕಿಸುವ ಮೂಲಕ ಮುಕ್ರಿಯರ ಸಾಮಾಜಿಕ ಸಂಕಥನವನ್ನು ಮರುರೂಪಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಎಲ್ಲಾ ಉದ್ದೇಶವನ್ನು ಈ ಅಧ್ಯಯನವು ಒಳಗೊಂಡಿದೆ.

೧.೨ ಅಧ್ಯಯನದ ವ್ಯಾಪ್ತಿ

ಉತ್ತರಕನ್ನಡ ಜಿಲ್ಲೆಯು ವಿಶಿಷ್ಟ ಪರಿಸರವನ್ನು ಹೊಂದಿದ ಪ್ರದೇಶವಾಗಿದೆ. ಹಾಗೆಯೇ ಈ ಪ್ರದೇಶಕ್ಕೇ ಸೀಮಿತವಾದ ಹಲವು ಜಾತಿ, ಸಮುದಾಯಗಳಿವೆ. ಅಂತಹ ವಿಶಿಷ್ಟ ಸಮುದಾಯಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಮುಕ್ರಿ ಸಮುದಾಯವು ಒಂದಾಗಿದೆ. ಈ ಸಮುದಾಯವು ಉತ್ತರಕನ್ನಡದ ಎಲ್ಲಾ ತಾಲೂಕುಗಳಲ್ಲಿ ಕಂಡುಬರುತ್ತದೆ.

ಉತ್ತರಕನ್ನಡದ ಎಲ್ಲಾ ತಾಲೂಕುಗಳಲ್ಲಿ ನೆಲೆಸಿರುವ ಮುಕ್ರಿಯರನ್ನು ಅಧ್ಯಯನಕ್ಕೆ ಒಳಪಡಿಸುವುದು ಅಧ್ಯಯನದ ಕಾಲಮಿತಿಯ ದೃಷ್ಟಿಯಿಂದ ಕಷ್ಟಕರವಾದ ಕೆಲಸವೆಂದು ಭಾವಿಸಿ ಕೇವಲ ಉತ್ತರಕನ್ನಡ ಜಿಲ್ಲೆಯ ಕುಮಟಾ ಹಾಗೂ ಹೊನ್ನಾವರ ತಾಲೂಕಿನಲ್ಲಿ ಪ್ರತಿ ತಾಲೂಕಿಗೆ ಎಂಟು ಗ್ರಾಮಗಳಂತೆ ಒಟ್ಟು ೧೬ ಗ್ರಾಮಗಳಲ್ಲಿರುವ ಮುಕ್ರಿಯರ ಕೊಪ್ಪಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

೧.೩ ಅಧ್ಯಯನದ ಮಹತ್ವ

ಕರ್ನಾಟಕದಲ್ಲಿ ದಲಿತ ಹಾಗೂ ಇತರ ಸಮುದಾಯಗಳ ಕುರಿತು ಹಲವಾರು ಅಧ್ಯಯನಗಳು ನಡೆದಿವೆಯಾದರೂ ಇಲ್ಲಿಯವರೆಗೆ ಉತ್ತರಕನ್ನಡದಂತಹ ಕರಾವಳಿ ಪ್ರದೇಶಕ್ಕೆ ಸೀಮಿತವಾದ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಮುಕ್ರಿ ಸಮುದಾಯದ ಕುರಿತು ಕನ್ನಡದಲ್ಲಿ ಯಾವುದೇ ತರಹದ ಅಧ್ಯಯನಗಳು ನಡೆದಿರುವುದಿಲ್ಲ. ಹೀಗಾಗಿ ಪರಿಶಿಷ್ಟ ಜಾತಿಗೆ ಸೇರಿದ ಮುಕ್ರಿ ಸಮುದಾಯದ ಕುರಿತು ನಡೆದಿರುವ ಅಧ್ಯಯನಗಳಲ್ಲಿ ಈ ಅಧ್ಯಯನವು ಮೊದಲ ಪ್ರಯತ್ನವಾಗಿದೆ. ಹೀಗಾಗಿ ಮುಕ್ರಿ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಸಂಕಥನಗಳನ್ನು ಈ ಅಧ್ಯಯನದಲ್ಲಿ ಅರಿಯಲು ಪ್ರಯತ್ನಿಸಲಾಗಿದೆ. ಈ ಎಲ್ಲಾ ದೃಷ್ಟಿಯಿಂದ ಈ ಅಧ್ಯಯನವು ಒಂದು ಮಹತ್ವದ ಹೆಜ್ಜೆ ಎಂದು ತಿಳಿಯಲಾಗಿದೆ.

೧.೪ ಅಧ್ಯಯನ ವಿಧಾನ

ಮುಕ್ರಿ ದಲಿತ ಬುಡಕಟ್ಟು ಸಮುದಾಯಕ್ಕೆ ಸಂಬಂಧಿಸಿದ ಅದರಲ್ಲೂ ಕರಾವಳಿಯಲ್ಲಿ, ಕಾಡಿನ ಮತ್ತು ಬೆಟ್ಟದ ತಳದಲ್ಲಿ, ಸಮುದ್ರದ ಅಂಚಿನಲ್ಲಿ ನೆಲೆಸಿರುವ ಈ ಸಮುದಾಯದ ಪ್ರದೇಶಗಳಲ್ಲಿ ತಿರುಗಾಟ ಮಾಡಿ ಈ ವಿಷಯ ಬಗೆಗಿನ ಲೇಖನಗಳು, ಅನುಭವಗಳು ಹಾಗೂ ವಿಷಯಗಳನ್ನು ಅರಿತುಕೊಂಡು, ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ.

ಅವಲೋಕನ ವಿಧಾನ

ಮುಕ್ರಿ ಸಮುದಾಯದ ಮಾಹಿತಿ ಪಡೆಯಲು ಕ್ಷೇತ್ರಕಾರ್ಯದಲ್ಲಿ ಅವಲೋಕನ ವಿಧಾನ ಪ್ರಮುಖವಾದುದು. ಈ ಸಮುದಾಯದವರ ಜೊತೆ ಸಹಭಾಗಿಯಾಗಿ ಸಮುದಾಯದ ಅಂತರಾಳದಲ್ಲಿ ಹುದುಗಿರುವ ಜ್ಞಾನವನ್ನು ಮತ್ತು ಅವರ ಬದುಕಿನ ಸವಾಲುಗಳನ್ನು ಕುರಿತು ಮಾಹಿತಿಯನ್ನು ಪಡೆದು ಚರ್ಚಿಸಿ ಅಧ್ಯಯನಕ್ಕೆ ಪೂರಕವಾಗುವಂತೆ ರೂಪಿಸಿಕೊಳ್ಳಲಾಗಿದೆ.

ಪ್ರಶ್ನಾವಳಿ ವಿಧಾನ

ಕರಾವಳಿ ಪ್ರದೇಶದಲ್ಲಿ ನೆಲೆಸಿರುವ ಮುಕ್ರಿ ಸಮುದಾಯವನ್ನು ಅಧ್ಯಯನ ಮಾಡಲು ಹಾಗೂ ಮಾಹಿತಿ ಪಡೆಯಲು ಪ್ರಶ್ನಾವಳಿಯು ಮುಖ್ಯ ಪಾತ್ರವಹಿಸುತ್ತದೆ. ಹಾಗಾಗಿ ಸಮುದಾಯಕ್ಕೆ ಸಂಬಂಧಿಸಿದಂತೆ ವಿವಿಧ ಆಯಾಮಗಳಲ್ಲಿ ಹಲವಾರು ಪ್ರಶ್ನೆಗಳನ್ನು ತಯಾರಿಸಿಕೊಂಡು ಮಾಹಿತಿಯನ್ನು ಪಡೆಯಲಾಗಿದೆ. ಪ್ರಮುಖ ಪ್ರಶ್ನೆಗಳ ಜೊತೆಗೆ ಸಂದರ್ಭಕ್ಕನುಸಾರವಾಗಿ ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆಯಲಾಗಿದೆ.

ಸಂದರ್ಶನ ವಿಧಾನ

ಮುಕ್ರಿ ಸಮುದಾಯವು ದುಡಿಮೆ ಇಲ್ಲದೆ ಖಾಲಿ ಕುಳಿತುಕೊಳ್ಳುವ ಸಮುದಾಯವಲ್ಲ. ಆದ್ದರಿಂದ ಬದುಕಿನಲ್ಲಿ ಸ್ವಾವಲಂಬಿಗಳಾಗಬೇಕೆಂಬ ತವಕದಿಂದ ದಿನನಿತ್ಯ ಹೋರಾಟದಲ್ಲಿಯೇ ಜೀವನ ಸಾಗಿಸುವವರಾಗಿದ್ದಾರೆ. ಅದಕ್ಕಾಗಿ ಅವರು ಭೂಮಾಲೀಕರ ಮನೆ, ಗದ್ದೆ, ತೋಟಗಳಲ್ಲಿ ತಮ್ಮ ಬದುಕಿನ ಆಶ್ರಯಕ್ಕಾಗಿ ದಿನಗೂಲಿಗಳಾಗಿ, ಕೃಷಿ ಕೂಲಿಕಾರರಾಗಿ ಜೀವಿಸುತ್ತಿದ್ದಾರೆ. ಇಂತಹ ಸಮುದಾಯದವರನ್ನು ಕುರಿತು ವಿಶಿಷ್ಟ ರೀತಿಯಲ್ಲಿ ಸಂದರ್ಶನ ಮಾಡಿ ಮಾಹಿತಿ ಪಡೆಯಲಾಗಿದೆ.

ಸಂಖ್ಯಾಶಾಸ್ತ್ರೀಯ ವಿಧಾನ

ಸಮುದಾಯಕ್ಕೆ ಸಂಬಂಧಿಸಿದಂತೆ ಅದರಲ್ಲೂ ಮುಖ್ಯವಾಗಿ ಜಿಲ್ಲೆ, ರಾಜ್ಯ ಮತ್ತು ಇತರೆ ಸ್ವರೂಪದ ಅಂಕಿಅಂಶಗಳನ್ನು ಉಪಯೋಗಿಸಿಕೊಂಡು ಈ ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಪಡೆದು ಮಹಾಪ್ರಬಂಧವನ್ನು ಕಟ್ಟಿಕೊಡಲಾಗಿದೆ.

ಚಾರಿತ್ರಿಕ ವಿಧಾನ

ಮುಕ್ರಿ ಸಮುದಾಯದವು ರಾಜ್ಯದಲ್ಲಿಯೇ ಚಿಕ್ಕ ಸಮುದಾಯಗಳಲ್ಲಿ ಒಂದಾಗಿದ್ದು ವಿಶಿಷ್ಟ ಸಮುದಾಯವಾಗಿದೆ. ಆದ್ದರಿಂದ ಐತಿಹಾಸಿಕವಾಗಿ ಈ ಸಮುದಾಯವನ್ನು ನೋಡಲು ಇವರ ಕುರಿತು ಇರುವ ಕೆಲವು ಕೃತಿಗಳಿಂದ ವಿದ್ವಾಂಸರ ಸಂದರ್ಶನದಿಂದ, ಪತ್ರಿಕಾ ಲೇಖನಗಳಿಂದ ಮತ್ತು ಸರ್ಕಾರಿ ಪ್ರಕಟಣೆಗಳಿಂದ ಮಾಹಿತಿ ಪಡೆದುಕೊಂಡು ಅಧ್ಯಯನ ವಿಷಯ ಸತ್ವಯುತವಾಗಿ ಕಟ್ಟಿಕೊಡಲಾಗಿದೆ.

ತೌಲನಿಕ ವಿಧಾನ

ಮುಕ್ರಿ ಸಮುದಾಯವು ಕರ್ನಾಟಕದ ಉತ್ತರಕನ್ನಡ ಜಿಲ್ಲೆಯಲ್ಲಿ ಮಾತ್ರ ಕಂಡುಬರುತ್ತದೆ. ಬೇರೆ ಜಿಲ್ಲೆಗಳಲ್ಲಿ ಕಂಡು ಬರುವುದಿಲ್ಲ. ಇಲ್ಲಿಯ ಬೆಟ್ಟದ ಇಳಿಜಾರು, ಕಾಡಿನ ಮತ್ತು ಸಮುದ್ರದ ಅಂಚಿನಲ್ಲಿ ಇವರ ನೆಲೆಗಳು ಕಂಡುಬರುತ್ತವೆ. ಇದಕ್ಕನುಗುಣವಾಗಿ ಇವರು ಬದುಕು ರೂಪಿಸಿಕೊಂಡಿರುವುದರಂದ ತನ್ನದೇಯಾದ ವೈವಿಧ್ಯತೆಯಿಂದ ಸಂಯೋಜಿತಗೊಂಡಿದೆ. ಆದ್ದರಿಂದ ಮುಕ್ರಿಯರು ಮತ್ತು ಇತರ ಬುಡಕಟ್ಟುಗಳ ನಡುವಿನ ಸಂಸ್ಕೃತಿಯ ಅಧ್ಯಯನ ಮಾಡುವುದು ಅಗತ್ಯವಾಗಿದೆ. ಇಲ್ಲಿ ಮುಕ್ರಿಯರು ಎಷ್ಟರಮಟ್ಟಿಗೆ ಭಿನ್ನವಾದ ಜೀವನಶೈಲಿಯನ್ನು ರೂಪಿಸಿಕೊಂಡಿದ್ದಾರೆ ಎಂಬುದನ್ನು ತಿಳಿಯಲು ಈ ವಿಧಾನ ಉಪಯೋಗಿಸಿಕೊಂಡು ಮಾಹಿತಿ ಪಡೆದು ಪರಿಷ್ಕರಿಸಿ ಮಹಾಪ್ರಬಂಧಕ್ಕೆ ಉಪಯುಕ್ತವಾದ ರೀತಿಯಲ್ಲಿ ಬಳಸಿಕೊಳ್ಳಲಾಗಿದೆ.

ಮಾದರಿ ನಮೂನೆ ಆಯ್ಕೆ

ಮುಕ್ರಿ ಸಮುದಾಯವು ಉತ್ತರಕನ್ನಡ ಜಿಲ್ಲೆಯಲ್ಲಿ ನೆಲೆಗೊಂಡಿದೆ. ಆದ್ದರಿಂದ ಸಂಶೋಧನಾ ವ್ಯಾಪ್ತಿಗೆ ಸಂಬಂಧಿಸಿದಂತೆ ಈ ಸಮುದಾಯವು ಜಿಲ್ಲೆಯ ಕರಾವಳಿ ಭಾಗವಾದ ಕುಮಟಾ ಮತ್ತು ಹೊನ್ನಾವರ ತಾಲೂಕಿನಲ್ಲಿ ದಟ್ಟವಾಗಿ ನೆಲೆಗೊಂಡಿದೆ. ಈ ಎರಡು ತಾಲೂಕುಗಳಲ್ಲಿ ಪ್ರತಿ ತಾಲೂಕಿಗೆ ೮ ಮುಕ್ರಿ ನೆಲೆಗಳನ್ನು ಯಾದೃಚ್ಛಿಕ ನಮೂನೆಯ ಮೂಲಕ ಆಯ್ಕೆ ಮಾಡಿಕೊಂಡು ಕುಟುಂಬಗಳ ಸಮೀಕ್ಷೆಯನ್ನು ಮಾಡಿ ಅಧ್ಯಯನ ಮಾಡಲಾಗಿದೆ.

ಧ್ವನಿಮುದ್ರಣ ಮತ್ತು ಛಾಯಾಚಿತ್ರ ವಿಧಾನ

ಮೂಲ ಬುಡಕಟ್ಟು ಸಮುದಾಯವಾದ ಮುಕ್ರಿ ಸಮುದಾಯದ ಕುರಿತು ಮಾಹಿತಿ ಪಡೆಯುವ ಸಮಯದಲ್ಲಿ ಇವರು ಬದುಕಿನಲ್ಲಿ ಅನುಭವಿಸಿದ ಬವಣೆಗಳನ್ನು ಮತ್ತು ಇವರು ಇತರೆ ಸಮುದಾಯದೊಂದಿಗೆ ಹೊಂದಿರುವ ಸಂಬಂಧಗಳು, ವಸತಿ ವ್ಯವಸ್ಥೆ, ವೇಷಭೂಷಣ, ಕೆಲಸದ ಸ್ಥಿತಿಗತಿ, ಮತ್ತಿತರ ವಿಷಯಗಳ ಧ್ವನಿ ಮುದ್ರಣ ಮಾಡಿ ಪರಿಷ್ಕರಿಸಿ ಅಧ್ಯಯನಕ್ಕೆ ಪೂರಕವಾಗುವಂತಹ ಅಂಶಗಳನ್ನು ತೆಗೆದುಕೊಂಡು ಮಹಾಪ್ರಬಂಧ ರಚಿಸಲಾಗಿದೆ.

ಈ ಅಧ್ಯಯನದಲ್ಲಿ ಮುಕ್ರಿ ಸಮುದಾಯದ ಕುರಿತು ಇಲ್ಲಿಯವರೆಗೆ ಬಂದಿರುವ ಕೃತಿಗಳು, ಗೆಜೆಟಿಯರ್‌ಗಳು, ಪತ್ರಿಕೆಗಳು, ಬಿಡಿ ಲೇಖನಗಳು, ಜನಗಣತಿ ವರದಿಗಳು, ಮಾನವಾಭಿವೃದ್ಧಿ ವರದಿ, ಪಂಚಾಯತ್ ರಾಜ್ ವ್ಯವಸ್ಥೆಯ ಸಾಮಾನ್ಯ ಮಾಹಿತಿಗಳು, ಹಾಗೂ ಪರಿಶಿಷ್ಟ ಪಂಗಡಗಳ ಕುರಿತಾಗಿ ಬಂದಿರುವ ವರದಿಗಳು ಹಾಗೂ ಇತರ ಮೂಲಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಉತ್ತರಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಮುಕ್ರಿ ಸಮುದಾಯದ ಕುಟುಂಬಗಳು ನೆಲೆಸಿವೆ. ಮುಕ್ರಿ ಸಮುದಾಯದ ಬಹುತೇಕ ಸದಸ್ಯರನ್ನು ನೇರವಾಗಿ ಸಮೀಕ್ಷಿಸಿ

ಸಂದರ್ಶನ ನಡೆಸಲಾಯಿತು. ಈ ಅಧ್ಯಯನದಲ್ಲಿ ಮಾಹಿತಿಯನ್ನು ಪಡೆಯಲು ಮುಖ್ಯವಾಗಿ ಎರಡು ವಿಧಗಳನ್ನು ಅನುಸರಿಸಲಾಗಿದೆ. ಮೊದಲನೆಯದಾಗಿ ಅಧ್ಯಯನಕ್ಕಾಗಿ ಆಯ್ದ ಗ್ರಾಮಗಳಲ್ಲಿ ಮುಕ್ರಿ ಸಮುದಾಯದ ವಿವಿಧ ವಯೋಮಾನದವರನ್ನು ಸಂದರ್ಶಿಸಿ ಮಾಹಿತಿ ಪಡೆಯಲಾಯಿತು. ಈ ರೀತಿ ಕ್ರೋಢಿಕರಿಸಿದ ಮಾಹಿತಿಗಳನ್ನು ತುಲನಾತ್ಮಕವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

೧.೫ ಅಧ್ಯಯನದ ವಿನ್ಯಾಸ

ಈ ಅಧ್ಯಯನವು ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳ ವಿವರ ಈ ಕೆಳಗಿನಂತಿದೆ.

ಅಧ್ಯಾಯ ಒಂದು ಪ್ರವೇಶವಾಗಿದ್ದು ಇದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಅದರ ಮಹತ್ವ, ಅಧ್ಯಯನ ಕೈಗೊಂಡ ವಿಧಾನಗಳು ಮತ್ತು ಅಧ್ಯಯನದ ರೂಪುರೇಷೆಗಳ ಕುರಿತು ತಿಳಿಸಲಾಗಿದೆ.

ಅಧ್ಯಾಯ ಎರಡು ಚಾರಿತ್ರಿಕ ಹಾಗೂ ಭೌಗೋಳಿಕ ಹಿನ್ನೆಲೆ ಎಂದಿದ್ದು ಇದರಲ್ಲಿ ಉತ್ತರಕನ್ನಡ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ, ಭೌಗೋಳಿಕ ವಿವರಗಳು, ಪರಿಸರ, ಜನಸಂಖ್ಯೆ ಇತ್ಯಾದಿ ವಿವರಗಳನ್ನು ಅಧ್ಯಯನಕ್ಕೆ ಪೂರಕವಾಗುವಂತೆ ವಿವರಿಸಲಾಗಿದೆ.

ಅಧ್ಯಾಯ ಮೂರು ಮುಕ್ರಿಯರ ಮೂಲ ಮತ್ತು ಚಾರಿತ್ರಿಕ ಹಿನ್ನೆಲೆ ಎಂದಿದ್ದು ಇದರಲ್ಲಿ ಮುಖ್ಯವಾಗಿ ಮುಕ್ರಿ ಸಮುದಾಯದ ಚಾರಿತ್ರಿಕ ಹಿನ್ನೆಲೆಯೇನು ಎಂಬುದನ್ನು ನೋಡುವುದರೊಂದಿಗೆ ಸಮುದಾಯಕ್ಕೆ ಮುಕ್ರಿ ಎಂದು ಹೆಸರು ಬಂದ ಬಗೆಯ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕು ಸಾಮಾಜಿಕ ಸ್ಥಾನಮಾನ ಎಂದಿದ್ದು ಇದರಲ್ಲಿ ಮುಕ್ರಿಯರ ಕುಟುಂಬ ವ್ಯವಸ್ಥೆ, ಬೆಡಗು, ಬಂಧುತ್ವ, ಜೀವನಾವರ್ತನ ಆಚರಣೆಗಳು, ಆಚರಿಸುವ ಹಬ್ಬಗಳು, ದೈವರಾಧನೆ, ಜನಪದ ನಾಟಿವೈದ್ಯ, ಆಹಾರ ಪದ್ಧತಿ, ಒಳಾಡಳಿತ ವ್ಯವಸ್ಥೆ, ಭಾಷೆ ಮತ್ತು ಸಾಹಿತ್ಯ ಅಂಶಗಳ ಕುರಿತು ವಿವರಿಸಲಾಗಿದೆ.

ಅಧ್ಯಾಯ ಐದು ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿ ಎಂದಿದ್ದು ಇದರಲ್ಲಿ ಮುಕ್ರಿಯರ ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಗಳನ್ನು ನೋಡಲಾಗಿದೆ. ವಿಶೇಷವಾಗಿ ಆರ್ಥಿಕ ಸ್ಥಿತಿಗೆ ಇರುವ ಕಾರಣಗಳು, ಶೈಕ್ಷಣಿಕವಾಗಿ ಹಿಂದುಳಿಯಲು ಇರುವ ಕಾರಣಗಳು ಹಾಗೂ ಮೀಸಲಾತಿ ಪರಿಣಾಮವಾಗಿ ಸ್ಥಳೀಯ ಹಾಗೂ ರಾಜ್ಯ ರಾಜಕೀಯದಲ್ಲಿ ಮುಕ್ರಿಯರ ಪಾಲ್ಗೊಳ್ಳುವಿಕೆ. ಮತದಾರರಾಗಿ ಮುಕ್ರಿಯರು ಹೇಗೆ ಸಕ್ರಿಯರಾಗಿದ್ದಾರೆ. ಈ ಸಮುದಾಯದ ಎಷ್ಟು ಜನರು ಮತದಾರರ ಚೀಟಿಯನ್ನು ಪಡೆದಿದ್ದಾರೆ. ರಾಜಕೀಯವಾಗಿ ಪಾಲ್ಗೊಂಡವರಲ್ಲಿ ತಮ್ಮ ಹಕ್ಕುಗಳನ್ನು ಎಷ್ಟು ಜನ ಚಲಾಯಿಸಬಲ್ಲರು ಮುಂತಾದವುಗಳನ್ನು ನೋಡಲಾಗಿದೆ.

ಅಧ್ಯಾಯ ಆರು ಮುಕ್ರಿಯರ ಸಾಮಾಜಿಕ ಸಂಕಥನ ಎಂದಿದ್ದು ವರ್ತಮಾನದಲ್ಲಿ ಮುಕ್ರಿ ಸಮುದಾಯಕ್ಕಿರುವ ಸ್ಥಾನಮಾನ, ಇತರ ಸಮುದಾಯಗಳೊಂದಿಗೆ ಮುಕ್ರಿಗೆ ಇರುವ ಸಂಬಂಧಗಳು, ಮುಕ್ರಿ ಮತ್ತು ಆಧುನಿಕ ಜಗತ್ತಿನ ನಡುವೆ ಇರುವ ಸಂಘರ್ಷಗಳ ಕುರಿತು ನೋಡಲಾಗಿದೆ.

ಕೊನೆಯಲ್ಲಿ ಸಮಾರೋಪ ಇದ್ದು ಇದರಲ್ಲಿ ಒಟ್ಟಾರೆ ಅಧ್ಯಯನದಿಂದ ದೊರೆತ ಫಲಿತಗಳ ಕುರಿತು ವಿಶ್ಲೇಷಿಸುವುದರೊಂದಿಗೆ ಅಧ್ಯಯನದ ಮುಂದಿನ ಸಾಧ್ಯತೆಗಳು ಮತ್ತು ಕೆಲವು ಸಲಹೆ ಸೂಚನೆಗಳನ್ನು ನೀಡಲಾಗಿದೆ.

ಅಧ್ಯಾಯದ ಕೊನೆಯಲ್ಲಿ ಅನುಬಂಧಗಳಿದ್ದು ಅನುಬಂಧ ಒಂದರಲ್ಲಿ ಮಾಹಿತಿದಾರರ ಹೆಸರು, ವಿವರಗಳನ್ನು ನೀಡಲಾಗಿದೆ. ಅನುಬಂಧ ಎರಡರಲ್ಲಿ ಅಧ್ಯಯನಕ್ಕೆ ಪೂರಕವಾದ ಕೆಲವು ಕೋಷ್ಟಕಗಳನ್ನು ನೀಡಲಾಗಿದೆ. ಅನುಬಂಧ ಮೂರರಲ್ಲಿ ನಕ್ಷೆಗಳಿವೆ. ಅನುಬಂಧ ನಾಲ್ಕರಲ್ಲಿ ಪರಾಮರ್ಶನ ಗ್ರಂಥಗಳ ವಿವರಗಳನ್ನು ನೀಡಲಾಗಿದೆ. ಅನುಬಂಧ ಐದರಲ್ಲಿ ಛಾಯಾಚಿತ್ರಗಳನ್ನು ಕೊಡಲಾಗಿದೆ.

ಮುಖ್ಯವಾಗಿ ಮುಕ್ರಿ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಕಥನಗಳನ್ನು ನೋಡಲಾಗಿದೆ. ಹಾಗೆಯೇ ಉತ್ತರಕನ್ನಡದ ಮೇಲ್ಜಾತಿಯ ಜಗತ್ತು ಮುಕ್ರಿಯರನ್ನು ಹೇಗೆ ನೋಡುತ್ತಿದೆ ಮತ್ತು ಹೇಗೆ ನಡೆಸಿಕೊಳ್ಳುತ್ತಿದೆ ಎಂಬುದನ್ನು ಈ ಅಧ್ಯಯನದಲ್ಲಿ ನೋಡಲಾಗಿದೆ.

ಮುಕ್ರಿ ಸಮುದಾಯ ಕುರಿತು ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೧೯೭೯ರಲ್ಲಿ ಮೊಟ್ಟ ಮೊದಲಬಾರಿಗೆ ಡಾ. ಎಲ್.ಆರ್. ಹೆಗಡೆ ಅವರು ಮುಕ್ರಿ ಮತ್ತು ಹೊಲೆಯರ ಪದಗಳು ಎಂಬ ಕಾವ್ಯ ಸಂಕಲನವನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟಿಸಿದರು. ಅದರಲ್ಲಿ ಕುಮಟಾ ತಾಲೂಕಿನ ಹೆಗಡೆ, ಮಿರ್ಜಾನ, ಹೊಲನಗದ್ದೆ, ಹೊಳೆಗದ್ದೆ ಊರುಗಳಿಂದ ಕಥನಗೀತೆಗಳನ್ನು, ಒನಕೆ ಹಾಡುಗಳನ್ನು, ಮದುವೆ ಹಾಡುಗಳು ಹಾಗೂ ಇತ್ಯಾದಿ ಹಾಡುಗಳನ್ನು ಸಂಗ್ರಹಿಸಿ ಮುಕ್ರಿ ಮತ್ತು ಹೊಲೆಯರ ಕಾವ್ಯಗಳಲ್ಲಿನ ಬದುಕಿನ ಚಿತ್ರಣವನ್ನು ನೀಡಿದ್ದಾರೆ.

೧೯೮೫ರಲ್ಲಿ ಡಾ. ಎಲ್.ಜಿ. ಭಟ್ಟರು, ಐಬಿಎಚ್ ಪ್ರಕಾಶನದಡಿಯಲ್ಲಿ ಪ್ರಕಟಿತವಾದ ಮುಕರಿಗಳು ಎಂಬ ಕಿರುಹೊತ್ತಿಗೆಯಲ್ಲಿ ಮುಕರಿಯವರ ಪರಿಚಯ ಮತ್ತು ಕೆಲವು ಜನಪದ ಕಾವ್ಯಗಳನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ.

ಜನಪದ ಪ್ರಕಾಶನ, ಹೊನ್ನಾವರ ಅವರ ಪ್ರಕಟಣೆಯಲ್ಲಿ ಎನ್.ಆರ್. ನಾಯಕ ಅವರು ಮುಕ್ರಿಗಳ ಗೀತೆ ಮತ್ತು ಕಥೆಗಳು ಎಂಬ ಕೃತಿಯಲ್ಲಿ ಮುಕ್ರಿಗಳ ಸಂಕ್ಷಿಪ್ತ ಪರಿಚಯ ಮತ್ತು ಜೀವನಾವರ್ತನ ಆಚರಣೆಗಳಲ್ಲಿರುವ ಮದುವೆ, ಹುಟ್ಟು, ಸಾವು ಹಾಗೂ ವಾರ್ಷಿಕಾಚರಣೆಗಳಾದ ಧಾರ್ಮಿಕ ಆಚರಣೆಗಳು ಮತ್ತು ಸುಗ್ಗಿ ಆಚರಣೆಗಳು ಸಂಬಂಧಿಸಿದಂತೆ ವಿವರಣಾತ್ಮಕವಾಗಿ ತಿಳಿಸಲಾಗಿದೆ. ಸಾಹಿತ್ಯ ಕುರಿತಂತೆ ಮದುವೆ ಹಾಡುಗಳು, ಸೊಬಾನೆ ಹಾಡುಗಳು, ಭತ್ತ ಮೆರೆಯುವ ಹಾಡು, ಶೃಂಗಾರದ ಹಾಡು, ಹಾಸ್ಯ ಹಾಡುಗಳು, ಭಕ್ತಿಯ ಹಾಡುಗಳು, ಗುಮಟೆಯ ಪದಗಳು, ಸುಗ್ಗಿ ಪದಗಳು, ಕಥೆಗಳು ಹೀಗೆ ಸಾಹಿತ್ಯ ಕುರಿತಂತೆ ಮುಕ್ರಿಯರಲ್ಲಿನ ಜನಪದ ಸೊಗಡನ್ನು ಕಟ್ಟಿಕೊಟ್ಟಿದ್ದಾರೆ.

ಕೆನರಾ ಗೆಝೆಟಿಯರ್ ಮತ್ತು ಎಂಥೋವನ್ ಅವರ ಟ್ರೈಬ್ಸ್ ಅ್ಯಂಡ್ ಕ್ಯಾಸ್ಟ್ ಆಫ್ ಬಾಂಬೆ ಎಂಬ ಗ್ರಂಥದಲ್ಲಿ ಮುಕ್ರಿಯರು ಕುರಿತು ಮಾಹಿತಿ ನೀಡಿದ್ದಾರೆ.

ಕೆ ಎಸ್ ಸಿಂಗ್ ಅವರು ಪೀಪಲ್ಸ್ ಆಫ್ ಇಂಡಿಯಾ ಕೃತಿಯಲ್ಲಿ ಮುಕ್ರಿ ಸಮುದಾಯದ ಕಿರುಪರಿಚಯವನ್ನು ನೀಡಿದ್ದಾರೆ.

ಎಸ್. ಸಿಲ್ವಾ ಅವರ ಕಾರವಾರ ದರ್ಶನದಲ್ಲೂ ಮುಕ್ರಿಯವರ ಉಲ್ಲೇಖವಿದೆ.

ಆರ್.ಎಸ್. ಹಿರೇಮಠ ಅವರ ಲೇಖನವು ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಜನಪದ ಸಾಹಿತ್ಯ ದರ್ಶನ-೧೭ ಎನ್ನುವ ಹೊತ್ತಿಗೆಯಲ್ಲಿ ಮುಕ್ರಿಗಳನ್ನು ಕುರಿತು ಚರ್ಚಿಸಲಾಗಿದೆ.

ಡಾ. ಶ್ರೀಪಾದ ಶೆಟ್ಟಿ ಅವರ ಮುಕ್ರಿಗಳು ಎಂಬ ಲೇಖನವನ್ನು ಎಚ್.ಜೆ. ಲಕ್ಕಪ್ಪಗೌಡ ಅವರ ಪ್ರಧಾನ ಸಂಪಾದನೆಯಲ್ಲಿ ಪ್ರಕಟಿತವಾದ ಕರ್ನಾಟಕ ಬುಡಕಟ್ಟುಗಳ ಸಂಪುಟ-೧ ಎಂಬ ಗ್ರಂಥವನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲಿ ಮುಕ್ರಿಯವರ ಜೀವನಗಾಥೆಯನ್ನು ಸವಿಸ್ತರವಾಗಿ ವಿವರಿಸಿದ್ದಾರೆ.

ಎಂ.ವಿ. ಶರ್ಮಾ ತದ್ದಲಸೆ ಅವರು ಮುಕ್ರಿಗಳ ಮಹಿಳಾ ಸಂಸ್ಕೃತಿ ಎಂಬ ಲೇಖನವನ್ನು ಸಂಸ್ಕೃತಿ ಮಹಿಳಾ ಮಾಲಿಕೆಯಲ್ಲಿ ಬರೆದಿದ್ದಾರೆ. ಇಲ್ಲಿ ಮುಕ್ರಿ ಮಹಿಳೆಯರ ಬದುಕಿನ ಚಿತ್ರಣವನ್ನು ನೀಡಿದ್ದಾರೆ.

ಡಾ. ಎಲ್.ಆರ್. ಹೆಗಡೆ ಅವರು ಮುಕ್ರಿಯವರ ಕಥೆಗಳನ್ನು ಕರಾವಳಿ ಕಥೆಗಳು ಎಂಬ ಸಂಕಲನದಲ್ಲಿ ಮುಕ್ರಿಯವರ ಬದುಕಿನ ಬಗೆಯನ್ನು ಕಟ್ಟಿಕೊಟ್ಟಿದ್ದಾರೆ.

ಮೇಲಿನ ಬಹುತೇಕ ಎಲ್ಲಾ ಕೃತಿಗಳು ತಮ್ಮ ಅಧ್ಯಯನದ ಮಿತಿಯನ್ನೊಳಗೊಂಡು, ಮುಕ್ರಿ ಸಮುದಾಯವನ್ನು ಅಭ್ಯಸಿಸಲು ವಿಪುಲ ತಿಳುವಳಿಕೆಯನ್ನು ನೀಡಿದೆ. ಹಾಗೆಯೇ ಪ್ರಸ್ತುತ ಸಂಶೋಧನೆಗೆ ಮಾರ್ಗದರ್ಶನ ನೀಡಿದೆ. ಈ ಎಲ್ಲಾ ಕೃತಿಗಳನ್ನು ಗಮನದಲ್ಲಿರಿಸಿ

ಕೊಂಡು ನೋಡಿದಾಗ ಮುಕ್ರಿಯವರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಅಧ್ಯಯನ ನಡೆದಿಲ್ಲ. ಆದಕಾರಣ ಪ್ರಸ್ತುತ ಮುಕ್ರಿ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ವರ್ತಮಾನದ ಸ್ಥಾನಮಾನ ಹಾಗೂ ಅವರ ಸಂಘಟನೆಯ ಬವಣೆಗಳನ್ನು ಅವಲೋಕಿಸಿ ಅಧ್ಯಯನ ನಡೆಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಅಧ್ಯಾಯ ಎರಡು

ಉತ್ತರ ಕನ್ನಡ ಜಿಲ್ಲೆಯ ಚಾರಿತ್ರಿಕ ಮತ್ತು ಭೌಗೋಳಿಕ ಹಿನ್ನೆಲೆ

ಅಧ್ಯಾಯ ಎರಡು

ಚಾರಿತ್ರಿಕ ಹಾಗೂ ಭೌಗೋಳಿಕ ಹಿನ್ನೆಲೆ

'**ಚ**ರಿತ್ರೆಯು ತನ್ನಿಂದ ತಾನೇ ಸೃಷ್ಟಿಯಾಗುವ ಸಂಗತಿಯಲ್ಲ. ಮನುಷ್ಯ ತನ್ನ ಒಟ್ಟಾರೆ ಚಲನಶೀಲತೆಯ ಮೂಲಕ ಚರಿತ್ರೆಯನ್ನು ಸೃಷ್ಟಿಸುತ್ತಾನೆ. ಅಂದರೆ ಆದಿಮಾನವನು ಆಹಾರ ಸಂಗ್ರಹಣೆಯ ಹಂತದಲ್ಲಿ ಅಲೆಮಾರಿಯಾಗಿದ್ದು, ಕಾಡಲ್ಲಿ ಸಿಗುವ ಅರಣ್ಯ ಉತ್ಪನ್ನಗಳನ್ನು ಹುಡಿಕಿ ತಿಂದು ಜೀವನ ಸಾಗಿಸುತ್ತಿದ್ದನು. ಈ ಎಲ್ಲಾ ವ್ಯವಹಾರಗಳು ನಿಸರ್ಗದ ಮಡಿಲಲ್ಲಿ ನಡೆಯುತ್ತಿದದ್ದವು. ಅದಕ್ಕಾಗಿ ಈ ಹಂತದ ಮನುಷ್ಯನನ್ನು ನಿಸರ್ಗದ ಮನುಷ್ಯ ಎಂದರು ತಪ್ಪಲ್ಲ. ಇಲ್ಲಿ ಉತ್ಪಾದನಾ ಶಕ್ತಿ ಮನುಷ್ಯನೇ ಆಗಿದ್ದನು. ಉತ್ಪಾದನಾ ವಿಧಾನ ಮತ್ತು ಉಪಕರಣಗಳು ಸಿಮೀತವಾಗಿದ್ದವು. ಇದರಿಂದ ಬೇರೆ ಇನ್ನಾವುದೋ ಮೂಲದಿಂದ ಆಹಾರ ಉತ್ಪಾದಿಸಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ಉತ್ಪಾದಿಸಿದ ಆಹಾರ ಸಂಗ್ರಹಿಸಲ್ಪಡುತ್ತಿತ್ತು ಈ ಕಾರಣದಿಂದಾಗಿ ವಿತರಣೆ ಮತ್ತು ಉತ್ಪಾದನಾ ಸಂಬಂಧಗಳು ಈ ಹಂತದಲ್ಲಿ ಕಂಡಬರುವುದಿಲ್ಲ. ಅಲ್ಲದೆ ಸಾಂಘಿಕ ಜೀವನದಿಂದ ದೂರ ಉಳಿದಿದ್ದನು. ಅಂದರೆ ಈ ಹಂತದಲ್ಲಿ ಏಕಾಂಗಿಯಾಗಿದ್ದು ಹಲವಾರು ತೊಂದರೆಗಳನ್ನು, ದೌರ್ಬಲ್ಯಗಳನ್ನು ಎದುರಿಸಬೇಕಾಯಿತು ಹಾಗೂ ಸುಖಾ-ಪೇಕ್ಷವನ್ನು ಹೊಂದಿದ್ದನು.'[೧]

"ದೌರ್ಬಲ್ಯ, ಸುಖ, ಪ್ರೇಮ ಇವು ಮನುಷ್ಯನಲ್ಲಿ ಸಾಂಗತ್ಯವನ್ನು ಬೆಳೆಸುತ್ತವೆ. ಬೇಟೆಯ ಹಂತದಲ್ಲಿ ಮನುಷ್ಯನು ತನ್ನ ದೌರ್ಬಲ್ಯಗಳನ್ನು ಸರಿಪಡಿಸಿಕೊಳ್ಳಲು ಮತ್ತು ಪ್ರಕೃತಿಯ ವೈಪರೀತ್ಯಗಳನ್ನು ಎದುರಿಸಲು ಸಾಂಘಿಕತೆಯನ್ನು ಹೊಂದಲಾರಂಭಿಸಿದನು. ಸಾಂಗತ್ಯ ಮತ್ತು

ನಿಸರ್ಗವನ್ನು ಸಂಘರ್ಷಾತ್ಮಕ ದೃಷ್ಟಿಕೋನದಿಂದ ನೋಡುತ್ತಾನೆ. ಈ ಹಂತದಲ್ಲಿ ಉತ್ಪಾದನಾ ಶಕ್ತಿ ಮನುಷ್ಯನೇ ಆಗಿದ್ದರೂ, ಉತ್ಪಾದನಾ ವಿಧಾನಗಳು ಮತ್ತು ಪರಿಕರಗಳನ್ನು ಕಂಡುಕೊಂಡನು. ಇವುಗಳಿಂದಲೂ ಹೆಚ್ಚು ಉತ್ಪಾದಿಸಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ಈ ಹಂತದಲ್ಲಿಯೇ ಉತ್ಪಾದನಾ ಸಂಬಂಧಗಳು ಸಮತಾವಾದಿ ನೆಲೆಯಲ್ಲಿದ್ದವು. ಮನುಷ್ಯ ಮುಗ್ಧ ಪ್ರಾಣಿಗಳನ್ನು ಪಳಗಿಸಿ ತನ್ನ ಜೊತೆ ಬೆಳೆಸಲು ಪ್ರಾರಂಭಿಸಿದನು. ಇದು ಮನುಷ್ಯನನ್ನು ಪಶುಪಾಲನಾ ಹಂತಕ್ಕೆ ಕರೆದ್ಯೋಯುತ್ತದೆ."[೨]

"ಹೀಗೆ ಪಳಗಿಸಿದ ಪ್ರಾಣಿಗಳನ್ನು ಪಶುಸಂಗೋಪನೆ ಮಾಡಲು ಪ್ರಾರಂಭಿಸಿದನು. ಇದಕ್ಕೆ ಒಳಪಟ್ಟ ಪ್ರಾಣಿಗಳ ಉತ್ಪನ್ನಗಳನ್ನು ಸಂಗ್ರಹಿಸಲು ಮಡಿಕೆಗಳನ್ನು ಕಂಡುಕೊಂಡನು. ಪಶುಗಳು ಮತ್ತು ಮಡಿಕೆಗಳು ಈ ಹಂತದ ಉತ್ಪಾದನಾ ಸಾಧನಗಳಾದವು. ಇವು ಮನುಷ್ಯನ ಉತ್ಪಾದನೆಯ ದಿಕ್ಕನೆ ಬದಲಿಸಿದವು. ರಕ್ಷಣೆಯ ಹೊಣೆ ಹೆಚ್ಚುತ್ತಾ ಹೋಗಿ ಹಲವಾರು ಪಶುಗಳ ಹೆಸರಲ್ಲಿ ಬೇರೆ ಬೇರೆ ಗುಂಪುಗಳು ಸೃಷ್ಟಿಯಾದವು. ಇಂಥ ಒಂದು ಗುಂಪು ಗಣವಾಗಿ ಪರಿವರ್ತನೆಯಾಯಿತು. ಉತ್ಪಾದಿತ ಫಲಿತ ಅಧಿಪತಿಯಲ್ಲಿ ಕೇಂದ್ರಿಕರಣವಾಗದೆ ಗಣದಲ್ಲಿ ಹಂಚಿಕೆಯಾಗುತ್ತಿತ್ತು. ಇಲ್ಲಿಯೇ Primitive Communist Society ಹುಟ್ಟಿಕೊಂಡಿತು. ಇಲ್ಲಿಯವರೆಗೆ ಮನುಷ್ಯ ತನ್ನ ಸಾತತ್ಯ ಮತ್ತು ಹುಟ್ಟಿಗೆ ಹೆಣ್ಣೇ ಕಾರಣ ಎಂದು ತಿಳಿದಿದ್ದನು. ಈ ಹಂತದಲ್ಲಿ ಗಂಡು ಕೂಡ ಕಾರಣಿಕರ್ತ ಎಂಬುದು ಮನಗಂಡನು. ಇದರಿಂದಾಗಿಯೇ ಸ್ತ್ರೀ ಮತ್ತು ಪುರುಷ ದೈವಗಳು ಹುಟ್ಟಿಕೊಂಡವು. ಈ ಹಂತದ ಮಹಿಳೆಯರು ಆಹಾರ ಸಂಗ್ರಹಣೆಯ ಜೊತೆಗೆ ಬೇರೆ ಬೇರೆ ಸಸ್ಯಗಳನ್ನು ಕಂಡುಕೊಳ್ಳುವಲ್ಲಿ ಅವುಗಳನ್ನು ಬೆಳೆಸುವಲ್ಲಿ ಮತ್ತು ಮರು ಉತ್ಪಾದನೆ ಮಾಡುವುದರಲ್ಲಿ ನಿರತರಾದರು. ಇಂತಹ ಲಘು ಕೃಷಿಯಲ್ಲಿ ಲೋಹಗಳಾದ ತಾಮ್ರ ಮತ್ತು ಕಂಚುಗಳನ್ನು ಬಳಸಿದರು. ಈ ಕೃಷಿ ಪದ್ಧತಿಯೂ ಮಾನವನ ಸಮಾಜವನ್ನು ಕೃಷಿ ಉತ್ಪಾದನಾ ಹಂತಕ್ಕೆ ದಾರಿ ಮಾಡಿತು."[೩]

ಕೃಷಿ ಉತ್ಪಾದನಾ ಹಂತದಲ್ಲಿ ಭೂಮಿಯು ಉತ್ಪಾದನೆಯ ಮೂಲವಾಯಿತು. ಭೂಮಿಯನ್ನು ಉಳುಮೆ ಮಾಡಲು ತಾಮ್ರ ಮತ್ತು ಕಂಚುಗಳು ದುರ್ಬಲವಾಗಿದ್ದವು. ಇದೇ ಕಾರಣಕ್ಕೆ ಕಬ್ಬಿಣದ ಬಳಕೆ ಆರಂಭವಾಯಿತು. "ಯಾವುತ್ತೂ ಕಬ್ಬಿಣವು ಉತ್ಪಾದನಾ ಸಾಧನಗಳನ್ನು ಕ್ರಾಂತಿಕಾರಿಯಾಗಿ ರೂಪಾಂತರಿಸಿತೋ ಆವತ್ತೆ ಮಾನವನ ಸಾಮಾಜಿಕ ವ್ಯವಸ್ಥೆಯು ಅಮೂಲಾಗ್ರವಾಗಿ ಬದಲಾಯಿತು. ಕಬ್ಬಿಣದ ಬಳಕೆಯಿಂದ ಕೃಷಿಯಲ್ಲಿ ಅಧಿಕ ಉತ್ಪಾದನೆಯಾಗ ತೊಡಗಿತು. ಈ ಅಧಿಕ ಉತ್ಪಾದನೆ ಗಣದ ಸದಸ್ಯರ ನಡುವೆ ಮಿಗುತಾಯವಾಗತೊಡಗಿತು. ಇದು ಸಾಮುದಾಯಿಕ ಒಡೆತನದ ಬದಲಿಗೆ ಖಾಸಗಿ ಆಸ್ತಿಯಾಗಿ ರೂಪಗೊಳ್ಳತೊಡಗಿತು.

ಅಧಿಕ ಉತ್ಪಾದನೆಯ ಸಂಗ್ರಹವು ಸಮತಾವಾದಿ ಸಮಾಜವನ್ನು ಊಳಿಗಮಾನ್ಯ ಸಮಾಜವಾಗಿ ಬದಲಾಯಿಸಿತು. ಅಲ್ಲದೆ ಗಣವ್ಯವಸ್ಥೆಗೆ ಬದಲಾಗಿ ಕುಟುಂಬ ವ್ಯವಸ್ಥೆ ರೂಪಗೊಂಡಿತು. ಇದರಿಂದ ಸಾಮಾಜಿಕ ನಿಯಮಗಳು ಹುಟ್ಟಿಕೊಂಡವು. ಈ ಹಂತದಲ್ಲಿಯೇ ಅಧಿಕಾರಗಳು ನಿಯಮಗಳಿಗೆ ಒಳಪಟ್ಟವು. ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಅಧಿಕಾರಗಳು ಮತ್ತು ಕುಟುಂಬದ ಅಧಿಕಾರಗಳು ನಿಯಮಗಳಿಂದ ರಚಿಸಲ್ಪಟ್ಟವು."[೪]

"ಮಾನವ ಸಮಾಜ ಸಂಘಟಿತವಾಯಿತು. ಮಾನವನ ದಿನನಿತ್ಯದ ಬದುಕು ನಿಯಮಗಳಿಂದ ನಿಯಂತ್ರಣ ಮತ್ತು ನಿರ್ದೇಶನಕ್ಕೆ ಒಳಪಡಲು ಪ್ರಾರಂಭವಾಯಿತು. ಅಂದರೆ ಸಮಾಜದಲ್ಲಿ ಹಲವಾರು ಸಂಸ್ಥೆಗಳು ಹುಟ್ಟಿಕೊಂಡವು. ಇವು ಮನುಷ್ಯನ ಬದುಕನ್ನು ನಿರ್ಧರಿಸುತ್ತಿದ್ದವು. ಹಾಗಾಗಿ ಸಮಾಜವು ನಿರ್ಬಂಧ ಮತ್ತು ನಿಷೇಧಕ್ಕೆ ಒಳಪಟ್ಟಿತು. ಇದು ಕಾರ್ಲ್‌ಮಾರ್ಕ್ಸ್‌ನ ಚಾರಿತ್ರಿಕ ಭೌತಿಕವಾದದ ವಿಧಾನದಿಂದ ಸ್ಪಷ್ಟಪಡಿಸಬಹುದು. ಈ ಅಧ್ಯಯನ ವಿಧಾನದಿಂದ ಯಾವ ರೀತಿಯ ಉತ್ಪಾದನಾ ವ್ಯವಸ್ಥೆ ಅಸ್ತಿತ್ವದಲ್ಲಿತ್ತು ಹಾಗೂ ಆ ವ್ಯವಸ್ಥೆಗೊಳಗೆ ಯಾವ ರೀತಿಯ ಪರಿವರ್ತನೆಗಳು ಆಗುತ್ತಿದ್ದವು ಎಂದು ತಿಳಿಯುವುದು ಸಾಧ್ಯ. ಉತ್ಪಾದನಾ ವ್ಯವಸ್ಥೆಯಲ್ಲಾದ ಮಾರ್ಪಾಟುಗಳಿಂದ ಅರಸ ಮತ್ತು ಅಧಿಕಾರಿಗಳು, ಭೂಮಾಲೀಕರು ಮತ್ತು ರೈತರು, ಉತ್ಪಾದಕ ಮತ್ತು ಅನುತ್ಪಾದಕ ಎಂಬ ವರ್ಗಗಳು ಸೃಷ್ಟಿಯಾದವು. ಈ ವರ್ಗಗಳ ಸಂಬಂಧಗಳು ಉತ್ಪಾದನಾ ವಿಧಾನಗಳನ್ನು ಮತ್ತು ಉತ್ಪಾದನಾ ಉಪಕರಣಗಳನ್ನು ಅವಲಂಬಿಸಿರುತ್ತಿದ್ದವು."[೫] ಉತ್ಪಾದನಾ ವ್ಯವಸ್ಥೆ ಆರ್ಥಿಕತೆ ಮಾತ್ರ ಸಿಮಿತವಾಗದೆ ಸಮಾಜ ದಲ್ಲಿಯ ಮಾರ್ಪಾಟುಗಳನ್ನು ತಿಳಿಸುತ್ತದೆ ಎಂದು ಸ್ಪಷ್ಟವಾಗುತ್ತದೆ.

"ಮುಂದೆ ಇಂತಹ ಉತ್ಪಾದನಾ ವ್ಯವಸ್ಥೆಯು ಅರಸು ಕೇಂದ್ರಿತ ರಾಜಕೀಯ ವ್ಯವಸ್ಥೆಯ ಹಾಗೂ ಧಾರ್ಮಿಕ ವ್ಯವಸ್ಥೆಯ ನಿಯಂತ್ರಣಕ್ಕೆ ಒಳಗಾಯಿತು. ಈ ಉತ್ಪಾದನಾ ವ್ಯವಸ್ಥೆಯನ್ನು ಬಳಸಿಕೊಂಡು ಪ್ರಭುತ್ವವು(ಅಂದರೆ ರಾಜಕೀಯ ಪ್ರಭುತ್ವ, ಆರ್ಥಿಕ ಪ್ರಭುತ್ವ, ಧಾರ್ಮಿಕ ಪ್ರಭುತ್ವ ಇತ್ಯಾದಿ) ತನಗೆ ಅನುಕೂಲವಾಗುವಂತೆ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವ ಮತ್ತು ಮಾರ್ಪಡಿಸುವ ಪ್ರಕ್ರಿಯೆಯಲ್ಲಿ ತೊಡಗಿತು."[೬]

ಪ್ರತಿಯೊಂದು ಪ್ರದೇಶದ ಸಾಮಾಜಿಕ ವ್ಯವಸ್ಥೆಯು ಅಲ್ಲಿನ ಉತ್ಪಾದನಾ ವ್ಯವಸ್ಥೆ, ರಾಜಕೀಯ ವ್ಯವಸ್ಥೆ ಮತ್ತು ಧಾರ್ಮಿಕ ವ್ಯವಸ್ಥೆಗಳಿಂದ ಪ್ರಭಾವಿಸಲ್ಪಟ್ಟಿರುತ್ತದೆ ಎಂದು ತಿಳಿಯುತ್ತದೆ.

ಯಾವುದೇ ಸಮುದಾಯದ ಸಾಮಾಜಿಕ ಅಧ್ಯಯನ ಮಾಡಬೇಕಾದರೆ, ಆ ಸಮುದಾಯದ ರಾಜಕೀಯ ವ್ಯವಸ್ಥೆ ಮತ್ತು ಆರ್ಥಿಕ ವ್ಯವಸ್ಥೆಗಳ ಹಿನ್ನೆಲೆಯನ್ನು ತಿಳಿಯುವುದು ಮುಖ್ಯವಾಗಿದೆ.

ಅಲ್ಲದೆ ಚಾರಿತ್ರಿಕ ಘಟನೆಗಳು(ಅಂಶಗಳು) ಯಾವ ರೀತಿ ಸಮುದಾಯ ರೂಪಗೊಳ್ಳುವಲ್ಲಿ ಕಾರಣೀಭೂತವಾಗಿವೆ ಎಂದು ಅರ್ಥಮಾಡಿಕೊಳ್ಳುವುದು ಅವಶ್ಯಕವಾಗಿದೆ.

ಈ ಅಧ್ಯಾಯದಲ್ಲಿ ಮುಕ್ರಿ ಸಮುದಾಯದ ಮೂಲ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಅದಕ್ಕಾಗಿ ಸಮುದಾಯವು ನೆಲೆಸಿರುವ ಪ್ರದೇಶದ ಭೌಗೋಳಿಕ ಹಿನ್ನೆಲೆಯನ್ನು ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ತಿಳಿಯುವ ಅಗತ್ಯವಿದೆ. ಏಕೆಂದರೆ ಸಮುದಾಯ ರೂಪಗೊಳ್ಳುವಲ್ಲಿ ಭೌಗೋಳಿಕ ಹಿನ್ನೆಲೆ ಮತ್ತು ಚಾರಿತ್ರಿಕ ಹಿನ್ನೆಲೆ ಯಾವ ರೀತಿ ಪಾತ್ರ ನಿರ್ವಹಿಸಿವೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಉತ್ತರಕನ್ನಡ ಜಿಲ್ಲೆಯ ಚಾರಿತ್ರಿಕ ಮತ್ತು ಭೌಗೋಳಿಕ ಹಿನ್ನೆಲೆಯನ್ನು ಇಲ್ಲಿ ನೋಡಲಾಗಿದೆ. ಇದರಿಂದ ಮುಕ್ರಿ ಸಮುದಾಯದ ಮೂಲ ಮತ್ತು ಚರಿತ್ರೆಯನ್ನು ತಿಳಿಯಲು ಸಾಧ್ಯವಾಗುತ್ತದೆ.

೨.೧ ಉತ್ತರಕನ್ನಡ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

ಡಾ. ಕೆ. ಮೋಹನ್‌ಕೃಷ್ಣ ರೈ ಅವರು "ಕೆನರಾದ ವಿಭಜನೆ, ಹತ್ತಿ ರಾಜಕೀಯದ ವಿಶ್ಲೇಷಣೆ" ಎಂಬ ಗ್ರಂಥದಲ್ಲಿ ಕೆನರಾದ ಚಾರತ್ರಿಕ ಹಿನ್ನೆಲೆಯನ್ನು ತಿಳಿಸಿದ್ದಾರೆ. ಅಧ್ಯಯನಕ್ಕೆ ಅಗತ್ಯವಾಗಿರುವುದರಿಂದ ಸಂಬಂಧಿಸಿದ ಕೆಲವು ಅಂಶಗಳನ್ನು ಇಲ್ಲಿ ದಾಖಲಿಸಲಾಗಿದೆ.

"ಉತ್ತರಕನ್ನಡ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕಾದರೆ ಕೆನರಾದ ಚಾರಿತ್ರಿಕ ಹಿನ್ನೆಲೆ ತಿಳಿಯುವುದು ಅಗತ್ಯ. ಕೆನರಾ ಪ್ರದೇಶದಲ್ಲಿ ಹೆಚ್ಚಾಗಿ ಬಂದರು ಪಟ್ಟಣಗಳು ಇರುವುದರಿಂದ ಗ್ರೀಕರು, ರೋಮನ್ನರು, ಅರೇಬಿಯನ್ನರು ಮತ್ತು ಯೂರೋಪಿಯನ್ನರು ಇತ್ಯಾದಿ ವಿದೇಶಿ ವ್ಯಾಪಾರಸ್ಥರ ಪ್ರಭಾವ ಎದ್ದು ಕಾಣುತ್ತದೆ. ಕರ್ನಾಟಕದ ಕರಾವಳಿಯ ಎರಡು ಜಿಲ್ಲೆಗಳನ್ನು ಕೆನರಾ ಎಂಬ ಹೆಸರಿನಿಂದ ಕರೆಯಲಾಯಿತು. ಅವುಗಳೆಂದರೆ ದಕ್ಷಿಣ ಕೆನರಾ ಮತ್ತು ಉತ್ತರ ಕೆನರಾಗಳು. ಕರ್ನಾಟಕ ಏಕೀಕರಣಗೊಂಡ ಮೇಲೆ ಕೆನರಾವನ್ನು ಕನ್ನಡ ಎಂಬುದಾಗಿ ಹೆಸರಿಸಲಾಯಿತು. ದಕ್ಷಿಣ ಕೆನರಾವು ದಕ್ಷಿಣ ಕನ್ನಡವಾದರೆ, ಉತ್ತರ ಕೆನರಾವು ಉತ್ತರಕನ್ನಡವಾಯಿತು.

"ಉತ್ತರಕನ್ನಡವು ಬಾಂಬೆ ಪ್ರೆಸಿಡೆನ್ಸಿಗೆ ಸೇರಿದ ಮೇಲೆ ಬಾಂಬೆ ಸರ್ಕಾರವು ಕಾನಡಾ ಎಂಬ ಹೆಸರಿನಿಂದ ಕರೆಯಲಾರಂಭಿಸಿತು. ಈ ಹೆಸರು ೧೯೭೭ರವರೆಗೂ ಇತ್ತು. ಕಾಲ್ಡ್‌ವೆಲ್ ಪ್ರಕಾರ ಕೆನರಾ, ಕನ್ನಡ, ಕರ್ನಾಟಿ ಪದಗಳು ಎರಡು ಹಳೆಯ ದ್ರಾವಿಡ ಪದಗಳಿಂದ ಬಂದಿರುವಂತಹವು. ಅವುಗಳೆಂದರೆ ಕಾರ್ ಅಂದರೆ ಕಪ್ಪು ನಾಡು ಅಂದರೆ ಪ್ರದೇಶ ಕಪ್ಪು ಮಣ್ಣನ್ನು ಹೊಂದಿರುವ ಪ್ರದೇಶ. ಕೆನರಾದ ಆರಂಭದ ಅರಸು ಮನೆತನಗಳು ದಕ್ಷಿಣ ಪ್ರಸ್ಥಭೂಮಿಯ ದಕ್ಷಿಣ ಭಾಗದಲ್ಲಿದ್ದವು ಎಂಬುದು ಇಲ್ಲಿನ ವಿವರಣೆ. ಕ್ರಮೇಣ ಕರ್ನಾಟಕ

ಮತ್ತು ಕನ್ನಡ ಪದಗಳು ಹುಟ್ಟಿಕೊಂಡವು. ಅವೇ ಬ್ರಿಟಿಷ್ ಅವಧಿಯಲ್ಲಿ ಕೆನರಾ ಎಂಬುದಾಗಿ ಬದಲಾವಣೆಗೊಂಡವು. ಇನ್ನೊಂದು ಅಭಿಪ್ರಾಯವೆಂದರೆ ಪೋರ್ಚುಗೀಸರು ಈ ಪ್ರದೇಶವನ್ನು ಕೆನರಾ ಎಂಬುದಾಗಿ ಕರೆದರು."[೭]

ಪೋರ್ಚುಗೀಸರು ಕರಾವಳಿ ಕರ್ನಾಟಕಕ್ಕೆ ಆಗಮಿಸಿದಾಗ ಕರಾವಳಿಯ ಜನರು ಆಡುತ್ತಿದ್ದ ಕನ್ನಡ ಭಾಷೆಯನ್ನು ಕೇಳಿಸಿಕೊಂಡು ಈ ಪ್ರದೇಶವನ್ನು ಕೆನರಾ/ಕನ್ನಡ ಎಂಬುದಾಗಿ ಕರೆದಿರಬೇಕು. ಗೋವಿಂದ ಪೈ ಅವರ ಪ್ರಕಾರ "ಪೋರ್ಚುಗಿಸ್ ಭಾಷೆಯಲ್ಲಿ ಡ-ಕಾರವಿಲ್ಲದ ಕಾರಣ ರ-ಕಾರವನ್ನು ಅವರು ಬಳಸಿದರು." ಹಾಗಾಗಿ ಕನ್ನಡ ಎನ್ನುವುದು ಕನ್ನರ-ಕಾನರಾ-ಕೆನರಾ ಎಂದಾಗಿರಬೇಕು."[೮]

ಉತ್ತರಕನ್ನಡ ಜಿಲ್ಲೆಯ ಚರಿತ್ರೆಯಲ್ಲಿ ಕೊಂಕಣ ಪ್ರದೇಶವು ಒಂದು. ಇದು ಕರಾವಳಿ ತೀರದ ಪ್ರದೇಶವಾಗಿದೆ. "ಅರಬ್ಬಿಸಮುದ್ರ ಮತ್ತು ಪಶ್ಚಿಮಘಟ್ಟಗಳ ಮಧ್ಯದ ಭೂಭಾಗವನ್ನು ಕೊಂಕಣ ಎಂಬುದಾಗಿ ಕರೆಯಲಾಗಿದೆ. ಆದರೆ ಈ ಭೂಭಾಗ ಎಲ್ಲಿಂದ ಎಲ್ಲಿಯವರೆಗೆ ವಿಸ್ತರಿಸಿಕೊಂಡಿತ್ತು ಎನ್ನುವುದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. "ಸಾಮಾನ್ಯ ಅಭಿಪ್ರಾಯದ ಪ್ರಕಾರ ಕೊಂಕಣವು ಉತ್ತರದಲ್ಲಿ ಗುಜರಾತಿನ ದಾಮನ್‌ನಿಂದ ದಕ್ಷಿಣದಲ್ಲಿ ಗೋವಾದವರೆಗೆ ವಿಸ್ತರಿಸಿಕೊಂಡಿತ್ತು." ಆಡಳಿತ ಘಟಕವಾಗಿ ಕೊಂಕಣ ೭೦೦, ಕೊಂಕಣ ೯೦೦ ಎನ್ನುವ ಉಲ್ಲೇಖಗಳು ಸಿಗುತ್ತವೆ. "ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಅವಧಿಯಲ್ಲಿ ಕೊಂಕಣ ೭೦೦ ಪ್ರದೇಶ ಒಂದು ಆಡಳಿತ ವಿಭಾಗವಾಗಿತ್ತು. ಗೋವೆಯ ಕದಂಬರು ತಮ್ಮ ಆಳ್ವಿಕೆಯಲ್ಲಿ ಕೊಂಕಣ ೯೦೦ ಪ್ರದೇಶವನ್ನು ಹೊಂದಿದ್ದರು. ಕೊಂಕಣ ೯೦೦ ರಲ್ಲಿ ಇಂದಿನ ಕಾರವಾರ ಹಾಗೂ ಅಂಕೋಲಾ ತಾಲೂಕುಗಳು ಸೇರಿದವು. ಗಂಗಾವಳಿಯ ಉತ್ತರ ಭಾಗವನ್ನು ಕೊಂಕಣ ಎಂದು ಕರೆಯಲಾಗುತ್ತಿತ್ತು."[೯] ಎನ್ನುವ ಮಾಹಿತಿಗಳು ಸಿಗುತ್ತವೆ.

ಕರಾವಳಿ ಕರ್ನಾಟಕದ ಇನ್ನೊಂದು ಆಡಳಿತ ವಿಭಾಗ ಹೈವೆ ಅಥವಾ ಹೈವೆನಾಡು. "ಸಪ್ತ ಕೊಂಕಣಗಳಲ್ಲಿ ಉಲ್ಲೇಖಿತವಾಗಿರುವ ಪಶು ಅಥವಾ ಪಶುಕ ಹೈವೆನಾಡು ಆಗಿರಬೇಕು ಎನ್ನುವ ಅಭಿಪ್ರಾಯವಿದೆ." "ಪಶುಕವು ಕ್ರಮೇಣ ಪಯಿಕ(ಪಯ್ಕ), ಪಯಿಗ (ಪಯ್ಗ) ಎಂದಾಗಿ ನಂತರ ಪಯಿಗ(ಪಯ್ಗ) ಹಯಿಗ(ಹಯ್ಗ) ಎಂಬುದಾಗಿ ರೂಪಾಂತರ ಗೊಂಡು ಹೈಗ ಆಗಿರಬೇಕು ಎಂದು ಗೋವಿಂದ ಪೈ ಅವರ ವಾದ. ಹಾಗಾಗಿ ಪಶು ಅಂದರೆ ಹೈಗ ದೇಶ. ಇದುವೆ ಉತ್ತರಕನ್ನಡ ಜಿಲ್ಲೆ ಎನ್ನುವುದು ಗೋವಿಂದ ಪೈ ಅವರ ಸ್ಪಷ್ಟ ನಿಲುವು." "ಹೈವೆಯನ್ನು ಹೈಗ ಎಂಬ ಹೆಸರಿನಿಂದಲೂ ಕರೆಯಲಾಗಿದೆ. ಹೈಗ ಪದವು ಹಾವು-ಹಾವಿಗ ಎನ್ನುವ ಪದದಿಂದ ಬಂದಿರಬೇಕು ಎನ್ನುವ ವಾದವಿದೆ. ಏಕೆಂದರೆ ಉತ್ತರಕನ್ನಡ ಜಿಲ್ಲೆಯು

ದಟ್ಟ ಅರಣ್ಯಗಳನ್ನು ಹೊಂದಿರುವುದಾಗಿ ಹಾವುಗಳ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದ್ದು, ಅದು ಹಾವುಗಳ ಭೂಮಿಯಾಗಿದೆ ಎನ್ನುವ ವಿವರಣೆಯಿದೆ."[೧೦]

ಡಾ. ಕೆ. ಮೋಹನ್‌ಕೃಷ್ಣ ರೈ ಅವರು ಕೆನರಾದ ವಿಭಜನೆ: ಹತ್ತಿ ರಾಜಕೀಯದ ವಿಶ್ಲೇಷಣೆ ಎಂಬ ಗ್ರಂಥದಲ್ಲಿ ಪ್ರಸ್ತುತ ಉತ್ತರಕನ್ನಡ ಜಿಲ್ಲೆಯ ಚರಿತ್ರೆಯನ್ನು ಸಾರಾಂಶ ರೂಪದಲ್ಲಿ ಈ ಕೆಳಗಿನಂತೆ ವಿವರಿಸಿದ್ದಾರೆ.

ಉತ್ತರಕನ್ನಡ ಜಿಲ್ಲೆಯ ಪ್ರಾಚೀನತೆಯು ಪರಶುರಾಮ ಸೃಷ್ಟಿಯಿಂದ ಆರಂಭಗೊಳ್ಳುತ್ತದೆ. ಇದಕ್ಕೆ ಸಂಬಂಧಿಸಿದಂತೆ ಸ್ಕಂದಪುರಾಣದ ಸಹ್ಯಾದ್ರಿ ಖಂಡದಲ್ಲಿ ವಿವರಣೆ ಸಿಗುತ್ತದೆ ಎಂದು ತಿಳಿಸುತ್ತಾರೆ. ಉತ್ತರಕನ್ನಡ ಜಿಲ್ಲೆಯು ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತೆ ಎನ್ನುವುದು ಚರ್ಚೆಯ ವಿಷಯ. ಆದರೆ ಬನವಾಸಿಯ ಮೌರ್ಯರ ಮುದ್ರಾಂಕಿತ ನಾಣ್ಯಗಳು ಈ ಪ್ರದೇಶದಲ್ಲಿ ಸಿಕ್ಕಿವೆ. ಶಾತವಾಹನರ ಆಳ್ವಿಕೆಗೆ ಈ ಜಿಲ್ಲೆಯು ಒಳಪಟ್ಟಿತ್ತು ಎನ್ನುವುದಕ್ಕೆ ಸಾಕಷ್ಟು ಆಧಾರಗಳು ಲಭ್ಯವಿವೆ. ಬನವಾಸಿಯು ಶಾತವಾಹನರ ಕಾಲದ ಪ್ರಮುಖ ವ್ಯಾಪಾರ ನೆಲೆಯಾಗಿತ್ತು. ಶಾತವಾಹನರ ಸಾಮಂತರಾಗಿದ್ದ ಚುಟುಗಳು ಬನವಾಸಿಯಿಂದ ಆಳ್ವಿಕೆ ನಡೆಸಿದರು. ಸ್ವಲ್ಪ ಸಮಯ ಕಂಚಿಯ ಪಲ್ಲವರು ಈ ಪ್ರದೇಶದ ಮೇಲೆ ಅಧಿಕಾರ ಸ್ಥಾಪಿಸಿದರು. ಕ್ರಿ.ಶ. ೪ನೆಯ ಶತಮಾನದ ನಂತರ ಕದಂಬರ ನೇರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತ್ತು. ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿ ಈ ಪ್ರದೇಶವನ್ನು ಆಳ್ವಿಕೆ ಮಾಡಿದ ರಾಜ ಮನೆತನವೆಂದರೆ ಕದಂಬರು. ಇಂದಿನ ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳು ಕದಂಬರ ಆಳ್ವಿಕೆಯ ವ್ಯಾಪ್ತಿಗೆ ಸೇರಿದ್ದವು. ಚಂದ್ರಾಪುರದ ಭೋಜರು ಗೋವಾವನ್ನು, ಖಾನಾಪುರ, ಹಳಿಯಾಳದ ಕೆಲವು ಪ್ರದೇಶಗಳನ್ನು ಹಾಗೂ ಕುಮಟಾದವರೆಗಿನ ಕರಾವಳಿಯನ್ನು ಆಳಿದರು. ಕದಂಬರ ಸಾಮಂತರಾದ ಕೇಕೆಯರು ಹೊನ್ನಾವರ ಮತ್ತು ಕುಮಟಾ ಪ್ರದೇಶಗಳನ್ನು ಹೊಂದಿದ್ದರು.

ಬಾದಾಮಿಯ ಚಾಲುಕ್ಯರು ಕ್ರಿ.ಶ. ೬ನೇ ಶತಮಾನದಿಂದ ಈ ಪ್ರದೇಶದ ಮೇಲೆ ನಿಯಂತ್ರಣ ಸಾಧಿಸಿದರು. ಅದೇ ಸಂದರ್ಭದಲ್ಲಿ ದಕ್ಷಿಣ ಕನ್ನಡವು ಅಲುಪರ ಅಧೀನದಲ್ಲಿತ್ತು. ಪಲ್ಲವರ ಒಂದು ಶಾಖೆ ಚಾಲುಕ್ಯರಿಗೆ ಅಧೀನವಾಗಿ ಉತ್ತರಕನ್ನಡದಲ್ಲಿ ಆಳ್ವಿಕೆ ನಡೆಸಿತ್ತು. ಅಲುಪರು ಬನವಾಸಿ ಮಂಡಲವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದರು. ಪ್ರಾಚೀನ ರಾಜಮನೆತನವಾದ ಅಳುವರು ಮೊದಲು ಮಂಗಳೂರು ಹಾಗೂ ಉದ್ಯಾವರದಿಂದ, ನಂತರ ಬಾರಕೂರಿನಿಂದ ಆಳ್ವಿಕೆ ನಡೆಸಿದರು. ಆಳ್ವಖೇಡ ೬೦೦೦ ಆಡಳಿತ ವಿಭಾಗ ಇವರಿಗೆ ಸೇರಿತ್ತು.

ಬಾದಾಮಿ ಚಾಲುಕ್ಯರ ಅವಧಿಯಲ್ಲಿ ಅಳುಪರು ಉತ್ತರಕನ್ನಡ ಜಿಲ್ಲೆಯ ಕೆಲವು ಭಾಗಗಳ ಮೇಲೆ ನಿಯಂತ್ರಣ ಸಾಧಿಸುವಲ್ಲಿ ಯಶಸ್ವಿಯಾದರು. ರಾಷ್ಟ್ರಕೂಟರ ಸಂದರ್ಭದಲ್ಲಿ ಬನವಾಸಿ ಮಂಡಲವು ಅಳುಪರ ಕೈತಪ್ಪಿ ಹೋಯಿತು. ಹೊಯ್ಸಳರ ಅವಧಿಯಲ್ಲಿ ಮತ್ತೆ ಉತ್ತರಕನ್ನಡ ಜಿಲ್ಲೆಯ ಕೆಲವು ಭಾಗ ಇವರ ಅಧೀನಕ್ಕೆ ಬಂದವು. ವಿಜಯನಗರದ ಪ್ರವೇಶದ ಬಳಿಕ ಉತ್ತರಕನ್ನಡ ಜಿಲ್ಲೆಯ ಮೇಲಿನ ಅಳುಪರ ಹಿಡಿತ ತಪ್ಪಿಹೋಯಿತು. ಬನವಾಸಿ ೧೨೦೦೦ವು ರಾಷ್ಟ್ರಕೂಟರ ಅಧೀನದಲ್ಲಿತ್ತು. ಬನವಾಸಿ ೧೨೦೦೦ ವಿಭಾಗವು ಜಿಲ್ಲೆಯ ಬಹುಭಾಗವನ್ನು ಒಳಗೊಂಡಿತ್ತು. ಕಲ್ಯಾಣಿ ಚಾಲುಕ್ಯರು ಬನವಾಸಿ ೧೨೦೦೦ರ ಜೊತೆಗೆ ಜಿಲ್ಲೆಯ ಇತರ ಪ್ರದೇಶಗಳಾದ ಹೈವೆ ೫೦೦, ಕೊಂಕಣಿ ೭೦೦, ಹಲಸಿ ೧೨೦೦೦ ಹಾಗೂ ಹಾನಗಲ್ ೫೦೦ ಆಡಳಿತ ವಿಭಾಗಗಳನ್ನು ಹೊಂದಿದ್ದರು. ಕಲ್ಯಾಣಿ ಚಾಲುಕ್ಯರ ಅವಧಿಯಲ್ಲಿ ಹಾನಗಲ್ಲಿನ ಕದಂಬರು ಹಾಗೂ ಗೋವೆಯ ಕದಂಬರು ಜಿಲ್ಲೆಯ ಕೆಲವು ಭಾಗಗಳಲ್ಲಿ ಆಡಳಿತ ನಡೆಸುತ್ತಿದ್ದರು. ಹಾನಗಲ್ಲಿನ ಕದಂಬರು ಬನವಾಸಿ, ಹಾನಗಲ್ ಹಾಗೂ ಬಂಕಾಪುರಗಳಿಂದ ಆಳ್ವಿಕೆ ನಡೆಸಿದರು. ಬನವಾಸಿ ೧೨೦೦೦ ಹಾಗೂ ಶಾಂತಲಗೆ ೧೦೦೦ ಇವರ ಅಧೀನದಲ್ಲಿತ್ತು. ಗೋವೆಯ ಕದಂಬರು ಚಾಲುಕ್ಯರ ಸಾಮಂತರಾಗಿದ್ದರು. ಅವರು ಕೊಂಕಣ ೯೦೦ ಹಾಗೂ ಹಲಸಿಗೆ ೧೨೦೦೦ ಆಡಳಿತ ವಿಭಾಗಗಳಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಕೊಂಕಣ ೯೦೦ರಲ್ಲಿ ಇಂದಿನ ಕಾರವಾರ ಮತ್ತು ಅಂಕೋಲಾ ತಾಲೂಕುಗಳು ಸೇರಿದ್ದವು. ಹಾನಗಲ್ಲಿನ ಕದಂಬರಂತೆ ಅವರು ಕೂಡ ಬನವಾಸಿಯ ಕದಂಬ ವಂಶಸ್ಥರಾಗಿದ್ದರು. ಚಂದಾವರದ ಕದಂಬರು ಅಂಕೋಲಾ, ಹೊನ್ನಾವರ ಹಾಗೂ ಕುಮಟಾ ಪ್ರದೇಶಗಳಲ್ಲಿ ಆಳ್ವಿಕೆ ನಡೆಸುತ್ತಿದ್ದರು. ೧೫ನೇ ಶತಮಾನದ ಆದಿಯಲ್ಲಿ ಗೇರುಸೊಪ್ಪೆಯ ಸಾಳುವರು ದಕ್ಷಿಣ ಕರಾವಳಿಯ ತಾಲೂಕುಗಳಲ್ಲಿ ಆಳ್ವಿಕೆ ನಡೆಸುತ್ತಿದ್ದರು. ೧೬ನೇ ಶತಮಾನದ ಸುಮಾರಿಗೆ ಈ ಮನೆತನದಲ್ಲಿ ಬಿರುಕು ಕಾಣಿಸಿಕೊಂಡು ಹಾಡುವಳಿಯ ಸಾಳುವರು ಕರಾವಳಿ ಪ್ರದೇಶವನ್ನು ವೆಂಕಟಾಪುರ ನದಿಯ ದಕ್ಷಿಣದವರೆಗೆ ಆಳಿದರು. ಗೇರುಸೊಪ್ಪೆಯ ಸಾಳುವರ ರಾಜಧಾನಿ ಗೇರುಸೊಪ್ಪೆಯಾಗಿತ್ತು. ಇದನ್ನು ಕ್ಷೇಮಪುರ, ನಗಿರೆ ಎಂಬುದಾಗಿಯೂ ಕರೆಯಲಾಗಿದೆ. ಹಾಡುವಳಿಯ ಸಾಳುವರ ರಾಜಧಾನಿ ಹಾಡುವಳಿ ಅಥವಾ ಸಂಗೀತಪುರ ಇದು ಭಟ್ಕಳ ತಾಲೂಕಿನ ಪ್ರದೇಶವಾಗಿದೆ. ಹಾಡುವಳಿಯು ಗೇರುಸೊಪ್ಪೆ ಸಾಳುವರ ಒಂದು ಶಾಖೆಯಾಗಿತ್ತು.

ಹೊಯ್ಸಳರು ಉತ್ತರಕನ್ನಡ ಜಿಲ್ಲೆಯ ಮೇಲೆ ಸಾಧಿಸಿದ ನಿಯಂತ್ರಣ ಕಡಿಮೆ ಅವಧಿಯದ್ದಾಗಿತ್ತು. ಹಾನಗಲ್ ಹೊಯ್ಸಳರ ವಿಷ್ಣುವರ್ಧನನ ಎರಡನೆಯ ರಾಜಧಾನಿಯಾಗಿತ್ತು. ಇವನು ಬನವಾಸಿ ೧೨೦೦೦ ಹಾಗೂ ಹಾನಗಲ್ಲನ್ನು ವಶಪಡಿಸಿಕೊಂಡಿದ್ದನು. ಮೂರನೆಯ

ಬಲ್ಲಾಳನು ಅಳುಪರ ರಾಜಕುಮಾರಿ ಜೆಕ್ಕಯಿ ತಾಯಿಯನ್ನು ವರಿಸುವುದರ ಮೂಲಕ ಕರಾವಳಿ ತೀರದ ಸಂಪರ್ಕ ಸಾಧಿಸಿದ್ದನು. ಜೆಕ್ಕ ತಾಯಿ ಉತ್ತರಕನ್ನಡ ಜಿಲ್ಲೆಯ ಪ್ರದೇಶಗಳ ಆಳ್ವಿಕೆ ನೋಡಿಕೊಳ್ಳುತ್ತಿದ್ದಳು. ಮೂರನೇಯ ಬಲ್ಲಾಳನು ಭಟ್ಕಳದ ಮೇಲೆ ನೇರ ನಿಯಂತ್ರಣ ಹೊಂದಿದ್ದನು. ವಿಜಯನಗರ ಸಾಮ್ರಾಜ್ಯ ವಿಸ್ತರಣೆಯಲ್ಲಿ ತೊಡಗಿದಾಗ ಕರಾವಳಿಪ್ರದೇಶ ಅದರೊಳಗೆ ಸೇರಿಕೊಂಡಿತು.

ಉತ್ತರಕನ್ನಡ ಜಿಲ್ಲೆಯಲ್ಲಿ ಹೊನ್ನಾವರವು ವಿಜಯನಗರದ ಆಡಳಿತ ಕೇಂದ್ರವಾಗಿತ್ತು. ವಿಜಯನಗರದ ಅರಸರು ಉತ್ತರ ಮತ್ತು ದಕ್ಷಿಣ ಕನ್ನಡಗಳಲ್ಲಿ ಆಡಳಿತಾಧಿಕಾರಿ(ರಾಜ್ಯಪಾಲ) ಗಳನ್ನು ನೇಮಕ ಮಾಡಿದ್ದರು. ಎರಡನೆಯ ಹರಿಹರನ ಆಳ್ವಿಕೆಯ ಅವಧಿಯಲ್ಲಿ ನಾಗರಸ ಒಡೆಯನು (೧೩೭೮) ಎಂಬಾತನು ಹೊನ್ನಾವರ ರಾಜ್ಯಪಾಲನಾಗಿದ್ದನು. ಅಲ್ಲಿಂದ ಎರಡನೆಯ ದೇವರಾಯನ ಆಳ್ವಿಕೆಯ ಅವಧಿಯಲ್ಲಿ ರಾಜ್ಯಪಾಲನಾಗಿ ನೇಮಕಗೊಂಡ ಅಂತಪ್ಪ (೧೪೩೮) ಎಂಬಾತನವರೆಗೆ ರಾಜ್ಯಪಾಲರುಗಳ ಉಲ್ಲೇಖ ಸಿಗುತ್ತವೆ. ೧೪೩೮ರ ನಂತರ ಹೊನ್ನಾವರದ ರಾಜ್ಯಪಾಲರುಗಳು ಈ ಪ್ರದೇಶದ ಆಳ್ವಿಕೆಯನ್ನು ನೋಡಿಕೊಳ್ಳುತ್ತಿದ್ದರು ಎನ್ನುವ ವಿವರ ಸಿಗುತ್ತದೆ. ೧೪೮೦ರವರೆಗೆ ಹೊನ್ನಾವರದಲ್ಲಿ ರಾಜ್ಯಪಾಲರುಗಳಿದ್ದರೂ ಎನ್ನುವ ವಿವರಗಳಿದ್ದರೂ ಅದಕ್ಕೆ ಆಧಾರಗಳಿಲ್ಲ. ಇದರಿಂದ ಸ್ಥಳೀಯ ಅರಸುಮನೆತನಗಳಿಗೆ ಹೆಚ್ಚಿನ ಅಧಿಕಾರ ನೀಡಿರುವುದು ಎಂಬುದಾಗಿಯೂ ತೀರ್ಮಾನಿಸಬಹುದಾಗಿದೆ.

ಗೇರುಸೊಪ್ಪೆ, ಹಾಡುವಳಿ, ಸೊಂದಾ, ಬಿಳಗಿ ಅರಸು ಮನೆತನಗಳು ಆರಂಭದಲ್ಲಿ ವಿಜಯನಗರದ ಆಳ್ವಿಕೆಯನ್ನು ವಿರೋಧಿಸಿದವು. ಆದರೆ ವಿಜಯನಗರ ಇವರೆಲ್ಲರನ್ನು ತನ್ನ ಹತೋಟಿಗೆ ತೆಗೆದುಕೊಂಡ ಮೇಲೆ ವಿಜಯನಗರದ ಪ್ರಭುತ್ವವನ್ನು ಒಪ್ಪಿಕೊಂಡು ಸಾಮಂತ ಅರಸರಾಗಿ ಗುರುತಿಸಿಕೊಂಡರು. ವಿಜಯನಗರದ ಅರಸರು ಕರಾವಳಿಯ ಸ್ಥಳೀಯ ಅರಸುಮನೆತನಗಳ ಮೇಲೆ ಅನಗತ್ಯ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಆರಂಭದಲ್ಲಿ ಚಂದ್ರಗುತ್ತಿಯ ರಾಜ್ಯಪಾಲ ಉತ್ತರಕನ್ನಡದ ಆಳ್ವಿಕೆ ನೋಡಿಕೊಳ್ಳುತ್ತಿದ್ದನು. ನಂತರ ಹೊನ್ನಾವರದ ರಾಜ್ಯಪಾಲರು ನೇರ ಆಳ್ವಿಕೆ ನಡೆಸಿದರು. ಹೊನ್ನಾವರದಿಂದ ಜಿಲ್ಲೆಯನ್ನು ಆಳ್ವಿಕೆ ನಡೆಸುತ್ತಿದ್ದ ರಾಜ್ಯಪಾಲರು ತುಳು, ಕೊಂಕಣಿ, ಹೈವೆ ಪ್ರದೇಶಗಳನ್ನು ನೋಡಿ ಕೊಳ್ಳುತ್ತಿದ್ದರು. ೧೫೫೦ರ ವೇಳೆಗೆ ಕೆಳದಿಯ ನಾಯಕರು ಈ ಪ್ರದೇಶದ ಮೇಲೆ ಹೆಚ್ಚಿನ ಆಸಕ್ತಿ ಹೊಂದಿದ್ದಂತೆ ಕಂಡುಬರುತ್ತದೆ. ವಿಜಯನಗರದ ಇನ್ನೊಂದು ವಿಶೇಷವೆಂದರೆ ಯುರೋಪಿಯನ್ನರಾದ ಪೋರ್ಚುಗೀಸರ ಆಗಮನ. ರಾಷ್ಟ್ರಕೂಟರ ಅವಧಿಯಲ್ಲಿಯೇ ಕರಾವಳಿಯಲ್ಲಿ ನೆಲೆಸಿ ವ್ಯಾಪಾರ ನಡೆಸುತ್ತಿದ್ದ ಅರಬಿಯನ್ನರಿಗೆ ಪೋರ್ಚುಗೀಸರ ಆಗಮನದಿಂದ ಹಿನ್ನಡೆಯಾಯಿತು. ಪೋರ್ಚುಗೀಸರ

ಆಗಮನವನ್ನು ಕರಾವಳಿಯ ವ್ಯಾಪಾರದ ದೊಡ್ಡ ತಿರುವು ಎಂಬುದಾಗಿಯೂ ಕರೆಯಲಾಗಿದೆ. ಪೋರ್ಚುಗೀಸರಿಂದ ಆರಂಭಗೊಂಡ ಯುರೋಪ್ ಮಾದರಿಯ ವ್ಯಾಪಾರ ಹಾಗೂ ಕೈಗಾರಿಕಿಕರಣ ಬ್ರಿಟೀಷರ ಅವಧಿಯವರೆಗೂ ಮುಂದುವರೆಯಿತು. ಬಿಜಾಪುರದ ಸುಲ್ತಾನರು ಗೋವಾದ ಮೇಲಿನ ಹಿಡಿತ ಸಡಿಲಗೊಳ್ಳಲಾರಂಭಿಸಿದಾಗ ಪೋರ್ಚುಗೀಸರು ಅದರ ಲಾಭವನ್ನು ಪಡೆದರು. ೧೫೧೦ರಲ್ಲಿ ವಿಜಯನಗರದ ನೆರವಿನೊಂದಿಗೆ ಪೋರ್ಚುಗೀಸರು ಗೋವಾವನ್ನು ಪಡೆದುಕೊಂಡರು. ಹಾಗೂ ಉತ್ತರಕನ್ನಡ ಜಿಲ್ಲೆಯ ಬಂದರುಗಳಲ್ಲಿ ವ್ಯಾಪಾರ ಆರಂಭಿಸಿದರು. ವಿಜಯನಗರದ ಅರಸರಿಗೆ ಉತ್ತಮ ತಳಿಯ ಕುದುರೆಗಳನ್ನು ಒದಗಿಸುತ್ತಿದದ್ದರಿಂದಾಗಿ ಪೋರ್ಚುಗೀಸರು ವಿಶೇಷ ಸವಲತ್ತುಗಳನ್ನು ಪಡೆದುಕೊಂಡರು. ಕುದುರೆ ವ್ಯಾಪಾರ ಪೊರ್ಚುಗೀಸರಿಗೆ ಅತ್ಯಂತ ಲಾಭದಾಯಕವಾಗಿತ್ತು. ವಿಜಯನಗರದ ಸಾಮಂತರಾಗಿದ್ದ ಕೆಳದಿಯ ನಾಯಕರು ೧೬ನೇ ಶತಮಾನದ ಮಧ್ಯಭಾಗದಲ್ಲಿ ಉತ್ತರಕನ್ನಡ ಜಿಲ್ಲೆಯ ಆಳ್ವಿಕೆ ನಡೆಸಲಾರಂಭಿಸಿದರು. ಆರಂಭದಲ್ಲಿ ವಿಜಯನಗರದ ಸಾಮಂತರಾಗಿ ಹಾಗೂ ೧೭ನೇ ಶತಮಾನದಲ್ಲಿ ಸ್ವತಂತ್ರವಾಗಿ ಈ ಪ್ರದೇಶದ ಆಳ್ವಿಕೆ ನಡೆಸಲಾರಂಭಿಸಿದರು. ರಾಮರಾಯನ ಆಳ್ವಿಕೆಯ ಸಂದರ್ಭದಲ್ಲಿ ಕೆಳದಿಯ ಸದಾಶಿವ ನಾಯಕನಿಗೆ ಮಂಗಳೂರು, ಬಾರ್ಕೂರು ಹಾಗೂ ಗುತ್ತಿ ರಾಜ್ಯಗಳ ಆಳ್ವಿಕೆ ನೋಡಿಕೊಳ್ಳುವ ಅಧಿಕಾರ ನೀಡಲಾಗಿತ್ತು. ಗೇರುಸೊಪ್ಪೆ ಮತ್ತು ಹಾಡುವಳಿಯ ಅರಸು ಮನೆತನಗಳು ಸುಮಾರು ೧೬೦೬ರ ವೇಳೆಗೆ ಕೆಳದಿಯ ನಾಯಕರ ನಿಯಂತ್ರಣಕ್ಕೆ ಬಂದವು. ಅದೇ ರೀತಿ ಸೊಂದಾ, ಬಿಳಗಿ ಮುಂತಾದ ಕರಾವಳಿಯ ಸಣ್ಣಪುಟ್ಟ ಅರಸುಮನೆತನಗಳು ಕೆಳದಿ ನಾಯಕರ ಅಧೀನಕ್ಕೆ ಬಂದವು. ಸೊಂದಾದ ನಾಯಕರು ಸಿರಸಿ, ಯಲ್ಲಾಪುರ, ಹಳಿಯಾಳ, ಸೂಫಾ ಮುಂತಾದ ಪ್ರದೇಶಗಳ ಮೇಲೆ ಅಧಿಕಾರ ಹೊಂದಿದ್ದರು. ಇವರು ಬಿಜಾಪುರದ ಆದಿಲಾಶಾಹಿಗಳು ಹಾಗೂ ಮರಾಠರ ಸಾಮಂತರಾಗಿಯೂ ಆಳ್ವಿಕೆ ನಡೆಸಿದರು. ಬಿಡದಿ ಒಡೆಯರು ಆರಂಭದಲ್ಲಿ ಸಿದ್ಧಾಪುರದ ತಾಲೂಕಿನ ಐಸೂರಿನಿಂದ ಹಾಗೂ ನಂತರ ಬಿಳಗಿಯಿಂದ ಆಳ್ವಿಕೆ ನಡೆಸಿದರು. ಇವರು ಕೆಳದಿಯ ನಾಯಕರೊಂದಿಗೆ ನಿರಂತರ ಯುದ್ಧ ನಡೆಸಿ ಕೊನೆಗೂ ಕೆಳದಿಯ ಆಧಿಪತ್ಯವನ್ನು ಒಪ್ಪಿಕೊಂಡರು. ೧೬೦೬ರಲ್ಲಿ ಕೆಳದಿಯ ವೆಂಕಟಪ್ಪ ನಾಯಕನು ಗೇರುಸೊಪ್ಪೆಯ ಹಾಡುವಳಿ ಸಾಳುವಮನೆತನದ ರಾಣಿಚೆನ್ನ ಭೈರಾದೇವಿಯನ್ನು ಸೋಲಿಸಿದ್ದನು. ಇದರಿಂದಾಗಿ ಕರಾವಳಿ ಕರ್ನಾಟಕದ ಬೈಂದೂರಿನಿಂದ ತದಡಿ ನದಿಯವರೆಗಿನ ಪ್ರದೇಶ ಕೆಳದಿಯ ನಾಯಕರ ವಶವಾಯಿತು. ಅದೇ ರೀತಿ ಭಟ್ಕಳ ಹಾಗೂ ಹೊನ್ನಾವರವನ್ನು ಸ್ವಾಧೀನಪಡಿಸಿಕೊಂಡರು. ಚೆನ್ನಭೈರಾದೇವಿಯನ್ನು 'ಕಾಳುಮೆಣಸಿನ ರಾಣಿ' ಎಂದು ಕರೆಯಲಾಗುತ್ತಿತ್ತು. ಇವಳು ಪೋರ್ಚುಗೀಸರನ್ನು ಆರಂಭದಲ್ಲಿ ವಿರೋಧಿಸಿದಳು. ನಂತರ ಅವರೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದ್ದಳು. ಪೋರ್ಚುಗೀಸರು ವಾಣಿಜ್ಯ

ಬೆಳೆಯಾದ ಕಾಳುಮೆಣಸಿನ ವ್ಯಾಪಾರಕ್ಕೆ ಹೆಚ್ಚಿನ ಪ್ರಾಧ್ಯನತೆಯನ್ನು ನೀಡಿದರು. ಶಿವಪ್ಪ ನಾಯಕನ ಅವಧಿಯಲ್ಲಿ ಬಿಳಗಿ ಮತ್ತು ಸೊಂದಾ ಮನೆತನಗಳು ಸಂಪೂರ್ಣವಾಗಿ ಕೆಳದಿಯ ಅಧೀನಕ್ಕೆ ಬಂದವು. ಶಿವಪ್ಪನಾಯಕನು ಪೋರ್ಚುಗೀಸರನ್ನು ಹೊನ್ನಾವರದಿಂದ ಹೊರದಬ್ಬಿದನು. ಇದಕ್ಕೆ ಡಚ್ಚರ ನೆರವನ್ನು ಪಡೆದನು. ಸೋಮಶೇಖರ ನಾಯಕನ ಅವಧಿಯಲ್ಲಿ ಪೋರ್ಚುಗೀಸರು ಮತ್ತೆ ಉತ್ತರಕನ್ನಡದಲ್ಲಿ ವ್ಯಾಪಾರ ನಡೆಸುವ ಅನುಮತಿ ಪಡೆದರು. ಹೊನ್ನಾವರದಲ್ಲಿ ತಮ್ಮ ವ್ಯಾಪಾರ ಕೋಠಿಯನ್ನು ತೆರೆದರು. ಚೆನ್ನಮ್ಮಾಜಿಯ ಅವಧಿಯಲ್ಲೂ ಪೋರ್ಚುಗೀಸರು ವ್ಯಾಪಾರದ ಅನುಮತಿ ಪಡೆದರು. ವೀರಮ್ಮಾಜಿಯ ಆಳ್ವಿಕೆಯ ಅವಧಿಯಲ್ಲಿ ಮರಾಠರು ಮಿರ್ಜಾನನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ಮೈಸೂರಿನ ಹೈದರ್ ಅಲಿಯ ೧೭೬೩ರಲ್ಲಿ ಕೆಳದಿಯನ್ನು ವಶಪಡಿಸಿಕೊಂಡಾಗ ಕರಾವಳಿಯ ಎಲ್ಲಾ ಪ್ರದೇಶಗಳು ಹೈದರ್‌ನ ಅಧೀನಕ್ಕೆ ಬಂದವು.

ಬಿಜಾಪುರದ ಆದಿಲ್‌ಶಾಹಿಗಳು ಉತ್ತರಕನ್ನಡ ಪ್ರದೇಶದ ಹಲವಾರು ಭಾಗಗಳನ್ನು ವಶಪಡಿಸಿಕೊಂಡಿದ್ದರು. ಗೇರುಸೊಪ್ಪೆಯ ರಾಣಿ ಚೆನ್ನಭೈರಾದೇವಿ ಆದಿಲ್‌ಶಾಹಿಗಳೊಡನೆ ಕೆಳದಿಯ ವಿರುದ್ಧ ಒಪ್ಪಂದ ಮಾಡಿಕೊಂಡಿದ್ದಳು. ಆದರೆ ಅದು ಯಶಸ್ವಿಯಾಗಲಿಲ್ಲ. ಆದಿಲ್ ಶಾಹಿಗಳು ಮಿರ್ಜಾನ್, ಅಂಕೋಲಾ, ಕಾರವಾರ ಮತ್ತು ಶಿವೇಶ್ವರಗಳ ಮೇಲೆ ನಿಯಂತ್ರಣ ಹೊಂದಿದ್ದರು. ಮಿರ್ಜಾನ್, ಕದ್ರಾ ಹಾಗೂ ಶಿವೇಶ್ವರಗಳಲ್ಲಿ ಕೋಟೆಗಳನ್ನು ನಿರ್ಮಿಸಿದರು. ಕಾರವಾರವು ಆದಿಲ್‌ಶಾಹಿಗಳ ಪ್ರಮುಖ ಬಂದರಾಗಿತ್ತು. ಆದಿಲಶಾಹಿಗಳು ರಾಜಕೀಯವಾಗಿ ಕ್ಷೀಣಿಸುತ್ತಿದ್ದಂತೆ ಸ್ಥಳೀಯ ಅರಸು ಮನೆತನಗಳು ಬಲಗೊಳ್ಳಲಾರಂಭಿಸಿದವು. ಮರಾಠರ ಪ್ರಭಾವವು ಶಿವಾಜಿಯಿಂದ ಪೇಶ್ವೆಗಳ ಅವಧಿಯವರೆಗೂ ಇತ್ತು. ಮರಾಠಿ ಭಾಷೆಯ ಪ್ರಭಾವವನ್ನು ಏಕೀಕರಣೋತ್ತರ ಸಂದರ್ಭದಲ್ಲಿ ಕಾಣಬಹುದಾಗಿದೆ. ಆದಿಲ್‌ಶಾಹಿಗಳು ಉತ್ತರಕನ್ನಡ ಜಿಲ್ಲೆಯಲ್ಲಿ ಹೊಂದಿದ್ದ ಪ್ರದೇಶಗಳನ್ನು ಶಿವಾಜಿಯು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸಿ ಯಶಸ್ವಿಯಾದನು. ಶಿವಾಜಿಯು ಭಟ್ಕಳ, ಬಸ್ರೂರ, ಕಾರವಾರ ಪ್ರದೇಶಗಳ ಮೇಲೆ ನಿಯಂತ್ರಣ ಸಾಧಿಸಿ ಅಲ್ಲಿನ ವ್ಯಾಪಾರಸ್ಥರಿಂದ ಕೊಡುಗೆಗಳನ್ನು ಸ್ವೀಕರಿಸಿದನು. ಸಂಭಾಜಿ, ರಾಜಾರಾಮ, ಒಂದನೆಯ ಬಾಜಿರಾವ್ ಇವರೆಲ್ಲರೂ ಸೊಂದಾ ಹಾಗೂ ಬಿಳಗಿ ಅರಸರೊಂದಿಗೆ ಯುದ್ಧವನ್ನು ನಡೆಸುತ್ತಲೇ ಇದ್ದರು. ಹೈದರನ ಆಗಮನವಾದ ಬಳಿಕ ಮರಾಠರು ತೆರೆಮರೆಗೆ ಸರಿಯಬೇಕಾಯಿತು.

ಮೈಸೂರಿನ ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನ ಪಾಳೆಯಗಾರರ ವಿರುದ್ಧ ಸಮರ ಸಾರಿ ಅವರನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳುವಲ್ಲಿ ಯಶಸ್ವಿಯಾದರು. ಇದು ಕರಾವಳಿಯ ಎಲ್ಲಾ ಅರಸುಮನೆತನಗಳಿಗೆ ಬಹಳ ದೊಡ್ಡ ಹಿನ್ನಡೆಯಾಗಿ ಪರಿಣಮಿಸಿತು. ಬಿಳಗಿ, ಸೊಂದಾ

ಅರಸುಮನೆತನಗಳು ಹೈದರನ ವಶವಾದವು. ಹೈದರನು ಹೊನ್ನಾವರದಲ್ಲಿ ನೌಕಾ ನೆಲೆಯೊಂದನ್ನು ಸ್ಥಾಪಿಸಿ ಹಡಗು ನಿರ್ಮಾಣ ಕಾರ್ಯದಲ್ಲೂ ತೊಡಗಿದನು. ಅದೇ ರೀತಿ ಮೈಸೂರಿನಿಂದ ಪ್ರಯತ್ನವನ್ನು ಮಾಡಿದನು. ಹೈದರ್ ಘಾಟ್ ಎನ್ನುವ ಘಟ್ಟರಸ್ತೆ ಇಂದಿಗೂ ಬಳಕೆಯಲ್ಲಿದೆ. ಹೈದರನ ನಂತರ ಟಿಪ್ಪುಸುಲ್ತಾನ ಬಿದನೂರ, ಹೊನ್ನಾವರ್, ಮಿರ್ಜಾನ್ ಮುಂತಾದ ಪ್ರದೇಶಗಳನ್ನು ವಶಪಡಿಸಿಕೊಂಡನು. ಕಾರವಾರ ಹಾಗೂ ಭಟ್ಕಳ ಬಂದರುಗಳಿಂದ ವಿದೇಶಿ ವ್ಯಾಪಾರ ಸಂಪರ್ಕವನ್ನು ಹೊಂದುವ ಪ್ರಯತ್ನಮಾಡಿದನು. ತನ್ನದೆಯಾದ ಸ್ವತಂತ್ರ ನೌಕಾದಳವನ್ನು ಹೊಂದುವ ಹಾಗೂ ಹಡಗುಗಳನ್ನು ನಿರ್ಮಿಸುವ ಪ್ರಯತ್ನವನ್ನು ಟಿಪ್ಪು ಮಾಡಿದನು. ಆದರೆ ಬ್ರಿಟೀಷರ ವಿರೋಧದಿಂದಾಗಿ ಟಿಪ್ಪುವಿಗೆ ತನ್ನ ಪ್ರಯತ್ನದಲ್ಲಿ ಅಷ್ಟೊಂದು ಯಶಸ್ಸನ್ನು ಕಾಣಲು ಸಾಧ್ಯವಾಗಲಿಲ್ಲ. ೧೭೯೯ರಲ್ಲಿ ನಡೆದ ನಾಲ್ಕನೇಯ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಸೋತು ಮರಣ ಹೊಂದಿದಾಗ ಕರಾವಳಿ ಕರ್ನಾಟಕವು ಬ್ರಿಟೀಷರ ಕೈವಶವಾಯಿತು.

ಯುರೋಪಿನಯನ್ನರಾದ ಪೊರ್ಚುಗೀಸರು, ಡಚ್ಚರು, ಫ್ರೆಂಚರು ಹಾಗೂ ಬ್ರಿಟೀಷರು ಕರಾವಳಿ ಕರ್ನಾಟಕದ ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ಹೊಂದುವುದಕ್ಕಾಗಿ ಪರಸ್ಪರ ಹೋರಾಟ ನಡೆಸಿದರು. ಸ್ಥಳೀಯ ಅರಸುಮನೆತನಗಳಿಗೆ ಬೆಂಬಲ ಸೂಚಿಸುವ, ವಿರೋಧಿಸುವ ತಂತ್ರಗಳು ನಿರಂತರವಾಗಿ ನಡೆಯುತ್ತಲೆ ಇದ್ದವು. ಆರಂಭದಲ್ಲಿ ಆಗಮನಿಸಿದ ಪೊರ್ಚುಗೀಸರು ವಿಜಯನಗರದ ಅರಸರು ನೀಡಿದ ಆಶ್ರಯವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡರು. ಸ್ಥಳೀಯ ಅರಸುಮನೆತನಗಳ ಮೇಲೆ ಸವಾರಿ ಮಾಡುವಷ್ಟು ಸಾಮರ್ಥ್ಯವನ್ನು ಪಡೆದುಕೊಂಡರು. ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನಗಳಲ್ಲಿ ಬ್ರಿಟಿಷರು ನಡೆಸಿದ ರಾಜಕಾರಣದ ರೀತಿಯಲ್ಲಿಯೇ ಪೋರ್ಚುಗೀಸರ ರಾಜಕಾರಣವು ಇತ್ತು. ಆದರೆ ಅದನ್ನು ಮುಂದುವರೆಸಲು ಬ್ರಿಟಿಷರು ಅವಕಾಶ ಮಾಡಿಕೊಡಲಿಲ್ಲ. ಬ್ರಿಟಿಷ ಸರ್ಕಾರ ಹತ್ತಿಗೆ ಹೆಚ್ಚಿನ ಪ್ರಾಧನ್ಯತೆಯನ್ನು ನೀಡಿ ಹತ್ತಿರಾಜಕೀಯ ನಡೆಸಿದರೆ, ಪೊರ್ಚುಗೀಸರು ಕಾಳುಮೆಣಸಿನ ರಾಜಕೀಯ ನಡೆಸಿದರು. ಇದರಿಂದಾಗಿ ಅರಬ್ ಹಾಗೂ ಟರ್ಕಿ ವ್ಯಾಪಾರಸ್ಥರು ತಮ್ಮ ನೆಲೆ ಕಳೆದುಕೊಳ್ಳಬೇಕಾಯಿತು. ಡಚ್ಚರು ಕಾರವಾರ ಹಾಗೂ ಅಂಕೋಲಾ ಬಂದರುಗಳಿಂದ ವ್ಯಾಪಾರ ನಡೆಸುತ್ತಿದ್ದರು. ಆದರೆ ಇವರಿಗೆ ಪೊರ್ಚುಗೀಸರು ಹಾಗೂ ಬ್ರಿಟೀಷರ ವಿರೋಧವಿತ್ತು. ೧೬೮೦ರಲ್ಲಿ ಡಚ್ಚರು ಕಾಳಿ ನದಿಯ ಎತ್ತರಕ್ಕೆ ವ್ಯಾಪಾರ ಕೋಠಿಯೊಂದನ್ನು ತೆರೆದರು. ಬ್ರಿಟೀಷರು ಮತ್ತು ಪೋರ್ಚುಗೀಸರ ವ್ಯಾಪಾರದಲ್ಲಿ ಇಳಿಮುಖವಾಗುವಂತೆ ಮಾಡುವ ಪ್ರಯತ್ನದಲ್ಲಿ ತಾತ್ಕಾಲಿಕ ಯಶಸ್ಸನ್ನು ಪಡೆದರು. ಪೋರ್ಚುಗೀಸರಿಗೂ ಬಿಜಾಪುರದ ಆದಿಲ್‌ಶಾಹಿಗಳಿಗೂ ನಡೆಯುತ್ತಿದ್ದ ಯುದ್ಧದ ಲಾಭವನ್ನು ಡಚ್ಚರು ಪಡೆದುಕೊಂಡರು. ಫ್ರೆಂಚರು ಕರಾವಳಿ ಕನಾರ್ಟಕದಲ್ಲಿ ಅಷ್ಟೊಂದು

ಯಶಸ್ಸನ್ನು ಕಾಣಲಿಲ್ಲ. ೧೬೬೮ರಲ್ಲಿ ಮಿರ್ಜಾನ್‌ನಲ್ಲಿ ವ್ಯಾಪಾರ ಕೋಠಿಯನ್ನು ತೆರೆದು ಅಲ್ಲಿಂದ ವ್ಯಾಪಾರ ನಡೆಸುತ್ತಿದ್ದರು. ಫ್ರೆಂಚರಿಗೆ ವ್ಯಾಪಾರದಲ್ಲಿ ಹೆಚ್ಚಿನ ಲಾಭ ಸಿಗದಿದ್ದರೂ ಇವರ ಪ್ರವೇಶ ಬ್ರಿಟಿಷ್ ವ್ಯಾಪಾರಕ್ಕೆ ಸ್ವಲ್ಪಮಟ್ಟಿನ ಹಿನ್ನಡೆಯಾಯಿತು. ಕರಾವಳಿಯ ವ್ಯಾಪಾರದಲ್ಲಿ ಯಶಸ್ಸನ್ನು ಕಂಡವರು ಬ್ರಿಟೀಷರು. ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಯು ಕರಾವಳಿಯ ಬಂದರುಗಳನ್ನು ತನ್ನ ಮರ್ಕಂಟೈಲ್ ಧೋರಣೆಗೆ ಸರಿಯಾಗಿಯೇ ಬಳಸಿಕೊಂಡಿತು. ಬ್ರಿಟೀಷರು ೧೬೩೭ರಲ್ಲಿ ಭಟ್ಕಳದಲ್ಲಿ, ೧೬೫೩ರಲ್ಲಿ ಕಾರವಾರದಲ್ಲಿ ಹಾಗೂ ೧೭೩೭ರಲ್ಲಿ ಹೊನ್ನಾವರದಲ್ಲಿ ವ್ಯಾಪಾರ ಕೋಠಿಗಳನ್ನು ತೆರದರು. ಟಿಪ್ಪುವಿನ ಪತನದ ಬಳಿಕ ಬ್ರಿಟೀಷ್ ನೇರ ಆಳ್ವಿಕೆಗೆ ಒಳಗಾದ ಕರಾವಳಿ ಕರ್ನಾಟಕವು ಭಾರತ ಸ್ವತಂತ್ರಗೊಳ್ಳುವವರೆಗೆ ಬ್ರಿಟೀಷ್ ಆಡಳಿತದ ನಾನಾ ಬಗೆಯ ಅನುಭವಗಳಿಗೆ ಒಳಗಾಗುತ್ತಲೆ ಹೋಯಿತು.

೨.೨. ಉತ್ತರಕನ್ನಡ ಜಿಲ್ಲೆಯ ಭೌಗೋಳಿಕ ಹಿನ್ನೆಲೆ

"ಭೌಗೋಳಿಕತೆ ಎನ್ನುವುದು ಪ್ರಕೃತ್ತಿದತ್ತವಾದ ನಿರ್ಮಿತಿಗಳು. ಇವು ಎಲ್ಲಾ ಪ್ರದೇಶಗಳಲ್ಲೂ ಒಂದೇ ರೀತಿಯಾಗಿರದೇ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿ ರೂಪಗೊಂಡಿರುತ್ತವೆ."[೧೦] ಆಯಾ ಭೌಗೋಳಿಕ ಸನ್ನಿವೇಶಗಳಿಗೆ ಅನುಗುಣವಾಗಿ ಅಲ್ಲಿನ ಪರಿಸರ, ಹವಾಗುಣ ಹಾಗೂ ಜನಜೀವನ ರೂಪಗೊಂಡಿರುತ್ತದೆ. ಕರ್ನಾಟಕದ ಕರಾವಳಿ, ಮಲೆನಾಡು, ಅರೆಮಲೆನಾಡು, ಬಯಲುಸೀಮೆ ಮುಂತಾದ ಭೌಗೋಳಿಕ ಲಕ್ಷಣಗಳನ್ನು ಆಧರಿಸಿದ ವಿಂಗಡಣೆಗಳು ಈ ಭಿನ್ನತೆಯನ್ನು ಸೂಚಿಸುತ್ತವೆ. ಅಂದರೆ ಈ ತರಹದ ವಿಭಿನ್ನ ಭೌಗೋಳಿಕ ಹಿನ್ನೆಲೆಗೆ ಅನುಗುಣವಾಗಿ ವಿಭಿನ್ನವಾಗಿ ಜನಜೀವನ ರೂಪಗೊಂಡಿರುತ್ತದೆ.

ಮುಕ್ರಿಯರು ಕರಾವಳಿಯ ಮೂಲಿಗರು. ಅದರಲ್ಲೂ ಉತ್ತರಕನ್ನಡ ಜಿಲ್ಲೆಯ ಹೊನ್ನಾವರ, ಕುಮಟಾ, ಅಂಕೋಲಾ ತಾಲೂಕುಗಳಲ್ಲಿ ದಟ್ಟವಾಗಿರುವ ಕಾಡನ್ನು ಆಶ್ರಯಿಸಿದ್ದರು. ತರುವಾಯ ಅರಣ್ಯ ನೀತಿಯ ಕಟ್ಟುಪಾಡುಗಳಿಂದಾಗಿ ಒಳಕಾಡನ್ನು ತೊರೆದು ಕಾಡಂಚಿನ ಹಳ್ಳಿಗಳಲ್ಲಿ ನೆಲೆನಿಂತರು. ಅದಕ್ಕಾಗಿ ಉತ್ತರಕನ್ನಡ ಜಿಲ್ಲೆಯ ಭೌಗೋಳಿಕತೆಯ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡುವುದು ಸೂಕ್ತ ಎಂದು ತಿಳಿದಿದೆ.

ಜಿಲ್ಲೆಯ ಸಾಮಾನ್ಯ ಭೌಗೋಳಿಕ ವಿವರಗಳು

ಕರ್ನಾಟಕ ರಾಜ್ಯದ ೩೦ ಜಿಲ್ಲೆಗಳಲ್ಲಿ ಉತ್ತರಕನ್ನಡ ಜಿಲ್ಲೆ ಒಂದಾಗಿದೆ. ರಾಜ್ಯ ಪುನರ್ ವಿಂಗಡಣೆಯ ಮೊದಲು ಇದು ಮುಂಬೈ ಪ್ರಾಂತ್ಯದ ಭಾಗವಾಗಿತ್ತು. ಈ ಜಿಲ್ಲೆಯು ಕರ್ನಾಟಕದ ಪಶ್ಚಿಮ ಭಾಗದಲ್ಲಿದ್ದು ಉತ್ತರಾರ್ಧಗೋಳದ ಉಷ್ಣವಲಯದಲ್ಲಿ ಉತ್ತರ ಅಕ್ಷಾಂಶ ೧೩°-೫೫°ರಿಂದ ೧೫°-೩೧° ಹಾಗೂ ಪೂರ್ವರೇಖಾಂಶಗಳ ೭೦°-೦೦ದಿಂದ ೭೫°-೦೦ ನಡುವೆ ವಿಸ್ತರಿಸಿದೆ.

ಉತ್ತರಕನ್ನಡ ಜಿಲ್ಲೆಯ ಉತ್ತರಕ್ಕೆ ಗೋವಾ ರಾಜ್ಯ ಮತ್ತು ಬೆಳಗಾವಿ ಜಿಲ್ಲೆ ಪೂರ್ವಕ್ಕೆ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳು, ದಕ್ಷಿಣಕ್ಕೆ ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳು ಹಾಗೂ ಪಶ್ಚಿಮಕ್ಕೆ ಅರಬ್ಬಿ ಸಮುದ್ರದಿಂದ ಆವರಿಸಲ್ಪಟ್ಟಿದ್ದು ೧೪೨ ಕಿ.ಮೀ. ಉದ್ದದ ಕರಾವಳಿ ಇದೆ. ಈ ಜಿಲ್ಲೆಯ ೧೦೨೯೧ ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ಕರ್ನಾಟಕದ ಆಡಳಿತ ವಿಭಾಗದಲ್ಲಿ ಬೆಳಗಾವಿ ವಿಭಾಗಕ್ಕೆ ಸೇರಿದ ಜಿಲ್ಲೆಯಾಗಿದೆ. ಕಾರವಾರವು ಜಿಲ್ಲೆಯ ಜಿಲ್ಲಾಕೇಂದ್ರವಾಗಿದೆ.

ಜಿಲ್ಲೆಯ ತಾಲೂಕುಗಳು

ಉತ್ತರಕನ್ನಡ ಜಿಲ್ಲೆಯು ಕರ್ನಾಟಕದ ದೊಡ್ಡ ಜಿಲ್ಲೆಗಳಲ್ಲಿ ಒಂದಾಗಿದೆ. ಕಾರವಾರವೂ ಉತ್ತರಕನ್ನಡ ಜಿಲ್ಲೆಯ ಜಿಲ್ಲಾಕೇಂದ್ರವಾಗಿದ್ದು, ೧೧ ತಾಲೂಕುಗಳನ್ನು ಒಳಗೊಂಡಿದೆ. ಅವುಗಳೆಂದರೆ ೧. ಕಾರವಾರ, ೨. ಅಂಕೋಲಾ, ೩. ಕುಮಟಾ, ೪. ಹೊನ್ನಾವರ, ೫. ಭಟ್ಕಳ, ೬. ಸಿದ್ಧಾಪುರ, ೭. ಶಿರಸಿ, ೮. ಮುಂಡಗೋಡ, ೯. ಯಲ್ಲಾಪುರ, ೧೦. ಹಳಿಯಾಳ ಮತ್ತು ೧೧. ಸೂಪಾ.

ಸ್ಥಳೀಯ ಪಂಚಾಯತಗಳು

ಜಿಲ್ಲೆಯಲ್ಲಿ ಒಟ್ಟು ೧೨೮೯ ಗ್ರಾಮಗಳಿದ್ದು ಅವುಗಳಲ್ಲಿ ೧೨೪೬ ಜನ ವಸತಿ ಇರುವ ಮತ್ತು ೪೩ ಜನವಸತಿ ಇಲ್ಲದ ಗ್ರಾಮಗಳಾಗಿವೆ. ಈ ಜಿಲ್ಲೆಯಲ್ಲಿ ೩೫ ಹೋಬಳಿಗಳು, ೨೦೭ ಗ್ರಾಮಪಂಚಾಯಿತಿಗಳು, ೩ ನಗರಸಭೆಗಳು, ೨ ಪುರಸಭೆಗಳು ಹಾಗೂ ೬ ಪಟ್ಟಣ ಪಂಚಾಯತ್‌ಗಳಿವೆ.

ಜಿಲ್ಲೆಯ ಆಡಳಿತ ಉಪವಿಭಾಗಗಳು

ಆಡಳಿತದ ದೃಷ್ಟಿಯಿಂದ ಉತ್ತರಕನ್ನಡ ಜಿಲ್ಲೆಯನ್ನು ನಾಲ್ಕು ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ೧. ಕಾರವಾರ ೨. ಕುಮಟಾ ೩. ಭಟ್ಕಳ ೪. ಶಿರಸಿ ಉಪವಿಭಾಗಗಳಾಗಿವೆ.

ಕಾರವಾರ ಉಪವಿಭಾಗಕ್ಕೆ ಕಾರವಾರ, ಹಳಿಯಾಳ, ಸೂಪಾ ತಾಲೂಕುಗಳು,

ಕುಮಟಾ ಉಪವಿಭಾಗಕ್ಕೆ ಕುಮುಟಾ, ಅಂಕೋಲಾ ತಾಲೂಕುಗಳು.

ಭಟ್ಕಳ ಉಪವಿಭಾಗಕ್ಕೆ ಭಟ್ಕಳ ಮತ್ತು ಹೊನ್ನಾವರ ತಾಲೂಕುಗಳು.

ಶಿರಸಿ ಉಪವಿಭಾಗಕ್ಕೆ ಶಿರಸಿ, ಯಲ್ಲಾಪುರ, ಸಿದ್ದಾಪುರ ಹಾಗೂ ಮುಂಡಗೋಡ ತಾಲೂಕುಗಳು ಸೇರುತ್ತವೆ.

೨.೨.೧. ಜಿಲ್ಲೆಯ ಭೌಗೋಳಿಕ ಲಕ್ಷಣಗಳು

ಜಿಲ್ಲೆಯ ಭೌಗೋಳಿಕ ವಲಯಗಳು ಉತ್ತರಕನ್ನಡ ಜಿಲ್ಲೆಯನ್ನು ಭೌಗೋಳಿಕವಾಗಿ ಮೂರು ವಲಯಗಳಾಗಿ ವಿಂಗಡಿಸಲಾಗಿದೆ. ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ ತಾಲೂಕುಗಳು ಕರಾವಳಿವಲಯ ಎಂದು, ಸೂಪಾ, ಯಲ್ಲಾಪುರ, ಶಿರಸಿ ಹಾಗೂ ಸಿದ್ದಾಪುರ ತಾಲೂಕುಗಳನ್ನು ಶೃಂಗವಲಯ ಎಂದು ಹಾಗೂ ಹಳಿಯಾಳ ಮತ್ತು ಮುಂಡಗೋಡು ತಾಲೂಕುಗಳು ಮೈದಾನವಲಯ ಎಂದು ಗುರುತಿಸಲಾಗಿದೆ.

೨.೨.೨ ಮಣ್ಣಿನ ಸ್ವರೂಪ

ಎಲ್ಲಾ ನೈಸರ್ಗಿಕ ಸಂಪನ್ಮೂಲಗಳಲ್ಲಿ ಮಣ್ಣು ಅತ್ಯಂತ ಪ್ರಮುಖವಾದುದು. ಭಾರತದ ಮಟ್ಟಿಗೆ ಹೇಳುವುದಾದರೆ ಇದು ಸತ್ಯ. ಏಕೆಂದರೆ ಭಾರತವು ಕೃಷಿ ಪ್ರಧಾನ ರಾಷ್ಟ್ರವಾಗಿದೆ. ಅಷ್ಟೇ ಅಲ್ಲದೆ ಇದು ಉತ್ತರಕನ್ನಡ ಜಿಲ್ಲೆಗೆ ಅನ್ವಯವಾಗುವ ಸತ್ಯವಾಗಿದೆ. ಅಂದರೆ ಉತ್ತರಕನ್ನಡ ಜಿಲ್ಲೆಯ ಜನರು ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಇಲ್ಲಿನ ಮಣ್ಣಿನ ಸ್ವರೂಪವೆಂದರೆ ಪದರು ಪದರಾಗಿರುವ ಬೆಣಚುಕಲ್ಲಿನಿಂದ ಕೂಡಿದ ಹಗುರಾದ ಸಸ್ಯಪೋಷಕ ದ್ರವ್ಯಗಳು ಕಡಿಮೆಯಿದ್ದ ಮಣ್ಣು ಹಾಗೂ ಉಪ್ಪುನೀರಿನಿಂದ ಕೂಡಿದ ಉಸುಕಿನ ನೆಲ ಕರಾವಳಿ ಪ್ರದೇಶದಲ್ಲಿ ಕಂಡುಬರುತ್ತವೆ. ಜಿಲ್ಲೆಯಲ್ಲಿ ವಿವಿಧ ರೀತಿಯ ಮಣ್ಣುಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ ೧. ಕೆಂಪುಮಣ್ಣು, ೨. ಕಪ್ಪು ಮಣ್ಣು, ೩. ಮೆಕ್ಕಲು ಮಣ್ಣು, ೪. ಜಂಬಿಟ್ಟಿಗೆ ಮಣ್ಣು ಎಂದು ಗುರುತಿಸಿ ವಿಂಗಡಿಲಾಗಿದೆ.

೨.೨.೩ ಜಿಲ್ಲೆಯ ಹರಿಯುವ ನದಿಗಳು

ಉತ್ತರಕನ್ನಡ ಜಿಲ್ಲೆಯಲ್ಲಿ ಹಲವಾರು ನದಿಗಳು ಹರಿಯುತ್ತವೆ. ಕಾಳಿ, ಗಂಗಾವಳಿ, ಅಘನಾಶಿನಿ, ಬೇಡ್ತಿ, ಶರವತಿ, ವೆಂಕಟಾಪೂರ, ವರದಾ ಮುಂತಾದವು ಪ್ರಮುಖವಾದ ನದಿಗಳು ವರದಾ ನದಿಯನ್ನು ಹೊರತುಪಡಿಸಿ ಉಳಿದ ನದಿಗಳು ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀ ಸಮುದ್ರ ಸೇರುತ್ತವೆ. ವೆಂಕಟಾಪೂರ ಮತ್ತು ವರದಾ ಚಿಕ್ಕ ನದಿಗಳಾಗಿದ್ದು, ಕಡಿದಾದ ಬೆಟ್ಟಗುಡ್ಡಗಳ ನಡುವೆ ರಭಸವಾಗಿ ಹರಿಯುತ್ತವೆ.

೨.೨.೪ ಜಿಲ್ಲೆಯ ಹವಾಗುಣ

ಉತ್ತರಕನ್ನಡವು ಉಷ್ಣವಲಯದ ಮಾನ್ಸೂನ ವಾಯುಗುಣವನ್ನೊಳಗೊಂಡಿದೆ. "ಶಾಖ ಮತ್ತು ತೇವಾಂಶವುಳ್ಳ ಬೇಸಿಗೆ ಮತ್ತು ತಂಪಾದ ಚಳಿಗಾಲವು ಇಲ್ಲಿಯ ವಾಯುಗುಣದ ಸ್ವರೂಪವಾಗಿದೆ. ಆದರೆ ಇಲ್ಲಿಯ ವಾಯುಗುಣವು ವೈವಿಧ್ಯಮಯವಾದುದು. ಏಕೆಂದರೆ ಆಕ್ಷಾಂಶ, ಸಮುದ್ರಮಟ್ಟದಿಂದ ಎತ್ತರ, ಸಮುದ್ರ ಸಾಮಿಪ್ಯ, ಸ್ಥಳೀಯ ಮಾರುತಗಳು,

ಸಸ್ಯವರ್ಗ, ಭೂಸ್ವರೂಪಗಳು ಮುಂತಾದ ಕಾರಣಗಳು, ಕರಾವಳಿ ಪ್ರದೇಶ, ಮಲೆನಾಡು ಮತ್ತು ಪಶ್ಚಿಮ ಘಟ್ಟಗಳ ಸರಣಿಗಳಲ್ಲಿ ಅಧಿಕ ಮಳೆಯಾಗುತ್ತದೆ. ತೀರಾ ಪ್ರದೇಶದಲ್ಲಿ ಸಮುದ್ರ ಪ್ರಭಾವದಿಂದ ಬೇಸಿಗೆ ಮತ್ತು ಚಳಿಗಾಲದ ಉಷ್ಣಾಂಶ ಸಮನಾಗಿರುತ್ತದೆ. ಸಮುದ್ರದ ಮಂದ ಮಾರುತಗಳು ಉಷ್ಣತೆಯನ್ನುಂಟು ಮಾಡುತ್ತವೆ. "ಅರಬ್ಬಿ ಸಮುದ್ರದಕ್ಕೆ ಹೊಂದಿಕೊಂಡಿರುವ ಕರಾವಳಿಯಲ್ಲಿ ಹೆಚ್ಚು ಮಳೆ ಬಿಳುವುದರಿಂದ ಮಳೆಯ ಹಂಚಿಕೆಯಲ್ಲಿ ಹೆಚ್ಚು ವ್ಯತ್ಯಾಸವುಂಟಾಗುತ್ತದೆ. ಜಿಲ್ಲೆಯ ಹವಾಮಾನವು ಸಮಶೀತೋಷ್ಣವಾಗಿದೆ. ಸಮುದ್ರ ತೀರದಲ್ಲಿ ಆರ್ದ್ರತೆ ಮತ್ತು ಉಷ್ಣತೆ ಇರುತ್ತಿದ್ದು, ಬೇಸಿಗೆಯಲ್ಲಿ ಅತಿ ಹೆಚ್ಚು ೩೩° ಸೆಂ. ಚಳಿಗಾಲದಲ್ಲಿ ಅತಿ ಕಡಿಮೆ ೨೦ ಸೆಂ. ಉಷ್ಣತೆ ಇರುತ್ತದೆ".[೧೧]

೨.೩. ಜಿಲ್ಲೆಯಲ್ಲಿಯ ನಿಸರ್ಗ ಸಂಪತ್ತು

ಉತ್ತರಕನ್ನಡ ಜಿಲ್ಲೆಯು ನೈಸರ್ಗಿಕವಾಗಿ ಚೆಲುವಿನ ಬೀಡಾಗಿದೆ. ಕಣ್ಣಾಯಿಸಿದರೆ ವಿಸ್ತಾರವಾದ ಕಡಲು, ನದಿ ಕೊಳಗಳ ಝುಳುಝುಳು ನಾದ, ಪಕ್ಷಿಗಳ ಚಿಲಿಪಿಲಿ ಕಲರವ, ಸೃಷ್ಟಿ ಸೌಂದರ್ಯದಿಂದ ಕೂಡಿದ ನೈಸರ್ಗಿಕ ಅರಣ್ಯ ಸಂಪತ್ತು, ಬಂದರುಗಳು, ಜಲಪಾತಗಳು, ಪುಣ್ಯಕ್ಷೇತ್ರಗಳು ಆಣೆಕಟ್ಟುಗಳು ಇತಿಹಾಸ ಪ್ರಸಿದ್ಧಸ್ಥಳಗಳು. ಜಿಲ್ಲೆಯ ಚೆಲುವನ್ನು ಹೆಚ್ಚಿಸಿವೆ.

"ಉತ್ತರಕನ್ನಡ ಜಿಲ್ಲೆಯು ಬಿಳಿ ರಜತವರ್ಣದ ಬೀಚ್‌ಗಳು, ಸುಂದರ ಹಸಿರು ವರ್ಣದ ಭತ್ತದಬೆಳೆಯ ಕ್ಷೇತ್ರಗಳು, ತಂಪು ತರುವ ಪಾಮ್ ಗಿಡಗಳು, ದಟ್ಟಕಾಡು, ಹಾಗೂ ನದಿಕೊಳಗಳಿಂದ ಕಂಗೋಳಿಸುವ ನಿಸರ್ಗರಮಣೀಯ ಸುಂದರ ಪ್ರದೇಶಗಳಲ್ಲೊಂದು. ನಿಸರ್ಗ ನಿರ್ಮಿತ ಜಲಪಾತಗಳು ದೇಶ–ವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಫೌನಾ ಮತ್ತು ಫ್ಲೋರಾಗಳಿಂದ ಸಂಪದ್ಭರಿತವಾಗಿದೆ. ಅಂತರಾಷ್ಟ್ರೀಯ ಖ್ಯಾತಿಯ ಬಂದರುಗಳಿವೆ. ಇವು ಮೀನುಗಾರಿಕೆ ಮತ್ತು ಅಂತರಾಷ್ಟ್ರೀಯ ವ್ಯಾಪಾರೋದ್ಯಮಕ್ಕೆ ಹೆಸರುಗಳಿಸಿವೆ".[೧೨]

ಉತ್ತರಕನ್ನಡ ಜಿಲ್ಲೆ ಕರ್ನಾಟಕದ ಅತ್ಯಂತ ಸಂಪದ್ಭರಿತ ಜಿಲ್ಲೆಯಾಗಿದೆ. ಇಲ್ಲಿನ ಭೌಗೋಳಿಕ ನೈಸರ್ಗಿಕ ಸಂಪತ್ತು ಎಲ್ಲಾ ಜಿಲ್ಲೆಗಳಿಗಿಂತ ಅತ್ಯಧಿಕವಾಗಿರುವುದು. "ಸುಮಾರು ೭೦೦ ಮೀಟರ್ ಎತ್ತರವಾಗಿ ದಕ್ಷಿಣೋತ್ತರವಾಗಿ ಹಬ್ಬಿರುವ ಸಹ್ಯಾದ್ರಿ ಶ್ರೇಣಿಯಲ್ಲಿಯೆ ದೇವಿಮನೆ ಘಟ್ಟ, ಮಲೆಮನೆ ಘಟ್ಟ, ಅರಬೈಲ್ ಘಟ್ಟಗಳು ಈ ಜಿಲ್ಲೆಯನ್ನು ಪ್ರಾಕೃತಿಕವಾಗಿ ಘಟ್ಟದ ಮೇಲಿನ ಹಾಗೂ ಘಟ್ಟದ ಕೆಳಗಿನ ಪ್ರದೇಶಗಳಾಗಿ ವಿಂಗಡಿಸಿವೆ. "ಇಲ್ಲಿ ಮ್ಯಾಂಗನೀಸ್, ಕಬ್ಬಿಣ, ಸುಣ್ಣದಕಲ್ಲು, ಜೇಡಿಮಣ್ಣು, ಇಲ್ಮೆನೈಟ್, ಗಾಜು, ಸಾಬೂನು, ಕಲ್ಲು, ಅಭ್ರಕ, ಬಾಕ್ಸೈಡ್ ಈ ಜಿಲ್ಲೆಯ ಖನಿಜಸಂಪತ್ತು. ಜಿಲ್ಲೆಯ ಹಲವು ಕಡೆ ಮ್ಯಾಂಗನೀಸ್ ದೊರೆಯುತ್ತದೆ. ಅದರಲ್ಲೂ ಜೋಯಿಡಾ ತಾಲೂಕಿನ ಕೊಡ್ಲಿಗವಿಗಳು ಮ್ಯಾಂಗನೀಸ್ ನಿಕ್ಷೇಪನಕ್ಕೆ ಪ್ರಸಿದ್ಧವಾಗಿವೆ.

ಅದೇರೀತಿ ಹೊನ್ನಾವರ ತಾಲೂಕಿನ ಅಪ್ಸರ ಕೊಂಡಾ ಹಾಗೂ ಕುಮಟಾ ತಾಲೂಕಿನ ಯಾಣದಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪಗಳು ಇವೆ. ಸಹ್ಯಾದ್ರಿ ಪಾದ ಭಾಗಗಳಲ್ಲಿ ಕಬ್ಬಿಣವಲ್ಲದೆ ಇತರ ಲೋಹ ನಿಕ್ಷೇಪಗಳುಂಟು. ಯಾಣ ಮತ್ತಿತರ ಕಡೆ ಸುಣ್ಣದ ಕಲ್ಲು ದೊರೆಯುತ್ತದೆ. ಅಲ್ಲದೆ ಹಲವೇಡೆ ಸ್ವರ್ಣಮಷಿಕೆ, ಬಿಳಿಬೇಡಿ ಇವೆ."[೧೩]

ಈ ಜಿಲ್ಲೆಯಲ್ಲಿ ಭತ್ತ, ತೆಂಗು, ಕಬ್ಬು, ಅಡಕೆ, ಮೆಣಸು, ಏಲಕ್ಕಿ, ಬಾಳೆ ಪ್ರಮುಖ ವಾದ ಬೆಳೆಗಳಾಗಿವೆ. ಇವುಗಳಲ್ಲದೆ ಗೊಡಂಬಿ, ಮಾವು, ಹುಣಸೆ, ನಿಂಬೆ, ಅನಾನಸು, ಹಲಸು, ಪಪ್ಪಾಯಿ, ಬಟಾಣಿ, ಬದನೆ, ಕಲ್ಲಂಗಡಿ, ಹೈಬ್ರಿಡ್ ಜೋಳ, ರಾಗಿ, ಶೇಂಗಾ ಇತ್ಯಾದಿಗಳನ್ನು ಬೆಳೆಯಲಾಗುತ್ತದೆ. ಅಡಕೆಯ ತೋಟದಲ್ಲಿ ಏಲಕ್ಕಿ, ಕಾಳುಮೆಣಸು, ಬಾಳೆ ಬೆಳೆಯುತ್ತಾರೆ. ಗದ್ದೆಯಲ್ಲಿ ರಾಗಿ, ಕಡಲೆ ತೊಗರಿ ಮೊದಲಾದ ಧಾನ್ಯಗಳನ್ನು ಬೆಳೆಯುತ್ತಾರೆ.

ಉತ್ತರಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆ ಒಂದು ಪ್ರಮುಖ ಉದ್ಯೋಗವಾಗಿದೆ. ಒಂದು ಕಾಲದಲ್ಲಿ ಹರಿಕಾಂತ, ತಾಂಡೇಲ, ಖಾರ್ವಿ, ಗಾವಿತ, ಅಂಬಿಗ, ಮೊಗೇರ, ಆಗೇರ, ಕ್ರಿಶ್ಚಿಯನ್ ದಾಲಜಿಗಳಷ್ಟೇ ಈ ವೃತ್ತಿಯನ್ನು ಮಾಡುತ್ತಿದ್ದರು. ಇತ್ತೀಚಿಗೆ ಸಾಮಾನ್ಯವಾಗಿ ಎಲ್ಲಾ ಜಾತಿಯವರು ಮೀನ ಉದ್ಯಮದಲ್ಲಿ ತೊಡಗಿಕೊಂಡಿದ್ದಾರೆ. "ಸುಮಾರು ೫೪,೭೬೩ ಜನ ಈ ವೃತ್ತಿಯಲ್ಲಿದ್ದಾರೆ. ಇವರು ಕರಾವಳಿ ಪ್ರದೇಶದ ೧೧೮ ಹಳ್ಳಿಗಳಲ್ಲಿದ್ದಾರೆ. ಸಮುದ್ರದಿಂದ ಮೀನು ಹಿಡಿಯುವ ಕೇಂದ್ರಗಳೆಂದರೆ ಅಗ್ರಾ, ಭಟ್ಕಳ, ಬಿಣಗಾ, ಚೆಂಡಿಯೆ, ಗಂಗಾವಳಿ, ಕಾರಾವರ, ಹೊನ್ನಾವರ, ಖಾರವಿ, ಕೇಣಿ, ಕೋಡಾರ, ಕುಮಟಾ, ಮಾಜಾಳಿ, ಮಂಕಿ, ಮುರುಡೇಶ್ವರ, ಶಿರಾಲಿ, ತದಡಿ ಮುಂತಾದವುಗಳು."[೧೪]

೨.೪. ಜಿಲ್ಲೆಯ ಅರಣ್ಯ ಭಾಗ

ಕರ್ನಾಟಕ ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. ೧೫%ರಷ್ಟು ಮಾತ್ರ ಅರಣ್ಯಗಳಿಂದ ಆವೃತವಾಗಿದೆ. ಇದು ಭಾರತದ ಸರಾಸರಿಗಿಂತಲೂ(೨೨.೦೭%) ಕಡಿಮೆ ಯಾಗಿದೆ. ರಾಷ್ಟ್ರೀಯ ಅರಣ್ಯನೀತಿಯಲ್ಲಿ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. ೩೩.೩%ರಷ್ಟು ಅರಣ್ಯಗಳಿಂದಾವೃತವಾಗಿರಬೇಕೆಂದು ತಿಳಿಸಲಾಗಿದೆ.

"ಕರ್ನಾಟಕದಲ್ಲಿ ೧೯,೦೪೬,೮೩೬ ಹೆಕ್ಟೇರು ಪ್ರದೇಶವು ಅರಣ್ಯಗಳಿಂದ ಕೂಡಿದೆ. ಜಿಲ್ಲಾವಾರು ಅವಲೋಕನ ಮಾಡಿದಾಗ ಜಿಲ್ಲೆಯಿಂದ ಜಿಲ್ಲೆಗೆ ಭಿನ್ನವಾಗಿದೆ. ಉತ್ತರಕನ್ನಡ ಜಿಲ್ಲೆಯು ಜಿಲ್ಲೆಯ ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. ೭೯.೪%ರಷ್ಟು ಅರಣ್ಯಗಳಿಂದಾವೃತ ವಾಗಿದೆ. ರಾಜ್ಯದ ಒಟ್ಟು ಅರಣ್ಯಕ್ಷೇತ್ರದಲ್ಲಿ ಶೇ. ೨೮ರಷ್ಟು ಪ್ರಮಾಣ ಉತ್ತರಕನ್ನಡ ಜಿಲ್ಲೆ ಹೊಂದಿದೆ."[೧೫]

ಅಧಿಕ ಮಳೆ, ಬೆಟ್ಟಗುಡ್ಡಗಳ ಲಕ್ಷಣಗಳಿಂದಾಗಿ ಉತ್ತರಕನ್ನಡ ಜಿಲ್ಲೆಯಲ್ಲಿ ಅರಣ್ಯ ಪ್ರದೇಶವು ವ್ಯಾಪಕವಾಗಿ ಕಂಡುಬರುತ್ತದೆ.

೨.೫ ಜಿಲ್ಲೆಯಲ್ಲಿರುವ ಉದ್ದಿಮೆಗಳು

ಉತ್ತರಕನ್ನಡ ಜಿಲ್ಲೆಯಲ್ಲಿ ಎಂಜಿನಿಯರಿಂಗ್ ಉದ್ಯಮ ೧೪, ರಾಸಾಯನಿಕ ಕಾರ್ಖಾನೆಗಳು ೯, ಬಟ್ಟೆ ಕಾರ್ಖಾನೆ ೨, ಇತರೆ ಸಣ್ಣ ಪ್ರಮಾಣದ ಕಾರ್ಖಾನೆಗಳು ೬೨ ಇವೆ. ಜಿಲ್ಲೆಯಲ್ಲಿ ಕೆಲವು ಬೃಹತ್ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿವೆ. ೧. ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್, ೨. ದಾಂಡೇಲಿಯ ಇಂಡಿಯನ್ ಪ್ಲೈವುಡ್ ಮ್ಯಾನುಪ್ಯಾಕ್ಚರಿಂಗ್ ಕಂಪನಿ, ೩. ಜೈಹಿಂದ್ ಸಾಮಿಲ್, ಬಳ್ಳಾಪುರ ಇಂಡಸ್ಟ್ರೀಸ್ ಲಿ. ಬಿಣಗಾದ ಬಿಲ್ಟ್ ಕಾರ್ಖಾನೆ, ದಾಂಡೇಲಿ ಫೇರೊ ಅಲಾಯ್ಸ್ ಪ್ರೈ.ಲಿ., ಇವು ಮುಖ್ಯ ಉದ್ದಿಮೆಗಳು. ಇವುಗಳಲ್ಲದೆ ಸಣ್ಣಕೈಗಾರಿಕಾ ಘಟಕಗಳು, ಗ್ರಾಮೋದ್ಯೋಗ ಕರಕುಶಲ ಘಟಕಗಳು, ಮೀನುಗಾರಿಕೆ ಘಟಕಗಳು, ರಾಸಾಯನಿಕ ಘಟಕಗಳು, ಚರ್ಮ ಮತ್ತು ರಬ್ಬರ್ ಘಟಕಗಳು, ನೂಲುವ–ನೈಯುವ ಘಟಕಗಳು, ಮುದ್ರಣ ಘಟಕಗಳು ಜೇನುಸಾಕಾಣಿಕೆ, ಬೆತ್ತ–ಬಿದಿರುಗಳಿಂದ ವಸ್ತುಗಳನ್ನು ತಯಾರಿಸುವ ಘಟಕಗಳು, ಎಣ್ಣೆ ತಯಾರಿಕಾ ಘಟಕಗಳು, ಮಂಜುಗಡ್ಡೆ ತಯಾರಿಕಾ ಕಾರ್ಖಾನೆಗಳು, ಕುಂಬಾರಿಕೆ ಮುಂತಾದ ಅನೇಕ ಉದ್ಯಮಗಳಿವೆ.

೨.೬. ಉತ್ತರಕನ್ನಡ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ

ಕರ್ನಾಟಕವು ಭೌಗೋಳಿಕವಾಗಿ ಒಟ್ಟು ೧,೯೧,೭೯೧ ಚದರ ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದೆ. ಆದರಲ್ಲಿ ಉತ್ತರಕನ್ನಡ ಜಿಲ್ಲೆಯು ಭೌಗೋಳಿಕವಾಗಿ ಒಟ್ಟು ೧೦,೨೭೭ ಚದರ ಕಿಲೋಮೀಟರ್ ಇದೆ.

ಕೋಷ್ಟಕ ೨.೧. ಉತ್ತರಕನ್ನಡ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣದ ವಿವರ

(ಚದರ ಕಿಲೋಮೀಟರ್‌ಗಳಲ್ಲಿ)

ಕ್ರಸಂ	ರಾಜ್ಯ	ಜಿಲ್ಲೆ	ಶೇಕಡ
೧	**ಕರ್ನಾಟಕ**	**ಉತ್ತರಕನ್ನಡ**	
೨	೧೯೧೭೯೧	೧೦೨೭೭.೦೦	೫.೩೫

ಅಂದರೆ ಒಟ್ಟು ಕರ್ನಾಟಕದ ವಿಸ್ತೀರ್ಣಕ್ಕೆ ಹೋಲಿಸಿದರೆ ಉತ್ತರಕನ್ನಡ ಭೌಗೋಳಿಕ ವಿಸ್ತಾರತೆಯು ಶೇಕಡ ೫.೩೫ರಷ್ಟಿದೆ.

೨.೭. ಉತ್ತರಕನ್ನಡ ಜಿಲ್ಲೆಯ ತಾಲೂಕುವಾರು ಭೌಗೋಳಿಕ ವಿಸ್ತೀರ್ಣ

ಉತ್ತರಕನ್ನಡ ಜಿಲ್ಲೆಯು ಭೌಗೋಳಿಕವಾಗಿ ಹೆಚ್ಚು ವಿಸ್ತಾರವಾಗಿದೆ ಮತ್ತು ಹನ್ನೊಂದು ತಾಲೂಕುಗಳನ್ನೊಳಗೊಂಡಿದೆ. ಹನ್ನೊಂದು ತಾಲೂಕುಗಳ ಭೌಗೋಳಿಕ ವಿಸ್ತೀರ್ಣವು ಹೆಕ್ಟೇರ್‌ಗಳಲ್ಲಿ ನೋಡಲಾಗಿದೆ. ಕಾರವಾರದ ಒಟ್ಟು ಭೌಗೋಳಿಕ ವಿಸ್ತೀರ್ಣ ೬೮,೫೪೧.೦೬ ಇದೆ. ಇದರಲ್ಲಿ ಗ್ರಾಮೀಣ ಪ್ರದೇಶ ೬೭,೫೨೩.೦೬ ಹೆಕ್ಟೇರ್ ಇದೆ. ನಗರ ಪ್ರದೇಶವು ೧,೦೧೮.೦೦ ಹೆಕ್ಟೇರ್ ಇದೆ. ಸೂಪಾದ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೭೭,೭೦೦.೨೮ ಹೆಕ್ಟೇರ್ ಇದೆ. ಇದು ಪೂರ್ಣವಾಗಿ ಗ್ರಾಮೀಣ ಪ್ರದೇಶದಿಂದ ಕೂಡಿದೆ. ನಗರ ಪ್ರದೇಶವಿರುವುದಿಲ್ಲ.


ಹಳಿಯಾಳದ ಒಟ್ಟು ಭೌಗೋಳಿಕ ವಿಸ್ತೀರ್ಣ ೮೨,೧೯೧.೩೯ ಹೆಕ್ಟೇರ್ ಇದೆ. ಇದರಲ್ಲಿ ಗ್ರಾಮೀಣ ಪ್ರದೇಶ ೮೨,೧೧೩.೩೯ ಹೆಕ್ಟೇರ್ ಇದೆ. ನಗರ ಪ್ರದೇಶವು ೭೮ ಹೆಕ್ಟೇರ್ ಇದೆ. ಯಲ್ಲಾಪುರದ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೨೨,೭೧೩.೪೭ ಹೆಕ್ಟೇರ್ ಇದೆ. ಇದು ಪೂರ್ಣ ಗ್ರಾಮೀಣ ಪ್ರದೇಶದಿಂದ ಕೂಡಿದೆ. ಮುಂಡಗೋಡದ ಒಟ್ಟು ಭೌಗೋಳಿಕ ವಿಸ್ತೀರ್ಣ ೬೬,೨೧೩.೧೪ ಹೆಕ್ಟೇರ್ ಇದೆ. ಇದರಲ್ಲಿ ಗ್ರಾಮೀಣ ಪ್ರದೇಶ ೬೫,೬೦೯.೧೪ ಹೆಕ್ಟೇರ್ ಇದೆ. ನಗರ ಪ್ರದೇಶವು ೬೦೪ ಹೆಕ್ಟೇರ್ ಇದೆ.

ಶಿರಸಿಯ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೩೧,೬೦೫.೭೫ ಹೆಕ್ಟೇರ್ ಇದೆ. ಇದರಲ್ಲಿ ಗ್ರಾಮೀಣ ಪ್ರದೇಶ ೧,೩೧,೬೦೫.೭೫ ಹೆಕ್ಟೇರ್ ಇದೆ. ನಗರ ಪ್ರದೇಶದ ವಿವರ ದಾಖಲಾಗಿಲ್ಲ.

ಕೋಷ್ಟಕ ೨.೨. ಉತ್ತರಕನ್ನಡ ಜಿಲ್ಲೆಯ ತಾಲೂಕುವಾರು ಭೌಗೋಳಿಕ ವಿಸ್ತೀರ್ಣ

ಕ್ರಸಂ	ತಾಲೂಕು	ಭೌಗೋಳಿಕ ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ		
		ಒಟ್ಟು	ಗ್ರಾಮೀಣ ಪ್ರದೇಶ	ನಗರ ಪ್ರದೇಶ
೧	ಕಾರವಾರ	೬೮,೫೪೧.೦೬	೬೭,೫೨೩.೦೬	೧,೦೧೮.೦೦
೨	ಸೂಪಾ	೧,೭೭,೭೦೦.೨೮	೧,೭೭,೭೦೦.೨೮	–
೩	ಹಳಿಯಾಳ	೮೨,೧೯೧.೩೯	೮೨,೧೧೩.೩೯	೭೮
೪	ಯಲ್ಲಾಪುರ	೧,೨೨,೭೧೩.೪೭	೧,೨೨,೭೧೩.೪೭	–
೫	ಮುಂಡಗೋಡು	೬೬,೨೧೩.೧೪	೬೫,೬೦೯.೧೪	೬೦೪
೬	ಶಿರಸಿ	೧,೩೧,೬೦೫.೭೫	೧,೩೧,೬೦೫.೭೫	–
೭	ಅಂಕೋಲ	೯೦,೪೭೬.೮೬	೮೯,೭೩೩.೮೬	೭೪೩
೮	ಕುಮಟಾ	೫೬,೨೪೫.೪೭	೫೬,೨೪೫.೪೭	–
೯	ಸಿದ್ದಾಪುರ	೮೪,೦೭೭.೮೨	೮೪,೦೭೭.೮೨	–
೧೦	ಹೊನ್ನಾವರ	೭೪,೫೫೫.೫೯	೭೪,೫೫೫.೫೯	–
೧೧	ಭಟ್ಕಳ	೩೪,೮೭೧.೧೩	೩೩,೮೭೭.೧೩	೯೯೪

ವೃತ್ತಚಿತ್ರ ೨.೧. ಉತ್ತರಕನ್ನಡ ಜಿಲ್ಲೆಯ ತಾಲೂಕುವಾರು ಭೌಗೋಳಿಕ ವಿಸ್ತೀರ್ಣ



ಅಂಕೋಲದ ಒಟ್ಟು ಭೌಗೋಳಿಕ ವಿಸ್ತೀರ್ಣ ೯೦,೪೭೬.೮೬ ಹೆಕ್ಟೇರ್ ಇದೆ. ಇದರಲ್ಲಿ ಗ್ರಾಮೀಣ ಪ್ರದೇಶ ೮೯,೭೩೩.೮೬ ಹೆಕ್ಟೇರ್ ಇದೆ. ನಗರ ಪ್ರದೇಶ ೭೪೩ ಹೆಕ್ಟೇರ್ ಇದೆ.

ಕುಮಟಾದ ಒಟ್ಟು ಭೌಗೋಳಿಕ ವಿಸ್ತೀರ್ಣ ೫೬,೨೪೫.೪೭ ಹೆಕ್ಟೇರ್ ಇದೆ. ಇದರಲ್ಲಿ ಗ್ರಾಮೀಣ ಪ್ರದೇಶ ೫೬,೨೪೫.೪೭ ಹೆಕ್ಟೇರ್ ಇದೆ. ನಗರ ಪ್ರದೇಶ ದಾಖಲಾಗಿರುವುದಿಲ್ಲ

ಸಿದ್ದಾಪುರದ ಒಟ್ಟು ಭೌಗೋಳಿಕ ವಿಸ್ತೀರ್ಣ ೮೪,೦೭೭.೮೨ ಹೆಕ್ಟೇರ್ ಇದೆ. ಇದರಲ್ಲಿ ಗ್ರಾಮೀಣ ಪ್ರದೇಶ ೮೪,೦೭೭.೮೨ ಹೆಕ್ಟೇರ್ ಇದೆ. ನಗರ ಪ್ರದೇಶ ದಾಖಲಾಗಿರುವುದಿಲ್ಲ

ಹೊನ್ನಾವರದ ಒಟ್ಟು ಭೌಗೋಳಿಕ ವಿಸ್ತೀರ್ಣ ೭೪,೫೫೫.೫೯ ಹೆಕ್ಟೇರ್ ಇದೆ. ಇದರಲ್ಲಿ ಗ್ರಾಮೀಣ ಪ್ರದೇಶ ೭೪,೫೫೫.೫೯ ಹೆಕ್ಟೇರ್ ಇದೆ. ನಗರ ಪ್ರದೇಶ ದಾಖಲಾಗಿರುವುದಿಲ್ಲ. ಭಟ್ಕಳದ ಒಟ್ಟು ಭೌಗೋಳಿಕ ವಿಸ್ತೀರ್ಣ ೩೪,೮೭೧.೧೩ ಹೆಕ್ಟೇರ್ ಇದೆ. ಇದರಲ್ಲಿ ಗ್ರಾಮೀಣ ಪ್ರದೇಶ ೩೩,೮೭೭.೧೩ ಹೆಕ್ಟೇರ್ ಇದೆ. ನಗರ ಪ್ರದೇಶ ೯೯೪ ಹೆಕ್ಟೇರ್ ಇದೆ. ಹನ್ನೊಂದು ತಾಲೂಕುಗಳಲ್ಲಿ ಶಿರಸಿಯು ಭೌಗೋಳಿಕ ವಿಸ್ತೀರ್ಣದಲ್ಲಿ ಹೆಚ್ಚಿದ್ದು ಭಟ್ಕಳವು ಅತ್ಯಂತ ಕಡಿಮೆ ವಿಸ್ತೀರ್ಣವನ್ನು ಹೊಂದಿದ ತಾಲೂಕಾಗಿದೆ.

ಘಟ್ಟದ ಮೇಲಿನ ತಾಲೂಕುಗಳು ಒಟ್ಟು ವಿಸ್ತೀರ್ಣ ೫೪೦೦ ಚ.ಕಿ.ಮೀ. ಗಳಿಷ್ಟಿದ್ದು, ಇಲ್ಲಿ ವರ್ಷಕ್ಕೆ ೨೦೦ ರಿಂದ ೫೦೦ ಸೆಂ.ಮೀ. ಮಳೆ ಬೀಳುತ್ತದೆ. ಈ ಭಾಗದ ಜನಸಾಂದ್ರತೆ ಪ್ರತಿ



ಕಿ.ಮೀ.ಗೆ ೬೩ರಷ್ಟಿದೆ. ಇಲ್ಲಿ ಕಾನೂನು ಪ್ರಕಾರ ಶೇ. ೮೩ರಷ್ಟು ಭೂಭಾಗ ಅರಣ್ಯ ಇಲಾಖೆಯ ವಶದಲ್ಲಿದೆ. ನೀರಾವರಿ ವ್ಯವಸ್ಥೆಯಿದೆ.

ಭತ್ತ, ಅಡಿಕೆ, ಬಾಳೆ ಇಲ್ಲಿಯ ಪ್ರಮುಖ ಬೆಳೆಯಾಗಿದ್ದು ಜಾನುವಾರಗಳ ಸಂಖ್ಯೆ ೨.೩೪ ಲಕ್ಷದಷ್ಟಿದೆ. ಇಲ್ಲಿ ಅನೇಕ ಮ್ಯಾಗನೀಸ್ ಗಣಿಗಳೂ ಇವೆ. ಪೇಪರ್, ಪ್ಲೈವುಡ್ ಹಾಗೂ ಫೇರೋಮ್ಯಾಂಗನೀಸ್ ಉದ್ದಿಮೆಗಳಿರುವ ದಾಂಡೇಲಿ ಇಲ್ಲಿನ ಪ್ರಮುಖ ಕೈಗಾರಿಕಾ ಪಟ್ಟಣ. ದಾಂಡೇಲಿಯ ಬಹುಪಾಲು ಕಾರ್ಮಿಕ ಜನಸ್ತೋಮ ಹೊರಗಿನಿಂದಲೇ ಬಂದವರಾಗಿದ್ದಾರೆ. ಈ ಭಾಗದಲ್ಲಿ ಬುಟ್ಟಿ ಹೆಣೆಯುವವರು ಗಣನೀಯ ಸಂಖ್ಯೆಯಲ್ಲಿದ್ದಾರೆ.

ದಕ್ಷಿಣದ ಪ್ರಸ್ಥಭೂಮಿಯೊಂದಿಗೆ ವಿಲೀನವಾದ ಹಳಿಯಾಳ ಮತ್ತು ಮುಂಡಗೋಡ ತಾಲೂಕುಗಳಲ್ಲಿ ವರ್ಷಕ್ಕೆ ೧೨೦ ಸೆಂ.ಮೀ. ಮಳೆಯಾಗುತ್ತದೆ. ೧೫೦೦ ಚದರ ಕಿ.ಮೀ. ವಿಸ್ತೀರ್ಣವಿರುವ ಈ ಪ್ರದೇಶದ ಶೇ. ೭೦ರಷ್ಟು ಭಾಗ ಅರಣ್ಯ ಇಲಾಖೆಯ ನಿಯಂತ್ರಣದಲ್ಲಿದೆ. ಶೇ. ೧೯ರಷ್ಟು ಭೂಮಿಯಲ್ಲಿ ಸಾಗುವಳಿ ಮಾಡಲಾಗಿದ್ದು ಒಟ್ಟು ಶೇ. ೪ರಷ್ಟು ಕ್ಷೇತ್ರಕ್ಕೆ ನೀರಾವರಿ ವ್ಯವಸ್ಥೆಯಿದೆ. ಭತ್ತ, ಬೇಳೆಕಾಳು, ಕಬ್ಬು ಮತ್ತು ಜೋಳ ಇಲ್ಲಿಯ ಪ್ರಮುಖ ಬೆಳೆಗಳು. ಸುಮಾರು ೯೫ ಸಾವಿರ ಸಾಕುಪ್ರಾಣಿಗಳಲ್ಲಿ ದನಕರುಗಳೇ ಮುಖ್ಯವಾಗಿವೆ. ಯಾವ ಪ್ರಮುಖ ಉದ್ದಿಮೆಗಳಾಗಲಿ, ಪಟ್ಟಣಗಳಾಗಲಿ ಇಲ್ಲದ ಈ ತಾಲೂಕುಗಳ ಜನಸಾಂದ್ರತೆ ಪ್ರತಿ ಚ.ಕಿ.ಮಿ.ಗೆ ೧೦೭ರಷ್ಟಿದೆ.

ಉತ್ತರಕನ್ನಡವನ್ನು ಅರಣ್ಯ ಜಿಲ್ಲೆಯೆಂದು ಪರಿಗಣಿಸಲಾಗಿದೆ. ಒಟ್ಟು ೧೦೩೦೦ ಚ.ಕಿ.ಮೀ.ನ ಈ ಭೂಪ್ರದೇಶದ ೮೩೦೦ ಚ.ಕಿ.ಮೀ. ಭಾಗ ಒಂದು ಕಾಲದಲ್ಲಿ(ಈಗಲೂ ಕಾನೂನಿನ ಪ್ರಕಾರ) ಅರಣ್ಯ ಇಲಾಖೆಯ ನಿಯಂತ್ರಣದಲ್ಲಿತ್ತು. ಆದರೆ ಈಗ ಇದರಲ್ಲಿ ಜಲವಿದ್ಯುತ್ ಯೋಜನೆಗೆ, ವಿದ್ಯುತ್ ಸಾಗಣೆ ಮಾರ್ಗಕ್ಕೆ, ಗಣಿಕೆಲಸಕ್ಕೆ ನಗರ ನಿರ್ಮಾಣಕ್ಕೆ ಅಲ್ಲದೆ ಇಲ್ಲಿಯದೆ ಯೋಜನೆಗಳಿಂದ ಮತ್ತು ಟಿಬೇಟಿನಿಂದ ಬಂದ ನಿರಾಶ್ರಿತರ ಪುನರ್ವಸತಿಗೆ ಹಾಗೂ ಅತಿಕ್ರಮಣ ಬೇಸಾಯವನ್ನು ಕಾನೂನುಬದ್ಧಗೊಳಿಸಲಿಕ್ಕೆಂದು ಇದರಲ್ಲಿ ೧೦೫೦ ಚ.ಕಿ.ಮೀ.ಗಳಷ್ಟು ವಿಶಾಲ ಪ್ರದೇಶವನ್ನು ಬಿಡುಗಡೆ ಮಾಡಲಾಗಿದೆ. ಅರಣ್ಯ ಇಲಾಖೆಯ ವಶದಲ್ಲಿ ಈಗಲೂ ಉಳಿದಿರುವ ೭ ಸಾವಿರ ಚ.ಕಿ.ಮೀ. ಪ್ರದೇಶದಲ್ಲಿ ೫ ಸಾವಿರ ಚ.ಕಿ.ಮೀ. ಸಂರಕ್ಷಿತ ಅರಣ್ಯ, ೧.೫ ಸಾವಿರ ಚ.ಕಿ.ಮೀ ಕಿರುಅರಣ್ಯ ಹಾಗೂ ೫ ಸಾವಿರ ಪ್ರದೇಶದ ಸೊಪ್ಪಿನ ಬೆಟ್ಟ, ಈ ಅರಣ್ಯದ ಇಂದಿನ ಗತಿಸ್ಥಿತಿಯ ಬಗ್ಗೆ ಅರಣ್ಯ ಇಲಾಖೆಯ ಉತ್ತಮ ವರದಿಯೊಂದನ್ನು ಸಿದ್ಧಪಡಿಸಿದೆ(ರೆಡ್ಡಿ ಮತ್ತಿತ್ತರರು, ೧೯೮೬).

ಈ ವರದಿಯ ಪ್ರಕಾರ ಸಂರಕ್ಷಿತ ಅರಣ್ಯದ ಸುಮಾರು ಶೇ. ೨೦ ಭಾಗ ದುಸ್ಥಿತಿಯಲ್ಲಿದ್ದು ಜನವಸತಿಯ ಸಮೀಪವಿರುವ ಶೇ. ೪೦ ಭಾಗ ಸರಿಸುಮಾರಾಗಿ ಉತ್ತಮ ಸ್ಥಿತಿಯಲ್ಲಿ ಹಾಗೂ ಜನವಸತಿಯಿಂದ ದೂರವಾಗಿ ತೀವ್ರ ಇಳಿಜಾರಿನಲ್ಲಿರುವ ಶೇ. ೪೦ ಭಾಗ ಉತ್ತಮ ಸ್ಥಿತಿಯಲ್ಲಿವೆ. ಕಿರುಅರಣ್ಯ ಹಾಗೂ ಸೊಪ್ಪಿನ ಬೆಟ್ಟಗಳ ಶೇ. ೭೦ರಷ್ಟು ಭಾಗ ಜೀರ್ಣಾವಸ್ಥೆಯಲ್ಲಿದ್ದು, ಇನ್ನುಳಿದ ಶೇ. ೩೦ ಭಾಗ ಮಾತ್ರ ಸುಮಾರಾಗಿ ಉತ್ತಮ ಸ್ಥಿತಿಯಲ್ಲಿದೆ.

ಕೋಷ್ಟಕ ೨.೩. ಜಿಲ್ಲೆಯಲ್ಲಿರುವ ಒಟ್ಟು ಗ್ರಾಮ ಹಾಗೂ ಕುಟುಂಬಗಳ ವಿವರ

ಕ್ರಸಂ	ಕರ್ನಾಟಕ	ಉತ್ತರಕನ್ನಡ
ಗ್ರಾಮಗಳು	೨೯,೩೪೦	೧,೨೮೯
ಕುಟುಂಬಗಳು	೧,೩೩,೦೦,೭೯೦	೩,೨೩,೩೦೪

೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಇರುವ ಒಟ್ಟು ಗ್ರಾಮಗಳು ೨೯,೩೪೦. ಒಟ್ಟು ಕುಟುಂಬಗಳು ೧,೩೩,೦೦,೭೯೦ ಇವೆ. ಉತ್ತರಕನ್ನಡ ಜಿಲ್ಲೆಯಲ್ಲಿರುವ ಒಟ್ಟು ಗ್ರಾಮಗಳು ೧,೨೮೯. ಒಟ್ಟು ಕುಟುಂಬಗಳು ೩,೨೩,೩೦೪ ಇವೆ. ಅಂದರೆ ಕರ್ನಾಟಕದ ಒಟ್ಟು ಗ್ರಾಮಗಳಿಗೆ ಹೋಲಿಸಿದರೆ ಶೇಕಡ ೪.೩೯ ಗ್ರಾಮಗಳು ಹಾಗೂ ಶೇಕಡ ೨.೩೪ ರಷ್ಟು ಕುಟುಂಬಗಳು ಉತ್ತರಕನ್ನಡ ಜಿಲ್ಲೆಯಲ್ಲಿವೆ.

ಕೋಷ್ಟಕ ೨.೪. ಕರ್ನಾಟಕ ಹಾಗೂ ಉತ್ತರಕನ್ನಡ ಜಿಲ್ಲೆಯ ಜನಸಂಖ್ಯೆ ವಿವರ

ವಿವರ	ಕರ್ನಾಟಕ ರಾಜ್ಯ			ಉತ್ತರಕನ್ನಡ ಜಿಲ್ಲೆ		
	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
ಒಟ್ಟು	೬,೧೦,೯೫,೨೯೭	೩,೦೯,೬೬,೬೫೭	೩,೦೧,೨೮,೬೪೦	೧೪,೩೭,೧೬೯	೭,೨೬,೨೫೬	೭,೧೦,೯೧೩
ಪರಿಶಿಷ್ಟ ಜಾತಿ	೧,೦೪,೭೪,೯೯೨	೫೨,೬೪,೫೪೫	೯೬,೦೨,೪೮೧	೧,೧೬,೪೩೧	೫೭,೮೪೧	೧,೭೭,೯೬೧
ಪರಿಶಿಷ್ಟ ಪಂಗಡ	೪೨,೪೮,೯೮೭	೨೧,೩೪,೭೫೪	೨೧,೧೪,೨೩೩	೩೪,೨೩೯	೧೭,೦೯೫	೧೭,೧೪೪

ಮೂಲ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆಯು ೬,೧೦,೯೫,೨೯೭ ಇದೆ. ಇದರಲ್ಲಿ ಪುರುಷರು ೩,೦೯,೬೬,೬೫೭ ಹಾಗೂ ೩,೦೧,೨೮,೬೪೦ ಮಹಿಳೆಯರಿದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿನ ಒಟ್ಟು ಜನಸಂಖ್ಯೆಯು ೧೪,೩೭,೧೬೯ ಇದೆ. ಇದರಲ್ಲಿ ಪುರುಷರು ೭,೨೬,೨೫೬ ಹಾಗೂ ೭,೧೦,೯೧೩ ಮಹಿಳೆಯರಿದ್ದಾರೆ ಈ ಜಿಲ್ಲೆಯಲ್ಲಿ ಒಟ್ಟು ೯೬೫೭೩೧ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ಒಟ್ಟು ೩೮೭೯೧೩ರಷ್ಟು ಜನರು ನಗರ ಪ್ರದೇಶದಲ್ಲಿ ನೆಲೆಸಿದ್ದಾರೆ.

ರಾಜ್ಯದ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೧,೦೪,೭೪,೯೯೨ ರಷ್ಟಿದೆ. ಇದರಲ್ಲಿ ಪುರುಷರು ೫೨,೬೪,೫೪೫ ಹಾಗೂ ಮಹಿಳೆಯರು ೯೬,೦೨,೪೮೧ ಜನರಿದ್ದಾರೆ. ಜಿಲ್ಲೆಯ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೧,೧೬,೪೩೧ರಷ್ಟಿದೆ. ಇದರಲ್ಲಿ ಪುರುಷರು ೫೭,೮೪೧(೭.೯೬%) ಹಾಗೂ ಮಹಿಳೆಯರು ೧,೭೭,೯೬೧(೨೫.೦೩%) ಜನರಿದ್ದಾರೆ.

ರಾಜ್ಯದ ಪರಿಶಿಷ್ಟ ವರ್ಗದ ಒಟ್ಟು ಜನಸಂಖ್ಯೆ ೪೨,೪೮,೯೮೭ ರಷ್ಟಿದೆ. ಇದರಲ್ಲಿ ಪುರುಷರು ೨೧,೩೪,೭೫೪ ಹಾಗೂ ಮಹಿಳೆಯರು ೨೧,೧೪,೨೩೩ ಜನರಿದ್ದಾರೆ. ಜಿಲ್ಲೆಯ ಪರಿಶಿಷ್ಟ ವರ್ಗದ ಒಟ್ಟು ಜನಸಂಖ್ಯೆ ೩೪,೨೩೯ರಷ್ಟಿದೆ. ಇದರಲ್ಲಿ ಪುರುಷರು ೧೭,೦೯೫(೨.೩೫%) ಹಾಗೂ ಮಹಿಳೆಯರು ೧೭,೧೪೪(೨.೪೧%) ಜನರಿದ್ದಾರೆ.

೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಒಟ್ಟು ಪುರುಷರು ಶೇಕಡ ೫೦.೬೮ ಹಾಗೂ ಶೇಕಡ ೪೯.೩೨ ಮಹಿಳೆಯರಿದ್ದಾರೆ.

ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯಾ ಪ್ರಮಾಣವು ಶೇಕಡ ೧೭.೧೪ ಇದೆ. ಪರಿಶಿಷ್ಟ ಪಂಗಡದವರು ಶೇಕಡ ೬.೯೫ರಷ್ಟು ಮಾತ್ರ ಇರುವರು.

ಕರ್ನಾಟಕದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಉತ್ತರಕನ್ನಡದ ಒಟ್ಟು ಜನಸಂಖ್ಯಾ ಪ್ರಮಾಣ ಶೇಕಡ ೨.೩೫ರಷ್ಟು ಮಾತ್ರ ಇದೆ. ರಾಜ್ಯದ ಪರಿಶಿಷ್ಟ ಜಾತಿಯ ಜನಸಂಖ್ಯೆಯಲ್ಲಿ ಈ ಜಿಲ್ಲೆಯ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯಾ ಪ್ರಮಾಣ ಶೇಕಡ ೧.೧೧ರಷ್ಟಿದೆ. ಹಾಗೆಯೇ ಪರಿಶಿಷ್ಟ ವರ್ಗದ ಒಟ್ಟು ಜನಸಂಖ್ಯೆ ಶೇಕಡ ೦.೮೦ರಷ್ಟು ಮಾತ್ರ ಇದೆ.

ಕೋಷ್ಟಕ ೨.೫. ಉತ್ತರಕನ್ನಡ ಜಿಲ್ಲೆಯ ತಾಲೂಕುವಾರು ಕುಟುಂಬ ಹಾಗೂ ಜನಸಂಖ್ಯೆ ವಿವರ

ಕ್ರಸಂ	ತಾಲೂಕು	ಕುಟುಂಬಗಳು	ಜನಸಂಖ್ಯೆ								
			ಒಟ್ಟು			ಪ.ಜಾ			ಪ.ಪಂಗಡ		
			ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
೧	ಕಾರವಾರ	೨೩,೯೬೧	೯೧,೪೫೮	೪೬,೦೪೧	೪೫,೪೧೭	೩,೫೬೯	೧,೮೧೪	೧,೭೫೫	೫೫೧	೩೧೩	೨೩೮
೨	ಸೂಪಾ	೧೧,೬೪೮	೫೨,೦೧೨	೨೬,೧೬೭	೨೫,೮೪೫	೩,೨೭೧	೩,೨೭೧	೧,೬೪೭	೭೬೧	೩೯೮	೩೬೩
೩	ಹಳಿಯಾಳ	೨೦,೧೨೪	೯೫,೧೧೯	೪೮,೩೯೭	೪೬,೭೨೨	೬,೬೮೯	೩,೩೦೩	೩,೩೮೬	೫,೭೦೨	೨,೮೧೨	೨,೮೯೦
೪	ಯಲ್ಲಾಪುರ	೧೩,೩೫೦	೫೮,೨೧೦	೨೯,೫೬೩	೨೮,೬೪೭	೨,೪೬೫	೧,೨೬೨	೧,೨೦೩	೪,೯೦೭	೨,೪೦೮	೨,೪೯೯
೫	ಮುಂಡಗೋಡು	೧೭,೭೩೩	೮೭,೩೦೮	೪೭,೯೭೯	೩೯,೩೨೯	೧೩,೫೩೭	೬,೮೫೧	೬,೬೮೬	೫,೩೫೩	೨,೭೨೮	೨,೬೨೫
೬	ಶಿರ್ಸಿ	೨೭,೯೪೪	೧,೨೪,೦೨೬	೬೨,೬೮೦	೬೧,೩೪೬	೧೨,೭೨೧	೬,೩೯೩	೬,೩೨೮	೧,೧೦೦	೫೬೫	೫೩೫
೭	ಅಂಕೋಲ	೨೧,೮೯೭	೯೨,೦೨೩	೪೬,೪೧೬	೪೫,೬೦೭	೫,೯೫೩	೨,೮೬೯	೩,೦೮೪	೧,೧೪೬	೫೯೧	೫೫೫
೮	ಕುಮುಟಾ	೨೮,೩೨೫	೧,೨೫,೦೧೪	೬೩,೧೩೬	೬೧,೮೭೮	೭,೭೫೬	೩,೮೫೯	೩,೮೯೭	೧೬೩	೮೫	೭೮
೯	ಸಿದ್ದಾಪುರ	೧೯,೭೬೧	೮೩,೧೧೮	೪೧,೧೬೯	೪೧,೯೪೯	೫,೬೦೯	೨,೭೧೮	೨,೮೯೧	೧೫೪	೮೪	೭೦
೧೦	ಹೊನ್ನಾವರ	೩೩,೩೨೭	೧,೪೭,೧೫೫	೭೩,೬೭೦	೭೩,೪೮೫	೭,೦೭೪	೩,೫೩೨	೩,೫೪೨	೩೨೩	೧೫೬	೧೬೭
೧೧	ಭಟ್ಕಳ	೨೫,೫೯೬	೧,೨೯,೫೭೬	೬೪,೩೩೬	೬೫,೨೪೦	೧೩,೬೭೮	೬,೮೫೦	೬,೮೨೮	೮,೮೩೫	೪,೩೫೮	೪,೪೭೭

ಮೂಲ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

ಹನ್ನೊಂದು ತಾಲೂಕುಗಳಲ್ಲಿ ಕಾರವಾರ ತಾಲೂಕಿನಲ್ಲಿ ಒಟ್ಟು ೨೩,೯೬೧ ಕುಟುಂಬಗಳು ನೆಲೆಸಿವೆ. ಒಟ್ಟು ಜನಸಂಖ್ಯೆಯು ೯೧,೪೫೮ ಇದೆ. ಇದರಲ್ಲಿ ಪುರುಷರು ೪೬,೦೪೧, ಮಹಿಳೆಯರು ೪೫,೪೧೭ ಇದ್ದಾರೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೩,೫೬೯ ಇದೆ. ಇದರಲ್ಲಿ ಪುರುಷರು ೧,೮೧೪, ಮಹಿಳೆಯರು ೧,೭೫೫ ಇದ್ದಾರೆ. ಅಂದರೆ, ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಶೇ. ೩.೯೦ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದೆ ಎಂದು ತಿಳಿದುಬರುತ್ತದೆ.

ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೫೫೧ ಇದೆ. ಇದರಲ್ಲಿ ಪುರುಷರು ೩೧೩, ಮಹಿಳೆಯರು ೨೩೮ ಇದ್ದಾರೆ. ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಶೇ. ೦.೬೦ರಷ್ಟು ಜನಸಂಖ್ಯೆ ಇರುವುದು ತಿಳಿದುಬರುತ್ತದೆ.

ಸೂಪಾ ತಾಲೂಕಿನಲ್ಲಿ ೧೧೬೪೮ ಕುಟುಂಬಗಳಿವೆ. ತಾಲೂಕಿನಲ್ಲಿ ಒಟ್ಟು ಜನಸಂಖ್ಯೆ ೫೨೦೧೨ ಆಗಿದೆ. ಇದರಲ್ಲಿ ಲಿಂಗವಾರು ಗಮನಿಸಿದಾಗ ಪುರುಷರ ೨೬೧೬೭ರಷ್ಟಿದ್ದಾರೆ, ೨೫೮೪೫ರಷ್ಟು ಮಹಿಳೆಯರಿದ್ದಾರೆ. ಇದರಲ್ಲಿ ೩೨೭೧ರಷ್ಟು ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯಾಗಿದ್ದು, ಲಿಂಗವಾರು ಗಮನಿಸಿದಾಗ ೧೬೨೪ರಷ್ಟು ಪುರುಷರು ಹಾಗೂ ೧೬೪೭ರಷ್ಟು ಮಹಿಳೆಯರಿದ್ದಾರೆ. ಅಂದರೆ, ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಶೇ. ೬.೨೯ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದೆ ಎಂದು ತಿಳಿದುಬರುತ್ತದೆ.

ತಾಲೂಕಿನಲ್ಲಿ ಪರಿಶಿಷ್ಟ ಪಂಗಡ ಒಟ್ಟು ಜನಸಂಖ್ಯೆ ೭೭೧ರಲ್ಲಿ ಲಿಂಗವಾರು ೩೯೮ ಪುರುಷರು ಹಾಗೂ ೩೬೩ ಮಹಿಳೆಯರಿದ್ದಾರೆ. ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಶೇ. ೧.೪೬ರಷ್ಟು ಜನಸಂಖ್ಯೆ ಇರುವುದು ತಿಳಿದುಬರುತ್ತದೆ.

ಹಳಿಯಾಳ ತಾಲೂಕಿನಲ್ಲಿ ೨೦೧೨೪ ಕುಟುಂಬಗಳು ನೆಲೆಗೊಂಡಿವೆ. ಒಟ್ಟು ಜನಸಂಖ್ಯೆ ೯೫೧೧೯ರಷ್ಟಿದೆ. ಇದರಲ್ಲಿ ಲಿಂಗವಾರು ೪೮೩೯೭ರಷ್ಟು ಪುರುಷರು, ೪೬೨೨೨ರಷ್ಟು ಮಹಿಳೆಯರಿದ್ದಾರೆ. ತಾಲೂಕಿನಲ್ಲಿ ೬೬೮೯ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದ್ದು, ಲಿಂಗವಾರು ೩೩೦೩ರಷ್ಟು ಪುರುಷರು, ೩೩೮೬ರಷ್ಟು ಮಹಿಳೆಯರಿದ್ದಾರೆ. ಅಂದರೆ, ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಶೇ. ೭.೦೩ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದೆ ಎಂದು ತಿಳಿದುಬರುತ್ತದೆ.

ಪರಿಶಿಷ್ಟ ಪಗಂಡದ ತಾಲೂಕಿನ ಒಟ್ಟು ಜನಸಂಖ್ಯೆ ೪೯೦೭ ಆಗಿದೆ. ಲಿಂಗವಾರು ಪುರುಷರು ೨೮೧೨, ೨೮೯೦ರಷ್ಟು ಮಹಿಳೆಯರಿದ್ದಾರೆ. ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಶೇ. ೫.೯ರಷ್ಟು ಜನಸಂಖ್ಯೆ ಇರುವುದು ತಿಳಿದುಬರುತ್ತದೆ.

ಯಲ್ಲಾಪುರ ತಾಲೂಕಿನಲ್ಲಿ ೧೩೩೫೦ ಕುಟುಂಬಗಳಿವೆ. ತಾಲೂಕಿನಲ್ಲಿ ಒಟ್ಟು ಜನಸಂಖ್ಯೆ ೫೮೨೧೦ ಆಗಿದೆ. ಇದರಲ್ಲಿ ಲಿಂಗವಾರು ಗಮನಿಸಿದಾಗ ಪುರುಷರ ೨೯೫೬೩ರಷ್ಟಿದ್ದಾರೆ, ೨೮೬೪೭ರಷ್ಟು ಮಹಿಳೆಯರಿದ್ದಾರೆ. ಇದರಲ್ಲಿ ೨೪೬೫ರಷ್ಟು ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯಾಗಿದ್ದು, ಲಿಂಗವಾರು ಗಮನಿಸಿದಾಗ ೧೨೬೨ರಷ್ಟು ಪುರುಷರು ಹಾಗೂ ೧೨೦೩ರಷ್ಟು ಮಹಿಳೆಯರಿದ್ದಾರೆ. ಅಂದರೆ, ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಶೇ. ೪.೨೩ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದೆ ಎಂದು ತಿಳಿದುಬರುತ್ತದೆ.

ತಾಲೂಕಿನಲ್ಲಿ ಪರಿಶಿಷ್ಟ ಪಂಗಡ ಒಟ್ಟು ಜನಸಂಖ್ಯೆ ೪೯೦೭ರಲ್ಲಿ ಲಿಂಗವಾರು ೨೪೦೮ ಪುರುಷರು ಹಾಗೂ ೨೪೯೯ ಮಹಿಳೆಯರಿದ್ದಾರೆ. ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಶೇ. ೮.೪೩ರಷ್ಟು ಜನಸಂಖ್ಯೆ ಇರುವುದು ತಿಳಿದುಬರುತ್ತದೆ.

ಮುಂಡಗೋಡು ತಾಲೂಕಿನಲ್ಲಿ ೧೭೭೩೩ ಕುಟುಂಬಗಳು ನೆಲೆಗೊಂಡಿವೆ. ಒಟ್ಟು ಜನಸಂಖ್ಯೆ ೮೭೩೦೮ರಷ್ಟಿದೆ. ಇದರಲ್ಲಿ ಲಿಂಗವಾರು ೪೭೯೭೯ರಷ್ಟು ಪುರುಷರು, ೩೯೩೮೯ರಷ್ಟು ಮಹಿಳೆಯರಿದ್ದಾರೆ. ತಾಲೂಕಿನಲ್ಲಿ ೧೩೫೩೭ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದ್ದು, ಲಿಂಗವಾರು ೬೮೫೧ರಷ್ಟು ಪುರುಷರು, ೬೬೮೬ರಷ್ಟು ಮಹಿಳೆಯರಿದ್ದಾರೆ. ಅಂದರೆ, ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಶೇ. ೧೫.೫ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದೆ ಎಂದು ತಿಳಿದುಬರುತ್ತದೆ.

ಪರಿಶಿಷ್ಟ ಪಗಂಡದ ತಾಲೂಕಿನ ಒಟ್ಟು ಜನಸಂಖ್ಯೆ ೫೩೫೩ ಆಗಿದೆ. ಲಿಂಗವಾರು ಪುರುಷರು ೨೭೨೮, ೨೬೨೫ರಷ್ಟು ಮಹಿಳೆಯರಿದ್ದಾರೆ. ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಶೇ. ೬.೧೩ರಷ್ಟು ಜನಸಂಖ್ಯೆ ಇರುವುದು ತಿಳಿದುಬರುತ್ತದೆ.

ಶಿರಸಿ ತಾಲೂಕಿನಲ್ಲಿ ೨೭೯೪೪ ಕುಟುಂಬಗಳಿವೆ. ತಾಲೂಕಿನಲ್ಲಿ ಒಟ್ಟು ಜನಸಂಖ್ಯೆ ೧೨೪೦೨೬ ಆಗಿದೆ. ಇದರಲ್ಲಿ ಲಿಂಗವಾರು ಗಮನಿಸಿದಾಗ ಪುರುಷರ ೬೨೬೮೦ರಷ್ಟಿದ್ದಾರೆ, ೬೧೩೮೬ರಷ್ಟು ಮಹಿಳೆಯರಿದ್ದಾರೆ. ಇದರಲ್ಲಿ ೧೨೭೯೧ರಷ್ಟು ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯಾಗಿದ್ದು, ಲಿಂಗವಾರು ಗಮನಿಸಿದಾಗ ೬೩೯೩ರಷ್ಟು ಪುರುಷರು ಹಾಗೂ ೬೩೨೮ರಷ್ಟು ಮಹಿಳೆಯರಿದ್ದಾರೆ. ಅಂದರೆ, ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಶೇ. ೧೦.೩ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದೆ ಎಂದು ತಿಳಿದುಬರುತ್ತದೆ.

ತಾಲೂಕಿನಲ್ಲಿ ಪರಿಶಿಷ್ಟ ಪಂಗಡ ಒಟ್ಟು ಜನಸಂಖ್ಯೆ ೧೧೦೦ರಲ್ಲಿ ಲಿಂಗವಾರು ೫೯೫ ಪುರುಷರು ಹಾಗೂ ೫೩೫ ಮಹಿಳೆಯರಿದ್ದಾರೆ. ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಶೇ. ೦.೮೭ರಷ್ಟು ಜನಸಂಖ್ಯೆ ಇರುವುದು ತಿಳಿದುಬರುತ್ತದೆ.

ಅಂಕೋಲ ತಾಲೂಕಿನಲ್ಲಿ ೨೧೮೯೭ ಕುಟುಂಬಗಳಿವೆ. ತಾಲೂಕಿನಲ್ಲಿ ಒಟ್ಟು ಜನಸಂಖ್ಯೆ ೯೨೦೨೩ ಆಗಿದೆ. ಇದರಲ್ಲಿ ಲಿಂಗವಾರು ಗಮನಿಸಿದಾಗ ಪುರುಷರ ೪೬೪೧೬ರಷ್ಟಿದ್ದಾರೆ, ೪೫೬೦೭ರಷ್ಟು ಮಹಿಳೆಯರಿದ್ದಾರೆ. ಇದರಲ್ಲಿ ೫೯೫೩ರಷ್ಟು ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯಾಗಿದ್ದು, ಲಿಂಗವಾರು ಗಮನಿಸಿದಾಗ ೨೮೬೯ರಷ್ಟು ಪುರುಷರು ಹಾಗೂ ೩೦೮೪ರಷ್ಟು ಮಹಿಳೆಯರಿದ್ದಾರೆ. ಅಂದರೆ, ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಶೇ. ೬.೪೭ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದೆ ಎಂದು ತಿಳಿದುಬರುತ್ತದೆ.

ತಾಲೂಕಿನಲ್ಲಿ ಪರಿಶಿಷ್ಟ ಪಂಗಡ ಒಟ್ಟು ಜನಸಂಖ್ಯೆ ೧೧೪೬ರಲ್ಲಿ ಲಿಂಗವಾರು ೫೯೧ ಪುರುಷರು ಹಾಗೂ ೫೫೫ ಮಹಿಳೆಯರಿದ್ದಾರೆ. ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಶೇ. ೧.೨೪ರಷ್ಟು ಜನಸಂಖ್ಯೆ ಇರುವುದು ತಿಳಿದುಬರುತ್ತದೆ.

ಕುಮಟಾ ತಾಲೂಕಿನಲ್ಲಿ ೨೮೩೨೫ ಕುಟುಂಬಗಳಿವೆ. ತಾಲೂಕಿನಲ್ಲಿ ಒಟ್ಟು ಜನಸಂಖ್ಯೆ ೧೨೫೦೧೪ ಆಗಿದೆ. ಇದರಲ್ಲಿ ಲಿಂಗವಾರು ಗಮನಿಸಿದಾಗ ಪುರುಷರ ೬೩೧೩೬ರಷ್ಟಿದ್ದಾರೆ, ೬೧೮೭೮ರಷ್ಟು ಮಹಿಳೆಯರಿದ್ದಾರೆ. ಇದರಲ್ಲಿ ೭೭೫೬ರಷ್ಟು ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯಾಗಿದ್ದು, ಲಿಂಗವಾರು ಗಮನಿಸಿದಾಗ ೩೮೫೯ರಷ್ಟು ಪುರುಷರು ಹಾಗೂ ೩೮೯೭ರಷ್ಟು ಮಹಿಳೆಯರಿದ್ದಾರೆ. ಅಂದರೆ, ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಶೇ. ೬.೨೦ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದೆ ಎಂದು ತಿಳಿದುಬರುತ್ತದೆ.

ತಾಲೂಕಿನಲ್ಲಿ ಪರಿಶಿಷ್ಟ ಪಂಗಡ ಒಟ್ಟು ಜನಸಂಖ್ಯೆ ೧೬೩ರಲ್ಲಿ ಲಿಂಗವಾರು ೮೫ ಪುರುಷರು ಹಾಗೂ ೭೮ ಮಹಿಳೆಯರಿದ್ದಾರೆ. ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಶೇ. ೦.೧೩ರಷ್ಟು ಜನಸಂಖ್ಯೆ ಇರುವುದು ತಿಳಿದುಬರುತ್ತದೆ.

ಸಿದ್ಧಾಪುರ ತಾಲೂಕಿನಲ್ಲಿ ೯೭೬೧ ಕುಟುಂಬಗಳಿವೆ. ತಾಲೂಕಿನಲ್ಲಿ ಒಟ್ಟು ಜನಸಂಖ್ಯೆ ೮೩೧೧೮ ಆಗಿದೆ. ಇದರಲ್ಲಿ ಲಿಂಗವಾರು ಗಮನಿಸಿದಾಗ ಪುರುಷರ ೪೧೧೬೯ರಷ್ಟಿದ್ದಾರೆ, ೪೧೯೪೯ರಷ್ಟು ಮಹಿಳೆಯರಿದ್ದಾರೆ. ಇದರಲ್ಲಿ ೫೬೦೯ರಷ್ಟು ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯಾಗಿದ್ದು, ಲಿಂಗವಾರು ಗಮನಿಸಿದಾಗ ೨೭೧೮ರಷ್ಟು ಪುರುಷರು ಹಾಗೂ ೨೮೯೧ರಷ್ಟು ಮಹಿಳೆಯರಿದ್ದಾರೆ. ಅಂದರೆ, ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಶೇ. ೬.೭೫ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದೆ ಎಂದು ತಿಳಿದುಬರುತ್ತದೆ.

ತಾಲೂಕಿನಲ್ಲಿ ಪರಿಶಿಷ್ಟ ಪಂಗಡ ಒಟ್ಟು ಜನಸಂಖ್ಯೆ ೧೫೪ರಲ್ಲಿ ಲಿಂಗವಾರು ೮೪ ಪುರುಷರು ಹಾಗೂ ೭೦ ಮಹಿಳೆಯರಿದ್ದಾರೆ. ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಶೇ. ೦.೧೮ರಷ್ಟು ಜನಸಂಖ್ಯೆ ಇರುವುದು ತಿಳಿದುಬರುತ್ತದೆ.

ಹೊನ್ನಾವರ ತಾಲೂಕಿನಲ್ಲಿ ೩೩೩೭೨ ಕುಟುಂಬಗಳಿವೆ. ತಾಲೂಕಿನಲ್ಲಿ ಒಟ್ಟು ಜನಸಂಖ್ಯೆ ೧೪೭೧೫೫ ಆಗಿದೆ. ಇದರಲ್ಲಿ ಲಿಂಗವಾರು ಗಮನಿಸಿದಾಗ ಪುರುಷರ ೭೩೬೭೦ರಷ್ಟಿದ್ದಾರೆ, ೭೩೪೮೫ರಷ್ಟು ಮಹಿಳೆಯರಿದ್ದಾರೆ. ಇದರಲ್ಲಿ ೭೦೭೪ರಷ್ಟು ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯಾಗಿದ್ದು, ಲಿಂಗವಾರು ಗಮನಿಸಿದಾಗ ೩೫೩೨ರಷ್ಟು ಪುರುಷರು ಹಾಗೂ ೩೫೪೨ರಷ್ಟು ಮಹಿಳೆಯರಿದ್ದಾರೆ. ಅಂದರೆ, ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಶೇ. ೪.೮೧ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದೆ ಎಂದು ತಿಳಿದುಬರುತ್ತದೆ.

ತಾಲೂಕಿನಲ್ಲಿ ಪರಿಶಿಷ್ಟ ಪಂಗಡ ಒಟ್ಟು ಜನಸಂಖ್ಯೆ ೩೨೩ರಲ್ಲಿ ಲಿಂಗವಾರು ೧೫೬ ಪುರುಷರು ಹಾಗೂ ೧೬೭ ಮಹಿಳೆಯರಿದ್ದಾರೆ. ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಶೇ. ೦.೨೨ರಷ್ಟು ಜನಸಂಖ್ಯೆ ಇರುವುದು ತಿಳಿದುಬರುತ್ತದೆ.

ಭಟ್ಕಳ ತಾಲೂಕಿನಲ್ಲಿ ೨೫೯೬ ಕುಟುಂಬಗಳಿವೆ. ತಾಲೂಕಿನಲ್ಲಿ ಒಟ್ಟು ಜನಸಂಖ್ಯೆ ೧೨೯೫೭೬ ಆಗಿದೆ. ಇದರಲ್ಲಿ ಲಿಂಗವಾರು ಗಮನಿಸಿದಾಗ ಪುರುಷರ ೬೪೩೩೬ರಷ್ಟಿದ್ದಾರೆ, ೬೫೨೪೦ರಷ್ಟು ಮಹಿಳೆಯರಿದ್ದಾರೆ. ಇದರಲ್ಲಿ ೧೩೬೭೮ರಷ್ಟು ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯಾಗಿದ್ದು, ಲಿಂಗವಾರು ಗಮನಿಸಿದಾಗ ೬೮೫೦ರಷ್ಟು ಪುರುಷರು ಹಾಗೂ ೬೮೨೮ರಷ್ಟು ಮಹಿಳೆಯರಿದ್ದಾರೆ. ಅಂದರೆ, ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಶೇ. ೧೦.೬೦ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದೆ ಎಂದು ತಿಳಿದುಬರುತ್ತದೆ.

ತಾಲೂಕಿನಲ್ಲಿ ಪರಿಶಿಷ್ಟ ಪಂಗಡ ಒಟ್ಟು ಜನಸಂಖ್ಯೆ ೮೮೩೫ರಲ್ಲಿ ಲಿಂಗವಾರು ೪೩೫೮ ಪುರುಷರು ಹಾಗೂ ೪೪೭೭ ಮಹಿಳೆಯರಿದ್ದಾರೆ. ಒಟ್ಟಾರೆ ತಾಲೂಕಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಶೇ. ೬.೮೨ರಷ್ಟು ಜನಸಂಖ್ಯೆ ಇರುವುದು ತಿಳಿದುಬರುತ್ತದೆ.

೨.೮ ಜನಸಾಂದ್ರತೆ

ಜನಸಾಂದ್ರತೆ ಎಂದರೆ ಪ್ರತಿ ಚದರ ಕಿ.ಮೀ. ಪ್ರದೇಶದಲ್ಲಿ ವಾಸಿಸುವ ಸರಾಸರಿ ಜನಸಂಖ್ಯೆಯನ್ನು ಲೆಕ್ಕಹಾಕುವುದೇ ಆಗಿದೆ. ಕರ್ನಾಟಕದಲ್ಲಿರುವ ಒಟ್ಟು ವಿಸ್ತಾರದಲ್ಲಿ ಜನಸಾಂದ್ರತೆಯು ಪ್ರತಿ ಚದರ ಕಿಲೋಮೀಟರಿಗೆ ಸರಾಸರಿ ೩೧೯ ಇದೆ. ಉತ್ತರಕನ್ನಡ ಜಿಲ್ಲೆಯಲ್ಲಿ ಪ್ರತಿ ಚದರ ಕಿಲೋಮೀಟರಿಗೆ ೧೪೦ ಜನಸಾಂದ್ರತೆ ಇದೆ.

ಇದು ಬೇರೆ ಜಿಲ್ಲೆಗಳಿಗೆ ಹೋಲಿಕೆ ಮಾಡಿದರೆ ಅತ್ಯಂತ ಕಡಿಮೆ ಜನಸಾಂದ್ರತೆಯನ್ನು ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣ ಇದು ಜನವಸತಿಗೆ ಯೋಗ್ಯವಲ್ಲದ ಪ್ರದೇಶವಾಗಿದೆ. ಏಕೆಂದರೆ ಇಲ್ಲಿ ದಟ್ಟವಾದ ಅರಣ್ಯಗಳು ಮತ್ತು ಎತ್ತರದ ಘಟ್ಟಗಳಿವೆ.

ಇಂತಹ ಪ್ರದೇಶದಲ್ಲಿ ವಾಸಿಸುವ ಜನರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕಷ್ಟವಾಗುತ್ತದೆ. ಅಲ್ಲದೇ ಇಲ್ಲಿ ಸುರಿಯುವ ಭಯಂಕರ ಮಳೆ, ತುಂಬಿ ಹರಿಯುವ ಮತ್ತು ಪ್ರವಾಹದಿಂದ ಕೂಡಿದ ನದಿಗಳು, ಇಲ್ಲಿರುವ ಕಚ್ಚಾರಸ್ತೆಗಳು ಮತ್ತು ಸಾರಿಗೆ ಸೌಲಭ್ಯಗಳ ಕೊರತೆ ಇತ್ಯಾದಿ ಅಂಶಗಳು ಜನಸಾಂದ್ರತೆ ಕಡಿಮೆ ಇರಲು ಕಾರಣಗಳಾಗಿವೆ.

೨.೯ ಲಿಂಗಾನುಪಾತ

ಕರ್ನಾಟಕದಲ್ಲಿ ಲಿಂಗಾನುಪಾತವು ಸರಾಸರಿ ೧೦೦೦ ಪುರುಷರಿಗೆ ೯೭೩ ಮಹಿಳೆಯರಿದ್ದಾರೆ. ಈ ಲಿಂಗಾನುಪಾತವು ಗ್ರಾಮೀಣ ಪ್ರದೇಶದಲ್ಲಿ ಸರಾಸರಿ ೯೭೯ ಹಾಗೂ ನಗರ ಪ್ರದೇಶದಲ್ಲಿ ೯೬೩ರಷ್ಟಿದೆ.

ವಿವರ	ಕರ್ನಾಟಕ	ಉತ್ತರಕನ್ನಡ
ಒಟ್ಟು	೯೭೩	೯೭೯
ಗ್ರಾಮೀಣ	೯೭೯	೯೭೭
ನಗರ	೯೬೩	೯೮೨

ಮೂಲ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

ಉತ್ತರಕನ್ನಡ ಜಿಲ್ಲೆಯಲ್ಲಿ ಲಿಂಗಾನುಪಾತವು ಸರಾಸರಿ ೧೦೦೦ ಪುರುಷರಿಗೆ ೯೭೯ ಮಹಿಳೆಯರಿದ್ದಾರೆ. ಈ ಲಿಂಗಾನುಪಾತವು ಗ್ರಾಮೀಣ ಪ್ರದೇಶದಲ್ಲಿ ಸರಾಸರಿ ೯೭೭ ಹಾಗೂ ನಗರ ಪ್ರದೇಶದಲ್ಲಿ ೯೮೨ ರಷ್ಟಿದೆ. ಒಟ್ಟಾರೆ ರಾಜ್ಯದ ಸರಾಸರಿ ಲಿಂಗಾನುಪಾತಕ್ಕೆ ಹೋಲಿಸಿದರೆ ಉತ್ತರಕನ್ನಡದಲ್ಲಿ ಸರಾಸರಿ ಲಿಂಗಾನುಪಾತದ ಪ್ರಮಾಣ ಹೆಚ್ಚಿದೆ. ಆದರೆ ಗ್ರಾಮೀಣ ಭಾಗದಲ್ಲಿ ರಾಜ್ಯದ ಸರಾಸರಿ ಲಿಂಗಾನುಪಾತಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮಹಿಳೆಯರಿದ್ದಾರೆ. ಆದರೆ ನಗರ ಪ್ರದೇಶದಲ್ಲಿ ರಾಜ್ಯದ ಸರಾಸರಿ ಲಿಂಗಾನುಪಾತಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರಿರುವುದು ಕಂಡುಬರುತ್ತದೆ.

ಈ ಮೇಲಿನ ಅಂಕಿಅಂಶಗಳನ್ನು ಅವಲೋಕಿಸಿದಾಗ, ರಾಜ್ಯದ ಸರಾಸರಿಗಿಂತ ಉತ್ತರಕನ್ನಡ ಜಿಲ್ಲೆಯ ಲಿಂಗಾನುಪಾತವು ಏಕೆ ಹೆಚ್ಚಾಗಿದೆ ಹಾಗೂ ಉತ್ತರಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶದ ಲಿಂಗಾನುಪಾತವು ರಾಜ್ಯದ ಸರಾಸರಿಗಿಂತ ಏಕೆ ಕಡಿಮೆ ಇದೆ ಎಂಬ ಪ್ರಶ್ನೆಗಳು ಮೂಡುತ್ತವೆ. ಇಲ್ಲಿ ಇವುಗಳಿಗೆ ಉತ್ತರ ಕಂಡುಕೊಳ್ಳುವ ಅಗತ್ಯವಿದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕುಮಟಾ ನಗರದಲ್ಲಿ ಇರುವ ಬಾಳಿಗಾ ಕಾಲೇಜಿಗೆ ಹೋಗಿ ಅಲ್ಲಿಯ ಪ್ರಾಚಾರ್ಯರನ್ನು ಸಂದರ್ಶಿಸಲಾಯಿತು. ಆ ಸಂದರ್ಭದಲ್ಲಿ ಈ ಜಿಲ್ಲೆಯ

ಲಿಂಗಾನುಪಾತ ಜಾಸ್ತಿಯಾಗಿರುವುದಕ್ಕೆ ಕಾರಣವೇನು ಎಂಬ ಪ್ರಶ್ನೆಗೆ ಅವರು ಜಿಲ್ಲೆಯಲ್ಲಿ ಶಿಕ್ಷಿತರ ಸಂಖ್ಯೆ ಜಾಸ್ತಿ ಇರುವುದು, ಆಸ್ಪತ್ರೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಸೌಲಭ್ಯಗಳಿವೆ. ತಾಲೂಕು ಕೇಂದ್ರಗಳಿಂದ ಎಲ್ಲಾ ಗ್ರಾಮಗಳ ರಸ್ತೆಗಳು ಸುಧಾರಣೆಯಾಗಿವೆ ಹಾಗೂ ಎಲ್ಲದಕ್ಕೂ ಹೆಚ್ಚಾಗಿ ಟಿ.ವಿ., ಧಾರವಾಹಿ ಮತ್ತಿತರ ಸಮೂಹ ಮಾಧ್ಯಮಗಳಿಂದ ಜಿಲ್ಲೆಯ ಎಲ್ಲಾ ಜನವರ್ಗಗಳಲ್ಲಿ ಜಾಗೃತಿ ಮೂಡಿದೆ. ಇದರಿಂದ ಲಿಂಗಾನುಪಾತ ಹೆಚ್ಚಾಗಿರುವ ಬಗೆಯನ್ನು ಕುರಿತು ಉತ್ತರಿಸಿದರು.

ಈ ಜಿಲ್ಲೆಯ ದಟ್ಟವಾದ ಅರಣ್ಯ ಪ್ರದೇಶ ಮತ್ತು ಗುಡ್ಡ ಬೆಟ್ಟಗಳಿಂದ ಆವೃತ್ತವಾದ ಪ್ರದೇಶವಾಗಿದೆ. ಇಲ್ಲಿ ಹಲವಾರು ಬುಡಕಟ್ಟು ಮತ್ತು ಕೆಳವರ್ಗದ ಸಮುದಾಯಗಳು ವಾಸಿಸುತ್ತವೆ. ಅವುಗಳೆಂದರೆ ಹಾಲಕ್ಕಿ ಒಕ್ಕಲಿಗರು, ಕುಣಬಿಗಳು, ಸಿದ್ಧಿಯರು, ಹಳ್ಳೇರು, ಆಗೇರರು, ಮುಕ್ರಿಯರು, ಗೊಂಡರು, ಗೌಳಿಗರು ಇತ್ಯಾದಿ ಸಮುದಾಯಗಳಾಗಿವೆ ಎಂಬುದು ಕ್ಷೇತ್ರಕಾರ್ಯದಿಂದ ತಿಳಿದಿದೆ. ಈ ಸಮುದಾಯಗಳು ಬುಡಕಟ್ಟು ಚಹರೆಗಳನ್ನು ದಟ್ಟವಾಗಿ ಹೊಂದಿದ್ದು, ಇವತ್ತಿಗೂ ಬುಡಕಟ್ಟು ಬದುಕನ್ನು ಸಾಗಿಸುತ್ತಿದ್ದಾರೆ. ಬುಡಕಟ್ಟುಗಳು ಮಹಿಳೆಯರನ್ನು ತುಂಬಾ ಗೌರವಿಸುತ್ತಾರೆ. ಅದೇ ರೀತಿ ಈ ಸಮುದಾಯಗಳು ಹೆಣ್ಣನ್ನು ಗೌರವಿಸುತ್ತಾರೆ ಎಂಬುವುದು ಕ್ಷೇತ್ರಕಾರ್ಯದಲ್ಲಿ ಸಮುದಾಯಗಳ ಆಚರಣೆ, ನಂಬಿಕೆಗಳ ಅವಲೋಕನದಿಂದ ಸ್ಪಷ್ಟವಾಗುತ್ತದೆ ಹಾಗೂ ಬುಡಕಟ್ಟು ಅಧ್ಯಯನಕಾರರ ಹಲವಾರು ಕೃತಿಗಳಲ್ಲಿ ಇದನ್ನು ಉಲ್ಲೇಖಿಸಿದ್ದಾರೆ. ಅಲ್ಲದೇ ಮುಕ್ರಿ ಸಮುದಾಯದ ಸಮೀಕ್ಷೆಯಲ್ಲಿ ಕುಟುಂಬದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿರುವುದು ಕಂಡುಬಂದಿದೆ. ಅದಕ್ಕಾಗಿ ಈ ಜಿಲ್ಲೆಯ ಲಿಂಗಾನುಪಾತ ಹೆಚ್ಚಾಗಿರುವುದಕ್ಕೆ ಈ ಸಮುದಾಯಗಳ ಬದುಕು ಕಾರಣವಾಗಿವೆ.

ಉತ್ತರಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶದ ಲಿಂಗಾನುಪಾತವು ರಾಜ್ಯದ ಸರಾಸರಿಗಿಂತ ಕಡಿಮೆ ಇದೆ. ರಾಜ್ಯದ ಇತರೆ ಕೆಲವು ಜಿಲ್ಲೆಗಳಿಗೆ ಹೋಲಿಸಿದಾಗ ಇದು ವ್ಯತಿರಿಕ್ತ ಅಂಶವಾಗಿದೆ. ಏಕೆಂದರೆ ಕೆಲವು ಜಿಲ್ಲೆಯ ಗ್ರಾಮೀಣ ಭಾಗದ ಲಿಂಗಾನುಪಾತವು ರಾಜ್ಯದ ಸರಾಸರಿಗಿಂತ ಅಧಿಕವಾಗಿದ್ದು, ನಗರದ ಲಿಂಗಾನುಪಾತವು ಕಡಿಮೆ ಇರುವುದು ಕಂಡುಬರುತ್ತದೆ. ಅದರೆ ಈ ವ್ಯತಿರಿಕ್ತಿ ಅಂಶಗಳಿಂದ ಉತ್ತರಕನ್ನಡ ಜಿಲ್ಲೆಯ ಗ್ರಾಮೀಣ ಭಾಗ ಧಾರ್ಮಿಕ ನಂಬಿಕೆ ಮತ್ತು ಪುರುಷ ಪ್ರಧಾನ ಮೌಲ್ಯಗಳ ದಟ್ಟವಾದ ಪ್ರಭಾವಕ್ಕೆ ಒಳಗಾಗುತ್ತಿದೆ ಎಂಬುದು ತಿಳಿಯುತ್ತದೆ.

ಕ್ಷೇತ್ರಕಾರ್ಯ ಸಂದರ್ಶನದಲ್ಲಿ ಸುಮಾರು ಮಾಹಿತಿದಾರರು ನೀಡುವ ಕೆಲವು ಈ ಕೆಳಕಂಡ ಅಂಶಗಳನ್ನು ಗುರುತಿಸಲಾಗಿದೆ.

೧. ಗಂಡು ಮಗನಿಂದಲೇ ನಮ್ಮ ವಂಶ ಬೆಳೆಯುತ್ತದೆ.

೨. ಗಂಡು ಮಗುವಾದರೆ ನಮಗೆ ವಯಸ್ಸಾದ ಮೇಲೆ ನೋಡಿಕೊಳ್ಳುತ್ತಾನೆ.

೩. ಗಂಡು ಮಗನಿಂದಲೇ ನಮ್ಮ ಕುಟುಂಬಕ್ಕೆ ಗೌರವ ಬರುತ್ತದೆ.

೪. ಶಾಸ್ತ್ರಗಳನ್ನು ಮಾಡುವಾಗ ಗಂಡು ಮಗನೇ ಬೇಕಾಗುತ್ತದೆ. ಎಂಬುದಾಗಿ ತಿಳಿಸುತ್ತಾರೆ. ಈ ಎಲ್ಲಾ ಅಂಶಗಳು ಗ್ರಾಮೀಣ ಭಾಗದ ಲಿಂಗಾನುಪಾತ ಕುಸಿಯಲು ಹಾಗೂ ಧಾರ್ಮಿಕ ನಂಬಿಕೆ ಮತ್ತು ಪುರುಷತ್ವದ ಮೌಢ್ಯಗಳ ಪ್ರಭಾವಕ್ಕೆ ಗ್ರಾಮೀಣ ಪ್ರದೇಶಗಳು ಒಳಗಾಗುತ್ತವೆ ಎಂದು ತಿಳಿಯುತ್ತದೆ.

ನಗರಗಳಲ್ಲಿ ಸುಶಿಕ್ಷಿತರು ಕಾನೂನಿನ ಅರಿವು ಇರುವವರು ಸಂಖ್ಯೆ ಹೆಚ್ಚಾಗಿರುವುದು ಅದಕ್ಕಾಗಿ ಇವರು ಸೋನೊಗ್ರಾಂ ತಂತ್ರಜ್ಞಾನ ಬಳಸುವುದು ಅಪರಾಧವೆಂದು ತಿಳಿದಿರುತ್ತಾರೆ. ಅಲ್ಲದೇ ಚಿಕ್ಕ ಕುಟುಂಬದ ಬಯಕೆಯನ್ನು ಹೊಂದಿರುವವರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ಜಿಲ್ಲೆಯ ನಗರ ಪ್ರದೇಶದ ಲಿಂಗಾನುಪಾತ ಹೆಚ್ಚಾಗಲು ಕಾರಣವಾಗಿದೆ.

ಕೋಷ್ಟಕ ೨.೬. ರಾಜ್ಯ ಹಾಗೂ ಉತ್ತರಕನ್ನಡ ಜಿಲ್ಲೆಯ ಒಟ್ಟು ಸಾಕ್ಷರತೆ ಪ್ರಮಾಣ


ವಿವರ	ಒಟ್ಟು	ಗಂಡು	ಹೆಣ್ಣು
ರಾಜ್ಯ	೪,೦೬,೪೭,೩೨೨	೨,೨೫,೦೮,೪೭೧	೧,೮೧,೩೮,೮೫೧
ಶೇಕಡ	೭೫.೩೬	೮೨.೪೭	೬೮.೦೮
ಉತ್ತರಕನ್ನಡ	೧೦,೮೧,೯೦೬	೫,೮೨,೦೯೯	೪,೯೯,೮೦೭
ಶೇಕಡ	೮೪.೦೬	೮೯.೬೩	೭೮.೩೯

ಮೂಲ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

೨.೧೦ ಸಾಕ್ಷರತೆ

ರಾಜ್ಯದಲ್ಲಿ ಸಾಕ್ಷರತೆಯನ್ನು ಹೊಂದಿದ ಒಟ್ಟು ಜನಸಂಖ್ಯೆಯು ೪,೦೬,೪೭,೩೨೨ ಇದೆ. ಇದರಲ್ಲಿ ೨,೨೫,೦೮,೪೭೧ ಪುರುಷರು ಹಾಗೂ ೧,೮೧,೩೮,೮೫೧ ಮಹಿಳೆಯರು ಇದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಸಾಕ್ಷರತೆಯನ್ನು ಹೊಂದಿದ ಒಟ್ಟು ಜನಸಂಖ್ಯೆಯು ೧೦,೮೧,೯೦೬ ಇದೆ. ಇದರಲ್ಲಿ ೫,೮೨,೦೯೯ ಪುರುಷರು ಹಾಗೂ ೪,೯೯,೮೦೭ ಮಹಿಳೆಯರು ಇದ್ದಾರೆ.

ಲಂಬಚಿತ್ರ: ೨.೧ ರಾಜ್ಯದ ಮುಕ್ರಿ ಸಮುದಾಯದ ಒಟ್ಟು ಜನಸಂಖ್ಯಾ ಪ್ರಮಾಣ ಹಾಗೂ ಉತ್ತರಕನ್ನಡ ಜಿಲ್ಲೆಯಲ್ಲಿನ ಮುಕ್ರಿ ಸಮುದಾಯದ ಸಾಕ್ಷರತೆಯ ಪ್ರಮಾಣ



ರಾಜ್ಯದ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೭೫.೩೬ ಇದೆ. ಇದರಲ್ಲಿ ಪುರುಷರು ಶೇಕಡ ೮೨.೪೭ ಹಾಗೂ ಮಹಿಳೆಯರು ಶೇಕಡ ೬೮.೦೮ ಇದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೮೪.೦೬ ಇದೆ. ಇದರಲ್ಲಿ ಶೇಕಡ ೮೯.೬೩ ಪುರುಷರು ಹಾಗೂ ಶೇಕಡ ೭೮.೩೯ ಮಹಿಳೆಯರು ಇದ್ದಾರೆ. ಅಂದರೆ ರಾಜ್ಯದ ಸರಾಸರಿ ಸಾಕ್ಷರತೆಯ ಪ್ರಮಾಣಕ್ಕಿಂತ ಉತ್ತರಕನ್ನಡದ ಸಾಕ್ಷರತೆಯ ಪ್ರಮಾಣ ಹೆಚ್ಚಿದೆ.

ಕೋಷ್ಟಕ ೨.೭. ರಾಜ್ಯ ಹಾಗೂ ಉತ್ತರಕನ್ನಡ ಜಿಲ್ಲೆಯ ಪರಿಶಿಷ್ಟ ಜಾತಿಯ ಸಾಕ್ಷರತೆ ಪ್ರಮಾಣ

ವಿವರ	ಒಟ್ಟು	ಗಂಡು	ಹೆಣ್ಣು
ರಾಜ್ಯ	೧,೦೪,೭೪,೯೯೨	೫೨,೬೪,೫೪೫	೫೨,೧೦,೪೪೭
ಶೇಕಡ	೧೭.೧೫	೧೭	೧೭.೨೯
ಉತ್ತರಕನ್ನಡ	೧,೧೬,೪೩೧	೫೭,೮೪೧	೫೮,೫೯೦
ಶೇಕಡ	೮.೧೦	೭.೯೬	೮.೨೪

ಮೂಲ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ



ಲಂಬಚಿತ್ರ ೨.೨. ರಾಜ್ಯ ಹಾಗೂ ಉತ್ತರಕನ್ನಡ ಜಿಲ್ಲೆಯ ಪರಿಶಿಷ್ಟ ಜಾತಿಯ ಸಾಕ್ಷರತೆ ಪ್ರಮಾಣ



ರಾಜ್ಯದಲ್ಲಿ ಸಾಕ್ಷರತೆಯನ್ನು ಹೊಂದಿದ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೧,೦೪,೭೪,೯೯೨ ಇದೆ. ಇದರಲ್ಲಿ ೫೨,೬೪,೫೪೫ ಪುರುಷರು ಹಾಗೂ ೫೨,೧೦,೪೪೭ ಮಹಿಳೆಯರು ಇದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಸಾಕ್ಷರತೆಯನ್ನು ಹೊಂದಿದ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೧,೧೬,೪೩೧ ಇದೆ. ಇದರಲ್ಲಿ ೫೭,೮೪೧ ಪುರುಷರು ಹಾಗೂ ೫೮,೫೯೦ ಮಹಿಳೆಯರು ಇದ್ದಾರೆ.

ರಾಜ್ಯದ ಪರಿಶಿಷ್ಟ ಜಾತಿಯ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೧೭.೧೫ ಇದೆ. ಇದರಲ್ಲಿ ಪುರುಷರು ಶೇಕಡ ೧೭ ಹಾಗೂ ಮಹಿಳೆಯರು ಶೇಕಡ ೧೭.೨೯ ಇದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೮.೧೦ ಇದೆ. ಇದರಲ್ಲಿ ಶೇಕಡ ೭.೯೬ ಪುರುಷರು ಹಾಗೂ ಶೇಕಡ ೮.೨೪ ಮಹಿಳೆಯರು ಇದ್ದಾರೆ. ಅಂದರೆ ರಾಜ್ಯದ ಸರಾಸರಿ ಸಾಕ್ಷರತೆಯ ಪ್ರಮಾಣಕ್ಕೆ ಹೋಲಿಸಿದರೆ ಉತ್ತರಕನ್ನಡದ ಸಾಕ್ಷರತೆಯ ಪ್ರಮಾಣವು ಅತ್ಯಂತ ಕಡಿಮೆ ಇದೆ.




ಕೋಷ್ಟಕ ೨.೮. ರಾಜ್ಯ ಹಾಗೂ ಉತ್ತರಕನ್ನಡ ಜಿಲ್ಲೆಯ ಪರಿಶಿಷ್ಟ ಪಂಗಡದ ಸಾಕ್ಷರತೆ ಪ್ರಮಾಣ

ವಿವರ	ಒಟ್ಟು	ಗಂಡು	ಹೆಣ್ಣು
ರಾಜ್ಯ	೪೨,೪೮,೯೮೭	೨೧,೩೪,೭೫೪	೨೧,೧೪,೨೩೩
ಶೇಕಡ	೬.೯೫	೬.೮೯	೭.೦೨
ಉತ್ತರಕನ್ನಡ	೩೪,೨೩೯	೧೭,೦೯೫	೧೭,೧೪೪
ಶೇಕಡ	೨.೩೮	೨.೩೫	೨.೪೧

ಆಧಾರ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

ಲಂಬಚಿತ್ರ ೨.೩. ರಾಜ್ಯ ಹಾಗೂ ಉತ್ತರಕನ್ನಡ ಜಿಲ್ಲೆಯ ಪರಿಶಿಷ್ಟ ಪಂಗಡದ ಸಾಕ್ಷರತೆ ಪ್ರಮಾಣ



ರಾಜ್ಯದಲ್ಲಿ ಸಾಕ್ಷರತೆಯನ್ನು ಹೊಂದಿದ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೪೨,೪೮,೯೮೭ ಇದೆ. ಇದರಲ್ಲಿ ೨೧,೩೪,೭೫೪ ಪುರುಷರು ಹಾಗೂ ೨೧,೧೪,೨೩೩ ಮಹಿಳೆಯರು ಇದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಸಾಕ್ಷರತೆಯನ್ನು ಹೊಂದಿದ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೩೪,೨೩೯ ಇದೆ. ಇದರಲ್ಲಿ ೧೭,೦೯೫ ಪುರುಷರು ಹಾಗೂ ೧೭,೧೪೪ ಮಹಿಳೆಯರು ಇದ್ದಾರೆ.

ರಾಜ್ಯದ ಪರಿಶಿಷ್ಟ ಪಂಗಡದ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೬.೯೫ ಇದೆ. ಇದರಲ್ಲಿ ಪುರುಷರು ಶೇಕಡ ೬.೮೯ ಹಾಗೂ ಮಹಿಳೆಯರು ಶೇಕಡ ೭.೦೨ ಇದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೨.೩೮ ಇದೆ. ಇದರಲ್ಲಿ ಶೇಕಡ ೨.೩೫ ಪುರುಷರು ಹಾಗೂ ಶೇಕಡ ೨.೪೧ ಮಹಿಳೆಯರು



ಇದ್ದಾರೆ. ಅಂದರೆ ರಾಜ್ಯದ ಸರಾಸರಿ ಸಾಕ್ಷರತೆಯ ಪ್ರಮಾಣಕ್ಕೆ ಹೋಲಿಸಿದರೆ ಉತ್ತರಕನ್ನಡದ ಪರಿಶಿಷ್ಟ ಪಂಗಡದ ಸಾಕ್ಷರತೆಯ ಪ್ರಮಾಣವು ಅತ್ಯಂತ ಕಡಿಮೆ ಇದೆ.

ಕೋಷ್ಟಕ ೨.೯. ತಾಲೂಕುವಾರು ಸಾಕ್ಷರತೆಯ ಪ್ರಮಾಣ

ಕ್ರಸಂ	ತಾಲೂಕು	ತಾಲೂಕುವಾರು ಸಾಕ್ಷರತೆ ಸಂಖ್ಯೆ		
		ಒಟ್ಟು	ಗಂಡು	ಹೆಣ್ಣು
೧	ಕಾರವಾರ	೭೨,೩೭೯	೩೮,೯೯೮	೩೩,೩೮೧
೨	ಸೂಪಾ	೩೪,೩೪೪	೧೯,೨೫೪	೧೫,೦೯೦
೩	ಹಳಿಯಾಳ	೫೭,೮೨೨	೩೨,೯೫೬	೨೪,೮೬೬
೪	ಯಲ್ಲಾಪುರ	೪೦,೫೦೪	೨೨,೧೨೦	೧೮,೩೮೪
೫	ಮುಂಡಗೋಡು	೫೯,೬೮೨	೩೬,೧೧೮	೨೩,೫೬೪
೬	ಶಿರ್ಸಿ	೯೬,೦೮೮	೫೦,೭೯೮	೪೫,೨೯೦
೭	ಅಂಕೋಲ	೭೦,೨೦೨	೩೮,೧೬೭	೩೨,೦೩೫
೮	ಕುಮುಟಾ	೯೭,೨೮೬	೫೨,೨೪೦	೪೫,೦೪೬
೯	ಸಿದ್ದಾಪುರ	೬೩,೧೨೮	೩೩,೩೯೩	೨೯,೭೩೫
೧೦	ಹೊನ್ನಾವರ	೧,೧೦,೪೪೯	೫೯,೦೪೬	೫೧,೪೦೩
೧೧	ಭಟ್ಕಳ	೯೩,೪೬೯	೪೯,೮೬೯	೪೩,೬೦೦

ಆಧಾರ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

೨.೧೦.೧ ಉತ್ತರಕನ್ನಡದ ತಾಲೂಕುವಾರು ಸಾಕ್ಷರತೆಯ ಪ್ರಮಾಣ

ಉತ್ತರಕನ್ನಡ ಜಿಲ್ಲೆಯಲ್ಲಿರುವ ೧೧ ತಾಲೂಕುಗಳಲ್ಲಿ ಕಾರವಾರದ ಒಟ್ಟು ಜನಸಂಖ್ಯೆಯಲ್ಲಿ ಸಾಕ್ಷರತೆಯನ್ನು ಹೊಂದಿದವರು ಒಟ್ಟು ೭೨,೩೭೯,ಇದರಲ್ಲಿ ೩೮೯೯೮ ಪುರುಷರು ಹಾಗೂ ೩೩೩೮೧ ಮಹಿಳೆಯರಿದ್ದಾರೆ.

ಸೂಫಾ ತಾಲೂಕಿನಲ್ಲಿ ೩೪,೩೪೪ ಒಟ್ಟು ಸಾಕ್ಷರರಿದ್ದಾರೆ. ಇದರಲ್ಲಿ ೧೯,೨೫೪ ಪುರುಷರು ಹಾಗೂ ೧೫,೦೯೦ ಮಹಿಳೆಯರಿದ್ದಾರೆ.

ಹಳಿಯಾಳ ತಾಲೂಕಿನಲ್ಲಿ ೫೭,೮೨೨ ಒಟ್ಟು ಸಾಕ್ಷರರಿದ್ದಾರೆ. ಇದರಲ್ಲಿ ೩೨,೯೫೬ ಪುರುಷರು ಹಾಗೂ ೨೪,೮೬೬ ಮಹಿಳೆಯರಿದ್ದಾರೆ.

ಯಲ್ಲಾಪುರ ತಾಲೂಕಿನಲ್ಲಿ ೪೦,೫೦೪ ಒಟ್ಟು ಸಾಕ್ಷರರಿದ್ದಾರೆ. ಇದರಲ್ಲಿ ೨೨,೧೨೦ ಪುರುಷರು ಹಾಗೂ ೧೮,೩೮೪ ಮಹಿಳೆಯರಿದ್ದಾರೆ.

ಮುಂಡಗೋಡ ತಾಲೂಕಿನಲ್ಲಿ ೫೯,೬೮೨ ಒಟ್ಟು ಸಾಕ್ಷರರಿದ್ದಾರೆ. ಇದರಲ್ಲಿ ೩೬,೧೧೮ ಪುರುಷರು ಹಾಗೂ ೨೩,೫೬೪ ಮಹಿಳೆಯರಿದ್ದಾರೆ.

ಶಿರಸಿ ತಾಲೂಕಿನಲ್ಲಿ ೯೬,೦೮೮ ಒಟ್ಟು ಸಾಕ್ಷರರಿದ್ದಾರೆ. ಇದರಲ್ಲಿ ೫೦,೭೯೮ ಪುರುಷರು ಹಾಗೂ ೪೫,೨೯೦ ಮಹಿಳೆಯರಿದ್ದಾರೆ.

ಅಂಕೋಲ ತಾಲೂಕಿನಲ್ಲಿ ೭೦,೨೦೨ ಒಟ್ಟು ಸಾಕ್ಷರರಿದ್ದಾರೆ. ಇದರಲ್ಲಿ ೩೮,೧೬೭ ಪುರುಷರು ಹಾಗೂ ೩೨,೦೩೫ ಮಹಿಳೆಯರಿದ್ದಾರೆ.

ಕುಮಟಾ ತಾಲೂಕಿನಲ್ಲಿ ೯೭,೨೮೬ ಒಟ್ಟು ಸಾಕ್ಷರರಿದ್ದಾರೆ. ಇದರಲ್ಲಿ ೫೨,೨೪೦ ಪುರುಷರು ಹಾಗೂ ೪೫,೦೪೬ ಮಹಿಳೆಯರಿದ್ದಾರೆ.

ಸಿದ್ದಾಪುರ ತಾಲೂಕಿನಲ್ಲಿ ೬೩,೧೨೮ ಒಟ್ಟು ಸಾಕ್ಷರರಿದ್ದಾರೆ. ಇದರಲ್ಲಿ ೩೩,೩೯೩ ಪುರುಷರು ಹಾಗೂ ೨೯,೭೩೫ ಮಹಿಳೆಯರಿದ್ದಾರೆ.

ಹೊನ್ನಾವರ ತಾಲೂಕಿನಲ್ಲಿ ೧,೧೦,೪೪೯ ಒಟ್ಟು ಸಾಕ್ಷರರಿದ್ದಾರೆ. ಇದರಲ್ಲಿ ೫೯,೦೪೬ ಪುರುಷರು ಹಾಗೂ ೫೧,೪೦೩ ಮಹಿಳೆಯರಿದ್ದಾರೆ.

ಭಟ್ಕಳ ತಾಲೂಕಿನಲ್ಲಿ ೯೩,೪೬೯ ಒಟ್ಟು ಸಾಕ್ಷರರಿದ್ದಾರೆ. ಇದರಲ್ಲಿ ೪೯,೮೬೯ ಪುರುಷರು ಹಾಗೂ ೪೩,೬೦೦ ಮಹಿಳೆಯರಿದ್ದಾರೆ.


ಕೋಷ್ಟಕ ೨.೧೦. ರಾಜ್ಯ ಹಾಗೂ ಉತ್ತರಕನ್ನಡ ಜಿಲ್ಲೆಯ ಒಟ್ಟು ಕಸುಬುದಾರರು

ಕ್ರಸಂ	ರಾಜ್ಯ			ಜಿಲ್ಲೆ	
೧	ಒಟ್ಟು	೨,೭೮,೭೨,೫೯೭	೪೫.೬೨%	೬,೦೮,೫೨೬	೪೨.೩೪%
೨	ಗಂಡು	೧,೮೨,೭೦,೧೧೬	೫೯%	೪,೩೦,೫೬೫	೫೯.೨೯%
೩	ಹೆಣ್ಣು	೯೬,೦೨,೪೮೧	೩೧.೮೭%	೧,೭೭,೯೬೧	೨೫.೦೩ %

ಆಧಾರ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

೨೦೧೧ರ ಜನಗಣತಿ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಮುಖ್ಯ ಕಸುಬುದಾರರು ಹಾಗೂ ಕೂಲಿ ಕಾರ್ಮಿಕರೆಲ್ಲಾ ಸೇರಿ ಒಟ್ಟು ೨,೭೮,೭೨,೫೯೭ ಜನರಿದ್ದಾರೆ ಇದರಲ್ಲಿ ೧,೮೨,೭೦,೧೧೬ ಪುರುಷರು ಹಾಗೂ ೯೬,೦೨,೪೮೧ ಮಹಿಳೆಯರಿದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಮುಖ್ಯ ಕಸುಬುದಾರರು ಹಾಗೂ ಕೂಲಿ ಕಾರ್ಮಿರು ಒಟ್ಟು ೬,೦೮,೫೨೬ ಜನರಿದ್ದಾರೆ ಇದರಲ್ಲಿ ೪,೩೦,೫೬೫ ಪುರುಷರು ಹಾಗೂ ೧,೭೭,೯೬೧ ಮಹಿಳೆಯರಿದ್ದಾರೆ.


ವೃತ್ತಚಿತ್ರ ೨.೨. ರಾಜ್ಯದ ಒಟ್ಟು ಕಸುಬುದಾರರ ಪ್ರಮಾಣ



ಶೇಕಡವಾರುಗಳಲ್ಲಿ ಹೇಳುವುದಾದರೆ ರಾಜ್ಯದಲ್ಲಿ ಇರುವ ಒಟ್ಟು ಕೆಲಸಗಾರರ ಪ್ರಮಾಣವು ಶೇಕಡ ೪೫.೬೨ ಇದೆ. ಇದು ಉತ್ತರಕನ್ನಡದಲ್ಲಿ ಶೇಕಡ ೪೨.೩೪ ಇದೆ. ರಾಜ್ಯದ ಒಟ್ಟು ಕೆಲಸಗಾರರಿಗೆ ಹೋಲಿಸಿದರೆ ಉತ್ತರಕನ್ನಡದ ಸರಾಸರಿ ಕೆಲಸಗಾರರ ಪ್ರಮಾಣವು ಶೇಕಡ ೩.೨೮ರಷ್ಟು ಕಡಿಮೆ ಇದೆ. ಪುರುಷ ಕೆಲಸಗಾರರು ರಾಜ್ಯದಲ್ಲಿ ಶೇಕಡ ೫೯ ರಷ್ಟಿದ್ದಾರೆ.


೨.೧೧. ಉತ್ತರಕನ್ನಡ ಜಿಲ್ಲೆಯ ಒಟ್ಟು ಕಸುಬುದಾರರ ಪ್ರಮಾಣ

ವೃತ್ತಚಿತ್ರ ೨.೩.



ಜಿಲ್ಲೆಯಲ್ಲಿ ಶೇಕಡ ೫೯.೨೯ ರಷ್ಟಿದ್ದಾರೆ. ಮಹಿಳಾ ಕೆಲಸಗಾರರು ರಾಜ್ಯದಲ್ಲಿ ಶೇಕಡ ೩೧.೮೭ ರಷ್ಟಿದ್ದಾರೆ. ಜಿಲ್ಲೆಯಲ್ಲಿ ಶೇಕಡ ೨೫.೦೩ರಷ್ಟಿದ್ದಾರೆ. ರಾಜ್ಯದ ಒಟ್ಟು ಪುರುಷ





ಕೆಲಸಗಾರರ ಪ್ರಮಾಣಕ್ಕೆ ಹೋಲಿಸಿದರೆ ಶೇಕಡ ೦.೨೯ರಷ್ಟು ಉತ್ತರಕನ್ನಡದಲ್ಲಿ ಹೆಚ್ಚಿದೆ. ರಾಜ್ಯದ ಸರಾಸರಿ ಮಹಿಳೆಯರ ಪ್ರಮಾಣಕ್ಕಿಂತ ಜಿಲ್ಲೆಯ ಸರಾಸರಿ ಮಹಿಳಾ ಕೆಲಸಗಾರರ ಪ್ರಮಾಣವು ಶೇಕಡ ೬.೮೪ರಷ್ಟು ಕಡಿಮೆ ಇದೆ.


ಕೋಷ್ಟಕ ೨.೧೧. ಮುಖ್ಯ ಕಸುಬುದಾರರು

ಕ್ರಸಂ	ರಾಜ್ಯ			ಜಿಲ್ಲೆ	
೧	ಒಟ್ಟು	೨,೩೩,೯೭,೧೮೧	೩೮.೩%	೪,೯೮,೩೦೪	೩೪.೬೭%
೨	ಗಂಡು	೧,೬೩,೪೯,೮೩೭	೫೨.೮%	೩,೮೦,೭೪೫	೫೨.೪೩%
೩	ಹೆಣ್ಣು	೭೦,೪೭,೩೪೪	೨೩.೩೯%	೧,೧೭,೫೫೯	೧೬.೫೪ %

ಆಧಾರ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

೨೦೧೧ರ ಜನಗಣತಿ ಪ್ರಕಾರ ರಾಜ್ಯದ ಮುಖ್ಯ ಕಸುಬುದಾರರು ಒಟ್ಟು ೨,೩೩,೯೭,೧೮೧ ಜನರಿದ್ದಾರೆ. ಇದರಲ್ಲಿ ೧,೬೩,೪೯,೮೩೭ ಪುರುಷರು ಹಾಗೂ ೭೦,೪೭,೩೪೪ ಮಹಿಳೆಯರಿದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿರುವ ಮುಖ್ಯ ಕಸುಬುದಾರರು ಒಟ್ಟು ೪,೯೮,೩೦೪, ಇದರಲ್ಲಿ ೩,೮೦,೭೪೫ ಪುರುಷರು ಹಾಗೂ ೧,೧೭,೫೫೯ ಮಹಿಳೆಯರಿದ್ದಾರೆ.


ವೃತ್ತಚಿತ್ರ ೨.೪. ರಾಜ್ಯದ ಮುಖ್ಯ ಕಸುಬುದಾರರ ಪ್ರಮಾಣ



ರಾಜ್ಯದಲ್ಲಿ ಇರುವ ಒಟ್ಟು ಮುಖ್ಯ ಕಸಬುದಾರರ ಪ್ರಮಾಣವು ಶೇಕಡ ೩೮.೩ ಇದೆ. ಇದು ಉತ್ತರಕನ್ನಡದಲ್ಲಿ ಶೇಕಡ ೩೪.೬೭ ಇದೆ. ರಾಜ್ಯದ ಒಟ್ಟು ಕೆಲಸಗಾರರಿಗೆ ಹೋಲಿಸಿದರೆ ಉತ್ತರಕನ್ನಡದ ಸರಾಸರಿ ಕೆಲಸಗಾರರ ಪ್ರಮಾಣವು ಶೇಕಡ ೩.೬೩ ರಷ್ಟು ಕಡಿಮೆ ಇದೆ. ಪುರುಷ ಕೆಲಸಗಾರರು ರಾಜ್ಯದಲ್ಲಿ ಶೇಕಡ ೫೨.೮ ರಷ್ಟಿದ್ದಾರೆ.

ಜಿಲ್ಲೆಯಲ್ಲಿ ಶೇಕಡ ೫೨.೪೩ ರಷ್ಟಿದ್ದಾರೆ. ಮಹಿಳಾ ಕೆಲಸಗಾರರು ರಾಜ್ಯದಲ್ಲಿ ಶೇಕಡ ೨೩.೩೯ ರಷ್ಟಿದ್ದಾರೆ. ಜಿಲ್ಲೆಯಲ್ಲಿ ಶೇಕಡ ೧೬.೫೪ ರಷ್ಟಿದ್ದಾರೆ. ರಾಜ್ಯದ ಒಟ್ಟು ಪುರುಷ ಕೆಲಸಗಾರರ ಪ್ರಮಾಣಕ್ಕೆ ಹೋಲಿಸಿದರೆ ಶೇಕಡ ೦.೩೭ ರಷ್ಟು

ವೃತ್ತಚಿತ್ರ ೨.೫. ಉತ್ತರಕನ್ನಡ ಜಿಲ್ಲೆಯ ಮುಖ್ಯಕಸುಬುದಾರರ ಪ್ರಮಾಣ



ಉತ್ತರಕನ್ನಡದಲ್ಲಿ ಹೆಚ್ಚಿದೆ. ರಾಜ್ಯದ ಸರಾಸರಿ ಮಹಿಳೆಯರ ಪ್ರಮಾಣಕ್ಕಿಂತ ಜಿಲ್ಲೆಯ ಸರಾಸರಿ ಮಹಿಳಾ ಕೆಲಸಗಾರರ ಪ್ರಮಾಣವು ಶೇಕಡ ೬.೮೪ರಷ್ಟು ಕಡಿಮೆ ಇದೆ.


ಕೋಷ್ಟಕ ೨.೧೨. ಕೂಲಿ ಕಾರ್ಮಿಕರು

ಕ್ರಸಂ	ರಾಜ್ಯ			ಜಿಲ್ಲೆ	
೧	ಒಟ್ಟು	೪೪,೭೫,೪೧೬	೭.೩೩%	೧,೧೦,೨೨೨	೭.೬೭%
೨	ಗಂಡು	೧೯,೨೦,೨೭೯	೬.೨%	೪೯,೮೨೦	೬.೮೬%
೩	ಹೆಣ್ಣು	೨೫,೫೫,೧೩೭	೮.೪೮%	೬೦,೪೦೨	೮.೫೦%

ಆಧಾರ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

೨೦೧೧ರ ಜನಗಣತಿ ಪ್ರಕಾರ ರಾಜ್ಯದ ಕೂಲಿಕಾರ್ಮಿಕರು ಒಟ್ಟು ೪೪,೭೫,೪೧೬ ಜನರಿದ್ದಾರೆ. ಇದರಲ್ಲಿ ೧೯,೨೦,೨೭೯ ಪುರುಷರು ಹಾಗೂ ೨೫,೫೫,೧೩೭ ಮಹಿಳೆಯರಿದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿರುವ ಕೂಲಿಕಾರ್ಮಿಕರು ಒಟ್ಟು ೧,೧೦,೨೨೨, ಇದರಲ್ಲಿ ೪೯,೮೨೦ ಪುರುಷರು ಹಾಗೂ ೬೦,೪೦೨ ಮಹಿಳೆಯರಿದ್ದಾರೆ.


ವೃತ್ತಚಿತ್ರ ೨.೬. ರಾಜ್ಯದಲ್ಲಿರುವ ಕೂಲಿಕಾರರ ಪ್ರಮಾಣ



ರಾಜ್ಯದಲ್ಲಿ ಇರುವ ಒಟ್ಟು ಕೂಲಿಕಾರರ ಪ್ರಮಾಣವು ಶೇಕಡ ೭.೩೩ ಇದೆ. ಇದರಲ್ಲಿ ಪುರುಷರು ಶೇಕಡ ೬.೨, ಮಹಿಳೆಯರು ಶೇಕಡ ೮.೪೮ ಜನರಿದ್ದಾರೆ. ರಾಜ್ಯದ ಒಟ್ಟು ಕೂಲಿಕಾರ್ಮಿಕರಲ್ಲಿ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಪ್ರಮಾಣ ಅಧಿಕವಾಗಿದೆ.

ಇದು ಉತ್ತರಕನ್ನಡದಲ್ಲಿ ಶೇಕಡ ೭.೬೭ ಇದೆ. ಇದರಲ್ಲಿ ಪುರುಷ ಕೂಲಿಕಾರರ ಪ್ರಮಾಣ ಶೇಕಡ ೬.೮೬, ಮಹಿಳಾ ಕೂಲಿಕಾರರು ಶೇಕಡ ೮.೫೦ ರಷ್ಟಿದ್ದಾರೆ. ಜಿಲ್ಲೆಯಲ್ಲಿಯೂ ಪುರುಷರಿಗಿಂತ ಮಹಿಳಾ ಕೂಲಿಕಾರರ ಪ್ರಮಾಣವೇ ಹೆಚ್ಚಾಗಿದೆ.

ವೃತ್ತಚಿತ್ರ ೨.೭. ಉತ್ತರಕನ್ನಡ ಜಿಲ್ಲೆಯ ಕೂಲಿಕಾರರ ಪ್ರಮಾಣ








ಕೋಷ್ಟಕ ೨.೧೩. ಕೃಷಿಕರು

ಕ್ರಸಂ	ರಾಜ್ಯ			ಜಿಲ್ಲೆ	
೧	ಒಟ್ಟು	೬೫,೮೦,೬೪೯	೨೩.೬೧%	೧,೧೧,೫೮೧	೧೮.೩೪
೨	ಗಂಡು	೪೭,೫೩,೭೦೮	೨೬.೦೨%	೮೦,೮೯೧	೧೮.೭೯
೩	ಹೆಣ್ಣು	೧೮,೨೬,೯೪೧	೧೯.೦೩ %	೩೦,೬೯೦	೧೭.೨೫

ಆಧಾರ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

ಕರ್ನಾಟಕವು ವೈವಿಧ್ಯವಾದ ಪರಿಸರವನ್ನು ಹೊಂದಿದ ನಾಡು. ಒಂದು ಕಡೆ ಹೆಚ್ಚು ಉಷ್ಣದಿಂದ ಕೂಡಿದ ಬಯಲು ಸೀಮೆ, ಮತ್ತೊಂದು ಕಡೆ ಪಶ್ಚಿಮ ಘಟ್ಟಗಳಿಂದ ಕೂಡಿದ ಮಳೆಕಾಡಿನ ಪ್ರದೇಶ, ಮಗುದೊಂದು ಕಡೆ ಸಮುದ್ರದ ಅಂಚಿನ ಉದ್ದಕ್ಕೂ ಇರುವ ಕರಾವಳಿ ಪ್ರದೇಶ ಹೀಗೆ ನಾನಾ ವಾತಾವರಣ, ಮೇಲ್ಮೈ ಮಣ್ಣುಗಳಿಂದ ಕೂಡಿದೆ. ಆಯಾ ಪರಿಸರಕ್ಕೆ ಹೊಂದುವಂತೆ ವಿವಿಧ ರೀತಿಯ ಬೆಳೆಯನ್ನು ಕೃಷಿಕರು ಬೆಳೆಯುತ್ತಾರೆ. ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿರುವ ಒಟ್ಟು ಕೃಷಿಕರು ೬೫,೮೦,೬೪೯ ಇದರಲ್ಲಿ ಪುರುಷರು ೪೭,೫೩,೭೦೮ ಹಾಗೂ ೧೮,೨೬,೯೪೧ ಮಹಿಳೆಯರಿದ್ದಾರೆ. ಉತ್ತರಕನ್ನಡದಲ್ಲಿರುವ ಒಟ್ಟು ಕೃಷಿಕರು ೧,೧೧,೫೮೧ ಇದರಲ್ಲಿ ಪುರುಷರು ೮೦,೮೯೧, ಹಾಗೂ ೩೦,೬೯೦ ಮಹಿಳೆಯರಿದ್ದಾರೆ.

ಲಂಬಚಿತ್ರ: ೨.೪. ರಾಜ್ಯ ಹಾಗೂ ಜಿಲ್ಲಾ ಕೃಷಿಕರ ಪ್ರಮಾಣ





ಶೇಕಡವಾರುಗಳಲ್ಲಿ ಹೇಳುವುದಾದರೆ ರಾಜ್ಯದಲ್ಲಿರುವ ಒಟ್ಟು ಕೃಷಿಕರು ಶೇಕಡ ೨೩.೬೧ರಷ್ಟು, ಇದರಲ್ಲಿ ಪುರುಷರು ೨೬.೦೨ರಷ್ಟಿದ್ದರೆ ಮಹಿಳಾ ಕೃಷಿಕರು ಶೇಕಡ ೧೯.೦೩ರಷ್ಟಿದ್ದಾರೆ. ಉತ್ತರಕನ್ನಡದಲ್ಲಿರುವ ಒಟ್ಟು ಕೃಷಿಕರ ಪ್ರಮಾಣವು ಶೇಕಡ ೧೮.೩೪. ಇದರಲ್ಲಿ ಪುರುಷರು ಶೇಕಡ ೧೮.೭೯ ಹಾಗೂ ಮಹಿಳೆಯರು ಶೇಕಡ ೧೭.೨೫ರಷ್ಟಿದ್ದಾರೆ.

ಕೋಷ್ಟಕ ೨.೧೪. ಕೃಷಿ ಕೂಲಿಗಳು


ಕ್ರಸಂ	ರಾಜ್ಯ			ಜಿಲ್ಲೆ	
೧	ಒಟ್ಟು	೭೧,೫೫,೯೬೩	೨೫.೬೭%	೧,೧೬,೩೩೬	೧೯.೧೨%
೨	ಗಂಡು	೩೨,೮೩,೨೭೯	೧೭.೯೭%	೬೧,೩೦೨	೧೪.೨೪%
೩	ಹೆಣ್ಣು	೩೮,೭೨,೬೮೪	೪೦.೩೩%	೫೫,೦೩೪	೩೦.೯೨ %

ಆಧಾರ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿರುವ ಒಟ್ಟು ಕೃಷಿ ಕೂಲಿಕಾರರು ೭೧,೫೫,೯೬೩ ಇದರಲ್ಲಿ ಪುರುಷರು ೩೨,೮೩,೨೭೯ ಹಾಗೂ ೩೮,೭೨,೬೮೪ ಮಹಿಳೆಯರಿದ್ದಾರೆ. ಉತ್ತರಕನ್ನಡದಲ್ಲಿರುವ ಒಟ್ಟು ಕೃಷಿ ಕೂಲಿಕಾರರು ೧,೧೬,೩೩೬ ಇದರಲ್ಲಿ ಪುರುಷರು ೬೧,೩೦೨ ಹಾಗೂ ೫೫,೦೩೪ ಮಹಿಳೆಯರಿದ್ದಾರೆ.

ಶೇಕಡವಾರುಗಳಲ್ಲಿ ಹೇಳುವುದಾದರೆ ರಾಜ್ಯದಲ್ಲಿರುವ ಒಟ್ಟು ಕೃಷಿ ಕೂಲಿಕಾರರು ಶೇಕಡ ೨೫.೬೭ರಷ್ಟು. ಇದರಲ್ಲಿ ಪುರುಷರು ೧೭.೯೭ರಷ್ಟಿದ್ದರೆ ಮಹಿಳಾ ಕೃಷಿಕರು ಶೇಕಡ ೪೦.೩೩ ರಷ್ಟಿದ್ದಾರೆ. ಅಂದರೆ ರಾಜ್ಯದಲ್ಲಿರುವ ಪುರುಷ ಕೂಲಿಕಾರರಿಗಿಂತ ಶೇಕಡ ೨೨.೩೬ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರು ಕೃಷಿಯನ್ನು ಅವಲಂಭಿಸಿದ್ದಾರೆ.

ಲಂಬಚಿತ್ರ: ೨.೫. ರಾಜ್ಯ ಹಾಗೂ ಜಿಲ್ಲೆಯ ಕೃಷಿಕೂಲಿಗಳ ಪ್ರಮಾಣ



ಉತ್ತರಕನ್ನಡದಲ್ಲಿರುವ ಒಟ್ಟು ಕೃಷಿಕರ ಪ್ರಮಾಣವು ಶೇಕಡ ೧೯.೧೨, ಇದರಲ್ಲಿ ಪುರುಷರು ಶೇಕಡ ೧೪.೨೪ ಹಾಗೂ ಮಹಿಳೆಯರು ಶೇಕಡ ೩೦.೯೨ರಷ್ಟಿದ್ದಾರೆ. ಶೇಕಡ ೧೬.೬೮ರಷ್ಟು ಮಹಿಳೆಯರು ಪುರುಷ ಕೃಷಿಕೂಲಿಕಾರರಿಗಿಂತ ಹೆಚ್ಚಿನ ಪ್ರಮಾಣದಲ್ಲಿದ್ದಾರೆ.


ಕೋಷ್ಟಕ ೨.೧೫. ಗೃಹಕೃತ್ಯದಲ್ಲಿ ತೊಡಗಿದವರು

ಕ್ರಸಂ	ರಾಜ್ಯ			ಜಿಲ್ಲೆ	
೧	ಒಟ್ಟು	೯,೧೩,೨೨೭	೩.೨೮%	೯ ,೪೯೨	೧.೫೬
೨	ಗಂಡು	೪,೩೮,೯೮೩	೨.೪%	೭ ,೧೩೩	೧.೬೬
೩	ಹೆಣ್ಣು	೪,೭೪,೨೪೪	೪.೯೪%	೨ ,೩೫೯	೧.೩೩

ಆಧಾರ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ

ಗೃಹಕೃತ್ಯವನ್ನು ಕೆಲಸವೆಂದು ಪರಿಗಣಿಸುವುದಿಲ್ಲ. ಆ ಕಾರಣಕ್ಕಾಗಿಯೇ ಮನೆಯಲ್ಲಿ ಮಕ್ಕಳ ಪಾಲನೆ ಪೋಷಣೆ, ಅಡುಗೆ ಇತ್ಯಾದಿ ಮಾಡುವ ಮಹಿಳೆಯರನ್ನು ಕೆಲಸಗಾರರೆಂದೇ ಪರಿಗಣಿಸುವುದಿಲ್ಲ. ಆದರೆ ಇತ್ತೀಚೆಗೆ ಇತರೆ ಮನೆಗಳಲ್ಲಿ ಕಸ ಮುಸುರೆ, ಬಟ್ಟೆ ತೊಳೆಯುವ ಇತ್ಯಾದಿ ಕೆಲಸದಲ್ಲಿ ತೊಡಗಿದವರನ್ನು ಗೃಹಕೃತ್ಯದಲ್ಲಿ ತೊಡಗಿದ ಕೂಲಿಕಾರರೆಂದು ಪರಿಗಣಿಸಲಾಗಿದೆ. ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿರುವ ಒಟ್ಟು ಗೃಹಕೃತ್ಯದಲ್ಲಿ ತೊಡಗಿದವರು ಒಟ್ಟು ೯,೧೩೨೨೭ ಜನರಿದ್ದಾರೆಂದು ದಾಖಲಿಸಲಾಗಿದೆ. ಇದರಲ್ಲಿ ಪುರುಷರು ೪,೩೮,೯೮೩ ಹಾಗೂ ೪,೭೪,೨೪೪ ಮಹಿಳೆಯರಿದ್ದಾರೆ. ಉತ್ತರಕನ್ನಡದಲ್ಲಿರುವ ಒಟ್ಟು ಗೃಹಕೃತ್ಯದಲ್ಲಿ ತೊಡಗಿದವರು ೯,೪೯೨ ಇದರಲ್ಲಿ ಪುರುಷರು ೭,೧೩೩ ಹಾಗೂ ೨,೩೫೯ ಮಹಿಳೆಯರಿದ್ದಾರೆ.

ಲಂಬಚಿತ್ರ: ೨.೬. ರಾಜ್ಯ ಹಾಗೂ ಜಿಲ್ಲೆಯಲ್ಲಿ ಗೃಹಕೃತ್ಯದಲ್ಲಿ ತೊಡಗಿದವರು




ಶೇಕಡವಾರುಗಳಲ್ಲಿ ಹೇಳುವುದಾದರೆ ರಾಜ್ಯದಲ್ಲಿರುವ ಒಟ್ಟು ಗೃಹಕೃತ್ಯದಲ್ಲಿ ತೊಡಗಿದವರು ಶೇಕಡ ೩.೨೮ ರಷ್ಟು. ಇದರಲ್ಲಿ ಪುರುಷರು ೨.೪ರಷ್ಟಿದ್ದರೆ ಮಹಿಳೆಯರು ಶೇಕಡ ೪.೯೪ ರಷ್ಟಿದ್ದಾರೆ. ಅಂದರೆ ರಾಜ್ಯದಲ್ಲಿರುವ ಗೃಹಕೃತ್ಯದಲ್ಲಿ ತೊಡಗಿದ ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಮಹಿಳೆಯರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಪುರುಷರು ಗೃಹಕೃತ್ಯದಲ್ಲಿ ತೊಡಗಿರುವುದು ತಿಳಿದುಬರುತ್ತದೆ.

ಕೋಷ್ಟಕ ೨.೧೬. ಇತರೆ ಕೆಲಸವನ್ನು ನಿರ್ವಹಿಸುವವರು

ಕ್ರಸಂ	ರಾಜ್ಯ			ಜಿಲ್ಲೆ	
೧	ಒಟ್ಟು	೧,೩೨,೨೨,೭೫೮	೪೭.೪೪%	೩,೭೧,೧೧೭	೬೦.೯೯%
೨	ಗಂಡು	೯೭,೯೪,೧೪೬	೫೩.೬೧%	೨,೮೧,೨೩೯	೬೫.೩೨%
೩	ಹೆಣ್ಣು	೩೪,೨೮,೬೧೨	೩೫.೭೧%	೮೯,೮೭೮	೫೦.೫೦%

ಆಧಾರ: ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ


ಕೃಷಿಕೂಲಿ ಹಾಗೂ ಗೃಹಕೃತ್ಯಗಳಿಗಿಂತ ಹೊರತಾದ ಇತರೆ ಕೆಲಸಗಳನ್ನು ನಿರ್ವಹಿಸುವವರೂ ಇಲ್ಲಿದ್ದಾರೆ. ೨೦೧೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಇತರೆ ಕೆಲಸದಲ್ಲಿ ತೊಡಗಿದವರು ಒಟ್ಟು ೧,೩೨,೨೨,೭೫೮ ಜನರಿದ್ದಾರೆ. ಇದರಲ್ಲಿ ಪುರುಷರು ೯೭,೯೪,೧೪೬ ಹಾಗೂ ೩೪,೨೮,೬೧೨ ಮಹಿಳೆಯರಿದ್ದಾರೆ. ಉತ್ತರಕನ್ನಡದಲ್ಲಿರುವ ಒಟ್ಟು ಇತರೆ ಕೆಲಸ



ನಿರ್ವಹಿಸುತ್ತಿರುವವರು ಒಟ್ಟು ೩,೭೧,೧೧೭, ಇದರಲ್ಲಿ ಪುರುಷರು ೨,೮೧,೨೩೯ ಹಾಗೂ ೮೯,೮೭೮ ಮಹಿಳೆಯರಿದ್ದಾರೆ.

೨.೧೨. ರಾಜ್ಯ ಹಾಗೂ ಜಿಲ್ಲೆಯ ಇತರೆ ಕಾರ್ಯಗಳಲ್ಲಿ ತೊಡಗಿದವರ ಪ್ರಮಾಣ

ಲಂಬಚಿತ್ರ: ೨.೭.



ಶೇಕಡವಾರುಗಳಲ್ಲಿ ಹೇಳುವುದಾದರೆ ರಾಜ್ಯದಲ್ಲಿರುವ ಒಟ್ಟು ಇತರೆ ಕೆಲಸದಲ್ಲಿ ತೊಡಗಿದವರು ಶೇಕಡ ೪೭.೪೪ರಷ್ಟು. ಇದರಲ್ಲಿ ಪುರುಷರು ೫೩.೬೧ರಷ್ಟಿದ್ದರೆ ಮಹಿಳೆಯರು ಶೇಕಡ ೩೫.೭೧ ರಷ್ಟಿದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಇತರೆ ಕೆಲಸದಲ್ಲಿ ತೊಡಗಿದವರು ಶೇಕಡ ೬೦.೯೯ರಷ್ಟು. ಇದರಲ್ಲಿ ಪುರುಷರು ೬೫.೩೨ರಷ್ಟಿದ್ದರೆ ಮಹಿಳೆಯರು ಶೇಕಡ ೫೦.೫೦ ರಷ್ಟಿದ್ದಾರೆ. ರಾಜ್ಯದಲ್ಲಿ ಇತರೆ ಕೆಲಸದಲ್ಲಿ ತೊಡಗಿದ ಪುರುಷರಿಗಿಂತ ಮಹಿಳೆಯರು ಕಡಿಮೆ ಪ್ರಮಾಣದಲ್ಲಿದ್ದಾರೆ. ಉತ್ತರಕನ್ನಡ ಜಿಲ್ಲೆಯಲ್ಲಿಯೂ ಇತರೆ ಕೆಲಸದಲ್ಲಿ ತೊಡಗಿದ ಪುರುಷರಿಗಿಂತ ಮಹಿಳೆಯರ ಪ್ರಮಾಣ ಕಡಿಮೆ ಇರುವುದು ಕಂಡುಬರುತ್ತದೆ.

ಡಾ. ಹಿ.ಚಿ. ಬೋರಲಿಂಗಯ್ಯ ಅವರು ಕುಣಬಿಯರು ಎಂಬ ಕೃತಿಯಲ್ಲಿ ಉತ್ತರಕನ್ನಡ ಒಂದು ಟಿಪ್ಪಣಿ ಅಧ್ಯಯನದಲ್ಲಿ ಉತ್ತರಕನ್ನಡದ ಭೌಗೋಳಿಕ ಮತ್ತು ನೈಸರ್ಗಿಕ ಸಂಪತ್ತಿನ ವಿವರಗಳನ್ನು ಉಲ್ಲೇಖಿಸುತ್ತಾರೆ. ಇದು ಕರ್ನಾಟಕ ಪರಿಸರ ಪರಿಸ್ಥಿತಿ ಅಧ್ಯಯನ ವರದಿಯಲ್ಲಿನ ವಿವರಣೆಯಾಗಿದೆ. ಅದು ಈ ಕೆಳಗಿನಂತಿದೆ.

"ಕರ್ನಾಟಕದ ಉತ್ತರದ ತುತ್ತತುದಿಯ ಕರಾವಳಿ ಜಿಲ್ಲೆಯಾದ ಉತ್ತರಕನ್ನಡ, ಗೋವಾದ ದಕ್ಷಿಣಕ್ಕೆ, ಧಾರವಾಡದ ಪೂರ್ವಕ್ಕೆ ಹಾಗೂ ದಕ್ಷಿಣಕನ್ನಡದ ಉತ್ತರಕ್ಕೆ, ಉತ್ತರ ಅಕ್ಷಾಂಶ



೧೩".೫೫' ಮತ್ತು ೧೫".೩೧' ಹಾಗೂ ಪೂರ್ವರೇಖಾಂಶ ೭೪".೦೯' ಮತ್ತು ೭೫".೧೦ರ ನಡುವೆ ಇದೆ". ನವಿರಾಗಿ ಏರಿಳಿಯುವ ಈ ಪ್ರಾಂತದ ಗುಡ್ಡಗಳು ಪೂರ್ವಕ್ಕೆ ೫೦೦ ಮೀಟರ್ ಎತ್ತರದ ದಕ್ಷಿಣ ಪ್ರಸ್ಥಭೂಮಿಯೊಂದಿಗೆ ವಿಲೀನವಾಗುತ್ತವೆ. ಗುಡ್ಡಗಾಡುಗಳ ಶೃಂಗಭಾಗ ೫೦೦ ಮೀಟರ್‌ಗಿಂತ ಎತ್ತರಕ್ಕೇರುತ್ತವೆ. ಗುಡ್ಡಗಳು ಸಮುದ್ರದ ವರೆಗೂ ಚಾಚಿಕೊಂಡಿದ್ದು, ಕರಾವಳಿಯ ಬಳಿ ಚಿಕ್ಕ ಪಟ್ಟಿಯೊಂದಕ್ಕೆ ಮಾತ್ರ ಅವಕಾಶವಿತ್ತಿವೆ. ಒಟ್ಟು ೧೧ ತಾಲೂಕುಗಳು ಹಾಗೂ ೧೩,೦೩೮ ಹಳ್ಳಿಗಳಿರುವ ಈ ಜಿಲ್ಲೆಯ ವಿಸ್ತೀರ್ಣ ೧೦,೨೭೦ ಚದರ ಕಿಲೋಮೀಟರ್‌ಗಳಷ್ಟಿದೆ. ಭೌಗೋಳಿಕವಾಗಿ ಈ ಜಿಲ್ಲೆಗೆ ಮೂರು ವಲಯಗಳಿವೆ; ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ ತಾಲೂಕುಗಳ ಕರಾವಳಿ ವಲಯ ಸೂಫಾ, ಯಲ್ಲಾಪುರ, ಶಿರಸಿ ಹಾಗೂ ಸಿದ್ಧಾಪುರ ತಾಲೂಕುಗಳ ಶೃಂಗ ವಲಯ ಹಾಗೂ ಹಳಿಯಾಳ ಮತ್ತು ಮುಂಡಗೋಡ ತಾಲೂಕುಗಳ ಮೈದಾನ ವಲಯ.

೩೩೦೦ ಚದರ ಕಿಲೋಮೀಟರ್ ವಿಸ್ತೀರ್ಣದ ಕರಾವಳಿ ಪಟ್ಟಿಯಲ್ಲಿ ವರ್ಷಕ್ಕೆ ೩೫೦ ಸೆಂಟಿಮೀಟರ್ ಮಳೆ ಬೀಳುತ್ತದೆ. ಈ ಪಟ್ಟಿಯ ಶೇ. ೭೬% ರಷ್ಟು ಭೂಭಾಗ ಅರಣ್ಯ ಇಲಾಖೆಯ ವಶದಲ್ಲಿದೆ. ಶೇ. ೨.೮೪ರಷ್ಟು ನೀರಾವರಿ ಕ್ಷೇತ್ರವಿರುವ ಇಲ್ಲಿ ಶೇ. ೧೨.೩ರಷ್ಟು ಭೂಮಿಯನ್ನು ಸಾಗುವಳಿ ಮಾಡಲಾಗುತ್ತದೆ. ಭತ್ತ, ತೆಂಗು ಮತ್ತು ಶೇಂಗಾ ಇಲ್ಲಿಯ ಮುಖ್ಯ ಬೆಳೆಯಾಗಿದ್ದು ಇಲ್ಲಿ ೧.೮ ಲಕ್ಷ ದನಕರುಗಳೇ ಪ್ರಮುಖ ಸಾಕು ಪ್ರಾಣಿಗಳು. ಮೀನುಗಾರಿಕೆ ಸಮೃದ್ಧವಾಗಿವೆ. ಕಾರವಾರ ಮುಖ್ಯಪಟ್ಟಣವಾಗಿರುವ ಈ ಕರಾವಳಿ ಪಟ್ಟಿಯೇ ಜಿಲ್ಲೆಯ ಅತ್ಯಂತ ಹೆಚ್ಚಿನ ಜನಸಾಂದ್ರತೆ(ಪ್ರತಿ ಚದರ ಕಿ.ಮೀ.ಗೆ ೧೭೧) ಇರುವ ಪ್ರದೇಶವಾಗಿದೆ. ಕಾರವಾರದ ಬಳಿ ಒಂದು ಕಾಸ್ಟಿಕ್ ಸೋಡಾ ಫ್ಯಾಕ್ಟರಿ ಹಾಗೂ ಕರಾವಳಿ ತೀರದುದ್ದಕ್ಕೂ ಅನೇಕ ಇಟ್ಟಿಗೆ ಮತ್ತು ಹೆಂಚಿನ ಕಾರ್ಖಾನೆಗಳಿವೆ. ಅಲ್ಲಲ್ಲಿ ಸಿಂಪಿ, ಮೀನು-ಶಿಗಡಿಗಳನ್ನು ಡಬ್ಬಿ ತುಂಬುವ ಹಾಗೂ ದೈತ್ಯ ಶೇಖರಣೆ ಮಾಡುವ ಫ್ಯಾಕ್ಟರಿಗಳೂ ಇವೆ. ಕರಾವಳಿ ಪಟ್ಟಿಯಿಂದ ಸುಶಿಕ್ಷಿತರು ಭಾರೀ ಪ್ರಮಾಣದಲ್ಲಿ ನಗರಗಳಿಗೆ ವಲಸೆ ಹೋಗುತ್ತಿದ್ದು, ವರ್ಷದ ಕೆಲವು ಕಾಲದಲ್ಲಿ ಕೂಲಿಕಾರರು ಘಟ್ಟದ ಮೇಲೆ ರೈತಾಪಿ ಕೆಲಸಕ್ಕೆಂದು ತಾತ್ಕಾಲಿಕವಾಗಿ ವಲಸೆ ಬರುತ್ತಾರೆ.

ಕರ್ನಾಟಕದ ಸುಂದರ ಜಿಲ್ಲೆಗಳಲ್ಲಿ ಒಂದಾದ ಉತ್ತರಕನ್ನಡ ಕಡಲು ಮತ್ತು ಕಾಡುಗಳ ಸಂಗಮ ಸ್ಥಾನ, ಅತಿ ಎತ್ತರದ ಬೆಟ್ಟ ಪ್ರದೇಶ, ನಾನಾ ವಿಧವಾದ ಸಸ್ಯಸಂಕುಲ, ಪ್ರಾಣಿ, ಪಕ್ಷಿಗಳು, ಹತ್ತಾರು ನದಿಗಳು ಮುಂತಾಗಿ ಪ್ರಕೃತಿಯ ಎಲ್ಲ ಸೊಬಗನ್ನು ಮೈಗೂಡಿಸಿಕೊಂಡ ವಿಶಿಷ್ಟ ಸ್ಥಾನ ಇದು. ಇಂಥ ಸೊಬಗಿನ ಈ ರಮ್ಯ ತಾಣದಲ್ಲಿ ವಾಸವಾಗಿರುವ ವಿವಿಧ ಜನವರ್ಗಗಳ ಸಂಸ್ಕೃತಿ ಸೊಗಡು ಕೂಡ ಅಷ್ಟೇ ವೈಶಿಷ್ಟ್ಯಪೂರ್ಣವಾದದು.

'ಘಟ್ಟದ ಮೇಲಿನ ಶಿರಸಿ, ಯಲ್ಲಾಪುರ, ದಾಂಡೇಲಿ, ಹಳಿಯಾಳ ಮತ್ತು ಖಾನಾಪೂರಗಳ ಜೀವನ ವಿಧಾನಕ್ಕೂ ಘಟ್ಟದ ಕೆಳಗಿನ ಸಮುದ್ರದಂಚಿನ ಕಾರವಾರ, ಅಂಕೋಲಾ, ಕುಮಟಾ, ಗೋಕರ್ಣ, ಹೊನ್ನಾವರಗಳ ಜೀವನ ವಿಧಾನಕ್ಕೂ ಅಷ್ಟೇ ವ್ಯತ್ಯಾಸ. ತುಂಬಿ ಹರಿಯುವ ಕಾಳಿ, ಗಂಗೊಳ್ಳಿ, ಅಘನಾಶಿನಿ, ಬೇಡ್ತಿ, ಶರಾವತಿಯ ಒಂದೊಂದು ದಂಡೆಯು ಒಂದೊಂದಕ್ಕೂ ವಿಶೇಷ. ಈ ನದಿಗಳು ಸಂಗಮಿಸುವ ಸಮುದ್ರ ರೇವುಗಳ ವ್ಯಾಪಾರ ವ್ಯವಹಾರಗಳನ್ನು ಹೊತ್ತು ಮೆರೆಯುವ ತಾಣಗಳು. ಇಂಥ ವೈವಿಧ್ಯದ ಉತ್ತರಕನ್ನಡದಲ್ಲಿ ಅದರ ಪ್ರಕೃತಿಯ ವಿಶೇಷತೆಯಂತೆಯೇ ಅದರೊಡಲಿನ ವಿವಿಧ ಜನವರ್ಗಗಳ ಸಂಸ್ಕೃತಿಗಳೂ ಅಷ್ಟೇ ಭಿನ್ನವಾಗಿ ಕಾಣಿಸಿಕೊಳ್ಳುತ್ತವೆ. ಕಾಡನ್ನೇ ಅವಲಂಬಿಸಿದ ಸಿದ್ದಿಯರು, ಗೌಳಿಗರು, ಕುಡುಬಿಯರು, ಕಾಡು ಮತ್ತು ನಾಡಿನ ಸಂಬಂಧ ಇಟ್ಟುಕೊಂಡು ತೋಟ ತುಡಿಕೆಗಳಿಗೆ ಒಲಿದ ಹವ್ಯಕರು, ಹಸಲರು, ಕಾಡಿನ ನಡುವೆ ಕೃಷಿಯನ್ನೇ ಆಧಾರ ಮಾಡಿಕೊಂಡ ಗೊಂಡರು, ನದಿ ದಂಡೆಯ ಫಲವತ್ತು ನೆಲ ಹಿಡಿದು ಮಣ್ಣಿನ ಮಕ್ಕಳಾದ ನಾಡವರು, ನಾಮಧಾರಿಗಳು, ಭೂಮಿಯ ಅಭಾವದಿಂದಾಗಿ ಅತ್ತ ಸಂಪೂರ್ಣ ಕೃಷಿಯು ಅಲ್ಲದೆ, ಇತ್ತ ಕಾಡಿನ ಉತ್ಪನ್ನವೂ ಇಲ್ಲದೆ ಕಾಡು ಮತ್ತು ನಾಡಿನ ನಡುವೆ ಇನ್ನೂ ಹೋರಾಟದ ಬದುಕು ನಡೆಸುತ್ತಿರುವ ಬಹುಸಂಖ್ಯಾತರಾದ ಹಾಲಕ್ಕಿ ಒಕ್ಕಲಿಗರು, ಮಣ್ಣು ಮತ್ತು ಹೊನ್ನಿನ ಭಾಗ್ಯವೇ ಇಲ್ಲದ ಮುಕ್ರಿಯರು ಈ ಜಿಲ್ಲೆಯ ಮುಖ್ಯ ಜನವರ್ಗಗಳು ಇವೆ.'

ಇವರಲ್ಲದೆ ಗಾಮೊಕ್ಕಲಿಗರು, ಕೊಟ್ಟೆಒಕ್ಕಲಿಗರು, ಕರೆ ಒಕ್ಕಲಿಗರು, ಕೊಮಾರ ಪಂತರು, ಗುಡಿಗಾರರು, ಗಾಣಿಗರು, ಸಾರಸ್ವತರು ನವಾಯತರು ಮುಂತಾದ ಅನೇಕ ಜನವರ್ಗಗಳು ಈ ಜಿಲ್ಲೆಯಲ್ಲಿವೆ. ಸಮುದ್ರವನ್ನು ನಂಬಿ ಬದುಕುವ ಬೆಸ್ತರ ವಿವಿಧ ಪಂಗಡಗಳ ಜನರೂ ಬಹುಸಂಖ್ಯೆಯಲ್ಲಿದ್ದಾರೆ.

ರಾಷ್ಟ್ರೀಯ ದೂರ ಸಂವೇದಿ ನಿಗಮ (೧೯೮೩, ೧೯೮೫) ಹಾಗೂ ದಿ ಫ್ರೆಂಚ್ ಇನ್‌ಸ್ಟಿಟ್ಯೂಟ್(ಬೆಲ್ಲನ್ ೧೯೮೫) ಇವರು ವಿಶ್ಲೇಷಿಸಿರುವ ದೂರ ಸಂವೇದಿ ಚಿತ್ರಣಗಳಲ್ಲಿ ಉತ್ತರ ಕನ್ನಡ ಜಿಲ್ಲೆ ಹೇಗೆ ಕಾಣುತ್ತದೆಂಬುದನ್ನು ಡಾ. ಹಿ.ಚಿ. ಬೋರಲಿಂಗಯ್ಯ ಅವರು ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನದ ವಿಶ್ಲೇಷಣೆಯ ಪ್ರಕಾರ ಒಟ್ಟು ೭೧೦೦ ಚ.ಕಿ.ಮೀ. ಪ್ರದೇಶದಲ್ಲಿ ದುಸ್ಥಿತಿಯ ವಿವಿಧ ಅವಸ್ಥೆಗಳಲ್ಲಿರುವ ಅರಣ್ಯ ಮತ್ತು ಅಡಿಕೆ ತೆಂಗುಗಳಂಥ ತೋಟದ ಬೆಳೆಗಳಿವೆ. ಇದರಲ್ಲಿ ತೋಟದ ಬೆಳೆಗಳ ೧೩೦ ಚ.ಕಿ.ಮೀ. ಪ್ರದೇಶ ಈಗಲೂ ಅರಣ್ಯ ಇಲಾಖೆಗೆ ಒಳಪಟ್ಟಿದ್ದಾಗಿದೆ. ಇದರ ಬಹಳಷ್ಟು ಭಾಗ ಕನಿಷ್ಠ ಪಕ್ಷ ಗಿಡಗಂಟಿಗಳಿಂದಾದರೂ ಆವೃತವಾಗಿದೆ. ಇದೇ ದೂರ ಸಂವೇದಿ ಚಿತ್ರಣದಲ್ಲಿ ೨೦೦ ಚ.ಕಿ.ಮೀ. ಕಲ್ಲು

ಮಣ್ಣುಗಳ ಖಾಲಿ ಪ್ರದೇಶವಾಗಿದ್ದು, ಇನ್ನುಳಿದ ೧೮೯೦ ಚ.ಕಿ.ಮೀ. ಭಾಗ ಕಂದಾಯ ಇಲಾಖೆಯ ದಾಖಲೆಗಳ ಪ್ರಕಾರ ಬೇಸಾಯ ಯೋಗ್ಯ ಬಂಜರು ಭೂಮಿ ಇಲ್ಲವೆ ನಿರುಪಯೋಗಿ ಪಾಳು ಭೂಮಿಯಾಗಿದೆ. ಡಾ. ಹಿ.ಚಿ. ಬೋರಲಿಂಗಯ್ಯ ಅವರು ಈ ವರದಿಯನ್ನು ಆಧರಿಸಿ ಉತ್ತರಕನ್ನಡದ ಭೌಗೋಳಿಕತೆಯ ಚಿತ್ರಣವನ್ನು ವಿವರಿಸುವುದರ ಜೊತೆಗೆ ಸಾಮಾಜಿಕತೆಯನ್ನು ವಿವರಿಸಿದ್ದಾರೆ.

ಕೊನೆ ಟಿಪ್ಪಣಿಗಳು

೧. ವಿಜಯಲಕ್ಷ್ಮಿ ಆರ್. ಹಾಲಕ್ಕಿ ಒಕ್ಕಲಿಗ ಮಹಿಳೆ (ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಅಧ್ಯಯನ) ಪಿ.ಹೆಚ್.ಡಿ.ಗಾಗಿ ಸಾದರಪಡಿಸಿದ ಅಪ್ರಕಟಿತ ಮಹಾಪ್ರಬಂಧ ೨೦೦೮, ಪು. ೯೯

೨. ಅದೇ, ಪು. ೧೦೧

೩. ಅದೇ, ಪು. ೧೦೨

೪. ಅದೇ, ಪು. ೧೦೪

೫. ಅದೇ, ಪು. ೧೦೫

೬. ಅದೇ, ಪು. ೧೦೫

೭. ಡಾ. ಮೊಹನ್‌ಕೃಷ್ಣ ರೈ, ಕೆನರಾದ ವಿಭಜನೆ, ಹತ್ತಿ ರಾಜಕೀಯದ ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೦, ಪು. ೨೪

೮. ಅದೇ, ಪು. ೨೬-೨೭

೯. ಅದೇ, ಪು. ೨೯

೧೦. ಅದೇ, ಪು. ೧೬

೧೧. ಡಾ. ಪ್ರೇಮಲತಾ ಬಸವರಾಜ ಹಿರೇಮಠ, ಉತ್ತರಕನ್ನಡ ಜಿಲ್ಲೆಯ ಗೌಳಿ ಸಮುದಾಯದ ಸಾಮಾಜಿಕ ಸಮಸ್ಯೆಗಳು ಮತ್ತು ಸಾಮಾಜಿಕ ಪರಿವರ್ತನೆ, ಪ್ರತಿಭಾ ಪ್ರಕಾಶನ, ಗದಗ, ೨೦೧೪, ಪು. ೨೪

೧೨. ಅದೇ, ಪು. ೨೪

೧೩. ಅದೇ, ಪು. ೨೪

೧೪. ಅದೇ, ಪು. ೨೫

೧೫. ಅದೇ, ಪು. ೨೬

೧೬. ರೆಡ್ಡಿ ಮತ್ತು ಇತರರು, ೧೯೮೬, ಪು. ೬೬

ಅಧ್ಯಾಯ ಮೂರು

ಮುಕ್ರಿಯರ ಮೂಲ ಮತ್ತು ಚಾರಿತ್ರಿಕ ಹಿನ್ನೆಲೆ

೩.೧. ಮುಕ್ರಿಯರ ಚಾರಿತ್ರಿಕ ಹಿನ್ನೆಲೆ

೩.೨. ಮುಕ್ರಿ ಪದನಿಷ್ಪತ್ತಿ

ಅಧ್ಯಾಯ ಮೂರು

ಮುಕ್ರಿಯರ ಮೂಲ ಮತ್ತು ಚಾರಿತ್ರಿಕ ಹಿನ್ನೆಲೆ

೩.೧. ಮುಕ್ರಿಯರ ಚಾರಿತ್ರಿಕ ಹಿನ್ನೆಲೆ

ಯಾವುದೇ ಸಮುದಾಯದ ಚರಿತ್ರೆಯನ್ನು ಬರೆಯುವಾಗ ಮಹಾಕಾವ್ಯಗಳು, ಪುರಾಣಗಳು, ಪ್ರಾಚೀನ ಗ್ರಂಥಗಳು ಮತ್ತು ಕಾವ್ಯಗಳು ಹಾಗೂ ಶಾಸನಗಳಲ್ಲಿ ಇರುವ ಉಲ್ಲೇಖಗಳನ್ನು ನೋಡುವುದು ಸಾಮಾನ್ಯವಾಗಿದೆ. ಅಂದರೆ ಚರಿತ್ರೆಯ ಕಟ್ಟುವಲ್ಲಿ ಲಿಖಿತ ಆಧಾರಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಾರೆ.

"ಉಪಸಂಸ್ಕೃತಿ ಮಾಲೆಯ ಪುಸ್ತಕಗಳಲ್ಲಿ ಮತ್ತು ಸಮುದಾಯ ಅಧ್ಯಯನ ಕೈಗೊಂಡ ಯಾವುದೇ ಪಿಎಚ್.ಡಿ. ಪ್ರಬಂಧದಲ್ಲಿ ಲಿಖಿತ ದಾಖಲೆಗಳನ್ನು ಮಾತ್ರ ಪ್ರಮಾಣಬದ್ಧ ಆಕರಗಳೆಂದು ನಂಬುವ ಪ್ರವೃತ್ತಿ ಕಾಣಿಸುತ್ತದೆ. ಲಿಖಿತ ಮತ್ತು ಶಿಷ್ಟ ಆಕರಗಳನ್ನು ಪ್ರಮಾಣಬದ್ಧವೆಂದು ನಂಬುವ ಮುಗ್ಧತೆಯನ್ನು ಯುರೋಪಿನ ಮಾನವಶಾಸ್ತ್ರದ ಅಧ್ಯಯನ ವಿಧಾನವು ನಮ್ಮಲ್ಲಿ ಹುಟ್ಟುಹಾಕಿದೆ. ಆಯಾ ಕಾಲಘಟ್ಟದ ಸಮಾಜದ ಚರಿತ್ರೆಯನ್ನು ಬರೆಯುವಾಗ ಲಿಖಿತ ಮತ್ತು ಶಿಷ್ಟ ಆಕರಗಳು ನಿಖರ ಮತ್ತು ನಂಬಲಾರ್ಹ ಚಿತ್ರಣ ವನ್ನು ನೀಡುತ್ತವೆ ಎಂದು ಇಂದಿಗೂ ನಂಬಲಾಗುತ್ತದೆ."[೧]

ಈ ಹಿನ್ನೆಲೆಯಿಂದ ಹೇಳುವುದಾದರೆ, ಅಧ್ಯಯನಕ್ಕೊಳಪಟ್ಟ ಸಮುದಾಯದ ಚರಿತ್ರೆಯನ್ನು ರೂಪಿಸುವಲ್ಲಿ ಮೌಖಿಕ ಆಕರಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಕೆಲವೊಮ್ಮೆ ಈ ಆಕರಗಳನ್ನು ಪರಿಗಣಿಸಿದರೂ, ಲಿಖಿತ ಆಕರಗಳ ಚರಿತ್ರೆಯೊಂದಿಗೆ ಹೋಲಿಸಿ ಪ್ರಮಾಣಬದ್ಧತೆಯನ್ನು ನಿರ್ಣಯಿಸಲಾಗುತ್ತದೆ.

ಯಾವುದೇ ಸಮುದಾಯ ಶತಶತಮಾನಗಳ ಬದುಕಿನ ದಾರಿಯಲ್ಲಿ ಪಡೆದ ಅನುಭವಗಳ ಮೂಲಕ ತನ್ನ ಒಡಲಲ್ಲಿ ಚರಿತ್ರೆಯನ್ನು ನಿರ್ಮಿಸಿಕೊಂಡು ಅದನ್ನು ಪೋಷಿಸುತ್ತಾ ಬದುಕು ಸಾಗಿಸುತ್ತದೆ. ಇಂತಹ ಚರಿತ್ರೆಯು ಮೌಖಿಕ ಆಕರಗಳಲ್ಲಿ ಅಡಗಿರುತ್ತದೆ. ಭಾರತದ ತಳ ಜಾತಿಗಳು ಮತ್ತು ಬುಡಕಟ್ಟು ಸಮುದಾಯಗಳ ಇತಿಹಾಸ ಅವುಗಳ ಮೌಖಿಕ ನಿರೂಪಣೆಗಳಲ್ಲಿ ಅಡಕವಾಗಿರುತ್ತದೆ. ಅದರಲ್ಲೂ ಅಂಥಹ ಸಮುದಾಯದ ಚರಿತ್ರೆಯು ಲಿಖಿತ ಆಕರಗಳಲ್ಲಿ ದೊರೆಯುವುದು ಕಷ್ಟಸಾಧ್ಯದ ವಿಚಾರ. ಅಲ್ಲೋ, ಇಲ್ಲೋ, ಅಲ್ಪಸ್ವಲ್ಪ ಉಲ್ಲೇಖಗಳು ಮತ್ತು ವೃತ್ತಿ ಸಂಬಂಧಿ ಉಲ್ಲೇಖಗಳು ಕ್ವಚಿತ್ತಾಗಿ ದೊರೆಯಬಹುದೇನೊ. ತಳಜಾತಿ ಸಮುದಾಯಗಳ ಚರಿತ್ರೆ ಅವುಗಳ ಮೌಖಿಕ ಆಕರಗಳಿಂದ ರೂಪಿಸುವುದೇ ಒಳಿತೇನೊ ಎಂದೇನಿಸುವುದು. ಭಾರತದ ಶೋಷಿತ ಸಮುದಾಯಗಳ ಇತಿಹಾಸವು ಅಯಾ ಸಮುದಾಯಗಳು ಕಟ್ಟಿಕೊಂಡು ಬಂದ ಐತಿಹ್ಯ, ಕುಲಸಂಬಂಧಿ ಪುರಾಣ, ಮೌಖಿಕ ಕಥೆಗಳಲ್ಲಿ ಅಡಕವಾಗಿರುವ ಸಾಧ್ಯತೆಯೇ ಹೆಚ್ಚು. ಇದಕ್ಕೆ ಮುಕ್ರಿ ಸಮುದಾಯವು ಹೊರತಾಗಿಲ್ಲ. ಹೀಗಾಗಿಯೇ ಅವರ ಮೂಲ ಹಾಗೂ ಹಿನ್ನೆಲೆಯನ್ನು ನೋಡಲು ಅವರೊಳಗಿರುವ ಐತಿಹ್ಯ, ಪುರಾಣ, ಕಥೆಗಳನ್ನು ನೋಡಬೇಕಾಗಿದೆ.

ಮುಕ್ರಿಯರು ತಳಸಮುದಾಯದವರು. ಹೀಗಾಗಿ ಶಿಷ್ಟ ಪುರಾಣ, ಕಾವ್ಯ, ಕಥೆಗಳಲ್ಲಿ ಇವರ ಪ್ರಸ್ತಾಪವು ಕಂಡುಬರುವುದಿಲ್ಲ. ಅಲ್ಲದೇ ಕಾಯ್ದೆ, ಶಾಸನಗಳಲ್ಲಿ ಮತ್ತು ರಾಜಮನೆತನಗಳ ದಾಖಲೆಗಳಲ್ಲಿ ಮುಕ್ರಿಯರ ಹೆಸರಿನ ಉಲ್ಲೇಖ ಕಂಡುಬರುತ್ತಿಲ್ಲ. ಮುಕ್ರಿ ಪದದ ಹಿನ್ನೆಲೆಯನ್ನು ನೋಡುವುದರ ಮೂಲಕ ಚಾರಿತ್ರಿಕ ಹಿನ್ನೆಲೆಯನ್ನು ಇಲ್ಲಿ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ ಹಾಗೂ ಪತ್ರಿಕೆಯಲ್ಲಿ ಪ್ರಕಟವಾದ ಮಾಧವ ಗಾಡ್ಗೀಳ್ ಅವರ ವರದಿಯ ಭಾಗವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

೩.೨. ಮುಕ್ರಿ ಪದನಿಷ್ಪತ್ತಿ

ಮುಕ್ರಿ ಎಂಬ ಸಮುದಾಯ ಸೂಚಿತ ಪದವು ಬರಲು ಇರುವ ಕಾರಣವನ್ನು ಅದೇ ಸಮುದ್ಧಾಯಕ್ಕೆ ಸೇರಿದ ವಕ್ತೃವೊಬ್ಬರು ಹೀಗೆ ತಿಳಿಸುತ್ತಾರೆ.

"ಹಾಲಕ್ಕಿ ಒಕ್ಕಲಿಗ ಮತ್ತು ಮುಕ್ರಿ ಇಬ್ಬರೂ ಅಕ್ಕ ತಂಗಿಯರ ಮಕ್ಕಳಾಗಿದ್ದರು. ಇವರು ಒಂದೆ ಸಂಪ್ರದಾಯ, ಆಚರಣೆ, ಪದ್ಧತಿ, ಕಟ್ಟಳೆಗಳನ್ನು ಹೊಂದಿದ್ದರಂತೆ. ಅಕ್ಕತಂಗಿಯರೆಲ್ಲಾ ಕೂಡು ಕುಟುಂಬದಲ್ಲಿ ಜೀವನ ಸಾಗಿಸುತ್ತಿದ್ದರಿಂದ ಹಾಲಕ್ಕಿ ಒಕ್ಕಲಿಗ ಮತ್ತು ಮುಕ್ರಿ ಒಂದೇ ಮನೆಯಲ್ಲಿ ನೆಲೆಸಿದ್ದರಂತೆ. ಹಾಲಕ್ಕಿ ಒಕ್ಕಲಿಗ ಮತ್ತು ಮುಕ್ರಿಯರು ತಮ್ಮ ಕುಲಪದ್ಧತಿಯಂತೆ ಜೀವನ ಸಾಗಿಸುತ್ತಿದ್ದರು. ಇವರ ಕುಟುಂಬದಲ್ಲಿ ಕಳ್ಳು ಅಥವಾ ಶೇಂದಿ ಕುಡಿಯುವುದು ನಿಷಿದ್ಧವಾಗಿತ್ತು. ಒಮ್ಮೆ ಮುಕ್ರಿಯು ಯಾರಿಗೂ ಕಾಣದಂತೆ ಶೇಂದಿ ಕುಡಿದುಬಿಟ್ಟನು. ಅದು

ಹೇಗೋ ಅವನ ಕುಟುಂಬದವರಿಗೆ ತಿಳಿದುಹೋಯಿತು. ಅದೇ ಗುಂಪಿಗೆ ಸೇರಿದ ಜನರೆಲ್ಲ ವಿಚಾರಣೆ ಮಾಡಲು ಅರಸುಗೌಡ ಮತ್ತು ಗುರುಗೌಡರ ಸಮ್ಮುಖದಲ್ಲಿ ವಿಚಾರಣೆಗೆ ಸೇರಿದರು.

ಗುರುವಗೌಡನು ಯಾಕೆ ಶೇಂದಿ-ಕಳ್ಳು ಕುಡಿದಿರಿ? ಇದು ನಮ್ಮ ಸಮಾಜದ ಕಟ್ಟಳೆಗೆ ವಿರುದ್ಧವಾಗಿದೆಯಲ್ಲವೆ? ಎಂದು ಹಲವಾರು ಪ್ರಶ್ನೆಗಳನ್ನು ಕೇಳಿ ವಿಚಾರಿಸಿದನು. ತಪ್ಪು ಮಾಡಿದವನು ಭಯದಿಂದಾಗಿ ಮಾತೇ ಆಡಲಿಲ್ಲವಂತೆ. ಮಾತನಾಡಲು ಹೆದರಿ ಸುಮ್ಮನೆ ನಿಂತವನನ್ನು ಸೇರಿದ ಜನ ಮೂಕ ಎಂದು ಕರೆದರಂತೆ. ಅಂದಿನಿಂದ ಶೇಂದಿ ಕುಡಿದವನನ್ನು ಮನೆಯೊಳಗೆ ಸೇರಿಸಿಕೊಳ್ಳದೆ ಹೊರಹಾಕಲಾಯಿತಂತೆ. ಮನೆಯಿಂದ ಹೊರಹಾಕಿದ ನೋವಿಗೆ ಅವನು ಮಾತನಾಡುವುದನ್ನು ಪೂರ್ಣವಾಗಿ ಬಿಟ್ಟನಂತೆ. ಮಾತನಾಡಲು ಬಿಟ್ಟವನೇ ಮೂಕನಾದನಂತೆ. ಮೂಕನ ವಂಶಸ್ಥರೇ ಮುಕ್ರಿಗಳಾದರಂತೆ ಎಂಬ ಕಥೆಯೊಂದು ಸಮುದಾಯದಲ್ಲಿ ಪ್ರಚಲಿತವಿದೆ"[೨]

ಮೂಕ > ಮೂಕರು > ಮೂಕರಿ > ಮುಕ್ರಿ ಆಗಿರುವ ಸಾಧ್ಯತೆ ಇದೆ.

ಮುಕ್ರಿಯರ ಪ್ರಕಾರ ಹಾಲಕ್ಕಿ ಒಕ್ಕಲಿಗರು ಮತ್ತು ಮುಕ್ರಿಯರು ಮೂಲತ ಒಂದೇ ಮೂಲದವರು. ಮುಕ್ರಿಯರ ಹವ್ಯಾಸಗಳೇ ಅವರನ್ನು ಹಾಲಕ್ಕಿಗಳಿಂದ ಬೇರ್ಪಡಿಸಿತು ಮತ್ತು ಕೀಳಾಗಿ ಕಾಣುವಂತೆ ಮಾಡಲಾಯಿತೆಂದು ಹೇಳಲಾಗುತ್ತದೆ.

ಶ್ರೀಪಾದ ಶೆಟ್ಟಿ ಅವರು 'ಮುಕ್ರಿಯರು' ಎಂಬ ತಮ್ಮ ಲೇಖನದಲ್ಲಿ ಹಾಲಕ್ಕಿ ಮತ್ತು ಮುಕ್ರಿ ಸಮುದಾಯಗಳ ಉಡುಗೆ ತೊಡುಗೆ, ಆಚರಣೆ, ಹಬ್ಬ ಹರಿದಿನಗಳಲ್ಲಿ ಸಾಮ್ಯತೆಗಳಿವೆ ಯೆಂದು ಹೇಳುತ್ತಾರೆ. ಹಾಲಕ್ಕಿ ಒಕ್ಕಲಿಗ ಮತ್ತು ಮುಕ್ರಿ ಸಮುದಾಯಗಳ ಉಡುಗೆ ತೊಡುಗೆಯಲ್ಲಿ ಸ್ವಲ್ಪ ಸಾಮ್ಯತೆ ಇದ್ದರೂ ಅವರ ದೈಹಿಕ ಲಕ್ಷಣಗಳು ಭಿನ್ನವಾಗಿವೆ. ಈ ಎರಡೂ ಸಮುದಾಯಗಳಲ್ಲಿ ಭಿನ್ನತೆ ಇದೆ. ಸುಗ್ಗಿ, ಮರಕಾಲು ಕುಣಿತ ಹಾಲಕ್ಕಿಗಳಲ್ಲಿ ಚಾಲ್ತಿಯಲ್ಲಿವೆ. ಮುಕ್ರಿಯರಲ್ಲಿ ಇವು ಕಂಡುಬರುವುದಿಲ್ಲ. ಹಾಲಕ್ಕಿ ಒಕ್ಕಲಿಗರಂತೆ ಮುಕ್ರಿಯರೂ ಕುಮ್ರಿ ಕೃಷಿ ಪದ್ಧತಿ ಮೂಲದಿಂದ ಬಂದಿರುವ ಸಾಧ್ಯತೆಗಳಿವೆಯಾದರೂ ಹಾಲಕ್ಕಿಗಳಿಗಿಂತ ಪೂರ್ವದಲ್ಲಿಯೇ ಕುಮ್ರಿ ಕೃಷಿ ಪದ್ಧತಿಯಿಂದ ದೂರಾಗಿ ಕೇವಲ ಜೀತಗಾರನ ಪಟ್ಟವನ್ನು ಮುಕ್ರಿಯರು ಕಟ್ಟಿಕೊಂಡಿರುವ ಸಾಧ್ಯತೆ ಹೆಚ್ಚಿದೆ. ಸಾಮಾಜಿಕವಾಗಿ ಬಹಿಷ್ಕೃತಗೊಂಡ ಮುಕ್ರಿಯರು ಆತ್ಮವಿಶ್ವಾಸ ಕಳೆದುಕೊಂಡಿದ್ದರಿಂದ ಕುಮ್ರಿ ಕೃಷಿಯನ್ನು ಮುಂದುವರಿಸಿಕೊಂಡು ಹೋಗಿಲ್ಲವೇನೋ ಎನಿಸುತ್ತದೆ. ಈ ಕಾರಣಕ್ಕಾಗಿ ದಯನೀಯ ಬದುಕು ಒಪ್ಪಿಕೊಂಡರೇ? ಅಥವಾ ಮೊದಲಿನಿಂದಲೂ ಮುಕ್ರಿಯರು ಹಾಲಕ್ಕಿಗಳಿಗಿಂತ ಬೇರೆಯಾಗಿದ್ದರೂ ಅವರಂತೆ ಬದುಕುವ ಜನರಾಗಿರಬಹುದೇ? ಎಂಬ ಪ್ರಶ್ನೆ ಮೂಡುತ್ತದೆ"[೩] ಎಂದು ಶ್ರೀಪಾದ ಶೆಟ್ಟರು ಪ್ರಶ್ನಿಸಿಕೊಳ್ಳುತ್ತಾರೆ.

ಹಾಲಕ್ಕಿ ಒಕ್ಕಲಿಗರು ಶ್ರೇಣೀಕರಣದಲ್ಲಿ ಮುಕ್ರಿಗಳಿಗಿಂತ ಎತ್ತರದಲ್ಲಿದ್ದಾರೆ. ಅಸ್ಪೃಶ್ಯರಾದ ಮುಕ್ರಿಯರು ತಮ್ಮ ಪರಿಸರದಲ್ಲಿ ಜೀವಿಸುವ ಮೇಲ್ಜಾತಿಗಳನ್ನು ಅನುಕರಿಸುವುದು ಸಹಜ. ಇದನ್ನೇ ಎಂ ಎನ್ ಶ್ರೀನಿವಾಸರು ಸಂಸ್ಕೃತಾನುಕರಣ ಎಂದು ಕರೆದಿರುವುದು. ಹಾಲಕ್ಕಿಗಳ ಪ್ರಭಾವಕ್ಕೆ ಒಳಗಾಗಿ ಅವರ ಉಡುಗೆ ತೊಡುಗೆಯನ್ನು ಮುಕ್ರಿಯರು ಅನುಕರಿಸಿರುವ ಸಾಧ್ಯತೆಗಳು ಹೆಚ್ಚಿವೆ. ಮುಕ್ರಿಯರು ಹಾಲಕ್ಕಿ ಒಕ್ಕಲಿಗರು ತಾವೂ ಅಣ್ಣತಮ್ಮಂದಿರೆಂದು ಹೇಳಿಕೊಳ್ಳುತ್ತಾರೆ. ಆದರೆ ಈ ವಾದವನ್ನು ಹಾಲಕ್ಕಿ ಒಕ್ಕಲಿಗರು ಒಪ್ಪಿಕೊಳ್ಳುವುದಿಲ್ಲ.

ಎಂಥೋವನ್ ಆರ್.ಇ. ಅವರು ತಮ್ಮ Tribes and Cast of Bombay ಎಂಬ ಗ್ರಂಥದಲ್ಲಿ "ಮುಕ್ರಿಯರು ತಮ್ಮನ್ನು ಹೆಬ್ಬೆಗೌಡ, ಹಳೇಗೌಡ ಎಂದು ಕರೆದುಕೊಳ್ಳುತ್ತಿದ್ದರು ಎಂದು ಉಲ್ಲೇಖಿಸುತ್ತಾರೆ" ಪ್ರಾಯಶಃ ಅಸ್ಪೃಶ್ಯತೆಯನ್ನು ಉಲ್ಲೇಖಿಸಲೆಂದೇ ಇತರೇ ಸಮುದಾಯದವರು ವ್ಯಂಗವಾಗಿ ಮುಕ್ರಿಯರನ್ನು ಗೌಡ ಪದದಿಂದ ಸಂಭೋದಿಸಿರುವ ಸಾಧ್ಯತೆ ಇದೆ."[೪] ಉತ್ತರ ಕರ್ನಾಟಕ ಹಾಗೂ ಹೈದರಬಾದ್ ಕರ್ನಾಟಕ ಭಾಗದಲ್ಲಿ ಅಸ್ಪೃಶ್ಯ ಹೊಲೆ ಮಾದಿಗರನ್ನು ಮೇಲ್ಜಾತಿಯವರು ಊರಗೌಡ, ಗೌಡ ಪದಗಳಿಂದ ವ್ಯಂಗವಾಗಿ ಕರೆಯುವುದನ್ನು ಗಮನಿಸಬಹುದು.

೧. ಮುಕ್ರಿಯರನ್ನು ಗಂಜಿಗೌಡರೆಂದು ಕರೆಯುವುದುಂಟು. ಗೌಡ ಜಾತಿಯಿಂದ ಹೊರಹಾಕಿಸಿ ಕೊಂಡ ಇವರು, ಬೇರೆಯವರ ಮನೆಯಲ್ಲಿ ಕೂಲಿ ಕೆಲಸ ಮಾಡಿ ಹೊಟ್ಟೆ ತುಂಬ ಅನ್ನ ಉಣ್ಣಲಾಗದೆ ಒಪ್ಪತ್ತು ಗಂಜಿವುಂಡು ಬುದುಕುವ ಪ್ರಸಂಗ ಬಂದಿದ್ದರಿಂದ ಇವರನ್ನು ಗಂಜಿಗೌಡರೆಂದು ಕರೆಯಲಾಯಿತು ಎಂದು ಹೇಳುತ್ತಾರೆ. ಇದರರ್ಥ ಇವರು ಗೌಡರೆ. ಆದರೆ ಗೌಡಿಕೆ ಇಲ್ಲದೆ, ಹಾಲಕ್ಕಿ ಅನ್ನವನ್ನು ಉಣ್ಣಲಾಗದೆ ಬರೀ ಗಂಜಿಯನ್ನು ಉಣ್ಣುವ ಗಂಜಿಗೌಡರು. ಗಂಜಿ ಬಡವರ ಊಟ. ಮುಕ್ರಿಯರ ಬಡತನ ಗಂಜಿಗೌಡ ಧ್ವನಿಸುತ್ತದೆ.

೨. ನವೀಲುಗೋಣದ ದೇವಿ ಮುಕ್ರಿ ಎನ್ನುವವಳು ನಮಗೆ ಮೊದಲು ಮುತಾಲಿ ಗೌಡರು ಎಂದು ಹೇಳುತ್ತಿದ್ದರು. ಈಗ ಮುಕ್ರಿ ಅಂತಾರೆ ನಾವು ಮುತಾಲಿ ಗೌಡರು ಎಂದು ಹೇಳುತ್ತಾಳೆ. ಮುತಾಲಿ ಎನ್ನುವ ಪದವೇ ಮುಕ್ರಿಯಾಗಿರಬಹುದೇ? ಮುತಾಲಿ ಎಂದರೆ ಮುಖಂಡ, ಕಾರಬಾರಿ ಎಂಬರ್ಥವಿದೆ.

೩. ನವೀಲುಗೋಣದ ಇನ್ನೊಬ್ಬ ಮಾಹಿತಿಗಾರ ನಾಕಜನ ಸಮಾಜ ಕೂಡ್ದಾಗ ನಮನ್ ಅಲ್ಲಿ ಕರತಂದ್ರು ನಮ್ಮವ್ ಒಬ್ಬ ಮುಖಂಡ ಹೋಗಿ ನಡುಗೆ ಕುಳಿತ. ಅಲ್ಲಿ ಸಾಕಷ್ಟು ಜನ ಕರೆದವರು ಬರಲಿಲ್ಲ. ಅವರು(ಸಭೆಗೆ ಬರದಿದ್ದವರು) ನಾಲಾಯಕ್ ಜನ ನೀವೇ

ಮುಕ್ರಿ–ಮುತಾಲಿಕ್ ಎಂದರು. ಅಂದಿನಿಂದ ನಾವು ಮುಕ್ರಿ ಮುತಾಲಿಕ್‌ರಾದೆವು ಎಂದು ತಿಳಿಸುತ್ತಾರೆ.

೪. ಮುಕ್ಕ, ಮುಕ್ಕು ಎನ್ನುವ ಪದಕ್ಕೆ ಕಳಂಕ ಎಂಬರ್ಥವುಂಟು. ಕಲಂಕಿತರಾಗಿ ಜಾತಿಯಿಂದ ಹೊರ ಹಾಕಲ್ಪಟ್ಟವರು ಎಂಬರ್ಥದಲ್ಲಿ ಮುಕ್ಕರು>ಮುಕ್ರಿ(ಮುಕ್ಕಾದವರು) ಎಂದಾಗಿರಬಹುದು.

೫. ಮುಕ್ಕು ಎಂದರೆ ಚೆನ್ನಾಗಿ ತಿನ್ನು ಎಂಬರ್ಥವಿದೆ. ಕುಡಿದು, ಕುಣಿದು, ಚೆನ್ನಾಗಿ ಮುಕ್ಕುವವರಾದುದ್ದರಿಂದ ಇವರು ಮುಕ್ಕುವವರು, ಮುಕ್ಕರು>ಮುಕ್ರಿ ಎಂದಾಗಿರಬಹುದು.

೬. ಮುಕ್ಕ ಎಂದರೆ ಮುಗ್ಧ ಮುಕ್ಕ>ಮುಕ್ರಿ ಎಂದಾಗಲೂಬಹುದು.

೭. ಕ್ಷೇತ್ರಕಾರ್ಯದಲ್ಲಿ ಕುಮಟಾ ತಾಲೂಕಿನ ಹೆಗಡೆಯಲ್ಲಿ ನಾರಾಯಣ ಅಡಗೂಳಿ ಅವರನ್ನು ಸಂದರ್ಶಿಸಲಾಯಿತು. ಆಗ ಅವರಿಗೆ ಮುಕ್ರಿ ಎಂದರೇನು? ಮತ್ತು ಈ ಪದವು ಹೇಗೆ ನಿಮ್ಮ ಜಾತಿಗೆ ಬಂದಿದೆ? ಎಂದು ಪ್ರಶ್ನಿಸಲಾಯಿತು. ಆಗ ಅವರು "ಮುಕ್ರಿಗಳೆಂದರೆ ಮುಕ್ಕುರುವುದು, ಮುಕ್ಕರಿಸುವುದು ಎಂಬರ್ಥವು ನೀಡುತ್ತದೆ. ಅದಕ್ಕೆ ನಮ್ಮ ಜನ ಗುಂಪಾಗಿ ಸೇರುವವರಾಗಿದ್ದಾರೆ. ಯಾವುದಾದರೂ ಸಮಸ್ಯೆಗಳಾದಾಗ ಇಡೀ ನಮ್ಮವರೆಲ್ಲಾ ಸೇರಿ ಈ ಮೊದಲು ಧಾಳಿ ಮಾಡುತ್ತಿದ್ದರು, ಅಲ್ಲದೇ ನಮ್ಮ ಜನಾಂಗದವರು ಈ ಹಿಂದೆ ಸೈನಿಕರಾಗಿ ಕೆಲಸ ಮಾಡುತ್ತಿದ್ದರು ಎಂದು ಹಿರಿಯರು ಹೇಳುತ್ತಿದ್ದರು. ಅದಕ್ಕಾಗಿ ಯುದ್ಧದ ಸಂದರ್ಭದಲ್ಲಿ ಇವರು ವೈರಿಗಳ ಮೇಲೆ ಏಕಾಏಕಿ ಗುಂಪಾಗಿ ಧಾಳಿ ಮಾಡುವವರಾಗಿದ್ದರಿಂದ 'ಮುಕ್ಕರಿಸುವುದು > ಮುಕರುವರು > ಮುಕ್ರುವರು > ಮುಕ್ರಿಗಳು ಎಂದಾಗಿರುವುದರ ಬಗ್ಗೆ ತಿಳಿಸುತ್ತಾರೆ.''[೫] ಈ ಮಾಹಿತಿಯಿಂದ ಸ್ಪಷ್ಟವಾಗುವುದೆನೆಂದರೆ ಯುದ್ಧಗಳ ಸಂದರ್ಭದಲ್ಲಿ ಪ್ರಭುತ್ವದ ಪರವಾಗಿ ಯಾವುದೇ ಭಯವಿಲ್ಲದೆ ವೈರಿಗಳ ಮೇಲೆ ಧಾಳಿ ಮಾಡುವ ಹುಂಬುತನ ಮತ್ತು ಮುಗ್ಧತೆಯನ್ನು ಹೊಂದಿದ್ದರು ಎಂಬುದು ತಿಳಿಯುತ್ತದೆ. ಅಲ್ಲದೇ ಇವರ ಬುಡಕಟ್ಟು ಚಹರೆಗಳನ್ನು ನೋಡಿದರೆ ಇವರು ಗುಂಪಾಗಿ ಧಾಳಿ ಮಾಡುವ ಪ್ರವೃತ್ತಿಯನ್ನು ಹೊಂದಿದ್ದರು. ಅದಕ್ಕಾಗಿ ಈ ಅರ್ಥವೇ ಸ್ಪಷ್ಟವಾದುದು.

ಒಟ್ಟಿನಲ್ಲಿ ಈ ಜನರು ಇಂದು ತಿಳಿಗಂಜಿಗೂ ಗತಿಯಿಲ್ಲದ ಗಂಜಿಗೌಡರಾದರೂ ಒಂದು ಕಾಲಕ್ಕೆ ಸ್ಥಿತವಂತರಾಗಿ ಕಾರುಬಾರು ಮಾಡಿ ಮುತಾಲಿಕರಾಗಿರಬೇಕು. ಅಧಿಕಾರ ಬಂದಾಗ ವಿಲಾಸ ಜೀವನ ನಡೆಸಿ, ಕುಡಿತ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿ ಈ ಮುತಾಲಿಕರು ಮುಖ್ಯರು ಗೌಡಿಕೆ ನಡೆಸಿದವರು ತಮ್ಮ ಹಿರಿಮೆಯನ್ನು ಕಳೆದುಕೊಂಡು ಗಂಜಿಗೌಡರಾಗಿರಬೇಕು ಎಂದು ತಿಳಿಸುತ್ತಾರೆ.

"ಕನೋಜದಲ್ಲಿ ಮೌಕರಿ ಎಂಬ ಮಾಂಡಲಿಕ ಅರಸರಿದ್ದರು. ಅವರು ದಕ್ಷಿಣ ಭಾರತದ ಕಡೆಗೆ ದಿಗ್ವಿಜಯಕ್ಕೆ ಬಂದ ಉಲ್ಲೇಖವಿದೆ. ಅವರು ಕದಂಬರ ಜೊತೆಗೆ ಸಂಪರ್ಕ ಹೊಂದಿದ್ದರು. ಮೌಕರಿಗಳು ತಮ್ಮ ಆಡಳಿತದ ಕ್ರಿ.ಶ. ೫೫೪ರ ಸುಮಾರಿಗೆ ಆಂಧ್ರ, ಸುಲಿಕೆ ಹಾಗೂ ಗೌಡ ಸಮುದಾಯಗಳನ್ನು ಗೆದ್ದ ಉಲ್ಲೇಖವಿದೆ.' ಈ ಮೌಕರಿಗಳೇ ಕರ್ನಾಟಕದಲ್ಲಿ ಬಂದು ನೆಲಗೊಂಡಿರಬಹುದು ಎಂಬುದು ಎನ್ನುವ ಊಹೆಯನ್ನು ಮಾಡಲಾಗಿದೆಯಾದರೂ ಅದಕ್ಕೆ ಪೂರಕವಾದ ಸಾಕ್ಷಾಧಾರಗಳು ಮಾತ್ರ ದೊರೆತಿರುವುದಿಲ್ಲ."[೬]

ಮುಕ್ರಿಯರ ಮೂಲ

ಮುಕ್ರಿಯರು ತಮ್ಮ ಮೂಲದ ಬಗ್ಗೆ ಯಾವುದೇ ಕಲ್ಪನೆಯನ್ನು ಹೊಂದಿಲ್ಲ. ಇವರು ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ಮತ್ತು ಕುಮಟಾ ತಾಲೂಕುಗಳಲ್ಲಿ ನೆಲೆಸಿದ್ದಾರೆ. ಈ ಪ್ರದೇಶವೇ ಇವರು ಮೂಲ ನೆಲೆಯಾಗಿದೆ ಎಂದು ತಿಳಿದಿದ್ದಾರೆ. ಅವರ ಆಡುವ ಭಾಷೆ ಅಚ್ಚ ಕನ್ನಡವಾಗಿದೆ. ಅದಕ್ಕಾಗಿ ಇವರು ಉತ್ತರಕನ್ನಡದ ಮೂಲ ನಿವಾಸಿಗಳೇ ಆಗಿದ್ದಾರೆ. ಆದರೆ ಇವರು ಬೇರೆ ಕಡೆಯಿಂದ ವಲಸೆ ಬಂದು ನೆಲೆಸಿದವರು ಎಂಬುದಕ್ಕೆ ಯಾವುದೇ ಸಾಕ್ಷ್ಯಧಾರಗಳಿಲ್ಲ ಹಾಗೂ ಜನಪದ ಕಥೆ ಮತ್ತು ಕಾವ್ಯಗಳಲ್ಲಿಯೂ ಉಲ್ಲೇಖಗಳು ಇರುವುದಿಲ್ಲ.

ಇವರ ಮೂಲದ ಬಗ್ಗೆ ತಿಳಿದುಕೊಳ್ಳಲು ಕ್ಷೇತ್ರಕಾರ್ಯದಲ್ಲಿ ನೀವು ಈ ನೆಲದ ಮೂಲನಿವಾಸಿಗಳೇ? ಅಥವಾ ಬೇರೆ ಕಡೆಯಿಂದ ವಲಸೆ ಬಂದು ನೆಲೆಸಿದ್ದೀರಾ? ಎಂದು ಪ್ರಶ್ನಿಸಲಾಯಿತು. ಉತ್ತರವಾಗಿ ನಾವು ಇದೇ ನೆಲದವರು ಎಂದು ಕೆಲವರು ಹೇಳಿದರೆ, ಇನ್ನೂ ಕೆಲವರು ಹೊನ್ನಾವರ ಮತ್ತು ಕುಮಟಾ ಸುತ್ತಮುತ್ತಲ ಪ್ರದೇಶವೇ ನಮ್ಮ ಮೂಲ ನೆಲೆಯಾಗಿದೆ. ಕೆಲವರು ಇಲ್ಲಿಂದ ಘಟ್ಟದ ಮೇಲೆ ಮತ್ತು ಬೇರೆ ಕಡೆಗೆ ವಲಸೆ ಹೋಗಿ ನೆಲೆಸಿದ್ದಾರೆ ಎಂದರು, ಮತ್ತೇ ಕೆಲವರು ನಮ್ಮ ಮೂಲ ವಾಸಸ್ಥಾನ ಇವತ್ತೀನ ಕುಮಟಾ ತಾಲೂಕಿನ ಹೆಗಡೆ ಗ್ರಾಮವಾಗಿದೆ, ಮುಂದೆ ಇಲ್ಲಿಂದ ಚದುರಿ ಕುಮಟಾ ಮತ್ತು ಹೊನ್ನಾವರ ತಾಲೂಕಿನ ಹಳ್ಳಿಗಳಲ್ಲಿ ನೆಲೆಸಿರುವ ಬಗ್ಗೆ ತಿಳಿಸುತ್ತಾರೆ.

ಕರ್ನಾಟಕ ಬುಡಕಟ್ಟುಗಳು, ಸಂಪುಟ-೧ರಲ್ಲಿ ಶ್ರೀಪಾದ ಶೆಟ್ಟರು 'ಮುಕ್ರಿಯರು' ಎಂಬ ಲೇಖನದಲ್ಲಿ ಇವರ ಮೂಲ ನೆಲೆಯ ಬಗ್ಗೆ ಹೀಗೆ ಉಲ್ಲೇಖಿಸುತ್ತಾರೆ. "ಹೊನ್ನಾವರ ಮತ್ತು ಕುಮಟಾ ತಾಲೂಕಿನ ಹಳ್ಳಿಗಳಲ್ಲಿ ನೆಲೆಗೊಂಡಿದ್ದಾರೆ. ಕುಮಟಾ ತಾಲೂಕಿನ ಹೆಗಡೆ ಇವರ ಮೂಲ ವಾಸಸ್ಥಾನವಾಗಿರಬೇಕೆಂದು, ಅಲ್ಲಿಂದ ಕುಮಟಾ ಮತ್ತು ಹೊನ್ನಾವರ ತಾಲೂಕಿನ ಹಳ್ಳಿಗಳಲ್ಲಿ ಹೋಗಿ ನೆಲೆಸಿದರು. ಹೆಗಡೆಯಲ್ಲಿ ವೀರಭದ್ರ ದೇವರನ್ನು ಮುಕ್ರಿ ಜನರೇ ಪೂಜೆ ಮಾಡುತ್ತಾರೆ. ಹೆಗಡೆ ಬಂಡಿಹಬ್ಬದಲ್ಲಿ ಮುಕ್ರಿ ವ್ಯಕ್ತಿಯೇ ಕಳಶವನ್ನು ಹೊರುತ್ತಾನೆ. ಮುಕ್ರಿಯವರು

ತಮ್ಮ ಮನೆಯ ತುಳಸಿ ಕಟ್ಟೆಯಲ್ಲಿ ತಿರುಪತಿ ವೆಂಕಟರಮಣನ ಮರದ ಮೂರ್ತಿಯೊಂದಿಗೆ ವೀರಭದ್ರನ ಮರದ ಮೂರ್ತಿಯನ್ನು ಇಟ್ಟು ಪೂಜಿಸುತ್ತಿದ್ದ ಬಗೆಯನ್ನು ದಕ್ಷಿಣ ಭಾರತದ ಗ್ಯಾಜಿಟಿಯರ್‌ನಲ್ಲಿ ಉಲ್ಲೇಖವಿರುವ ಬಗ್ಗೆ ತಮ್ಮ ಕೃತಿಯಲ್ಲಿ ತಿಳಿಸಿದ್ದಾರೆ."[೭]

ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ತಿಳುವಳಿಕೆ ನೀಡಿದ ಮಾಹಿತಿ ಮತ್ತು ಶ್ರೀಪಾದ ಶೆಟ್ಟರ ಅವರ ಈ ಉಲ್ಲೇಖವು ಸಾಮ್ಯತೆಯನ್ನು ಹೊಂದಿರುವುದರಿಂದ ಹೆಗಡೆ ಗ್ರಾಮವು ಮುಕ್ರಿಯರ ಮೂಲವಾಸಸ್ಥಾನವಾಗಿರುವ ಸಾಧ್ಯತೆ ಇದೆ.

ಮುಕ್ರಿಗಳು ತಿರುಪತಿ ಕಡೆಯಿಂದ ಬಂದಿದ್ದಾರೆ ಎಂದು ಕೆಲವು ವಿದ್ವಾಂಸರ ಅಭಿಪ್ರಾಯವಿದೆ. ತಿರುಪತಿ ತಿಮ್ಮಪ್ಪನ್ನು ಇವರಿಗೆ ಆರಾಧ್ಯದೈವವಾಗಿದ್ದಾನೆ. ಅಲ್ಲದೇ ಇವರು ತಿರುಪತಿಗೆ ಹರಕೆ ಮುಟ್ಟಿಸುವುದಕ್ಕೆ ಯಾತ್ರೆಗೆ ಹೋಗಿ ಬರುತ್ತಾರೆ ಎಂಬುದು ಸತ್ಯ. ಆದರೆ ಆಂಧ್ರ ಪ್ರದೇಶದಿಂದ ವಲಸೆ ಬಂದಿರಬೇಕೆಂಬುದಕ್ಕೆ ಯಾವುದೇ ಆಧಾರಗಳಿಲ್ಲ. "೧೫ನೇ ಶತಮಾನದ ಭಕ್ತಿ ಪರಂಪರೆಯಲ್ಲಿ ಮಲೆನಾಡಿನ ಒಕ್ಕಲಿಗರು, ದೀವರು, ಕುಂಬಾರರು, ಕರೆಒಕ್ಕಲಿಗರು ಮಿಂದೇಳುತ್ತಿರುವಾಗ ಕರಾವಳಿ ತೀರದ ಜನರಾದ ಹಾಲಕ್ಕಿ ಒಕ್ಕಲಿಗರು, ಮುಕ್ರಿಗಳು, ನಾಮಕ್ಕೆ ಮತ್ತು ತುಳಸಿಗೆ ಮಾರುಹೋಗಿರಬಹುದಾದ ಸಾಧ್ಯತೆಗಳಿವೆ."[೮]

ಅದಕ್ಕಾಗಿ ತಿರುಪತಿ ವೆಂಕಟರಮಣ ಆರಾಧ್ಯದೈವವಾಗಿ ಇವರ ಆಚರಣೆಗಳಲ್ಲಿ ಸೇರಿಕೊಂಡನು ಎಂದು ಊಹಿಸಬಹುದೇ ಹೊರತು ಇವರ ಆಂಧ್ರ ಮೂಲದಿಂದ ಬಂದವರೆಂಬುದು ಅಸಮಂಜಸವಾದ ಊಹೆಯಾಗುತ್ತದೆ.

ಕ್ಷೇತ್ರಕಾರ್ಯ ಸಂದರ್ಭದಲ್ಲಿ ನಾರಾಯಣ ಅಡಗೋಳಿ ಅವರನ್ನು ಸಂದರ್ಶಿಸಿದಾಗ ಮುಕ್ರಿಯರು ಆಫ್ರಿಕಾದಿಂದ ಬಂದವರು ಎಂದು ತಿಳಿಸಿದರು. ಅಲ್ಲದೇ ಇದಕ್ಕೆ ಸಂಬಂಧಿಸಿದಂತೆ ಪತ್ರಿಕಾ ಪ್ರಕಟಣಾ ವರದಿಯನ್ನು ನೀಡಿದರು. ಆ ವರದಿ ದಿನಾಂಕ ೨.೧.೧೯೯೪ರಂದು ಹೊಸ ದಿಗಂತ ಪತ್ರಿಕೆಯಲ್ಲಿ ಪ್ರಕಟವಾದ ಪತ್ರಿಕಾ ವರದಿಯಾಗಿತ್ತು. ಅದರಲ್ಲಿ 'ಹವ್ಯಕರು–ಮುಕ್ರಿಗಳು ಆಫ್ರಿಕಾದಿಂದ ಬಂದವರು' ಪ್ರೊ. ಮಾಧವ ಗಾಡ್ಗೀಳ್ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿತ್ತು. "ಕರ್ನಾಟಕದ ಹವ್ಯಕರು–ಮುಕ್ರಿಗಳು ಆಫ್ರಿಕಾದಿಂದ ಬಂದು ಭಾರತದಲ್ಲಿ ನೆಲೆಸಿದವರು ಎಂಬ ವಾದವನ್ನು ಖ್ಯಾತ ಪರಿಸರ ವಿಜ್ಞಾನಿ, ಜೀವ ವಿಜ್ಞಾನಿ ಪ್ರೊ. ಮಾಧವ ಗಾಡ್ಗೀಳ್ ಅವರು ವೈಜ್ಞಾನಿಕ ದಾಖಲೆಗಳೊಂದಿಗೆ ಮುಂದಿಟ್ಟಿದ್ದಾರೆ. ಮೈಸೂರಿನಲ್ಲಿ ನಡೆದ ಭಾರತೀಯ ಇತಿಹಾಸ ಕಾಂಗ್ರೆಸ್‌ನಲ್ಲಿ ಈ ಕುರಿತು ಅವರು ಒಂದು ಅಧ್ಯಯನ ಪ್ರಬಂಧವನ್ನು ಮಂಡಿಸಿ ಹಲವು ಸೋಜಿಗದ ವಿಷಯಗಳನ್ನು ಹೊರಗೆಡುವಿದ್ದಾರೆ. ಅವರು ಯು.ವಿ. ಶಂಬಾ ಪ್ರಸಾದ್ ಜೊತೆಗೂಡಿ ಈ ಸಂಶೋಧನಾ ವರದಿ ಸಿದ್ಧಪಡಿಸಿದ್ದಾರೆ. ಬೆಂಗಳೂರಿನ

ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಮತ್ತು ಸ್ಟಾನ್‌ಫಾರ್ಡ್ ವಿಶ್ವವಿದ್ಯಾಲಯದ ಜಂಟಿ ಯತ್ನದಿಂದ ಪಡೆದ ಜೀವವಾಹಿನಿ(ಜೀನ್ಸ್), ಸಾಕ್ಷ್ಯಗಳನ್ನಾಧರಿಸಿ ಗಾಡ್ಗೀಳ್ ಈ ವರದಿ ರೂಪಿಸಿದ್ದಾರೆ. ಉತ್ತರಕನ್ನಡದ ೪೮ ಹವ್ಯಕರು ಹಾಗೂ ೪೩ ಮುಕ್ರಿಗಳು (ಇವೆರಡೂ ಗುಂಪುಗಳು ಸಾಮಾನ್ಯವಾಗಿ ಅಂತರ್ ಜಾತಿ ಸಂಬಂಧವನ್ನು ಬೆಳೆಸುವುದಿಲ್ಲ) ಕೆನ್ನೆಯ ಜೀವಕೋಶಗಳು ಮತ್ತು ಕೂದಲುಗಳನ್ನು ಸಂಶ್ಲೇಷಿಸಿ ಪಡೆದ ಜೀವವಾಹಿನಿಗಳು ಈ ಸಂಶೋಧನೆಯ ಮೂಲಾಧಾರ. ಇವೆಲ್ಲಾ ೯೧ ಜನರಲ್ಲಿನ ಜೀವವಾಹಿನಿಗಳನ್ನು ಅವರ ತಾಯಿಯೊಂದಿಗಿನ ಡಿಎನ್‌ಎ ಜೊತೆ ಹೋಲಿಸಿ ವಿಶ್ಲೇಷಿಸಲಾಯಿತು. ಈ ವಿಶ್ಲೇಷಣೆಯಿಂದ ದೊರೆತ ಮಾಹಿತಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಹವ್ಯಕರು ಮತ್ತು ಮುಕ್ರಿಗಳು ಒಂದೇ ಪಂಗಡದಿಂದ ರೂಪಗೊಂಡು ಕಾಲಕ್ರಮೇಣ ಬೇರೆ ಬೇರೆಯಾಗಿ ಕಾಣಿಸಿಕೊಂಡವರು ಎಂಬುದು ಪತ್ತೆಯಾಗಿದೆ ಎಂದು ಗಾಡ್ಗೀಳ್ ಹೇಳುತ್ತಾರೆ. ಆಫ್ರಿಕಾದಿಂದ ಯುರೇಶಿಯಾ ಭಾಗಕ್ಕೆ ಮಾನವ ೫೦-೬೦ ಸಹಸ್ರ ವರ್ಷಗಳ ಹಿಂದೆ ವಲಸೆ ಬಂದಾಗ ಈ ಎರಡು ಪಂಗಡಗಳ ಮೂಲ ವಂಶ ಒಂದೇ ಆಗಿತ್ತು ಎಂದು ಅವರು ಹೇಳುತ್ತಾರೆ.

೨೦ ಲಕ್ಷ ವರ್ಷಗಳ ಹಿಂದೆ ಪೂರ್ವ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಬಳಸುತ್ತಿದ್ದ ಉಪಕರಣಗಳು ೧೦ ಲಕ್ಷ ವರ್ಷಗಳ ಹಿಂದೆ ಇಂಡೋನೇಷಿಯದಲ್ಲೂ ಕಂಡುಬಂದಿವೆ. ಅದೇ ಹೊತ್ತಿನಲ್ಲಿ ಆಫ್ರಿಕಾನ್ನರು ಭಾರತ ಉಪಖಂಡದಲ್ಲಿ ವಸಾಹತು ಸ್ಥಾಪಿಸಿರಬಹುದಾದರೂ ಅದನ್ನು ಶ್ರುತಪಡಿಸುವ ದಾಖಲೆಗಳಿನ್ನು ಸಿಕ್ಕಿಲ್ಲ.

ಬೇಟೆಗಾರರಾಗಿದ್ದ, ಇಲ್ಮೊ ದ್ರಾವಿಡ ಕೃಷಿಕರು ೯೦೦೦ ವರ್ಷಗಳ ಹಿಂದೆ ಪಾಕಿಸ್ತಾನ ತಲುಪಿದರು. ೬೦೦೦ ವರ್ಷಗಳ ಹಿಂದೆ ಮಧ್ಯ ಏಷಿಯಾದ ಹಲವು ಪಂಗಡಗಳು(ಕುದರೆ ಏರಿ ಬಂದವರು) ಇತ್ತ ಬಂದವು. ಋಗ್ವೇದದಲ್ಲಿ ಹೇಳುವ ದಾಸ, ದಸ್ಯು ವಿಚಾರ ಈ ಕುರಿತಾದದ್ದೆ ಎನ್ನುವುದು ಗಾಡ್ಗೀಳ್‌ರ ಶಂಕೆ.

ಆದರೆ ೯೦೦೦ ವರ್ಷಗಳ ಹಿಂದೆ ಪಶುಪಾಲನೆ, ಸಸ್ಯರಕ್ಷಣೆ ಗೊತ್ತಿದ್ದವರು ಬರುವ ಮುನ್ನವೇ ಇಡೀ ಭಾರತವೇ ಬೇಟೆಗಾರ, ಆಹಾರ ಸಂಗ್ರಾಹಕ ಗುಂಪುಗಳಿಂದ ತುಂಬಿತ್ತೆಂದು ಗಾಡ್ಗೀಳ್ ಹೇಳುತ್ತಾರೆ. ೧೦೦೦೦ ವರ್ಷಗಳ ಹಿಂದೆ ಅನಟೋಲಿಯಾದಿಂದ ಹವ್ಯಕರು ಹೊರಟು ಉತ್ತರಕನ್ನಡ ತಲುಪಿದಂತೆ ೫೦ ಸಹಸ್ರವರ್ಷಗಳ ಹಿಂದೆಯೇ ವಲಸೆ ಆರಂಭಿಸಿದ ಮುಕ್ರಿಗಳು ಇಲ್ಲಿಗೆ ಬಂದರು. ಆದರೆ ಹವ್ಯಕರು ಶಿಕ್ಷಣದಲ್ಲಿ ಮುಂದುವರೆದರು, ಮುಕ್ರಿಗಳು ಮಾತ್ರ ಹಾಗೇ ಪುರಾತನ ಜೀವನ ವಿಧಾನದಲ್ಲಿ ಉಳಿದರು ಎಂಬುದು ಗಾಡ್ಗೀಳ್ ಅವರ ವಾದ."[೯]

ಪ್ರೊ. ಮಾಧವ ಗಾಡ್ಗೀಳ್ ಅವರು ಮುಕ್ರಿಯರು-ಹವ್ಯಕರು ಒಂದೇ ಮೂಲದವರು. ಅದರಲ್ಲೂ ಆಫ್ರಿಕಾ ಮೂಲದವರು ಎಂದು ತಿಳಿಸುವುದರ ಜೊತೆಗೆ ಈ ಎರಡು ಪಂಗಡಗಳು ಒಂದೇ ಪಂಗಡದಿಂದ ವಲಸೆ ಬಂದ ಜನಾಂಗಗಳಾಗಿವೆ ಎಂದು ತಿಳಿಸುತ್ತಾರೆ. ಆದರೆ ಇದು ಸತ್ಯಕ್ಕೆ ದೂರವಾದುದು ಎಂದು ಕ್ಷೇತ್ರಕಾರ್ಯದ ಮಾಹಿತಿಯಿಂದ ತಿಳಿಯುತ್ತದೆ. ಅದು ಹೇಗೆಂದರೆ ಮುಕ್ರಿಯರಲ್ಲಿ ಬಳಿ ಪದ್ಧತಿಯಿದ್ದರೆ, ಹವ್ಯಕರಲ್ಲಿ ಗೋತ್ರ ಪದ್ಧತಿ ಇದೆ. ಅದರಲ್ಲೂ ಈ ಬಳಿ ಮತ್ತು ಗೋತ್ರಗಳಲ್ಲಿ ಯಾವುದೇ ರೀತಿಯ ಹೋಲಿಕೆ ಕಂಡು ಬರುವುದಿಲ್ಲ. ಮುಕ್ರಿಯರ ಆಚರಣೆ ಮತ್ತು ಸಂಪ್ರದಾಯಗಳಿಗು ಮತ್ತು ಹವ್ಯಕರ ಆಚರಣೆ-ಸಂಪ್ರದಾಯಗಳಿಗೆ ಸಾಮ್ಯತೆ ಇಲ್ಲದಿರುವುದು ಕಂಡುಕೊಳ್ಳಲಾಗಿದೆ. ಆದರೆ ಭಾಷೆಯಲ್ಲಿ ಹವ್ಯಕರು ಬಳಸುವ ಒಂದೆರಡು ಪದಗಳನ್ನು ಮಾತ್ರ ಮುಕ್ರಿಯರು ಬಳಸುತ್ತಾರೆ ಅಷ್ಟೆ. ಇವರು ಹವ್ಯಕರ ಮನೆಯ ಕೆಲಸದಾಳುಗಳು ಎನ್ನುವ ಕಾರಣಕ್ಕೆ ಆ ಪದಗಳ ಪರಿಚಯವಿದೆಯಷ್ಟೆ, ಇದರಿಂದ ಈ ಸಮುದಾಯಗಳು ಒಂದೇ ಪಂಗಡಕ್ಕೆ ಸೇರಿದವುಗಳಾಗಿವೆ ಮತ್ತು ಇವರ ಮೂಲ ಆಫ್ರಿಕಾ ಎಂದು ಹೇಳುವುದು ತಪ್ಪಾಗುತ್ತದೆ. ಇದನ್ನು ಸ್ಪಷ್ಟವಾಗಿ ಸಮರ್ಥಿಸಲು ಅಂತಹ ಯಾವುದೇ ಸಾಕ್ಷಿ ಆಧಾರಗಳಿಲ್ಲ. ಅದಕ್ಕಾಗಿ ಇವರು ಕುಮಟಾ ತಾಲೂಕಿನ ಹೆಗಡೆ ಎಂಬ ಸ್ಥಳವೇ ಇವರ ಮೂಲವಾಗಿದೆ ಎಂದು ತಿಳುವಳಿಕೆದಾರರ ಮಾಹಿತಿಯಿಂದ ಸ್ಪಷ್ಟವಾಗುತ್ತದೆ.

ಕೊನೆ ಟಿಪ್ಪಣಿಗಳು

೧. ಪ್ರಭಾಕರ ಎ ಎಸ್ ಹೆಳವರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೦ ಪು. ೧೧-೧೨

೨ ಕಥೆ ಹೇಳಿದವರು: ಹೇಮಂತಕುಮಾರ ಹಳಕಾರ, ಕುಮಟಾ.

೩. ಶ್ರೀಪಾದ ಶೆಟ್ಟಿ, ಮುಕ್ರಿಯರು, ಲಕ್ಕಪ್ಪಗೌಡ ಎಚ್.ಜೆ. ಕರ್ನಾಟಕ ಬುಡಕಟ್ಟುಗಳು, ಸಂಪುಟ-೧; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೮, ಪು. ೫೫೭

೪. ಎಂಥೋವನ್ ಆರ್.ಇ., ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್ ಆಫ್ ಬಾಂಬೆ, ೧೯೯೦, ಪು. ೩೫೪

೫. ತಿಳುವಳಿಕೆದಾರರು: ನಾರಾಯಣ ಆಡಗೂಳಿ, ಹೆಗಡೆ, ಕುಮಟಾ ತಾಲೂಕು.

೬. ಶ್ರೀಪಾದ ಶೆಟ್ಟಿ, ಮುಕ್ರಿಯರು, ಲಕ್ಕಪ್ಪಗೌಡ ಎಚ್. ಜೆ. ಕರ್ನಾಟಕ ಬುಡಕಟ್ಟುಗಳು, ಸಂಪುಟ-೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೧೯೯೮.ಪು. ೫೫೭

೭. ಅದೇ ಪು. ೫೫೭

೮. ಮೋಹನ್ ಎಚ್.ಎಸ್., ಮುಕ್ರಿ ಸಮುದಾಯ, ೨೦೧೬, ಪು. ೨೯

೯. ಹವ್ಯಕರು–ಮುಕ್ರಿಗಳು ಆಫ್ರಿಕಾದಿಂದ ಬಂದವರು: ಪ್ರೊ. ಮಾಧವ ಗಾಡ್ಗೀಳ್, ಹೊಸ ದಿಗಂತ ಪತ್ರಿಕೆ, ದಿನಾಂಕ ೨.೧.೧೯೯೪

ಅಧ್ಯಾಯ ನಾಲ್ಕು

ಸಾಮಾಜಿಕ ಬದುಕು

ಅಧ್ಯಾಯ ನಾಲ್ಕು

ಸಾಮಾಜಿಕ ಬದುಕು

ಮುಕ್ರಿಗಳು ಸಾಮಾಜಿಕವಾಗಿ ಬಹಿಷ್ಕೃತರು, ಅಸ್ಪೃಶ್ಯರೆಂಬ ಕಾರಣಕ್ಕಾಗಿಯೇ ಊರಿನಿಂದ ಹೊರಗೆ ಕೊಪ್ಪದಲ್ಲಿ ಬದುಕು ಕಳೆಯುತ್ತಿದ್ದಾರೆ. ಹಾಲಕ್ಕಿಗಳಂತೆಯೇ ಇವರು ಉಡುಗೆ ತೊಡುಗೆ ತೊಟ್ಟರೂ ಹಾಲಕ್ಕಿಗಳಿಗಿರುವ ಸಾಮಾಜಿಕ ಮನ್ನಣೆ ತಮಗೆ ಸಿಗುತ್ತಿಲ್ಲ ಎನ್ನುವ ಅಳಲನ್ನು ಮುಕ್ರಿ ಯುವ ಸಮೂಹ ಹೇಳುತ್ತದೆ. ಭೂಒಡೆತನವಂತೂ ಇವರಲ್ಲಿ ಸಿಗುವುದೇ ಕಷ್ಟ. ಇತ್ತೀಚೆಗೆ ಒಂದು ಎರಡು ಕುಟುಂಬಗಳು ಕಾಡನ್ನು ಸವರಿ ಬಗರ್ ಹುಕುಂ ಭೂಮಿಯನ್ನು ಸಾಗುವಳಿ ಮಾಡುತ್ತಿವೆಯಾದರೂ ಆಸ್ತಿಯ ಹಕ್ಕಿನಿಂದ ವಂಚಿತಗೊಂಡಿವೆ. ಇವರ ಆಸ್ತಿಯೆಂದರೆ ಇತ್ತೀಚೆಗೆ ಕೆಲವು ಕುಟುಂಬಗಳಿಗೆ ದೊರೆತ ಸರ್ಕಾರದ ವಸತಿ ಯೋಜನೆಯಲ್ಲಿ ದೊರೆತ ಮುರುಕಲು ಮನೆಗಳಷ್ಟೆ. ಬೃಹತ್ ಕುಟುಂಬಗಳು ಕೋಳಿ ಗೂಡಿನಂತಹ ಆ ಮನೆಗಳಲ್ಲಿಯೇ ಜೀವನ ಸಾಗಿಸಬೇಕು. ಇಲ್ಲವೇ ಗುಡ್ಲು ರಚಿಸಿಕೊಂಡು ಅವುಗಳಲ್ಲಿ ಜೀವನ ಮಾಡಬೇಕು ಎನ್ನುವ ಸ್ಥಿತಿ ಇದೆ. ಜೀತ ಪದ್ಧತಿಯನ್ನು ಸರ್ಕಾರ ತೆಗೆದುಹಾಕಿದೆ ಎಂದು ಹೇಳಲಾಗುತ್ತದೆ. ಆದರೆ ಉತ್ತರಕನ್ನಡದ ಮುಕ್ರಿಗಳು ಇಂದಿಗೂ ಅಘೋಷಿತ ಜೀತಗಾರರಾಗಿಯೇ ಜೀವನ ಸಾಗಿಸಬೇಕಾಗಿದೆ. ಭೂಮಾಲಿಕರಿಗೆ ಆಳುಗಳು ಬೇಕು, ಇವರ ಬದುಕಿಗೆ ಕೂಲಿ ಬೇಕು. ಇದು ಅನಿವಾರ್ಯ ಎನ್ನುವ ಮನೋಭೂಮಿಕೆಯಲ್ಲಿಯೇ ಮುಕ್ರಿಗಳಿದ್ದಾರೆ.

'ಆಧುನಿಕ ಜಗತ್ತಿನ ಬದಲಾವಣೆಗಳು ಮುಕ್ರಿಗಳ ಜೀವನದಲ್ಲಿ ಕಾಲಕಾಲಕ್ಕೆ ತಲೆದೋರದೇ ಇದ್ದುದರಿಂದ ಅವರು ಊಳಿಗದ ಆಳುಗಳಾಗಿಯೇ ಬದುಕಬೇಕಾಯಿತು. ಆಳುವ ವರ್ಗದ

ಆಶಯಗಳನ್ನು ಈಡೇರಿಸುವ ಅನಿವಾರ್ಯ ಆಳುಗಳ ಅವಶ್ಯಕತೆ ಇದ್ದುದರಿಂದ ಕೆಳಜಾತಿಗಳ ರಾಜಕೀಯ ಆರ್ಥಿಕ ಬದುಕಲ್ಲಿ ಅಗಾಧ ಬದಲಾವಣೆಗಳು ಸಂಭವಿಸಲಿಲ್ಲ. ಯಾವುದೇ ಸಮುದಾಯ ತನ್ನ ರಾಜಕೀಯ ಸಮಗ್ರತೆ ಮತ್ತು ಸಾಂಸ್ಕೃತಿಕ ಚಹರೆಗಳನ್ನು ರೂಪಿಸಿಕೊಳ್ಳುವುದು ಅದರ ವೃತ್ತಿಯನ್ನು ಅವಲಂಬಿಸಿರುತ್ತದೆ.'[೧] ಮುಕ್ರಿಗಳು ತಾವು ಹುಟ್ಟಿರುವುದೇ ಪರರಲ್ಲಿ ದುಡಿಯುವುದಕ್ಕೆ ಅನ್ನುವ ಮನೋಭಾವನೆಯಲ್ಲಿದ್ದಾರೆ. ಅವರ ಮಾನಸಿಕ ಸ್ಥಿತಿ ಅಷ್ಟು ಅಸಹಾಯಕವಾಗಿದೆ. ಇಂದಿಗೂ ಮುಕ್ರಿಗಳು ಸಾಮಾಜಿಕವಾಗಿ ಅಸ್ಪೃಶ್ಯರಾಗಿಯೇ ಉಳಿದಿದ್ದಾರೆ. ಇವರಲ್ಲಿ ಬೆರಳೆಣಿಕೆಯಷ್ಟು ಜನ ಸರ್ಕಾರಿ ಹುದ್ದೆಗಳಲ್ಲಿದ್ದಾರೆ. ಮೀಸಲಾತಿ ಕಾರಣಕ್ಕಾಗಿ ಶಿಕ್ಷಕರು, ಪೋಲೀಸ್ ಇತ್ಯಾದಿ ಹುದ್ದೆಗಳಲ್ಲಿರುವರಾದರೂ ತಮ್ಮ ಸಮುದಾಯದ ಸಾಮಾಜಿಕ ಬದಲಾವಣೆಗಾಗಿ ಅವರಾರೂ ಪ್ರಯತ್ನಿಸಿದ ಉದಾಹರಣೆಗಳಿಲ್ಲ. ಅವರನ್ನು ಕೇಳಿದರೆ ತಮ್ಮವರು ಸುಧಾರಿಸಲು ಇನ್ನೂ ನೂರ್ಕಾಲ ಬೇಕು, ಅವರನ್ನು ಸುಧಾರಿಸಲು ಹೋದರೆ ನಮ್ಮ ಆಯುಷ್ಯ ಮುಗಿದುಹೋಗುತ್ತದೆ ಎಂಬ ಉತ್ತರ ದೊರೆಯುತ್ತದೆ. ಇವರಲ್ಲಿ ಸರ್ಕಾರಿ ಹುದ್ದೆಯಲ್ಲಿರುವವರು ತಮ್ಮ ಸಮುದಾಯದ ಅವಿದ್ಯಾವಂತ ಜನರೊಂದಿಗೆ ಒಂದು ರೀತಿಯ ಅಂತರ ಕಾಪಾಡಿಕೊಳ್ಳುತ್ತಿದ್ದಾರೆ ಎಂದೆನಿಸುತ್ತದೆ.

ಸಮಾಜದಿಂದ ಸಮುದಾಯದೊಳಗೆ ಬಂದರೆ ಮಾತೃ ಪ್ರಧಾನವಾಗಿದ್ದ ಮುಕ್ರಿ ಸಮುದಾಯವು ಇತರ ಮೇಲ್ಜಾತಿಗಳ ಪ್ರಭಾವದಿಂದಾಗಿ ಪಿತೃ ಪ್ರಧಾನ ವ್ಯವಸ್ಥೆಗೆ ಜಾರಿದೆ ಎನಿಸುತ್ತದೆ. ಹಾಗೆಯೇ ಅವಿಭಕ್ತ ಕುಟುಂಬ ವ್ಯವಸ್ಥೆಯಿಂದ ವಿಭಕ್ತ ಕುಟುಂಬ ವ್ಯವಸ್ಥೆಗೆ ಸ್ಥಿತ್ಯಂತರಗೊಂಡಿದೆ ಎನಿಸುತ್ತದೆ. ಆದರೆ ಮುಕ್ರಿಗಳಲ್ಲಿ ಇಂದಿಗೂ ಸಾಮಾಜಿಕ ಸಂಬಂಧಗಳು ಅತಿಯಾದ ಬಿಗುವಿನಿಂದ ಕೂಡಿವೆ. ಇತ್ತೀಚಿಗಂತೂ ದುಶ್ಚಟಗಳಿಗೆ ಬಹುಪಾಲು ಗಂಡಸರು ಬಲಿಯಾಗಿದ್ದಾರೆ. ಈ ಸಂದರ್ಭದಲ್ಲಿ ಹೆಣ್ಣು ಅನಿವಾರ್ಯವಾಗಿ ಎಲ್ಲಾ ಹೊಣೆಗೆ ಹೆಗಲು ಕೊಟ್ಟಿದ್ದು, ಹೆಗಲುಕೊಡುವ ಅಗತ್ಯತೆಯೂ ಅವಳಿಗೆ ಇದೆ.

ಮುಕ್ರಿಗಳಲ್ಲಿ ಬಾಲ್ಯ ವಿವಾಹ ರೂಢಿಯಲ್ಲಿತ್ತು. ಜೊತೆಗೆ ರಕ್ತ ಸಂಬಂಧಿಗಳಲ್ಲಿಯೇ ಮದುವೆ ನಿಶ್ಚಯ ಮಾಡಲಾಗುತ್ತಿತ್ತು. ಇದರಿಂದಾಗಿ ಅವರ ಮುಂದಿನ ಪೀಳಿಗೆ ರಕ್ತದ ಅಶುದ್ಧತೆಯಿಂದ ಅನಾರೋಗ್ಯದಿಂದ ಜನಿಸುತ್ತಿತ್ತು. ಇದನ್ನು ಕಂಡಕೊಂಡ ಮುಕ್ರಿಗಳು ಪಕ್ಕದ ಊರಿನ ಮುಕ್ರಿ ಕೊಪ್ಪಗಳಲ್ಲಿ ಕೊಡುಕೊಳ್ಳುವಿಕೆಯ ಸಂಬಂಧವನ್ನು ಏರ್ಪಡಿಸುತ್ತಿದ್ದರು. ಇದು ಈಗಲೂ ಮುಂದುವರಿದಿದೆ. ಜತೆಗೆ ಅಂತರ್ಜಾತಿಯ ವಿವಾಹಗಳು ಹೆಚ್ಚಾಗುತ್ತಿವೆ. ಇದರಲ್ಲಿ ಮುಕ್ರಿ ಹೆಣ್ಣುಮಕ್ಕಳನ್ನು ಬೇರೆ ಜಾತಿಯ ಹುಡುಗರು ಮದುವೆಯಾಗಿರುವುದು ಕಾಣಬರುವಷ್ಟು ಮುಕ್ರಿ ಪುರುಷರು ಅನ್ಯಜಾತಿಯ ಯುವತಿಯರನ್ನು ಮದುವೆಯಾಗಿರುವುದು

ಕಂಡುಬಂದಿಲ್ಲ. ಕ್ಷೇತ್ರಕಾರ್ಯ ಕಾಲದಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ ಯುವಕನೊಬ್ಬ ಮುಕ್ರಿ ಯುವತಿಯನ್ನು ಪ್ರೀತಿಸಿ ಮದುವೆಯಾಗಲು ಆಸಕ್ತಿ ವ್ಯಕ್ತಪಡಿಸಿದ್ದರ ಬಗ್ಗೆ ಚರ್ಚೆ ನಡೆಯುತ್ತಿತ್ತು. ಮುಕ್ರಿ ಈಶ್ವರಣ್ಣ ಈ ಪಂಚಾಯತಿಯಲ್ಲಿ ನನ್ನನ್ನು ಎಳೆತಂದರು. ಅಲ್ಲಿ ತಲೆದೋರಿದ ಸಮಸ್ಯೆಯೆಂದರೆ ಮದುವೆಯದಲ್ಲ. ಬದಲಿಗೆ ಮದುವೆಯಾದ ಮೇಲೆ ನನಗೆ ಮೀಸಲಾತಿ ಸಿಗುತ್ತದೆಯೇ? ಎಂಬುದು ಅವನ ಪ್ರಶ್ನೆಯಾಗಿತ್ತು. ಹಾಗೆ ಆಗುವುದಿಲ್ಲವೆಂದು ತಾಯಿ ಖುಷಿಯಾಗಿದ್ದಂತೆ ಕಂಡುಬಂದಿತು. ಇಂತಹ ಕೆಲವು ಘಟನೆಗಳನ್ನು ತಿಳಿದುಕೊಂಡದ್ದಾಯ್ತು. ಈಶ್ವರ ಮುಕ್ರಿಯ ಮುಖದಲ್ಲಿ ಯಾವ ಭಾವವೂ ಇರಲಿಲ್ಲ.

೪.೧ ಕುಟುಂಬ ವ್ಯವಸ್ಥೆ

ಯಾವುದೇ ಒಂದು ಸಮಾಜವಾಗಬೇಕೆಂದರೆ ಅಲ್ಲಿ ಕುಟುಂಬಗಳಿರಲೇಬೇಕು. ಕುಟುಂಬವೆಂಬುದು ಸಾಮಾಜಿಕ ಸಂರಚನೆಯಲ್ಲಿ ಒಂದು ಘಟಕವಾಗಿದೆ. ಮಾತೃಪ್ರಧಾನವಾದ ಬಹುತೇಕ ತಳಸಮುದಾಯಗಳಂತೆ ಮುಕ್ರಿ ಸಮುದಾಯದವರೂ ಸಹ ಕೂಡುಕುಟುಂಬ ವ್ಯವಸ್ಥೆಯನ್ನು ಹೊಂದಿದ್ದರು. ಈ ಸಮುದಾಯದವರೆಲ್ಲಾ ಒಂದೇ ಕಡೆ ಗುಂಪುಗುಂಪಾಗಿ ನೆಲೆಸಿರುವುದನ್ನು ಗಮನಿಸಿದರೆ ಮುಕ್ರಿಯರು ಒಟ್ಟಂದವಾಗಿ ಕೂಡಿಬಾಳಲು ಎಷ್ಟು ಆಪೇಕ್ಷೆ ಪಡುತ್ತಾರೆಂಬುದು ತಿಳಿಯುತ್ತದೆ. ಇದು ಕೇವಲ ಆಪೇಕ್ಷೆ ಅಥವಾ ಸಮುದಾಯ/ಗುಂಪಿನ ಮೇಲಿನ ಪ್ರೀತಿಯಿಂದ ಆ ರೀತಿ ಜೀವನ ಸಾಗಿಸುತ್ತಾರೆಂದಲ್ಲ. ಅದೊಂದು ರೀತಿಯಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ವಿಧಾನವೂ ಆಗಿದೆ. ಈ ಕಾರಣಕ್ಕಾಗಿಯೇ ಹಿಂದಿನವರು ಕೂಡುಕುಟುಂಬ ಪದ್ಧತಿಯನ್ನು ಹೆಚ್ಚು ಆಪೇಕ್ಷಿಸಿ ಒಪ್ಪಿಕೊಂಡಿದ್ದರು. ಅದೇ ರೀತಿಯಾಗಿ ಮುಕ್ರಿಯರು ಸಹ ಕೂಡುಕುಟುಂಬ ವ್ಯವಸ್ಥೆಯಲ್ಲಿದ್ದರು. ಇವರ ಜೋಪಡಿಗಳು ಕೂಡುಕುಟುಂಬಕ್ಕೆ ಹೇಳಿ ಮಾಡಿಸಿದವಲ್ಲ. ಕಾಲಿಗಾದರೆ ಕೈಗೆ ಆಗುವುದಿಲ್ಲ ಎನ್ನುವಷ್ಟು ಚಿಕ್ಕವು. ಆದರೆ ಅಷ್ಟೇ ಜಾಗದಲ್ಲಿ ತಾತ, ಅಜ್ಜಿ, ಅಪ್ಪ, ಅಮ್ಮ, ಮಕ್ಕಳು, ಅವರ ಹೆಂಡಿರು, ಮೊಮ್ಮಕ್ಕಳು ಹೀಗೆ ಎಲ್ಲರೂ ಒಟ್ಟಾಗಿಯೇ ಜೀವನ ನಡೆಸುತ್ತಿದ್ದರು. ಆದರೆ ಮುಕ್ರಿ ಸಮುದಾಯದ ಈಚಿನ ಪೀಳಿಗೆ ಕೂಡು ಕುಟುಂಬಕ್ಕೆ ಹೆಚ್ಚು ಮಹತ್ವ ಕೊಡುತ್ತಿಲ್ಲ. ಮದುವೆಯಾಗುತ್ತಿದ್ದಂತೆಯೇ ಪ್ರತ್ಯೇಕವಾಗಿ ಜೀವನ ನಡೆಸಲು ಆಪೇಕ್ಷಿಸುತ್ತಾರೆ. ಹೀಗಾಗಿ ಮುಕ್ರಿಯರಲ್ಲಿ ಪ್ರಸ್ತುತ ಕೂಡುಕುಟುಂಬಗಳಿಗಿಂತ ವಿಭಕ್ತ ಕುಟುಂಬಗಳೇ ಹೆಚ್ಚಾಗಿವೆ. ಹಾಗೆಯೇ ಮುಕ್ರಿ ಸಮುದಾಯ ಹಿಂದೆ ಒಪ್ಪಿಕೊಂಡ ಮಾತೃಪ್ರಾಧಾನ್ಯತೆಯು ಪ್ರಾಯಶಃ ಇತರ ಸಮುದಾಯಗಳ ಪ್ರಭಾವದಿಂದ ಕಡಿಮೆಯಾಗಿದೆ. ಪುರುಷಶಾಹಿ ಹಿಡಿತದಲ್ಲಿ ಕುಟುಂಬ ವ್ಯವಸ್ಥೆ ನಿಂತಿರುವುದು ಮೇಲ್ನೋಟಕ್ಕೇ ಕಾಣುತ್ತದೆ. ಮುಕ್ರಿಯರಲ್ಲಿ ಪುರುಷನಿಗೆ ಸಮಾನವಾಗಿಯೇ ಮಹಿಳೆ ದುಡಿಮೆಯಲ್ಲಿ ತೊಡಗುತ್ತಾಳೆ. ಆದರೆ ಅವಳು ಆರ್ಥಿಕವಾಗಿ ಬಲಹೀನಳಾಗಿ

ಕಾಣುತ್ತಾಳೆ. ಎಷ್ಟೋಕಡೆ ಹೆಣ್ಣಿನ ದುಡಿಮೆಯ ಮೇಲೆಯೇ ಇಡೀ ಕುಟುಂಬದ ತುತ್ತಿನ ಚೀಲ ಆಧಾರವಾಗಿರುವುದು ಕಾಣುತ್ತದೆ. ಹೀಗಿದ್ದೂ ಪುರುಷಶಾಹಿ ವ್ಯವಸ್ಥೆಯ ಕಬಂಧಬಾಹು ಮುಕ್ರಿಯಂತಹ ತಳಸಮುದಾಯಗಳಿಗೂ ವ್ಯಾಪಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

೪.೨. ಬೆಡಗು/ಬಳಿ ಪದ್ಧತಿ

ಬಹುತೇಕ ಭಾರತೀಯ ಎಲ್ಲಾ ಸಮುದಾಯಗಳು ಬೆಡಗು ಅಥವಾ ಬಳಿ ಪದ್ಧತಿಯನ್ನು ಅನುಸರಿಸುತ್ತವೆ. ಸಾಮಾಜಿಕವಾಗಿ ಬಂಧುತ್ವವನ್ನು ಕಾಪಾಡಿಕೊಳ್ಳುವ ಸುಲಭ ಮಾರ್ಗವಾಗಿ, ರಕ್ತಸಂಬಂಧ ನಿರ್ಧರಿಸುವ ಪ್ರಮುಖ ಉದ್ದೇಶಕ್ಕಾಗಿ ಬಳಿ ಪದ್ಧತಿ ಜಾರಿಯಲ್ಲಿದೆ. ಈ ಪದ್ಧತಿಗೆ ಮುಕ್ರಿ ಸಮುದಾಯ ಹೊರತಾಗಿಲ್ಲ. ಮುಕ್ರಿಗಳಲ್ಲೂ ಬಳಿ ಪದ್ಧತಿ ಇದೆ. ಇಂಗ್ಲೀಷ್ ಕೃತಿಯೊಂದರಲ್ಲಿ ಮುಕ್ರಿಯರ ಬಳಿಗಳ ಕುರಿತು ಈ ಕೆಳಗಿನಂತೆ ದಾಖಲಿಸಲಾಗಿದೆ.

‘There are no endogamous divisions of the caste. Their divisions exogamous sub-divisions, known as balis, are follows:

Kanne >Virgin

Tolana > Tola, Wolf

Shendi> Toddy palm

Kavadchi > Acacia specious (Tree)

Ane> Elephant

Shirin> A tree (Gynandropies pentaphylla)

Shetti> Fish

Dyavana> Dyava-Tortoise

Handi>pig

Hebbali> A Tree, Artocarpus hirsata

“The members of Shendhi bali will not touch toddy nor go beneath the shade of the teddy tree, and similarly with the shirin bali, the tree avoided and never injured. Members of Elehant division will not wear ivory

ornaments. Descent of the balis is traced only through males. The fourth &last of these divisions seems peculiar to the Mukri and Moger castes. Others are common among division caste of kanara."[೨]

ಮುಕ್ರಿ ಸಮುದಾಯದ ಬಳಿಗಳಲ್ಲಿ ಪ್ರಾಣಿ ಹಾಗೂ ಸಸ್ಯಗಳ ಹೆಸರಿರುವುದನ್ನು ಕಾಣಬಹುದು. ಕಾಡು ಮತ್ತು ಮುಕ್ರಿಯರ ನಡುವೆ ಅವಿನಾಭಾವ ಸಂಬಂಧನ್ನು ಅವರಿಸಿಕೊಂಡಿರುವುದು ಬಳಿ ಹೆಸರುಗಳಿಂದ ತಿಳಿಯುತ್ತದೆ. ಮುಕ್ರಿಯವರಲ್ಲಿ ಪ್ರಮುಖವಾಗಿ ಹತ್ತು ಬಳಿಗಳು ಪ್ರಚಲಿತ ಇವೆ. ಈ ರೀತಿಯ ಬಳಿಯ ಹೆಸರುಗಳು ಮಾದಿಗ ಸಮುದಾಯಗಳಲ್ಲಿಯು ಕಂಡುಬರುತ್ತದೆ.

೧. ಕನ್ಯೆ (ತರುಣಿ)

೨. ತೋಳನ (ತೋಳ)

೩. ಶೆಂಡಿ (ಶೇಂದಿ ಮರ> ಬಗನಿ ಮರ).

೪. ಕೌಡ್ಜಿ (ಒಂದು ಬಗೆಯ ಮರ, ಕೌಡ್ಲಿ ಮರ.)

೫. ಆನೆ

೬. ಶಿರಿನ (ಒಂದು ಬಗೆಯ ಮರ, ಶಿರ್ಷದ ಮರ)

೭. ಶೆಟ್ಟಿ (ಒಂದು ಜಾತಿಯ ಮೀನು)

೮. ದ್ಯಾವ (ಉತ್ತರಕನ್ನಡದ ಮುಕ್ರಿಯರಲ್ಲಿ ದ್ಯಾವ ಎಂದರೆ ಕೂಮ ಅಥವಾ ಆಮೆ ಎಂದು ಅರ್ಥ)

೯. ಹಂದಿ (ಹಂದಿ ಪ್ರಾಣಿ).

೧೦. ಹೆಬ್ಬಳ (ಒಂದು ಬಗೆಯ ಮರ, ಹೆಬ್ಬಳ ಮರ.)

ಮುಕ್ರಿಯರು ಯಾವ ಪ್ರಾಣಿ ಅಥವಾ ಮರದ ಹೆಸರಿನ ಬಳಿಯನ್ನು ಹೊಂದಿರುತ್ತಾರೋ ಅಂತಹ ಪ್ರಾಣಿ ಅಥವಾ ಮರವನ್ನು ದೈವತ್ವಕ್ಕೆ ಸಮಾನವೆಂದು ಭಾವಿಸುತ್ತಾರೆ. ಆ ಪ್ರಾಣಿ ಅಥವಾ ಮರವನ್ನು ಕೊಲ್ಲುವ ಅಥವಾ ಕಡಿಯುವುದಿಲ್ಲ ಮತ್ತು ಬಳಕೆ ಮಾಡುವುದಿಲ್ಲ. ಆದರೆ ಅವುಗಳನ್ನು ನಿತ್ಯವೂ ಪೂಜಿಸುವುದಿಲ್ಲ.

ಉದಾಹರಣೆಗೆ ಶೇಂದಿ ಬಳಿಯವರು ಶೇಂದಿಯನ್ನು ಕುಡಿಯುವಂತಿಲ್ಲ ಮತ್ತು ಶೆಂಡಿ ಮರದ ನೆರಳಲ್ಲಿ ಕುಳಿತುಕೊಳ್ಳುವಂತಿಲ್ಲ. ಆ ಮರದ ಸೊಪ್ಪನ್ನು ಯಾವುದಕ್ಕೂ ಬಳಸುವಂತಿಲ್ಲ. ಒಂದೇ ಬಳಿಯನ್ನು ಹೊಂದಿದ ಎರಡು ಕುಟುಂಬಗಳನ್ನು ಸಹೋದರರೆಂದು ಭಾವಿಸಲಾಗುತ್ತದೆ.

ಹೀಗಾಗಿ ಸಜಾತಿ ಬಳಿಯ ಕುಟುಂಬಗಳ ಮಧ್ಯದಲ್ಲಿ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ವಿಜಾತಿ ಬಳಿಗಳ ಮಧ್ಯದಲ್ಲಿ ಮಾತ್ರ ವೈವಾಹಿಕ ಸಂಬಂಧಗಳು ಏರ್ಪಡುತ್ತವೆ.

ಈ ರೀತಿಯ ಬಳಿಗಳ ಹೆಸರುಗಳನ್ನು ಅಗೇರರು, ನಾಮಧಾರಿಗಳು, ಗೊಂಡರು, ಗಾಮೊಕ್ಕಲುಗಳಲ್ಲಿಯು ಕಂಡುಬರುತ್ತವೆ. ಆದರೆ ಅವರಲ್ಲಿ ಹಂದಿಬಳಿ, ಹೆಬ್ಬಳ ಬಳಿ, ಶೆಂಡಿ ಬಳಿ, ಕೌಡ್ಡಿಬಳಿ, ಕನ್ನೆ ಬಳಿಗಳು ಇಲ್ಲವೆಂದು ಹೇಳಲಾಗುತ್ತದೆ. ಅವುಗಳ ಹೊರತಾಗಿ ಇನ್ನುಳಿದ ಬಳಿಗಳನ್ನು ಹೋಲುವ ಹೆಸರುಗಳು ಮೇಲೆ ತಿಳಿಸಿದ ಸಮುದಾಯ ಗಳಲ್ಲಿಯು ಇವೆ.

ಪ್ರಸ್ತುತ ಹೊಸ ತಲೆಮಾರಿನ ಯುವ ಸಮುದಾಯದಲ್ಲಿ ಬಳಿಯ ಕುರಿತಾದ ತಿಳುವಳಿಕೆ ಇಲ್ಲದಿರುವುದು ಕಂಡುಬರುತ್ತಿದೆ. ತಮ್ಮ ಹಳೆಯ ಸಂಬಂಧಗಳನ್ನು ಅನುಸರಿಸಿಯೇ ಸಂಬಂಧಗಳನ್ನು ಬೆಸೆದುಕೊಳ್ಳಲಾಗುತ್ತಿರುವುದರಿಂದ ತಮ್ಮಲ್ಲಿ ಬಳಿಯ ಕುರಿತಾದ ತಿಳುವಳಿಕೆ ಕಡಿಮೆಯಾಗಿದೆಯಂದು ಮುಕ್ರಿ ಯುವಕರು ತಿಳಿಸುತ್ತಾರೆ. ತಮ್ಮ ಬುದುವಂತ ಹಾಗೂ ಮನೆಯ ಹಿರಿಯರಿಗೆ ಬಳಿಗಳ ಕುರಿತಾಗಿ ಗೊತ್ತಿದೆ. ಅದರ ಕುರಿತಾಗಿ ತಮಗೇನೂ ತಿಳಿಯದು ಎಂಬ ಉತ್ತರವೇ ದೊರೆಯುತ್ತದೆ.

೪.೩. ಬಂಧುತ್ವ

ಮುಕ್ರಿಯರು ಬಂಧುತ್ವವನ್ನು ಏರ್ಪಡಿಸಿಕೊಳ್ಳುವಾಗ ಮುಖ್ಯವಾಗಿ ಬೆಡಗನ್ನು ಆಧರಿಸುತ್ತಾರೆ. ಬೆಡಗು ಅಥವಾ ಬಳಿಯು ಕುಲಮೂಲದ ಚರಿತ್ರೆ ಹೇಳುವಂತಾದ್ದು. ಒಂದು ಬೆಡಗಿಗೆ ಸೇರಿದವರು ಒಂದೇ ಕುಟುಂಬ, ವಂಶಕ್ಕೆ ಸೇರಿದವರು ಎಂಬುದನ್ನು ಪ್ರತಿನಿಧಿಸುತ್ತದೆ. ಹೀಗಾಗಿ ಸಜಾತಿ ಬೆಡಗಿನಲ್ಲಿ ವಿವಾಹ ನಡೆಯುವುದಿಲ್ಲ. ವಿಜಾತಿ ಬೆಡಗಿನಲ್ಲಿ ಮಾತ್ರ ವಿವಾಹ ಜರುಗುತ್ತದೆ. ಹೆಣ್ಣು ಯಾವುಧೇ ಬೇರೆ ಬೆಡಗಿನ ಕುಟುಂಬದಿಂದ ಗಂಡನನ್ನು ಮದುವೆಯಾಗಿ ಬಂದರೆ, ಅವಳು ತನ್ನನ್ನು ಗಂಡನ ಬೆಡಗಿನೊಂದಿಗೆ ಗುರುತಿಸಿಕೊಳ್ಳುತ್ತಾಳೆ. ಸಾಮಾನ್ಯವಾಗಿ ಸೋದರ ಮಾವ, ಸೋದರ ಅತ್ತೆ, ಸಹೋದರಿಯ ಮಗಳು, ಸಹೋದರನ ಮಗಳೊಂದಿಗೆ ವಿವಾಹವನ್ನು ಏರ್ಪಡಿಸಿಕೊಳ್ಳುತ್ತಾರೆ. ಇತ್ತೀಚೆಗೆ ಮುಕ್ರಿ ಯುವ ಸಮಾಜಕ್ಕೆ ಬಳಿಯ ಕುರಿತಾಗಿ ಅಷ್ಟಾಗಿ ತಿಳುವಳಿಕೆ ಇಲ್ಲವಾಗಿದೆ. ಆದರೆ ಕೊಪ್ಪದ ಮುಖಂಡನಾದ ಬುದುವಂತನಿಗೆ ತಮ್ಮ ಕೊಪ್ಪದ ಪ್ರತಿ ಕುಟುಂಬದ ಬಳಿಯ ತಿಳುವಳಿಕೆ ಇರುತ್ತದೆ. ವಿವಾಹದಂತಹ ಕಾರ್ಯಗಳಲ್ಲಿ ನಿರ್ಣಾಯಕ ಪಾತ್ರವಹಿಸುವವನು ಬುದುವಂತನೇ ಆಗಿರುವುದರಿಂದ ಅವನು ಸರಿಯಾಗಿ ಪ್ರತಿಯೊಂದು ಕುಟುಂಬಗಳ ಬಳಿಯ ವಿವರಗಳನ್ನು ಗುರುತಿಸಿಕೊಂಡು ವಿಜಾತಿ ಬಳಿಯನ್ನು ಹೊಂದಿದವರ ಮಧ್ಯದಲ್ಲಿಯೇ ವಿವಾಹ ಏರ್ಪಡಿಸುತ್ತಾನೆ.

೪.೪. ಜೀವನಾವರ್ತನ ಆಚರಣೆಗಳು

ವಿವಾಹ

ಯಾವುದೇ ಸಮುದಾಯದಲ್ಲಿ ಮನುಷ್ಯನಿಗೆ ಮದುವೆಯಂಬುದು ಒಂದು ಮಹತ್ವದ ಕಾರ್ಯ. ಮದುವೆಯಾಗುವ ಮೂಲಕ ಒಂದು ಕುಟುಂಬ ಹೊಸದಾಗಿ ಸೃಷ್ಟಿಯಾದಂತೆ. ಮುಕ್ರಿಯರಲ್ಲಿ ಹುಡುಗಿ ಋತುಮತಿಯಾಗುವ ಪೂರ್ವದಲ್ಲಿಯೇ ಮದುವೆ ಮಾಡಲಾಗುತ್ತಿದ್ದಿತು. ಈಗ ಈ ರೀತಿಯ ಮದುವೆಗಳು ಮುಕ್ರಿಯರಲ್ಲಿ ಕಡಿಮೆ ಪ್ರಮಾಣದಲ್ಲಾಗುತ್ತಿವೆ. ಅಂದರೆ ಬಾಲ್ಯ ವಿವಾಹವು ಮುಕ್ರಿಯರಲ್ಲಿ ಇಂದಿಗೂ ಸಂಪೂರ್ಣವಾಗಿ ನಶಿಸಿಲ್ಲ ಎಂಬುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಾಣಲಾಯಿತು. ೧೨-೧೩ನೇ ವಯಸ್ಸಿಗೆ ಮದುವೆಯಾಗಿರುವ ಬಾಲೆಯರನ್ನು ಮುಕ್ರಿಯರ ನೆಲೆಗಳಲ್ಲಿ ಕಾಣಲಾಯಿತು. ಮುಕ್ರಿಯರ ಮದುವೆಯ ಚಂಡಂ(ಶಾಸ್ತ್ರ)ಗಳು ವಿಶಿಷ್ಟವಾಗಿದ್ದು ಈ ರೀತಿಯಾಗಿ ನಡೆಯುತ್ತವೆ.

ಹೆಣ್ಣು ನೋಡುವ ಶಾಸ್ತ್ರ

ಸಾಮಾನ್ಯವಾಗಿ ಮುಕ್ರಿಯರು ಮದುವೆಯಾಗಲು ಆಪೇಕ್ಷಿಸುವ ಹುಡುಗಿಯರನ್ನು ನೇರವಾಗಿ ಮನೆಗೆ ಹೋಗಿ ಹೆಣ್ಣು ನೋಡುವ ಶಾಸ್ತ್ರ ಮಾಡುವುದಿಲ್ಲ. ಚಂದಾವರದ ಜಾತ್ರೆಯಲ್ಲೋ, ಹೆಗಡೆಯ ಜಾತ್ರೆಯಲ್ಲೋ, ದೇವಿಕಾನದ ಹಬ್ಬದಲ್ಲೋ ಹುಡುಗಿಯರನ್ನು ನೋಡುವ ಪ್ರಸಂಗ ನಡೆಯುತ್ತದೆ. ಮೊದಲಿಗೇ ಯಾವ ಮನೆಯಲ್ಲಿ ಮದುವೆಗೆ ಬಂದ ಹುಡುಗಿಯಿದ್ದಾಳೆ ಎಂದು ಗಂಡಿನ ಕಡೆಯವರು ತಮ್ಮ ಬಂಧು ಬಳಗದ ಮೂಲಕ ತಿಳಿದಿರುತ್ತಾರೆ. ಹುಡುಗಿ ಯಾವ ಜಾತ್ರೆಗೆ ಬರುತ್ತಾಳೆಂಬುದನ್ನು ಊಹಿಸಿ ಗಂಡಿನ ಕಡೆಯವರು ಜಾತ್ರೆಗೆ ತೆರಳುತ್ತಾರೆ. ಅಲ್ಲಿ ಅನೌಪಚಾರಿಕವಾಗಿ ಹುಡುಗಿಯ ತಂದೆ ತಾಯಿಯರನ್ನು ಮಾತನಾಡಿಸುತ್ತಾರೆ.

ತಮಗೆ ಹುಡುಗಿ ಇಷ್ಟವಾದಳೆಂದರೆ ತರುವಾಯ ವರನ ತಂದೆ ಅಥವಾ ಅವನ ಕಡೆಯ ಹಿರಿಯರು ಊರಿನ ಬುದುವಂತರನ್ನು ಕರೆದುಕೊಂಡು ಬಂದು ಹೆಣ್ಣು ಗೊತ್ತು ಪಡಿಸುವ ಸಂಪ್ರದಾಯವಿದೆ. ಈ ಸಂಬಂಧ ಒಪ್ಪಿಗೆಯಾದಲ್ಲಿ ಊರಿನ ಬುದವಂತನನ್ನು ಕರೆದು ಮಾತುಕತೆಯಾಡುತ್ತಾರೆ. ಗಂಡಿನ ಕಡೆಯ ನಾಲ್ಕಾರು ಜನ, ಹೆಣ್ಣಿನ ಕಡೆಯ ನಾಲ್ಕಾರು ಜನ ಒಂದೆಡೆ ಸೇರಿ ಬುದುವಂತ ಮತ್ತು ಕೋಲ್ಕಾರರ ಸಮ್ಮುಖದಲ್ಲಿ ಮಾತುಕತೆ ನಡೆಯುತ್ತದೆ. ತೆರಕೊಡುವ ಪದ್ದತಿ ಮುಕ್ರಿಗಳಲ್ಲಿ ಇನ್ನು ರೂಢಿಯಲ್ಲಿದೆ. ಕನಿಷ್ಟ ಒಂದು ವರಹದಿಂದ ಆರಂಭವಾಗಿ ಹತ್ತು ವರಹದವರೆಗೆ ಇದು ಇರುತ್ತಿತ್ತು. ಪ್ರಸ್ತುತ ವರಹದ ಜಾಗದಲ್ಲಿ ರೂಪಾಯಿಗಳು ಬಂದಿವೆ. ಮದುವೆಯ ಮಾತುಕತೆ ಹೆಣ್ಣಿನ ಮನೆಯಲ್ಲಿ ನಡೆಯುವುದರಿಂದ ಆ ದಿನದ ಊಟವನ್ನು ಹೆಣ್ಣಿನ ಕಡೆಯವರೇ ಹಾಕಬೇಕು.

ಮೊದಲು ವಿವಾಹವು ಐದು ದಿನಗಳವರೆಗೆ ಜರುಗುತ್ತಿತ್ತು. ಈಗ ಅವರವರ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಆದಷ್ಟು ಕಡಿಮೆ ದಿನಗಳಲ್ಲಿ ಗಂಡಿನ ಮನೆಯ ಮುಂದೆ ವಿವಾಹ ನಡೆಯುತ್ತದೆ.

ಪನ್ನೆ ಪದ್ಧತಿ (ಕೂದಲು ಕೊಡುವ ಶಾಸ್ತ್ರ)

ಮದುವೆಯ ದಿನದಂದು ವರನ ಕೂದಲನ್ನು ಕತ್ತರಿಸಿ ಅವನಿಗೆ ಸ್ನಾನ ಮಾಡಿಸುತ್ತಾರೆ. ಈ ಪದ್ಧತಿಗೆ ಪನ್ನೆ ಎನ್ನುವರು. ಇದೇ ರೀತಿ ಮದುಮಗಳ ಮನೆಯಲ್ಲಿ ಆಕೆಗೆ ಅರಿಷಿಣ ಹೂವು ಚೆನ್ನಾಗಿ ಅರೆದು ನೀರಿನಲ್ಲಿ ಎಣ್ಣೆ ಹಾಕಿ ಸ್ನಾನ ಮಾಡಿಸುತ್ತಾರೆ. ಮದುವೆಯ ಮೊದಲ ದಿನ ಗಂಡಿನ ಕಡೆಯವರು ಹೆಣ್ಣಿಗೆ ತಮ್ಮ ಯೋಗ್ಯತೆಗೆ ತಕ್ಕಂತೆ ಆಭರಣಗಳನ್ನು ನೀಡುವ ಸಂಪ್ರದಾಯವಿದೆ. ಇದನ್ನು ನಿಕ್ಕಿ ಮಾಡುವುದು ಅಥವಾ ಹೂ ಮುಡಿಸುವುದು ಎಂದೆಲ್ಲ ಕರೆಯುತ್ತಾರೆ. ಬುದುವಂತ, ಕೋಲಕಾರ ಹಾಗೂ ಗಂಡಿನ ಕಡೆಯ ಎಂಟತ್ತು ಜನ ಈ ಕಾರ್ಯಕ್ರಮಕ್ಕೆ ಹೋಗುತ್ತಾರೆ. ಗಂಡಿನ ಅಕ್ಕ ಅಥವಾ ತಂಗಿ ಆಭರಣವನ್ನು ತೊಡಿಸುತ್ತಾರೆ. ಅಂದು ಹೆಣ್ಣಿನ ಮನೆಯಲ್ಲಿಯೇ ಅವರೆಲ್ಲ ಉಳಿದುಕೊಳ್ಳುತ್ತಾರೆ.

ತೊಂಡ್ಲ ಕಟ್ಟುವುದು (ಹಂದರ ಶಾಸ್ತ್ರ)

ಮದುವೆಯಾಗುವ ಗಂಡಿನ ಮನೆಯ ಮುಂದೆ ಕಾಡಿನಿಂದ ತಂದ ಗೂಟಗಳನ್ನು ಹೂಳುತ್ತಾರೆ. ಮೇಲೆ ತೆಂಗಿನ ಗರಿ ಹಾಕಲಾಗುತ್ತದೆ. ಚಪ್ಪರವನ್ನು ಪೂರ್ಣಗೊಳಿಸಿದ ನಂತರ ಮದುವೆ ಗಂಡಿನ ಸೋದರಮಾವನಾಗುವವನು ಅತ್ತಿ ಮರದ ಟೊಂಗೆಯನ್ನು ತಂದು ಮಧ್ಯದಲ್ಲಿರುವ ಗೂಟಕ್ಕೆ ಕಟ್ಟುತ್ತಾರೆ. ಇದನ್ನು ತೊಂಡ್ಲ ಕಟ್ಟುವುದು ಎನ್ನುತ್ತಾರೆ. ಹಂದರದ ಕಂಬಗಳ ಎರಡು ಬದಿಗಳಲ್ಲಿ ನೀರು ತುಂಬಿದ ಎರಡು ಗಡಿಗೆಗಳನ್ನು ಇಡುತ್ತಾರೆ. ಈ ಗಡಿಗೆಗಳು ವಧು-ವರನ ಸಂಸಾರ ಅಭಿವೃದ್ಧಿ ಹೊಂದಲಿ ಎಂಬ ಆಶಯದಿಂದ ಇರಿಸಲಾಗುವುದಂತೆ. ಗಂಡಿನ ಮನೆಯ ಮತ್ತು ಹೆಣ್ಣಿನ ಮನೆಯ ಯಜಮಾನರು ಸೇರಿ ಒಂದು ಬಿಳಿ ಬಟ್ಟೆಯನ್ನು ಧಾರೆ ಎರೆಯುವ ಸ್ಥಳದ ಮೇಲ್ಭಾಗದಲ್ಲಿ ಚಪ್ಪರಕ್ಕೆ ಕಟ್ಟುತ್ತಾರೆ. ಇದನ್ನು ಗುರುಗಪ್ಪಡ ಕಟ್ಟುವುದು ಎನ್ನುತ್ತಾರೆ. ಮದುವೆ ಮನೆಯಲ್ಲಿ ಚಪ್ಪರ ಹಾಕುವ ಕ್ರಿಯೆಯಲ್ಲಿ ಕೋಲಕಾರನು ಮುಖ್ಯವಾಗಿರುವುದರಿಂದ ಆತನಿಗೆ ಚಪ್ಪರ ಕಾಣಿಕೆ ಎಂದು ಹಿಂದೆ ನಾಲ್ಕು ರೂಪಾಯಿ ನಾಲ್ಕಾಣೆ ಕೊಡಲಾಗುತ್ತಿತ್ತು. ಈಗ ಅದು ಇಪ್ಪತ್ತೈದು ರೂಪಾಯಿವರೆಗೆ ಏರಿದೆ.

ತುಳಸಿ ಪೂಜೆ

ಹಾಲಕ್ಕಿಗಳಂತೆ ಮುಕ್ರಿಯರೂ ತುಳಸಿಗೆ ದೈವತ್ವದ ಸ್ಥಾನವನ್ನು ನೀಡಿದ್ದಾರೆ. ಮದುವೆಯ

ದಿನ ಮದುಮಗ ಬಂದು ಮೊದಲಿಗೆ ತುಳಸಿ ಪೂಜೆ ಮಾಡುತ್ತಾನೆ. ಅದಾದ ನಂತರವೇ ಮದುವೆಯ ಇತರ ಕಾರ್ಯಗಳು ಪ್ರಾರಂಭಗೊಳ್ಳುವವು. ಮದುವೆ ಕಾರ್ಯಗಳನ್ನೇ ಮುಕ್ರಿಗಳು ಚಡಂಗ ಎಂದು ಕರೆಯುತ್ತಾರೆ.

ಬಳಿ ಮೀಯಿಸುವ ಶಾಸ್ತ್ರ

ತುಳಸಿ ಪೂಜೆಯ ತರುವಾಯ ಹುಡುಗನ ಬಳಿಗೆ ಸೇರಿದ ಐದುಜನ ಮುತ್ತೈದೆ ಹೆಂಗಸರು ವರನಿಗೆ ನೀರನ್ನು ಮೀಯಿಸುತ್ತಾರೆ. ಇದನ್ನು ಬಳಿ ಮೀಯಿಸುವದು ಎಂದು ಕರೆಯಲಾಗುತ್ತದೆ. ಹುಡುಗನಿಗೆ ಬಳಿ ಮೀಯಿಸಿದ ನಂತರ ಪಂಚೆ ಉಡಲು ಕೊಡುತ್ತಾರೆ. ಹುಡುಗನು ಬಟ್ಟೆ ತೊಟ್ಟ ತರುವಾಯ ಬುದುವಂತನು ಹುಡುಗನಿಗೆ ವೀಳ್ಯದ ಎಲೆಯ ಬಾಸಿಂಗವನ್ನು ಕಟ್ಟುತ್ತಾನೆ. ಆ ನಂತರ ದಿಬ್ಬಣ ಹೊರಡುತ್ತದೆ. ಮದುಮಗನ ಕೈಲಿ ಒಂದು ಕಾಯನ್ನು ಹಿಡಿದುಕೊಳ್ಳಲು ಕೊಡುತ್ತಾರೆ. ಮದುಮಗನಿಗೆ ಸೋದರಮಾವನಾಗುವವನು ಕೊಡೆ ಹಿಡಿಯುತ್ತಾನೆ. ಕೊಡೆಯನ್ನು ಅವರ ಕೈಯಲ್ಲಿಯೇ ತಯಾರಿಸಿಕೊಳ್ಳಲಾಗಿರುತ್ತದೆ. ಒಂದು ಬಿದರಿನ ಗಳದ ಮೇಲ್ಭಾಗದಲ್ಲಿ ಕತ್ರಿಯಾಕಾರದಲ್ಲಿ ಬಿದಿರನ್ನು ಕಟ್ಟುತ್ತಾರೆ. ಅದರ ಮೇಲೆ ಬಿಳಿಯ ವಸ್ತ್ರವನ್ನು ಹಾಕಿ ಬಿಗಿಗೊಳಿಸುತ್ತಾರೆ. ಇದನ್ನೇ ಕೊಡೆ ಎಂದು ಕರೆಯಲಾಗುತ್ತದೆ. ಆದರೆ ಇತ್ತೀಚೆಗೆ ಬಟ್ಟೆಯ ಸಿದ್ಧ ಕೊಡೆಗಳನ್ನೇ ಬಹುತೇಕ ಬಳಸಲಾಗುತ್ತದೆ. ಕೊಡೆ ಹಿಡಿದವನಿಗೆ ಚೆಂಚಿ ಅಣ್ಣ ಎಂದು ಕರೆಯುತ್ತಾರೆ. ಮಲೆನಾಡಿನ ಕಡೆಗೆ ಬಿಳಿಗೊಡೆಯವನು ಎಂದು ಹೇಳಲಾಗುತ್ತದೆ. ಕೊಡೆಹಿಡಿದವನ ಹೆಂಡತಿಗೆ ತಳಗಕ್ಕ ಎನ್ನುತ್ತಾರೆ. ತಳಗದ ಬಟ್ಟಲನ್ನು ಅವಳು ಹಿಡಿದುಕೊಂಡಿರುವುದರಿಂದ ಅವಳನ್ನು ಹಾಗೆ ಕರೆಯುತ್ತಾರೆ. ತಳಗದ ಬಟ್ಟಲಲ್ಲಿ ಒಂದು ತಂಬಿಗೆಯನ್ನಿಟ್ಟು, ಅದಕ್ಕೆ ಮಾವಿನ ಕೊನಕಲನ್ನು ಅದರೊಳಗೆ ಹಾಕಿ, ಬಟ್ಟಲಲ್ಲಿ ಅಕ್ಕಿ ಸಣ್ಣ ದೀಪ ಇಟ್ಟುಕೊಂಡಿರುತ್ತಾರೆ.

ಮದುವೆ ದಿಬ್ಬಣವು ಮುಕ್ರಿಯರ ಕೇರಿಯನ್ನು ತಲುಪಿದಾಗ ಆ ಊರಿನ ಬುದುವಂತನು ನೆಂಟರನ್ನು ಒಳಗೆ ಕರೆದುಕೊಳ್ಳುತ್ತಾನೆ. ಗಂಡಿನ ಮಾವನು ಹುಡುಗಿಯ ತಂದೆ ತಾಯಿಯರಿಗೆ ಸೀರೆ ಪಂಚೆ, ಟವಲು ಉಡುಗೊರೆ ಕೊಡುತ್ತಾನೆ. ಮದುವೆ ಮುಗಿಸಿ ದಿಬ್ಬಣ ತಿರುಗಿ ಹೋಗುವಾಗ ಹೆಣ್ಣಿನ ಮನೆಯವರು ಗಂಡಿನ ತಂದೆ ತಾಯಿಯರಿಗೆ ಕೊಡಪಾನ, ಚೆಂಬು, ತೆಂಗಿನ ಗಿಡವನ್ನು ಬಳವಳಿಯಾಗಿ ಕೊಡುತ್ತಾರೆ.

ಎದುರು ತೋರಣ

ಮದುವೆ ಮನೆಯವರು ತಮ್ಮ ಮನೆಯಿಂದ ಇಪ್ಪತ್ತು ಇಪ್ಪತ್ತೈದು ಅಡಿಗಳಷ್ಟು ದೂರದಲ್ಲಿ ಒಂದು ಮಾವಿನ ತೋರಣವನ್ನು ಕಟ್ಟುತ್ತಾರೆ. ಇದನ್ನು ಎದುರು ತೋರಣ ಎನ್ನುತ್ತಾರೆ.

ಹೆಣ್ಣಿನ ದಿಬ್ಬಣವು ನೇರವಾಗಿ ಮದುವೆ ಮನೆಗೆ ಬರುವಂತಿಲ್ಲ. ಆ ತೋರಣದ ಬಳಿ ಬಂದು ನಿಲ್ಲುತ್ತದೆ. ತರುವಾಯ ವರನ ಕಡೆಯವರು ವಧುವಿನ ಕಡೆಯವರನ್ನು ಸ್ವಾಗತಿಸಿ ಮದುವೆಯ ಚಪ್ಪರಕ್ಕೆ ಕರೆದೊಯ್ಯುತ್ತಾರೆ.

ಬಾಸಿಂಗ

ವಧು ವರರಿಗೆ ಬಾಸಿಂಗ ಕಟ್ಟುವ ಸಂಪ್ರದಾಯವಿದೆ. ಬಾಸಿಂಗವು ತುಂಬಾ ಸರಳ ವಾಗಿರುತ್ತದೆ. ಮುಕ್ರಿ ಸಮುದಾಯದಲ್ಲಿ ಬಾಸಿಂಗದೊಂದು ವಿಶೇಷ. ಇವರದು ಗುಡಿಗಾರರು ಮಾಡುವ ಬೆಂಡಿನ ಬಾಸಿಂಗವಲ್ಲ. ಬದಲಿಗೆ ಚೆಂದದ ಹೂಗಳನ್ನು ತಂದು ನೇದು ಹೂವಿನ ಬಾಸಿಂಗ ಮಾಡುತ್ತಿದ್ದರು. ಜಾಜಿ, ಸಂಪಿಗೆ, ಮಂಜಟ್ಟಿ ಹೂ, ಮಲ್ಲಿಗೆ, ಸಿಂಗಾರ ಹೂವುಗಳನ್ನು ತಂದು ಬಿದರಿನ ಕೋಲಿನ ಕಮಂಡಲವನ್ನು(ಕಮಾನನ್ನು) ಮಾಡಿ ತೆಂಗಿನ ಕಡ್ಡಿಯ ತಟ್ಟೆಗಳನ್ನು ಮಾಡಿ ಪ್ರತಿ ತಟ್ಟೆಗಳಿಗೆ ಒಂದೊಂದು ಬಗೆಯ ಹೂಗಳನ್ನು ಪೋಣಿಸುತ್ತಾರೆ. ಇಡೀ ಬಾಸಿಂಗವೂ ಬಣ್ಣ ಬಣ್ಣದ ಹೂವುಗಳಿಂದ ಕಂಗೊಳಿಸುತ್ತಿರುತ್ತದೆ. ಇತ್ತೀಚಿಗೆ ಗುಡಿಗಾರರು ತಯಾರಿಸುವ ಬಾಸಿಂಗ ಬಳಸುವುದಾದರೂ ಅದರ ಮೇಲೆ ಸಿಂಗಾರವನ್ನು ಧರಿಸಬೇಕು. ಇಲ್ಲದಿದ್ದಲ್ಲಿ ಊರ ಹಿರಿಯರು ದಂಡ ಹಾಕುವ ಪದ್ಧತಿ ಇದೆ.

ಧಾರೆ ಶಾಸ್ತ್ರ

ಬಾಸಿಂಗ ಕಟ್ಟಿದ ತರುವಾಯ ವಧು ವರರನ್ನು ಹಂದರಕ್ಕೆ ಕರೆತರಲಾಗುತ್ತದೆ. ಹಂದರದ ಮಧ್ಯಭಾಗದಲ್ಲಿ ಕುಳಿತ ಬುದುವಂತನು ವಧು ವರರು ಉಟ್ಟ ಬಟ್ಟೆಗಳ ಎರಡೂ ತುದಿಯನ್ನು ಗಂಟು ಹಾಕಿ ವಧುವಿನ ಬಲಗೈ ವರನ ಬಲಗೈ ಮೇಲೆ ಇಡಿಸಿ ತುಳಸಿ ದೇವತೆಯ ಸಾಕ್ಷಿಯಾಗಿ ಪಂಚಾಮೃತವನ್ನು ಎರೆಯುತ್ತಾನೆ. ಬುದುವಂತರು ಗಟ್ಟಿಯಾಗಿ ಇಂಥವರ ಮಗಳನ್ನು ಇಂಥವರ ಮಗನಿಗೆ ಕೊಟ್ಟು ದೈವದ ಸಮಕ್ಷಮದಲ್ಲಿ ವಧು-ವರರ ಕೈ ಸೇರಿಸಿ ಧಾರೆ ಎರೆಯುತ್ತಿದ್ದಾರೆ. ಸೇರಿದ ಸಮಸ್ತ ಜನರಿಗೆ, ದೈವದವರದೂ ಒಪ್ಪಿಗೆಯಾ ಎಂದು ಕೇಳುತ್ತಾನೆ.' ಎಲ್ಲರೂ ಆಗಲಿ ನಮ್ಮ ಒಪ್ಪಿಗೆ ಇದೆ ಎಂದು ಹೇಳಿದ ತರುವಾಯ ಬುದುವಂತನು ತನ್ನ ಮೇಲ್ವಿಚಾರಣೆಯಲ್ಲಿ ಧಾರೆ ಶಾಸ್ತ್ರ ಮಾಡುತ್ತಾನೆ. ಹಂದರದೊಳಗಿನ ಧಾರೆ ಶಾಸ್ತ್ರ ಪೂರ್ಣಗೊಳಿಸಲಾಗುತ್ತದೆ. ಆಮೇಲೆ ಮನೆಯ ಒಳಗೆ ಗಂಡು-ಹೆಣ್ಣನ್ನು ದೇವರ ಮುಂದೆ ಕೂಡಿಸಿ ಅಕ್ಷತೆಯನ್ನು ಹಣೆಯ ಮೇಲೆ ಒತ್ತಿ ಹಚ್ಚುತ್ತಾರೆ. ನಂತರ ತಂದೆ-ತಾಯಿಗಳು, ಬುದುವಂತರು, ಹಿರಿಯರು ಅಕ್ಷತೆಯನ್ನು ತಲೆಯ ಮೇಲೆ ಹಾಕುತ್ತಾರೆ. ವರನು ವಧುವಿಗೆ ಮಾಂಗಲ್ಯ ಕಟ್ಟುತ್ತಾನೆ. ಇದಾದ ತರುವಾಯ ಮನೆಯಿಂದ ಹೊರಬಂದು ಸೇರಿದ ದೈವದ ಹಿರಿಯರಿಗೆ, ಬಂಧುಬಳಗದವರಿಗೆ ಕಾಲಿಗೆ ನಮಸ್ಕಾರ ಮಾಡುತ್ತಾರೆ.

ಅಕ್ಕಿ ಚೆಲ್ಲುವ ಶಾಸ್ತ್ರ

ತಾಳಿ ಕಟ್ಟಿದ ನಂತರ ವಧು ವರರು ಮನೆಯ ಹೊರಗೆ ಬಂದು ಹಿರಿಯರಿಗೆ ನಮಸ್ಕಾರ ಮಾಡಿ ಮರಳಿ ಮನೆಯೊಳಗೆ ಹೋಗಬೇಕು. ಅವರು ಮನೆಯೊಳಗೆ ಹೋಗುವ ಪೂರ್ವದಲ್ಲಿಯೇ ಹೊಸ್ತಿಲ ಮೇಲೆ ಸೇರಿನಲ್ಲಿ ಅಕ್ಕಿಯನ್ನು ತುಂಬಿ ಇಟ್ಟಿರುತ್ತಾರೆ. ಆ ಅಕ್ಕಿಯನ್ನು ವಧು ವರರು ಮನೆಯೊಳಗೆ ಅಕ್ಕಿ ಚೆಲ್ಲುವಂತೆ ಬಲಗಾಲಿನಿಂದ ಸೇರನ್ನು ಒದ್ದು ಒಳಹೋಗುತ್ತಾರೆ. ಪ್ರಾಯಶಃ ಈ ಪದ್ಧತಿ ಕರ್ನಾಟಕದ ಎಲ್ಲಾ ಕಡೆಯೂ ಎಲ್ಲಾ ಸಮುದಾಯಗಳಲ್ಲಿಯೂ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಪ್ರಚಲಿತವಿದೆ. ಮಗಳನ್ನು ಕೊಟ್ಟ ಮನೆ ಬರಿದಾಗಬಾರದು ಎನ್ನುವ ಆಶಯ ಅದರ ಹಿಂದಿರಬಹುದು. ಪೌರೋಹಿತ್ಯಕ್ಕಾಗಿ ಬ್ರಾಹ್ಮಣ ಪುರೋಹಿತರನ್ನು ಕರೆಸುವ ಪರಿಪಾಠ ಇವರಲ್ಲಿಲ್ಲ. ಆದರೆ ಇತ್ತೀಚೆಗೆ ಮುಕ್ರಿಯ ಕೆಲವು ಕುಟುಂಬಗಳು ಮೇಲ್ಜಾತಿಯವರಂತೆ ಬ್ರಾಹ್ಮಣ ಪುರೋಹಿತರನ್ನು ಕರೆಸಲು ಪ್ರಾರಂಭಿಸಿದ್ದನ್ನು ಕ್ಷೇತ್ರಕಾರ್ಯದಲ್ಲಿ ನೋಡಲಾಯಿತು. ಮದುವೆಯಲ್ಲಿ ಅತೀ ಮುಖ್ಯ ಪಾತ್ರವಹಿಸುವುದೇ ಸೋಬಾನೆ ಹಾಡುಗಳು. ಪ್ರತಿಯೊಂದು ಕಾರ್ಯಕ್ಕೂ ಆಯಾ ಸಂದರ್ಭಕ್ಕೆ ತಕ್ಕಂತಹ ಪದಗಳನ್ನು ಮುಕ್ರಿ ಮಹಿಳೆಯರು ಹಾಡುತ್ತಾರೆ.

ಹಿಂದೆಲ್ಲ ಮದುವೆಯಾದ ಮಾರನೆ ದಿನ ದಿಬ್ಬಣ ವಾಪಸ್ಸು ಹೋಗುತ್ತಿತ್ತು. ಈಗ ಆ ದಿನದಂದೆ ದಿಬ್ಬಣ ಹೊರಡುತ್ತದೆ. ವರನೇ ಖುದ್ದಾಗಿ ಕೊಪ್ಪದ ಪ್ರತಿ ಮನೆಗೆ ಹೋಗಿ ತನ್ನ ಮನೆಗೆ ಬರುವಂತೆ ಅಹ್ವಾನಿಸುತ್ತಾನೆ. ಹೆಣ್ಣಿನ ತಂದೆಯು ನಮ್ಮ ಮಗಳಿಗೆ ಹೊಟ್ಟೆಗೆ ಅನ್ನ, ನೆತ್ತಿಗೆ ಎಣ್ಣೆ, ಉಡಲು ಸೀರೆ ಇವುಗಳನ್ನು ಕೊಡುವವರು ಯಾರು ಎಂದು ಗಟ್ಟಿಯಾಗಿ ಕೇಳುತ್ತಾನೆ.

ಆಗ ಗಂಡಿನ ಮನೆಯವರು ನಾವು ಎಂದು ಗಟ್ಟಿಯಾಗಿ ಹೇಳುತ್ತಾರೆ. ಮದುವೆಯಾದ ಹೆಣ್ಣನ್ನು ಗಂಡಿನ ತಂದೆ ಕೈಹಿಡಿದು ಒಳಗೆ ಕರೆದುಕೊಳ್ಳುತ್ತಾನೆ.

ಸಾಸಿ ತುಂಬಾಣ ಶಾಸ್ತ್ರ

ಗಂಡಿನ ಮನೆಗೆ ಬರುವ ದಿಬ್ಬಣವನ್ನು ಗಂಡಿನ ಕಡೆಯವರು ಎದರುಗೊಂಡು ಕರೆದುಕೊಳ್ಳುತ್ತಾರೆ. ಹೆಣ್ಣನ್ನು ಬಾಗಿಲಲ್ಲಿ ಅಕ್ಕಿಯ ಸಿದ್ದಿಯನ್ನು ಒದೆಸಿ ಒಳಗೆ ಕರೆದು ಕೊಳ್ಳುತ್ತಾರೆ. ಆಮೇಲೆ ಅವರನ್ನು ದೇವರ ಮುಂದೆ ಕೂರಿಸಿ ಪ್ರತಿಯೊಬ್ಬರು ಅಕ್ಷತೆಯನ್ನು ಹಾಕುತ್ತಾರೆ. ಅಕ್ಷತೆಯನ್ನು ಹಣೆಗೆ ಒತ್ತಿ ಕೂರಿಸುತ್ತಾರೆ. ಇದನ್ನು ಸಾಸಿ ತುಂಬಾಣ ಶಾಸ್ತ್ರ ಎನ್ನುತ್ತಾರೆ.

ಮದುವೆಯ ಚಡಂಗ ಮುಗಿದ ಮಾರನೆ ದಿನ ಮದುಮಕ್ಕಳಿಗೆ ಉಂಗ್ಲಾಟ ಆಡುವ ಕಾರ್ಯಕ್ರಮ ಇರುತ್ತದೆ.

ಮದುವೆಯ ಅನಂತರ ಹೆಣ್ಣಿನ ಮನೆಯಲ್ಲಿ ಬೀಗರ ಊಟವಿರುತ್ತದೆ. ಆ ದಿನ ಮೀನು ಅಥವಾ ಮಾಂಸದ ಊಟವಿರುತ್ತದೆ. ದೈವದವರೆಲ್ಲರೂ ಸೇರಿ ಆ ದಿನ ಬೀಗರೂಟವನ್ನು ಸವಿಯುತ್ತಾರೆ.

ಶೋಭನ ಶಾಸ್ತ್ರ

ಮುಕ್ರಿಯವರಲ್ಲಿ ಬಾಲ್ಯ ವಿವಾಹ ಪದ್ಧತಿ ಇದ್ದುದರಿಂದ ಹುಡುಗಿ ಮೈನೆರೆಯುವವರೆಗೂ ಶೋಭನಶಾಸ್ತ್ರ ಮಾಡುತ್ತಿರಲಿಲ್ಲ. ಆದರೆ ಇತ್ತೀಚೆಗೆ ಮೈನೆರೆತ ಹೆಣ್ಣಿಗೆ ಮದುವೆ ಮಾಡುವುದರಿಂದ ಶೋಭಾನ ಶಾಸ್ತ್ರವೂ ಬೇಗ ನಡೆಸಲಾಗುತ್ತದೆ. ಮದುವಣಗಿತ್ತಿಯು ಮದುವೆಯಾದ ತರುವಾಯ ಮೊದಲ ಮುಟ್ಟಿಗೆ ಮಿಂದ ಐದನೇ ದಿನ ಸಾಯಂಕಾಲ ಅನ್ನ ಪಾಯಸ ಮಾಡಿ ಹಸೆ ಹಾಸುತ್ತಾರೆ. ಹಸೆ ಹಾಸಿದವರಿಗೆ ದುಡ್ಡು ಕೊಡುವ ಅಥವಾ ಅಕ್ಕಿ, ತೆಂಗಿನ ಕಾಯಿ ಕೊಡುವ ಪದ್ಧತಿ ಇದೆ. ಶೋಭನವು ಗಂಡಿನ ಮನೆಯಲ್ಲಿಯೇ ನಡೆಯುತ್ತದೆ. ಇತ್ತೀಚೆಗೆ ಅನಿವಾರ್ಯ ಕಾರಣಗಳಿದ್ದಾಗ ಹೆಣ್ಣಿನ ಮನೆಯಲ್ಲಿ ಶೋಭನ ಕಾರ್ಯ ಮಾಡುವುದೂ ಉಂಟು.

ಹೆರಿಗೆ

ಗರ್ಭಿಣಿಯಾದ ಮಹಿಳೆಗೆ ಅಕ್ಕಿ ರೊಟ್ಟಿ ಶಾವಿಗೆ ಹೆಚ್ಚು ತಿನ್ನಿಸುತ್ತಾರೆ. ಗರ್ಭಿಣಿಯಾದ ಐದನೇ ಅಥವಾ ಏಳನೇ ತಿಂಗಳಲ್ಲಿ ಚೊಚ್ಚಿಲ ಹೆರಿಗೆಗೆ ತವರಿಗೆ ಕಳಿಸುವ ಸಂಪ್ರದಾಯವು ಮುಕ್ರಿಯರಲ್ಲಿದೆ.

ಹೆರಿಗೆಯ ನೋವು ಪ್ರಾರಂಭವಾದ ಕೂಡಲೆ ಮುಕ್ರಿಯರಲ್ಲಿಯೇ ಇರುವ ಬೆಜಗಿತ್ತಿ(ಸೂಲಗಿತ್ತಿ) ಯನ್ನು ಕರೆಸಲಾಗುತ್ತಿತ್ತು. ಮುಕ್ರಿಯರಲ್ಲಿಯೇ ಇದ್ದ ಬೆಜಗಿತ್ತಿಯರು ಬಂದು ಸಾರಾಗವಾಗಿ ಹೆರಿಗೆಯನ್ನು ಮಾಡಿಸುತ್ತಾರೆ. ಹೆರಿಗೆಯು ಹೆರಿಗೆಗಾಗಿಯೇ ನಿರ್ಮಿಸಿದ ಪ್ರತ್ಯೇಕ ಗುಡ್ಲಿನಲ್ಲಿ ನಡೆಸಲಾಗುತ್ತಿತ್ತು. ಮಗುವಾದ ೧೧ ದಿನದವರೆಗೂ ತಾಯಿ ಮಗು ಆ ಗುಡ್ಲಿನಲ್ಲಿಯೇ ಇರಬೇಕಾಗಿತ್ತು. ತರುವಾಯ ೧೧ನೇ ದಿನ ನಾಮಕರಣ ಮಾಡಲೆಂದು ತಾಯಿ ಮಗುವಿಗೆ ಸ್ನಾನ ಮಾಡಿಸಿ ಮೈಲಿಗೆ ಕಳೆಯಲಾಗುತ್ತಿತ್ತು. ೧೧ನೇ ದಿನ ನಾಮಕರಣ ಶಾಸ್ತ್ರ ಪೂರ್ಣಗೊಂಡ ತರುವಾಯ ತಾಯಿ ಮಗುವನ್ನು ಮನೆಯೊಳಗೆ ಕರೆತರಲಾಗುತ್ತಿತ್ತು. ಹೆರಿಗೆಯಾದ ಮನೆಯನ್ನು ಮೈಲಿಗೆ ಮನೆಯಂದು ಸಮುದಾಯದೊಳಗಿನ ಬೇರೆ ಕುಟುಂಬಗಳು ಇವರ ಮನೆಗೆ ಬರುವಂತಿರಲಿಲ್ಲ. ಮೈಲಿಗೆ ಕಳೆದ ನಂತರವೇ ಕೊಪ್ಪದ ಇತರ ಸದಸ್ಯರು ಹೆರಿಗೆಯಾದ ಮನೆಗೆ ಬಂದುಹೋಗುವುದನ್ನು ಮಾಡಬಹುದು.

ಇತ್ತೀಚೆಗೆ ಹೆರಿಗೆಗಾಗಿ ಪ್ರತ್ಯೇಕ ಗುಡ್ಲನ್ನು ನಿರ್ಮಿಸುವುದನ್ನು ಬಿಟ್ಟಿದ್ದಾರೆ. ಬಹುತೇಕ ಸರ್ಕಾರಿ ಆಸ್ಪತ್ರೆಗಳಿಗಾಗಿ ಹೆರಿಗೆಗೆ ಕರೆದುಕೊಂಡು ಹೋಗಲಾಗುತ್ತದೆ. ಹೆರಿಗೆಯಾದ ಕೂಡಲೇ

ಬಾಣಂತಿಗೆ ನಂಜು ಆಗದಂತೆ ನಂಜಟ್ಲೆ ಬೇರನ್ನು ನಿಂಬೆ ರಸ ಅಥವಾ ಅಕ್ಕಚ್ಚಿನಲ್ಲಿ ಗಂಜಿ ತೇದು ನೆಕ್ಕಿಸಲಾಗುತ್ತದೆ.

ಮಗು ಜನನವಾದ ೧೧ನೇ ದಿನ ನಾಮಕರಣ ಮಾಡುತ್ತಾರೆ. ಅಂದು ಮಡಿವಾಳಗಿತ್ತಿ ತಂದ ಕಾರಬೂದಿಯಿಂದ ಮನೆ ಶುದ್ಧಿ ಮಾಡಿ, ಮನೆಯವರೆಲ್ಲ ಶುದ್ಧಿ ಆಗಿ ಮಗುವಿಗೆ ಸ್ನಾನ ಮಾಡಿಸಿಕೊಂಡು ಬರುವಾಗ ಮನೆ ಮುಂದಿನ ದಾರಂದದಲ್ಲಿ ನಿಲ್ಲಿಸಿ ಮುಖಕ್ಕೆ ದ್ವಾರದಲ್ಲಿ ನೀರು ಹೊಡಿಯುತ್ತಾರೆ. ಇದಕ್ಕೆ ಚಳ್ಳನೀರು ಹೊಡೆಯುವುದು ಎನ್ನುತ್ತಾರೆ. ಈ ನೀರು ಹೊಡೆಯುವಾಗ ಮಗು ಬೆಚ್ಚಿ ಬೀಳಬೇಕು. ಇದರಿಂದ ಮುಂದೆ ಎಲ್ಲವನ್ನು ಎದುರಿಸುವ ಶಕ್ತಿ ಬರುತ್ತದೆ ಎಂಬ ನಂಬಿಕೆ ಇದೆ. ಮನೆಯ ಮುಂಭಾಗದಲ್ಲಿ ಮಾಸವನ್ನು ಚಿಕ್ಕ ಗಡಿಗೆಯಲ್ಲಿ ಹಾಕಿ ಹೂತಿರುತ್ತಾರೆ. ಮಾಸ ಹೂತ ಜಾಗದಲ್ಲಿ ಕಳ್ಳಿಗಿಡದ ಟೊಂಗೆಯೊಂದನ್ನು ನಿಲ್ಲಿಸುತ್ತಾರೆ. ಅದಕ್ಕೆ ಸಣ್ಣಗೆ ಅಕ್ಕಿ ರೊಟ್ಟಿ ಮಾಡಿ ಟೊಂಗೆಗೆ ಚುಚ್ಚಿರುತ್ತಾರೆ.

ಸಾಮಾನ್ಯವಾಗಿ ಮುಕ್ರಿಗಳು ಮರದ ಬೀಳಿಲಿನ ಇಲ್ಲವೇ ಅಡಿಕೆ ದಬ್ಬೆಯಿಂದ ಮಾಡಿದ ತೊಟ್ಟಿಲನ್ನು ಉಪಯೋಗಿಸುತ್ತಾರೆ. ಮಗುವನ್ನು ತೊಟ್ಟಿಲಿಗೆ ಹಾಕುವ ಪೂರ್ವದಲ್ಲಿ ರುಬ್ಬುವ ಗುಂಡನ್ನು ಹಾಕಿ ತೊಟ್ಟಿಲು ತೂಗುತ್ತಾರೆ. ತರುವಾಯ ಗುಂಡುಕಲ್ಲನ್ನು ತೆಗೆದು ತೊಟ್ಟಿಲಿಗೆ ಮಗುವನ್ನು ಹಾಕುತ್ತಾರೆ. ಮಗುವಿನ ನಾಮಕರಣವನ್ನು ಬುದುವಂತನೇ ಮಾಡುತ್ತಾನೆ. ತೊಟ್ಟಿಲು ಶಾಸ್ತ್ರ ಮಾಡುವ ಪೂರ್ವದಲ್ಲಿ ಮನೆ ದೈವಕ್ಕೆ ನೈವೇದ್ಯ ಮಾಡಿ ಮನೆಯವರೆಲ್ಲಾ ದೈವಕ್ಕೆ ನಮಸ್ಕಾರ ಮಾಡುತ್ತಾರೆ. ಈ ಕಾರ್ಯ ಮುಗಿದ ತರುವಾಯ ಮಗುವಿಗೆ ಹೆಸರಿಡುವ ಶಾಸ್ತ್ರ ಮಾಡಲಾಗುತ್ತದೆ. ಗಂಡು ಮಗುವಾದರೆ ಮಾಸ್ತಿ, ನಿಂಗು, ನಾಗು, ಶಿವು, ಜಟ್ಟು, ಬೀರ, ಕನ್ನ, ಕಣಿಯ, ಲಿಂಗು, ಈಶ್ವರ, ಹನುಮಂತ ಮುಂತಾದ ಹೆಸರುಗಳನ್ನು ಇಡುತ್ತಾರೆ. ಹೆಣ್ಣು ಮಗುವಿಗೆ ಗಣಪಿ, ಹೊನ್ನಿ, ನಾಗಿ, ಸುಕ್ರಿ, ಲಕ್ಷ್ಮಿ, ಗೌರಿ, ಈರಿ, ದುರ್ಗಿ, ತಿಮ್ಮಿ, ಬೀರಿ ಮುಂತಾದ ತಾವು ಆರಾಧಿಸುವ ದೈವಗಳ ಹೆಸರುಗಳನ್ನು ಇಡುತ್ತಾರೆ.

ಬಾಣಂತಿಯರಿಗೆ ಕಾಸ್ಗನಮರಕ್ಕೆ ಸುತ್ತಿದ ಬಳ್ಳಿ, ನಂಜಟ್ಟೆ ಬೇರು, ಮೆಣಸಿನ ಕಾಳು ನೀರು, ಮೆಣಸಿನಕಾಳಿನ ಚಟ್ನಿ, ಪ್ರತಿದಿನ ರಾತ್ರಿ ಗೇರು ಹಣ್ಣಿನ ಅಥವಾ ತೆಂಗಿನ ಸಾರಾಯಿಯನ್ನು ಬಾಣಂತಿಯರಿಗೆ ನೀಡಲಾಗುತ್ತದೆ.

ಮೈನೆರೆಯುವುದು

ಹೆಣ್ಣು ಕನ್ಯತ್ವದಿಂದ ಪ್ರೌಢಾವಸ್ಥೆಗೆ ಬರುವುದು ಮಾನವನಲ್ಲಿ ತುಂಬಾ ಸಂಭ್ರಮದ ವಿಚಾರ. ಹೆಣ್ಣಿಗೆ ಹರೆಯ ಮತ್ತು ಸಂಸಾರಿಕ ವ್ಯವಸ್ಥೆಯ ಕುರಿತಾಗಿ ಹಿರಿಯರು ಕೆಲವು ಕಟ್ಟುಪಾಡುಗಳನ್ನು ಅವಳಿಗೆ ನೋವಾಗದ ರೀತಿಯಲ್ಲಿಯೇ ಕುಟುಂಬದ ಅಥವಾ ದೈವದ

ಹಿರಿಯರು ನೀಡಬಯಸುತ್ತಾರೆ. ಮುಕ್ರಿಯರಲ್ಲಿ ಋತುಮತಿಯಾದ ಹೆಣ್ಣು ಮಾವು. ಹಲಸು ಅಥವಾ ನಿಂಬೆ ಗಿಡದಡಿಯೇ ಇರಿಸಲಾಗುತ್ತದೆ. ಆ ಮರಗಳ ಕೆಳಗೆ ಚಿಕ್ಕದಾದ ಗುಡ್ಲೊಂದನ್ನು ನಿರ್ಮಿಸಿ ಮುಕ್ರಿಯ ಮೈನೆರೆತ ಹೆಣ್ಣನ್ನು ಗುಡ್ಲಿನೊಳಗೆ ಇರಿಸಲಾಗುತ್ತದೆ. ಉತ್ತರಕನ್ನಡ ಮುಕ್ರಿಗಳು ಕಾಡಿಗೆ ಹೊಂದಿಕೊಂಡ ಪ್ರದೇಶದಲ್ಲಿರುವುದರಿಂದ ಮಾವು ಹಲಸಿನ ಮರಗಳಿಗೇನೂ ಬರಗಾಲವಿರುವುದಿಲ್ಲ. ಇನ್ನು ನಿಂಬೆಯ ಗಿಡವು ಸಾಮಾನ್ಯವಾಗಿ ಮುಕ್ರಿಯರ ಮನೆ ಗುಡ್ಲಿನ ಹಿಂಭಾಗದಲ್ಲಿರುತ್ತದೆ. ಅಲ್ಲಿ ಯಾವುದು ಹತ್ತಿರವಿದೆಯೋ ಆ ಮರದ ಕೆಳಗೆ ಗುಡ್ಲು ನಿರ್ಮಿಸ ಲಾಗುತ್ತದೆ. ಹೆಣ್ಣು ಮೈನೆರೆದಿದ್ದಾಳೆಂದು ತಿಳಿದ ತರುವಾಯ ಅಕ್ಕಪಕ್ಕದ ಐದು ಜನ ಮುಕ್ರಿಯ ಹೆಂಗಸರೊಂದಿಗೆ ಅರಿಶಿಣ ನೀರು ಹಾಕಲಾಗುತ್ತದೆ. ಐದು ದಿನ ಅಥವಾ ಒಂಭತ್ತು ದಿನ ಗುಡ್ಲಿನಲ್ಲಿಯೇ ಮೈನೆರೆದ ಹೆಣ್ಣು ಇರಬೇಕಾಗುತ್ತದೆ. ಆ ಸಮಯದಲ್ಲಿ ಗಂಜಿ, ಮೀನಿನ ಊಟವನ್ನು ಅವಳಿಗೆ ನೀಡಲಾಗುತ್ತದೆ. ಐದು ಅಥವಾ ಒಂಭತ್ತನೇ ದಿನ ಅರಿಸಿಣ ನೀರನ್ನು ಮತ್ತೆ ಎರೆಯಲಾಗುತ್ತದೆ. ಅಂದು ಸಾಧ್ಯವಾದ ಮಟ್ಟಿಗೆ ಮೈನೆರೆದ ಹುಡುಗಿಗೆ ಹೊಸ ಸೀರೆ ಕೊಡಲಾಗುತ್ತದೆ. ಹೊಸ ಬಟ್ಟೆ ಕೊಳ್ಳಲು ಯೋಗ್ಯತೆ ಇಲ್ಲದವರು ಹಳೆಯ ಆದರೆ ಶುಚಿಯಾದ ಬಟ್ಟೆಗಳನ್ನು ಹೆಣ್ಣಿಗೆ ತೊಡಿಸುತ್ತಾರೆ. ಕರಿಯ ಬಳೆಯನ್ನು ಹಾಕಿಸಲಾಗುತ್ತದೆ. ಗುಡ್ಲಿನಲ್ಲಿರುವ ಸಮಯದಲ್ಲಿ ಹುಡುಗಿಗೆ ಗಂಡಸರ ನೆರಳು ಬೀಳದಂತೆ ನೋಡಲಾಗುತ್ತದೆ. ಹೆಣ್ಣೂ ಕೂಡ ಯಾವ ಗಂಡಿನ ಮುಖ ದರ್ಶನ ಮಾಡುವಂತಿಲ್ಲ. ಮೇಲ್ವಿಚಾರಕಿಯ ಹೊರತಾಗಿ ಕುಟುಂಬದ ಯಾವ ಸದಸ್ಯರನ್ನೂ ಮುಟ್ಟಿಸಿಕೊಳ್ಳುವಂತಿಲ್ಲ. ಗುಡ್ಲನ್ನು ಬಿಟ್ಟು ಹೊರಗೆ ಹೋಗುವಂತಿಲ್ಲ. ಶೌಚ ಕಾರ್ಯಗಳನ್ನು ಯಾರೂ ನೋಡದ ವೇಳೆಯಲ್ಲಿಯೇ ಪೂರೈಸಿಕೊಳ್ಳಬೇಕು. ಹೆಣ್ಣು ಗುಡ್ಲಲ್ಲಿ ಇರುವವರೆಗೂ ಮೈಲಿಗೆ ಕಾಲವೆಂದು ಭಾವಿಸಲಾಗುತ್ತದೆ. ಐದು ಅಥವಾ ಒಂಭತ್ತನೇ ದಿನ ಹುಡುಗಿಗೆ ನೀರೆರದ ತರುವಾಯ ಮೈನೆರೆದ ಹೆಣ್ಣಿನ ಅಜ್ಜ ಅಜ್ಜಿಯರು ತುಳಸಿ ಪೂಜೆ ಮಾಡಿ ಹಿರಿಯರಿಗೆಲ್ಲ ಅವಳಿಂದ ಕಾಲು ಬೀಳಿಸುತ್ತಾರೆ. ಅಂದು ಮನೆಯವರು ದೈವದವರಿಗೆ ತಮ್ಮ ಕೈಲಾದಮಟ್ಟಿಗೆ ಊಟ ನೀಡುತ್ತಾರೆ.

ಚೋಳಂಗಿ/ಚೌಲ ಶಾಸ್ತ್ರ

ಮಗು ಹುಟ್ಟಿದ ತರುವಾಯ ಪ್ರತಿಯೊಂದು ಮಗುವಿಗೂ ಹುಟ್ಟು ಕೂದಲನ್ನು ತೆಗೆಯುವುದು ಪದ್ಧತಿ. ಬಹುಶಃ ಭಾರತೀಯ ಪರಂಪರೆಯ ಎಲ್ಲಾ ಸಮುದಾಯಗಳು ಹುಟ್ಟು ಕೂದಲನ್ನು ತೆಗೆಯುವ ಶಾಸ್ತ್ರವನ್ನು ಮಾಡುತ್ತಾರೆ. ಮುಕ್ರಿಯರಲ್ಲಿ ಗಂಡು ಮಗುವಿಗೆ ಆರು ವರ್ಷ ತುಂಬುವುದರ ಒಳಗಾಗಿ ಚೋಳಂಗಿ ಶಾಸ್ತ್ರ ಮಾಡಲಾಗುತ್ತದೆ. ಮುಕ್ರಿಯರ ಅಸ್ಪೃಶ್ಯ ಸಮುದಾಯ ವಾದುದರಿಂದ ಹಜಾಮರು ಕೂದಲು ಕತ್ತರಿಸಲು ಬರುವುದಿಲ್ಲ. ಚೋಳಂಗಿ ಶಾಸ್ತ್ರವನ್ನು ಸೋದರಮಾವನೇ ಮಾಡುತ್ತಾನೆ.

ಚೋಳಂಗಿ ಶಾಸ್ತ್ರ ಮಾಡುವ ದಿನ ತಾಯಿ, ಮಗುವಿಗೆ ಸ್ನಾನ ಮಾಡಿಸಲಾಗುತ್ತದೆ. ಮಗುವಿಗೆ ಒಂದು ಬಿಳಿ ಶಲ್ಯೆಯನ್ನು ಕಟ್ಟುತ್ತಾರೆ. ಸೋದರಮಾವನು ಮಗುವಿಗಾಗಿ ಬಂಗಾರದ ಅಥವಾ ಬೆಳ್ಳಿಯ ಮುರವನ್ನು ತಂದಿರುತ್ತಾನೆ. ಬುದುವಂತನು ಮಗುವಿಗೆ ಮುರುವನ್ನು ಚುಚ್ಚುತ್ತಾನೆ. ಮಗುವಿನ ತಂದೆಯು ಕೂದಲು ಕತ್ತರಿಸುವ ವ್ಯಕ್ತಿಗೆ ಹೊಸ ಬಟ್ಟೆಯನ್ನು ಕೊಡುತ್ತಾನೆ. ಹುಡುಗಿಯರಿಗಾದರೆ ನಾಲ್ಕು ವರ್ಷದೊಳಗೆ ಕೂದಲನ್ನು ತೆಗೆಯುತ್ತಾರೆ. ಹೆಣ್ಣು ಮಗುವಿಗೆ ಸಂಬಂಧಿಸಿಯೂ ಇದೇ ರೀತಿಯ ಆಚರಣೆಯನ್ನು ಮಾಡಲಾಗುತ್ತದೆ. ದೈವದವರಿಗೆಲ್ಲ ಪಾಯಸದೂಟವನ್ನು ಕೊಡಲಾಗುತ್ತದೆ.

ಶವ ಸಂಸ್ಕಾರ

ಮಾನವನು ಹುಟ್ಟಿಗೆ ಸಂಭ್ರಮಿಸಿದಂತೆಯೇ ಸಾವಿಗೆ ಹೆದರುತ್ತಾನೆ. ಸಾವಿನ ಹೆದರಿಕೆಯೇ ಅದರ ಕುರಿತಾದ ಆಚರಣೆಗಳ ಮೂಲವಿರಬೇಕು. ಯಾವುದಾದರು ದುಷ್ಟಶಕ್ತಿಯ ಪರಿಣಾಮವಾಗಿ ತಮ್ಮ ಕುಟುಂಬದಲ್ಲಿರುವ ವ್ಯಕ್ತಿಯ ಸಾವಿಗೆ ಕಾರಣವೆಂದು ನಂಬುತ್ತಾರೆ.

ಮುಕ್ರಿಯರ ಕೊಪ್ಪದಲ್ಲಿ ಯಾವುದೇ ಕುಟುಂಬದಲ್ಲಿ ಸಾವುಂಟಾದರೂ ಮುಕ್ರಿ ಸಮುದಾಯದ ಪ್ರತಿ ಮನೆಯಿಂದಲೂ ಕನಿಷ್ಠ ಒಬ್ಬ ವ್ಯಕ್ತಿಯಾದರೂ ಸಾವಾದ ಮನೆಯ ಮುಂದಿರಬೇಕು. ವ್ಯಕ್ತಿಯ ಸಾವಿನ ಸುದ್ದಿಯನ್ನು ಕೋಲಕಾರನು ಪ್ರತಿ ಕುಟುಂಬಕ್ಕೂ ತಿಳಿಸುತ್ತಾನೆ. ಶವ ಸಂಸ್ಕಾರಕ್ಕೆ ಕೊಪ್ಪದೊಳಗಿನ ಮುಕ್ರಿ ಸಮುದಾಯದ ಸದಸ್ಯನು ಬಾರದಿದ್ದಲ್ಲಿ ಜುಲ್ಮಾನೆಯನ್ನು ಹಾಕಲಾಗುತ್ತದೆ. ಮುಕ್ರಿಗಳಲ್ಲಿ ಹೆಣವನ್ನು ಸುಡುವ ಪದ್ಧತಿ ಇದೆ. ಆದರೆ ಮಕ್ಕಳ ಹೆಣವನ್ನು ಹೂಳುತ್ತಾರೆ. ಸೊಡ್ಲೆಮಟ್ಟಿಯಿಂದ (ಸ್ಮಶಾನ) ಹಿಂದಿರುಗಿ ಬರುವಾಗ ಮಾರ್ಗ ಮಧ್ಯದಲ್ಲಿ ಮುಳ್ಳು ಹಾಕಿ ಬರಲಾಗುತ್ತದೆ. ಸತ್ತ ವ್ಯಕ್ತಿಯ ಆತ್ಮವು ತಮ್ಮನ್ನು ಹಿಂಬಾಲಿಸಿಕೊಂಡು ಬರಬಾರದು ಎನ್ನುವ ಆಶಯದಿಂದಾಗಿಯೇ ಮುಳ್ಳನ್ನು ದಾರಿಯ ಮಧ್ಯದಲ್ಲಿ ಹಾಕುವುದು. ವ್ಯಕ್ತಿಯು ಸತ್ತ ತಕ್ಷಣ ಹೆಣವನ್ನು ಗುಡ್ಲು ಅಥವಾ ಮನೆಯ ಹೊರಗೆ ಉತ್ತರಾಭಿಮುಖವಾಗಿ ಮಲಗಿಸಲಾಗುತ್ತದೆ. ತಲೆಭಾಗಕ್ಕೆ ದೀಪವನ್ನು ಹಚ್ಚಿಡುತ್ತಾರೆ.

ಸಿದಿಗೆ

ಎರಡು ಉದ್ದನೆಯ ಗಳಕ್ಕೆ ಸೀಳಿದ ಗಳಗಳನ್ನು ನಾಲ್ಕು ಕಡೆ ಕತ್ತರಿಯಾಕಾರದಲ್ಲಿ ಅಡ್ಡಕ್ಕೆ ಇಟ್ಟು ಸೆಣಬಿನ ನಾರಿನಿಂದ ಬಿಗಿಯುತ್ತಾರೆ. ಹೀಗೆ ಸಿದ್ಧವಾದ ಗಳದ ಮೇಲೆ ಹಸಿತೆಂಗಿನ ಗರಿ ಹರಡಲಾಗುತ್ತದೆ. ಈ ರೀತಿ ಬಿದಿರಿನ ಗಳದಿಂದ ಸಿದಿಗೆಯನ್ನು ಸಿದ್ಧಮಾಡಿ ಕೊಳ್ಳಲಾಗುತ್ತದೆ.

ಹೆಣದ ಸ್ನಾನ

ಸಿದಗಿ ಸಿದ್ಧಗೊಂಡ ತರುವಾಯ ಹೆಣವನ್ನು ಅಂಗಳದಲ್ಲಿ ಕೂರಿಸಿ ತಲೆಸ್ನಾನ ಮಾಡಿಸಲಾಗುತ್ತದೆ. ಸ್ನಾನ ಮಾಡಿಸುವ ನೀರನ್ನು ಹಿರಿಯ ಮಗನೇ ತರಬೇಕು, ಇಲ್ಲವೇ ಉತ್ತರಾಧಿಕಾರಿ ಯಾರಾಗಿರುತ್ತಾರೋ ಅವರು ತರಬೇಕು. ಆ ನೀರನ್ನು ಹೊಸ ಗಡಿಗೆಗೆ ಹಾಕಿ ಕಾಯಿಸುತ್ತಾರೆ.

ಹೆಣಕ್ಕೆ ಸ್ನಾನ ಮಾಡಿಸಿದ ನಂತರ ನೀರು ಕಾಯಿಸಿದ ಮಡಿಕೆಯನ್ನು ಒಡೆದು ಹಾಕಲಾಗುತ್ತದೆ. ಹಿರಿಮಗ ಬಂದು ಎಡಗೈಲಿ ತೆಂಗಿನ ಕಾಯನ್ನು ಹಿಡಿದು ಕತ್ತಿಯ ಬೆನ್ನಿನಿಂದ ತೆಂಗಿನಕಾಯಿಯನ್ನು ಒಡೆಯುತ್ತಾನೆ. ಈ ತೆಂಗಿನ ಕಾಯಿ ಚೂರುಗಳನ್ನು ಬಿಳಿ ಪಂಚೆಯಲ್ಲಿ ಹಾಕಿ ಕಟ್ಟುತ್ತಾರೆ. ಈ ತೆಂಗಿನ ಕಾಯಿ ಚೂರುಗಳ ಜೊತೆಗೆ ೩ ರೊಟ್ಟಿ, ಅನ್ನವನ್ನು ಕಟ್ಟಿ ಇಡುತ್ತಾರೆ. ಅಲ್ಲದೆ ಒಂದು ಸಿದ್ದಿ ಅಕ್ಕಿಯನ್ನು ಕಟ್ಟುತ್ತಾರೆ. ಈ ಬಿಳಿ ಪಂಚೆಯನ್ನು ಹೆಣಕ್ಕೆ ಹೊದಿಸಲಾಗಿರುತ್ತದೆ.

ಹೆಣದ ಮುಖವನ್ನು ಸೇರಿದ ಬಂಧುಭಾಂದವರೆಲ್ಲಾ ನೋಡಿದ ತರುವಾಯ ಹೆಣವನ್ನು ಬಿದಿರಿನಿಂದ ಮಾಡಿದ ಸಿದಗಿಯ ಮೇಲೆ ಹಸಿ ತೆಂಗಿನ ಗರಿಯನ್ನು ಚಾಪೆಯಂತೆ ಹೆಣೆದುಕೊಂಡು ಶವವನ್ನು ಈ ಗರಿಯಲ್ಲಿ ಸುತ್ತಿ ಸುಡುಗಾಡಿಗೆ ಒಯ್ಯುತ್ತಾರೆ. ತಿರುಪತಿಗೆ ಹೋಗಿ ಬಂದವರಾದರೆ ಅವರ ಕೊರಳಿಗೆ ತುಳಸಿಮಾಲೆ ಹಾಕಿ ಎತ್ತುತ್ತಾರೆ. ಹೆಣವನ್ನು ಮಸಣಕ್ಕೆ ತಂದಾಗ ಹೆಣವನ್ನು ಇಳಿಸಿ ಹಿಂದೆ ಮುಂದೆ ಮಾಡುತ್ತಾರೆ. ಪ್ರಾಯಶಃ ಸತ್ತವನ ಆತ್ಮಕ್ಕೆ ದಿಕ್ಕು ತಪ್ಪಿಸುವ ಕಾರಣಕ್ಕಾಗಿ ಹೆಣವನ್ನು ತಿರುವುಮುರುವಾಗಿ ಇರಿಸಲಾಗುತ್ತದೇನೊ. ಮಕ್ಕಳೇ ಹೆಣವನ್ನು ಎತ್ತಿ ಸಿದಿಗೆಯ ಮೇಲೆ ಇಡಬೇಕು. ಮಕ್ಕಳಿಲ್ಲದಿದ್ದರೆ ಚಿಕ್ಕಪ್ಪ, ದೊಡ್ಡಪ್ಪನ ಮಕ್ಕಳು ಈ ಕೆಲಸ ಮಾಡುತ್ತಾರೆ.

ಬೆಂಕಿ ಕೊಡುವುದು

ಕಾಡಿನ ಅಂಚಿನಲ್ಲಿಯೇ ಜೀವನವನ್ನು ತೇಯುವ ಮುಕ್ರಿಗಳಿಗೆ ಕಾಡು ಹೊಸದೇನಲ್ಲ. ಯಥೇಚ್ಛವಾಗಿ ಸೌದೆ ದೊರೆಯುವುದರಿಂದ ಹೆಣ ಸುಡಲು ಸೌದೆ ಬಳಸುತ್ತಾರೆ. ಮುಕ್ರಿಗಳು ಹೆಣವನ್ನು ಸ್ಮಶಾನಕ್ಕೆ ಒಯ್ಯುವ ಪೂರ್ವದಲ್ಲಿಯೇ ಮುಕ್ರಿಯರಲ್ಲಿಯೇ ಗೊತ್ತಿರುವ ಕೆಲವು ಗಂಡಸರು ಸ್ಮಶಾನಕ್ಕೆ ಹೋಗಿ ಹೆಣ ಸುಡಲು ಸೌದೆಯನ್ನು ನೀಟಾಗಿ ಒಟ್ಟಿರುತ್ತಾರೆ. ಹೆಣವನ್ನು ತಿರುವು ಮುರುವಾಗಿ ಸೌದೆಗುಟ್ಟೆಯ ಪಕ್ಕದಲ್ಲಿ ಇಳಿಸಲಾಗುತ್ತದೆ. ಹೆಣದ ಮುಚ್ಚಿದ ಮುಖದ ಭಾಗವನ್ನು ತೆರೆದು ಮತ್ತೊಮ್ಮೆ ಬಂಧುಬಾಂಧವರೆಲ್ಲ ಹೆಣದ ಮುಖದ ದರ್ಶನವನ್ನು ಕೊನೆಗೆ ಮಾಡಿಕೊಳ್ಳುತ್ತಾರೆ. ತರುವಾಯ ಸತ್ತವನ ಮಕ್ಕಳು ಹೆಣವನ್ನು ಒಟ್ಟಿದ ಕಟ್ಟಿಗೆಯ ಮೇಲೆ ಮಲಗಿಸುತ್ತಾರೆ. ಸೇರಿದ ಬಂಧುಗಳು ಹೆಣದ ಮೇಲೆ ಒಂದೊಂದು ಕಟ್ಟಿಗೆಯನ್ನಿರಿಸಿ

ಋಣ ತೀರಿಸುತ್ತಾರೆ. ಸಿದಗಿಯಲ್ಲಿ ಹೆಣದೊಂದಿಗೆ ತಂದ ಅಕ್ಕಿ, ರೊಟ್ಟಿ, ಅನ್ನ, ಕೊಬ್ಬರಿ ಬಟ್ಟಲೆಲ್ಲವನ್ನೂ ಹೆಣದೊಂದಿಗೇ ಇರಿಸಲಾಗುತ್ತದೆ. ಸತ್ತವನ ಆತ್ಮ ದೇವಲೋಕಕ್ಕೆ ಹೋಗುವಾಗ ಉಪವಾಸದಿಂದ ಬಳಲಿ ಮರಳಿ ಬರಬಾರದೆಂದು ಈ ರೀತಿ, ಅಕ್ಕಿ, ರೊಟ್ಟಿ, ಅನ್ನದ ಪದಾರ್ಥಗಳನ್ನು ಹೆಣದೊಂದಿಗೆ ಇರಿಸಲಾಗುತ್ತದಂತೆ.

ಸತ್ತ ವ್ಯಕ್ತಿಯ ಹಿರಿಯ ಮಗನೇ ಮೊದಲಿಗೆ ಬೆಂಕಿ ಕೊಡಬೇಕು. ತರುವಾಯ ಉಳಿದ ಮಕ್ಕಳು, ಹತ್ತಿರದ ಸಂಬಂಧಿಗಳು ಬೆಂಕಿಯನ್ನು ಕೊಡುತ್ತಾರೆ. ತಲೆಯ ಭಾಗಕ್ಕೆ ಮೊದಲು ಬೆಂಕಿಯನ್ನು ಕೊಡಲಾಗುತ್ತದೆ. ಆನಂತರ ಆಚೆ ಈಚೆ ಬದಿಗೆ ಬೆಂಕಿಕೊಟ್ಟು ಕೊನೆಗೆ ಕಾಲು ಬುಡಕ್ಕೆ ಬೆಂಕಿ ಕೊಡುತ್ತಾರೆ.

ಹೆಣ ಸುಟ್ಟ ನಂತರ ಎಲ್ಲರು ಸ್ಮಶಾನದಿಂದ ಹಿಂದಿರುಗುತ್ತಾರೆ. ಸ್ಮಶಾನವನ್ನು ಎಲ್ಲರು ದಾಟಿದ ಮೇಲೆ ಮುಳ್ಳನ್ನು ದಾರಿಯ ಮಧ್ಯದಲ್ಲಿ ಹಾಕಲಾಗುತ್ತದೆ. ಮುಳ್ಳನ್ನು ಹಾಕಿದ ನಂತರ ಇನ್ನು ಇತ್ತ ಬರಬೇಡಿ ಎಂದು ಗಟ್ಟಿಯಾಗಿ ಸತ್ತ ವ್ಯಕ್ತಿಯ ಮನೆಯವರು ಹೇಳುತ್ತಾರೆ. ಅದಕ್ಕೆ ಪ್ರತಿಯಾಗಿ ಉಳಿದವರು ಇನ್ನು ನಾವು ಬರೋದಿಲ್ಲ ಎಂದು ಪ್ರತಿ ಉತ್ತರ ನೀಡುತ್ತಾರೆ. ಇತ್ತ ಮನೆಯಲ್ಲಿ ವ್ಯಕ್ತಿ ಸತ್ತ ಜಾಗದಲ್ಲಿ ಮಣೆ ಇಟ್ಟು ಅದರ ಮೇಲೆ ದೀಪ ಇಡುತ್ತಾರೆ. ಶವಸಂಸ್ಕಾರಕ್ಕೆ ಹೋದವರನ್ನು ಶಿವನ ಬಿಟ್ಟಿಗೆ(ಶಿವನ ಸ್ಥಾನ ಸ್ಮಶಾನ) ಹೋದವರು ಎನ್ನುತ್ತಾರೆ. ಸ್ಮಶಾನಕ್ಕೆ ಹೋಗಿ ಶವಸಂಸ್ಕಾರ ಮಾಡಿದವರು ಮರಳಿ ಸತ್ತ ವ್ಯಕ್ತಿಯನ್ನಿರಿಸಿದ ಸ್ಥಳಕ್ಕೆ ಬರುತ್ತಾರೆ. ಹೆಣ ಮಲಗಿಸಿದ ಸ್ಥಳದಲ್ಲಿ ದೀಪ ಹಚ್ಚಿಡಲಾಗಿರುತ್ತದೆ. ದೀಪ ನೋಡಿ ಹಿಂದಿರುಗುವಾಗ ಸತ್ತ ವ್ಯಕ್ತಿಯ ಕುಟುಂಬದವರು ಶವಸಂಸ್ಕಾರಕ್ಕೆ ಹೋಗಿ ಬಂದವರಿಗೆ ಇಂದು ಬಂದವರು ನಾಳೆ ಬರಬೇಡಿ ಎಂದು ಎಡಗೈಲಿ ಗೋಮಯವನ್ನು ಮುಖಕ್ಕೆ ಚಿಮಿಕಿಸುತ್ತಾರೆ. ಈ ಕ್ರಿಯೆ ಆದ ತರುವಾಯ ಎಲ್ಲರು ತಮ್ಮ ತಮ್ಮ ಮನೆಗೆ ಹಿಂದಿರುಗುತ್ತಾರೆ. ಶವ ಸಂಸ್ಕಾರವಾದ ರಾತ್ರಿ ಹೆಣವನ್ನು ಮಲಗಿಸಿದ ಜಾಗವನ್ನು ಸೆಗಣಿಯಿಂದ ಸಾರಿಸುತ್ತಾರೆ. ಸಾವು ಸಹಜವಾಗಿದ್ದರೆ ಹೆಣವನ್ನು ಮಲಗಿಸಿದ ಜಾಗದಲ್ಲಿ ಹಿರಿಮಗ ಮಲಗುತ್ತಾನೆ.

ಮೂರು ದಿನದ ಕಾರ್ಯ

ವ್ಯಕ್ತಿ ಸತ್ತ ಮೂರನೇ ದಿನ ಕುಟುಂಬದ ಸದಸ್ಯರು ಬುದುವಂತ ಹಾಗೂ ಇತರ ದೈವದವರೊಂದಿಗೆ ಅಕ್ಕಿಯಿಂದ ಮಾಡಿದ ೩ ರೊಟ್ಟಿ, ಅನ್ನ ಮುಂತಾದ ಪದಾರ್ಥಗಳನ್ನು ಹೆಣ ಸುಟ್ಟ ಸ್ಥಳಕ್ಕೆ ಒಯ್ಯುತ್ತಾರೆ. ಕುಡಿ ಬಾಳೆಯ ಎಲೆಯ ಮೇಲೆ ತಾವು ತಂದ ಪದಾರ್ಥಗಳನ್ನೆಲ್ಲಾ ಹೆಣ ಸುಟ್ಟ ಜಾಗದಲ್ಲಿ ಇಡುತ್ತಾರೆ. ಇದು ಸತ್ತವನಿಗೆ ಮಾಡಿದ ಮೀಸಲು ಎಡೆಯಾಗಿರುತ್ತದೆ. ತರುವಾಯ ಗುಟ್ಟಿಗೆ ಪೂಜೆ ಮಾಡಿ ಬಂದವರೆಲ್ಲ ದೂರಹೋಗಿ

ಮರದ ನೆರಳಿಗೆ ಕುಳಿತುಕೊಳ್ಳುತ್ತಾರೆ. ಗುಟ್ಟೆಯ ಮುಂಭಾಗದಲ್ಲಿರಿಸಿದ ಪದಾರ್ಥಗಳನ್ನು ಕಾಗೆಗಳು ಬಂದು ತಿನ್ನಬೇಕು. ಅವು ಬಂದು ತಿನ್ನುವವರೆಗೆ ಅವರು ಅಲ್ಲಿಯೇ ಇರುತ್ತಾರೆ. ಕಾಗೆ ಬಂದು ಪದಾರ್ಥ ಮುಟ್ಟಿಹೋದ ತರುವಾಯ ತಮ್ಮೊಂದಿಗೆ ತಂದ ತುಳಸಿ ಸಸಿಯನ್ನು ನೆಡುತ್ತಾರೆ. ಸ್ಮಶಾನಕ್ಕೆ ಹೋದವರು ಮನೆಗೆ ಬರುವುದರೊಳಗಾಗಿ ಹೆಂಗಸರು ಮನೆಯೆಲ್ಲಾ ಸಾರಿಸಿ ಮಡಿ ಮಾಡುವರು. ಮನೆಗೆ ಬಂದ ಮೇಲೆ ಎಲ್ಲರು ತಣ್ಣೀರಿನ ಸ್ನಾನ ಮಾಡಿ ಊಟ ಮಾಡಿ ತಮ್ಮ ತಮ್ಮ ಮನೆಗೆ ಹೋಗುತ್ತಾರೆ.

ಹನ್ನೊಂದನೇ ದಿನದ ಕಾರ್ಯ

ಹನ್ನೊಂದನೇ ದಿನಕ್ಕೆ ಸತ್ತ ವ್ಯಕ್ತಿಯ ಋಣವನ್ನು ಕಳೆದುಕೊಳ್ಳುವ ಕ್ರಿಯೆ ನಡೆಯುತ್ತದೆ. ಇದನ್ನು ಮುಕ್ರಿಗಳು ದೆವ್ವ ಕಡಿಯುವ ಕಾರ್ಯ ಎಂದು ಕರೆಯುತ್ತಾರೆ. ಹನ್ನೊಂದನೇ ದಿನ ಸಂಜೆ ಸತ್ತ ವ್ಯಕ್ತಿಗೆ ಇಷ್ಟವಾದ ತಿಂಡಿ ಪದಾರ್ಥಗಳನ್ನೆಲ್ಲ ಮಾಡುತ್ತಾರೆ. ಸತ್ತವನ ಪ್ರೇತಾತ್ಮವು ಮುಕ್ತಿಗೊಳ್ಳದೆ ಗಾಳಿಯಲ್ಲಿ ಅಡ್ಡಾಡಿಕೊಂಡು ಇರುತ್ತದೆಂಬ ನಂಬಿಕೆ ಮುಕ್ರಿಗಳದ್ದು. ಸತ್ತ ವ್ಯಕ್ತಿಯು ಪ್ರೇತಾತ್ಮವಾಗಿ ಪರರಿಗೆ ತೊಂದರೆ ಕೊಡಬಾರದೆಂಬ ಉದ್ದೇಶದಿಂದಾಗಿಯೇ ಹನ್ನೊಂದನೇ ದಿನದ ಕಾರ್ಯ ಮಾಡಲಾಗುತ್ತದೆ. ಸತ್ತ ವ್ಯಕ್ತಿಯ ಆತ್ಮಕ್ಕೆ ಸಂತೃಪ್ತಿಗೊಳಿಸಿ ಅವನು ಸಂತೋಷದಿಂದ ಪರಲೋಕಕ್ಕೆ ಹೋಗುವಂತೆ ಮಾಡುವ ಉದ್ದೇಶವೇ ಈ ಆಚರಣೆಯ ಹಿಂದಿದೆ.

ಮುಕ್ರಿಯರಲ್ಲಿಯೇ ಗಾಡಿಗ(ಗಾರುಡಿಗ) ಎಂದು ಕರೆಸಿಕೊಳ್ಳುವವರು ಮುಕ್ರಿಯರ ಪ್ರತಿ ಕೊಪ್ಪದಲ್ಲಿಯೂ ಇರುತ್ತಾರೆ. ಸಾಮಾನ್ಯವಾಗಿ ಗಾಡಿಗರು ಇಬ್ಬರಿರುತ್ತಾರೆ ಮತ್ತು ಅವರು ಪುರುಷರಾಗಿರುತ್ತಾರೆ. ಹನ್ನೊಂದನೇ ದಿನ ದೆವ್ವ ಕೂಡಿಸುವ ಶಾಸ್ತ್ರವನ್ನು ಈ ಗಾಡಿಗರ ಮುಂದಾಳತ್ವದಲ್ಲಿಯೇ ನಡೆಯುತ್ತದೆ. ಸತ್ತ ವ್ಯಕ್ತಿಯ ಮನೆಯವರ ಅಣತಿಯ ಮೇರೆಗೆ ಹನ್ನೊಂದನೇ ದಿನ ಸಂಜೆ ಇಬ್ಬರು ಗಾಡಿಗರು ಸತ್ತ ವ್ಯಕ್ತಿಯ ಮನೆಗೆ ಬರುತ್ತಾರೆ. ಗಾಡಿಗರಲ್ಲಿ ದೊಡ್ಡ ನೋಟ ನೋಡುವವನು ಹಾಗೂ ಸಣ್ಣ ನೋಟ ನೋಡುವವನು ಎಂದು ಇಬ್ಬರಿರುತ್ತಾರೆ. ದೊಡ್ಡ ನೋಟ(ದಿವ್ಯ ದೃಷ್ಟಿ) ನೋಡುವವನು ಪ್ರೇತಾತ್ಮವನ್ನು ಆಹ್ವಾನಿಸುತ್ತಾನೆ. ಈ ರೀತಿಯಾಗಿ ಆಹ್ವಾನಿಸುವ ಕ್ರಿಯೆಗೆ ದೆವ್ವ ಕೂಡಿಸುವುದು ಎಂದು ಮುಕ್ರಿಗಳು ಕರೆಯುತ್ತಾರೆ. ದೊಡ್ಡ ನೋಟ ನೋಡುವ ಗಾಡಿಗನು ಪ್ರೇತಾತ್ಮವನ್ನು ಆಹ್ವಾನಿಸಿದಂತೆಲ್ಲಾ ಸಣ್ಣ ನೋಟ ನೋಡುವವನು ಪ್ರೇತಾತ್ಮವು ಎಲ್ಲಿ ಸಂಚರಿಸುತ್ತಿದೆ, ಎತ್ತ ಕಡೆ ಬಂದಿತು ಇತ್ಯಾದಿ ವಿವರಗಳನ್ನು ನೀಡುತ್ತಿರುತ್ತಾನೆ. ಕೊನೆಗೆ ಪ್ರೇತಾತ್ಮವು ಸಂಚರಿಸಿ, ಒಂದು ಕಡೆ ನಿಲುಗಡೆಗೊಳ್ಳುತ್ತದೆ. ಇದು ಇಡೀ ರಾತ್ರಿ ಅಥವಾ ಎರಡು ದಿನದವರೆಗೂ ನಡೆಯಬಹುದು. ನಿಲುಗಡೆಗೊಂಡ ಪ್ರೇತಾತ್ಮವು ಕೊನೆಗೆ

ತಮ್ಮ ಕುಟುಂಬದ ಯಾರಾದರೂ ಒಬ್ಬ ಸದಸ್ಯರ ಮೈಮೇಲೆ ಬಂದು ತಾನು ಇಂತಲ್ಲಿ ಸೇರಿದ್ದೇನೆ ಎಂದು ಹೇಳುತ್ತದೆ. ಇದು ಒಂದು ಹಂತದ ಕ್ರಿಯೆಯಾದರೆ ಮತ್ತೊಂದು ಹಂತದಲ್ಲಿ ಅಂದರೆ ಆಚರಣೆಯ ಕೊನೆಯ ಘಟ್ಟದಲ್ಲಿ ಗಾಡಿಗನು ತೆಂಗಿನ ಕಾಯಿಯನ್ನು ಒಡೆದು ಮೇಲೆ ತೂರುತ್ತಾನೆ. ಕೆಲವು ಕಡೆ ವೀಳ್ಯದ ಎಲೆಯನ್ನು ತೂರುವ ಪರಿಪಾಠವೂ ಇದೆಯಂತೆ. ಈ ರೀತಿ ತೂರಿದ ಕಾಯಿ ಅಥವಾ ಎಲೆಗಳು ಮೇಲ್ಮುಖವಾಗಿ ಬಿದ್ದರೆ ದೆವ್ವ ಕೂಡಿದೆ ಎಂದರ್ಥ. ಇಲ್ಲವಾದರೆ ಇಲ್ಲ ಎಂದು ಭಾವಿಸಲಾಗುತ್ತದೆ.

ದೆವ್ವ ಅಥವಾ ಪ್ರೇತಾತ್ಮವು ಕೂಡಿದ ನಂತರ ಅದಕ್ಕೆ ಇಷ್ಟವಾದ ಪದಾರ್ಥಗಳನ್ನೆಲ್ಲಾ ಇರಿಸಿ ಪೂಜಿಸಿ ತಮ್ಮ ಕುಟುಂಬಕ್ಕೆ ಯಾವ ರೀತಿಯಲ್ಲಿಯೂ ತೊಂದರೆ ಕೊಡಬೇಡ, ನಮ್ಮನ್ನು ಮೇಲಿದ್ದೇ ರಕ್ಷಿಸು ಎಂದು ಬೇಡಿಕೊಂಡು ಕುಟುಂಬದ ಎಲ್ಲಾ ಸದಸ್ಯರು ಸತ್ತ ವ್ಯಕ್ತಿಯ ಆತ್ಮಕ್ಕೆ ಅಡ್ಡಬಿದ್ದು ನಮಸ್ಕಾರ ಮಾಡುತ್ತಾರೆ. ತರುವಾಯ ಗಾಡಿಗರಿಗೆ ಕೊಡಬೇಕಾದ ರುಸುವತ್ತುಗಳನ್ನು ಕೊಟ್ಟು ಕಳಿಸಲಾಗುತ್ತದೆ. ಪ್ರೇತಾತ್ಮ ನಿಲುಗಡೆಗೊಂಡ ದಿನ ಕುಟುಂಬದ ಸದಸ್ಯರ್‍ಯಾರೂ ಮನೆಯಲ್ಲಿ ಮಲಗುವುದಿಲ್ಲ. ರಾತ್ರಿ ಪ್ರೇತಾತ್ಮವು ಬಂದು ತನಗಾಗಿರಿಸಿದ ಆಹಾರ ಪದಾರ್ಥಗಳನ್ನು ಮುಟ್ಟಿಹೋಗುತ್ತದೆಂಬ ನಂಬಿಕೆ ಮುಕ್ರಿಯರಲ್ಲಿದೆ.

ತಿಥಿ ಕಾರ್ಯ/೧೨ನೇ ದಿನ ಕಾರ್ಯ

ಹನ್ನೊಂದನೇ ದಿನದ ಪ್ರೇತಾತ್ಮ ಕೂಡಿಕೆಯ ಕಾರ್ಯ ಮುಗಿದ ಮಾರನೇ ೧೨ನೇ ದಿವಸ ಸತ್ತ ವ್ಯಕ್ತಿಯ ಸಂಬಂಧಿಗಳು ಮೀನಿನ ಸಾರು ರೊಟ್ಟಿ, ಅನ್ನವನ್ನು ತಂದು ಸತ್ತ ವ್ಯಕ್ತಿಯ ಕುಟುಂಬದವರವರಿಗೆ ಕೊಡುತ್ತಾರೆ. ಹೀಗೆ ಸಂಬಂಧಿಕರೆಲ್ಲಾ ಕೊಟ್ಟ ಪದಾರ್ಥಗಳನ್ನು ಒಂದು ಕಡೆ ಸೇರಿಸಿಡಲಾಗುತ್ತದೆ. ತರುವಾಯ ಬುದುವಂತ, ಕೋಲ್ಕಾರರನ್ನೊಳಗೊಂಡು ಕೊಪ್ಪದ ಎಲ್ಲಾ ಕುಟುಂಬದವರು ಹಾಗೂ ಸ್ಮಶಾನಕ್ಕೆ ಹೋದ ಎಲ್ಲ ಜನರಿಗೆ ಸತ್ತ ವ್ಯಕ್ತಿಯ ಮನೆಯವರು ಊಟ ಮಾಡಿಸುತ್ತಾರೆ. ೧೨ನೇ ದಿನದ ಈ ಕಾರ್ಯದೊಂದಿಗೆ ಸಾವಿಗೆ ಸಂಬಂಧಿಸಿದ ಆಚರಣೆಗಳೂ ಪೂರ್ಣಗೊಳ್ಳುತ್ತವೆ.

೪.೫. ಮುಕ್ರಿಯರು ಆಚರಿಸುವ ಹಬ್ಬಗಳು

ಬೆಚ್ಚಿನ ಸಂಕ್ರಾಂತಿ

ಕೃಷಿ ಕೂಲಿಗಳಾದ ಮುಕ್ರಿಯರು ಭೂಮಿ ಸಾಗುವಳಿ ಮಾಡಿ ಬಿತ್ತುವುದಕ್ಕೆ ಹೊಲ ಸಿದ್ಧವಾದ ಸಂದರ್ಭದಲ್ಲಿ ಆಚರಿಸುವ ಹಬ್ಬವಾಗಿದೆ. ಅದು ಮೊಗೆಮಳೆ ಆರಂಭಿಸುವ ದಿನ ಬೆಚ್ಚಿನ ಸಂಕ್ರಾಂತಿಯನ್ನು ಆಚರಿಸುತ್ತಾರೆ. ಈ ಮಳೆಯ ಆರಂಭದ ದಿನದ ಮುನ್ನ ದಿನ ರಾತ್ರಿ ತುಳಸಿ ಮತ್ತು ನೀರು ತುಂಬಿದ ಮಡಿಕೆಯನ್ನು ಪೂಜಿಸುತ್ತಾರೆ. ಬೆಚ್ಚಿನ ಸಂಕ್ರಾಂತಿಯ

ದಿನ ಬೆಳಕು ಹರಿಯುವ ಮೊದಲು ಹೊಳೆಯ ದಂಡೆಗೆ ಹೋಗಿ ಮುಳ್ಳು ಮುಂಡಕ್ಕಿ ಗಿಡವನ್ನು ಅಥವಾ ಕೇದಿಗೆ ಗಿಡವನ್ನು ಅಥವಾ ತೆಂಗಿನ ತುಂಕಿಯನ್ನು ಕಡಿದು ತಂದು ಗದ್ದೆಯಲ್ಲಿ ನೆಡುತ್ತಾರೆ. ಇದನ್ನು ಬೆಚ್ಚು ನೆಡುವುದು ಎನ್ನುತ್ತಾರೆ ಮತ್ತು ಗದ್ದೆ ಗಂಡನನ್ನು ಮಾಡುವುದು ಎನ್ನುತ್ತಾರೆ. ಹೊಡೆ ತುಂಬಿ ನಿಂತ ಗದ್ದೆಗೆ ದೃಷ್ಟಿದೋಷವಾಗಬಾರದು, ರೋಗ-ರುಜಿನಗಳು ಬಾರದಿರಲೆಂದು, ಕಾಡು ಪ್ರಾಣಿ, ಕ್ರಿಮಿಕೀಟಗಳಿಂದ ಗದ್ದೆ ಆಳಾಗಬಾರದು ಎಂಬ ಭಾವನೆಯಿಂದ ಈ ಬೆಚ್ಚನ್ನು ನೆಡುತ್ತಾರೆ ಎಂದು ಕೆಲವು ತಿಳುವಳಿಕೆದಾರರು ತಿಳಿಸಿದರು. ಮತ್ತೆ ಕೆಲವರು ಬೆಚ್ಚನ್ನು ಗದ್ದೆಗೆ ಗಂಡ ಎನ್ನುತ್ತಾರೆ. ಹೀಗೆ ಗಂಡನನ್ನು ಮಾಡದಿದ್ದರೆ ಗದ್ದೆ ಹೊಡೆ ತುಂಬಿ ತೆನೆ ಬಿಡುವುದಿಲ್ಲ, ಕಾಳು ಹಾಲು ತುಂಬಿಕೊಳ್ಳುವುದಿಲ್ಲ ಎಂದು ತಿಳಿಸಿದರು. ಬೆಚ್ಚು ನೆಡುವುದನ್ನು ಮುಕ್ರಿಯರು ಸಂಭ್ರಮದಿಂದ ಆಚರಿಸುತ್ತಾರೆ. ಹೀಗೆ ಬೆಚ್ಚು ನೆಟ್ಟ ನಂತರ ಹುಯ್ಯೋ ಹುಯ್ಯೋ ಎಂದು ಒಡೆಯರ ಮನೆಗೆ ಬರುತ್ತಾರೆ. ಆ ಒಡೆಯ ಇವರಿಗೆ ಒಂದು ತೆಂಗಿನಕಾಯಿಯನ್ನು ಕೊಡುತ್ತಾನೆ.

ಗಂಡಸರು ಬೆಚ್ಚು ನೆಡಲು ಹೋದಾಗ ಹೆಣ್ಣು ಮಕ್ಕಳು ಮನೆ ಮತ್ತು ತುಳಸಿ ಕಟ್ಟೆಯ ಸುತ್ತ ಸೆಗಣಿಯಿಂದ ಸಾರಿಸುತ್ತಾರೆ. ನಂತರ ಪಾಯಸ ಮತ್ತು ಕೆಲವು ಸಿಹಿ ಪದಾರ್ಥದ ವಿಶೇಷ ತಿಂಡಿ ಪದಾರ್ಥಗಳನ್ನು ತಯಾರಿಸುತ್ತಾರೆ. ಆಗ ಒಡೆಯನ ಮನೆಯಿಂದ ತೆಂಗಿನಕಾಯಿಯನ್ನು ತೆಗೆದುಕೊಂಡ ಬಂದ ನಂತರ ಮನೆಯ ದೇವರಗಳಿಗೆ ಪೂಜೆ ಸಲ್ಲಿಸಿ ನೈವೇದ್ಯ ಸಮರ್ಪಣೆ ಮಾಡುತ್ತಾರೆ. ನಂತರ ಮನೆಯವರು ಎಲ್ಲರು ಸೇರಿ ಹಬ್ಬದೂಟ ಸವಿಯುತ್ತಾರೆ.

ಕದರಹಸ್ತ

ಈ ಹಬ್ಬವನ್ನು ಹಸ್ತ ನಕ್ಷತ್ರದಲ್ಲಿ ಆಚರಿಸುತ್ತಾರೆ. ಈ ನಕ್ಷತ್ರದಲ್ಲಿ ಆಯಾಯ ಪ್ರದೇಶಕ್ಕೆ, ಅನುಕೂಲಕ್ಕೆ ತಕ್ಕಂತೆ ಯಾವುದಾದರೂ ಒಂದು ದಿನ ಆಚರಿಸುತ್ತಾರೆ. ಇದನ್ನು ನಿಖರವಾಗಿ ಇದೇ. ದಿನ ಆಚರಿಸುತ್ತಾರೆ ಎಂದು ಹೇಳುವಂತಿಲ್ಲ. ಒಂದು ವೇಳೆ ಹಸ್ತ ನಕ್ಷತ್ರದಲ್ಲಿ ಈ ಹಬ್ಬ ಆಚರಿಸಲು ತೊಂದರೆಯಾದರೆ, ದೀಪಾವಳಿ ಹಬ್ಬದ ನೀರು ತುಂಬುವ ದಿನ ಆಚರಿಸುತ್ತಾರೆ. ಹಬ್ಬದ ದಿನ ಮುಂಜಾನೆ ಮನೆಯನ್ನು ಸಾರಿಸಿ ಶುಭ್ರಗೊಳಿಸುತ್ತಾರೆ. ದೇವರ ಮುಂಭಾಗದಲ್ಲಿ ಮತ್ತು ಕದ್ರ ಇಡುವ ಸ್ಥಳದಲ್ಲಿ ಸೇಡಿ ಬರೆಯುತ್ತಾರೆ. ಮನೆಯ ಮುಂದೆ ಮಾವಿನ ಎಲೆಗಳಿಂದ ತೋರಣ ಕಟ್ಟುತ್ತಾರೆ. ಹೊಳೆಗೆ ಭರತ ಬರುವ ಸಮಯವನ್ನು ನೋಡಿ ಕದ್ರ ತರಲು ಗದ್ದೆಗೆ ಹೋಗುತ್ತಾರೆ. ತೆನೆ ತುಂಬಿ ತೂಗುತ್ತಿರುವ ಕೇಯ್ದವನ್ನು ಮೂರು ಹಿಡಿಕಟ್ಟಿ ಕೊಯ್ದುಕೊಂಡು ಅದನ್ನು ಚಿಗುರಿದ ಬಾಳೆ ಎಲೆಯಲ್ಲಿ ಕಟ್ಟಿಕೊಂಡು ರುಮಾಲು ಸುತ್ತಿದ ತಲೆಯ ಮೇಲೆ ಹೊತ್ತುಕೊಂಡು ಬರುತ್ತಾರೆ. ಅವರು ಬಂದು ಮನೆಯ ಬಾಗಿಲು ಮುಂದೆ ನಿಲ್ಲುತ್ತಾರೆ.

ಮನೆಯವರು ಕಾಲು ತೊಳೆದು ಪೂಜಿಸಿ ಒಳಗೆ ಕರೆದುಕೊಳ್ಳುತ್ತಾರೆ. ಕದರನ್ನು ದೇವರು ಇಡುವ ಜಾಗದಲ್ಲಿ ಇಡುತ್ತಾರೆ. ಇದರ ಅಡಿಕೆ, ವಿಳೆದೆಲೆ, ಮಾವಿನ ಎಲೆ, ಸಿಂಗಾರ ಹಾಕಿ ಆ ಕದ್ರಿನ ಮೇಲೆ ಸೇಡಿ ಬಳಿದು ಬಾಗಿಲಿಗೆ ಕಟ್ಟುತ್ತಾರೆ. ಇದರಲ್ಲಿ ಹೊಸದಾದ ಭತ್ತವನ್ನು ತೆಗೆದು ಕಾಯಿಯನ್ನು ಒಡೆದು ಹಾಲು ಮಾಡಿ ಗಂಜಿಗೆ ಹಾಕಿ ಬೇಯಿಸುತ್ತಾರೆ. ಕದಿರನ್ನು ಒನಕೆ, ತುಳಿಸಿ ಕರಗಿ, ಅಡಿಕೆ ಮರ, ತೆಂಗಿನ ಮರ, ಅಡಿಕೆ ಸಿದ್ದಿ, ಕೊಳಗ, ತೋಳಗಂಬ ಮುಂತಾದವುಗಳಿಗೆ ಕಟ್ಟುತ್ತಾರೆ.

ತುಳಸಿ ಹಬ್ಬ

ಈ ಹಬ್ಬವನ್ನು ಮುಕ್ರಿಯರು ಕಾರ್ತಿಕ ಮಾಸದಲ್ಲಿ ಆಚರಿಸುತ್ತಾರೆ. ಇದನ್ನು ಗಂಟ್ ಹುಣ್ಣಿಮೆ ಎಂತಲೂ ಕರೆಯುತ್ತಾರೆ ಎನ್ನುತ್ತಾರೆ. ಆ ದಿನ ತುಳಸಿ ಕಟ್ಟೆಯ ಮೇಲೆ ಒಂದು ಕಬ್ಬು ನಿಲ್ಲಿಸಿ ಸಿಂಗಾರ, ದಾಸಾಳ, ಸೇವಂತಿಗೆ ಇತ್ಯಾದಿ ಹೂವುಗಳು ಮತ್ತು ಅಡಿಕೆ ಕೊನೆ ಮತ್ತು ಮಾವಿನ ಎಲೆಗಳಿಂದ ಸಿಂಗರಿಸುತ್ತಾರೆ. ಆ ತುಳಸಿ ಕಟ್ಟೆಯ ಸುತ್ತ ತಮ್ಮ ದುಡಿಮೆಗೆ ಬೇಕಾಗುವ ಕೆಲಸ ಸಲಕರಣೆಗಳನ್ನು ಇಟ್ಟು ಅವುಗಳಿಗೆ ಸೇಡಿ ಬರೆಯುತ್ತಾರೆ. ಆಗ ಸಾಯಂಕಾಲ ಪೂಜೆ ಪ್ರಾರಂಭವಾಗುತ್ತದೆ. ಈ ಪೂಜೆ ಮಾಡುವವರು ತಿರುಪತಿಗೆ ಹೋಗಿ ಬಂದವರಾಗಿರುತ್ತಾರೆ. ಒಂದು ಮನೆಯಿಂದ ಇನ್ನೊಂದು ಮನೆಗೆ ಪೂಜೆ ಮುಂದುವರೆಯುತ್ತಿರುತ್ತದೆ.

ಕೆಲವು ವಿಶೇಷ ಸಿಹಿ ತಿಂಡಿಯ ನೈವೇದ್ಯ ಮಾಡಿ ಸಮರ್ಪಿಸುತ್ತಾರೆ. ಪೂಜೆಯ ಸಮಯದಲ್ಲಿ ಗೋವಿಂದ ಗೋವಿಂದ ಎಂದು ಐದು ಬಾರಿ ಕೂಗುತ್ತಾರೆ. ಎಲ್ಲರೂ ಗೋವಿಂದ ಗೋವಿಂದ ಎಂದು ಕೂಗುತ್ತಾರೆ. ಇದನ್ನು ಶರಣು ಕರೆಯುವುದು ಎನ್ನುತ್ತಾರೆ. ಈ ಪೂಜೆ ಮುಗಿದ ಮೇಲೆ ಪ್ರತಿಯೊಂದು ಮನೆಯ ಯಜಮಾನನಿಗೆ ಕಾಯಿ ಒಳು ಕೊಡುತ್ತಾರೆ. ಆಗ ಪಟಾಕಿ ಸಿಡಿಮದ್ದನ್ನು ಸಿಡಿಸುತ್ತಾರೆ. ನನ್ನ ಕ್ಷೇತ್ರಕಾರ್ಯದಲ್ಲಿ ಪ್ರತಿಯೊಂದು ಮನೆಯ ಅಂಗಳದಲ್ಲಿ ತುಳಸಿಕಟ್ಟೆ ಮತ್ತು ತಿರುಪತಿ ವೆಂಕಟರಮಣ ಮೂರ್ತಿ ಇರುವುದನ್ನು ಕಂಡಿದೆ. ಇವುಗಳು ಇಲ್ಲದ ಮುಕ್ರಿಯರ ಮನೆಯನ್ನು ಕಂಡಿಲ್ಲ. ಆದ್ದರಿಂದ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ.

ಆಷಾಡದ ಹಬ್ಬ

ಕುಮಟಾದ ಹೆಗಡೆಯಲ್ಲಿ ಮಾರುತಿ ಮುಕ್ರಿ ಎಂಬುವರನ್ನು ಭೇಟಿಯಾದಾಗ ಈ ಹಬ್ಬದ ಕುರಿತು ಮಾಹಿತಿ ನೀಡಿದರು. ಆಷಾಢದ ಏಕಾದಶಿಯಂದು ಈ ಹಬ್ಬ ನಡೆಯುತ್ತದೆ. ಹೊಸದಾಗಿ ಮದುವೆಯಾದ ಮದುಮಗನು ಅತ್ತೆಯ ಮನೆಗೆ ಬರಲೇಬೇಕಾದ ಮೊದಲ ಹಬ್ಬವಾಗಿದೆ. ಈ ಹಬ್ಬದ ಒಂದೆರಡು ದಿನ ಮುಂಚಿತವಾಗಿ ಹೆಣ್ಣಿನ ತವರು ಮನೆಯವರು

ಅಳಿಯ ಮತ್ತು ಮಗಳನ್ನು ಕರೆಯಲು ಹೋಗುತ್ತಾರೆ. ಹೆಣ್ಣಿನ ಮನೆಯಿಂದ ಬಂದ ಅತಿಥಿಗಳಿಗೆ ವಿಶೇಷ ಊಟ ಮಾಡುತ್ತಾರೆ. ಮರುದಿನ ಹೊಸ ಅಳಿಯ ಹೆಂಡತಿ ಹಾಗೂ ತನ್ನ ಸಂಗಾತಿ ಚಂಚಣ್ಣನೊಡನೆ ಮಾವನ ಮನೆಗೆ ಹೊರಡುತ್ತಾರೆ. ಮಾವನ ಮನೆಯಲ್ಲಿ ರಾತ್ರಿ ಹಬ್ಬದೂಟಕ್ಕಿಂತ ಮೊದಲು ಅಳಿಯ ಕೈಕಾಲು ಮುಖ ತೊಳೆದು ದೇವರ ಮುಂದೆ ಎಲೆ ಅಡಿಕೆಯಿಟ್ಟು ವಂದಿಸುತ್ತಾನೆ. ಆಮೇಲೆ ಕವಳ ಸಾಮಗ್ರಿಯನ್ನು ಮಾವನ ಮನೆಯಲ್ಲಿ ಇರುವವರಿಗೆ ಎಲ್ಲರಿಗೂ ಕೊಟ್ಟು, ಹಿರಿಯರಿಗೆ ನಮಸ್ಕರಿಸುತ್ತಾನೆ. ತದನಂತರ ಎಲ್ಲರೂ ಸೇರಿ ಹಬ್ಬದೂಟ ಮಾಡುತ್ತಾರೆ. ಮರುದಿನ ಸಂಜೆ ಮಾವನ ಮನೆಯಲ್ಲಿ ಊಟ ಮುಗಿಸಿ ಹೊರಡುವಾಗ ಮತ್ತೆ ಕವಳ ಸಾಮಗ್ರಿ ನೀಡಿ, ಹೆಂಡತಿಯೊಂದಿಗೆ ತನ್ನ ಮನೆಗೆ ಬರುತ್ತಾನೆ.

ಅಳ್ಳಿನ ಅಮವಾಸ್ಯೆ

ಹೊಸ ಅಳಿಯ ಹೊರಡಲೇಬೇಕಾದ ಎರಡನೆಯ ಹಬ್ಬವೆಂದರೆ ಅಳ್ಳಿನ ಅಮವಾಸ್ಯೆ ಆಗಿದೆ. ಇದನ್ನು ಅಳಿಯನ ಅಮವಾಸ್ಯೆ ಎಂತಲೂ ಕರೆಯುತ್ತಾರೆ. ಮೊದಲು ತವರು ಮನೆಯಿಂದ ಐದು ಜನ ಹೊಸ ಅಳಿಯ ಮತ್ತು ಮಗಳನ್ನು ಕರೆಯಲು ಹೋಗುತ್ತಾರೆ. ಆದರೆ ಇತ್ತೀಚೆಗೆ ತವರು ಮನೆಯಿಂದ ಹೆಣ್ಣಿನ ತಂದೆ ಅಥವಾ ಅಣ್ಣ ಅಥವಾ ತಮ್ಮರಲ್ಲಿ ಯಾರಾದರೂ ಒಬ್ಬರು ಹೋಗುತ್ತಾರೆ. ಹಬ್ಬಕ್ಕೆ ಕರೆಯಲು ಬಂದವರಿಗೆ ಆವತ್ತು ಮಾಂಸದ ಊಟ ಬಡಿಸುತ್ತಾರೆ. ಮರುದಿನ ಸಾಯಂಕಾಲ ಎಲ್ಲರೂ ಸೇರಿ ಹೆಣ್ಣಿನ ತವರು ಮನೆಗೆ ಬರುತ್ತಾರೆ. ಆವತ್ತು ರಾತ್ರಿ ವಿಶೇಷ ತಿಂಡಿ-ತಿನಿಸುಗಳಿಂದ ಮಾಡಿದ ಊಟ ಮಾಡುತ್ತಾರೆ. ಮರುದಿನ ಮಾಂಸದೂಟವನ್ನು ಮಾಡಲಾಗುತ್ತದೆ. ಹೊಸ ಅಳಿಯ ಮಾವನ ಮನೆಯಲ್ಲಿರುವ ಎಲ್ಲರಿಗೂ ಕವಳ ಸಾಮಗ್ರಿಯನ್ನು ಈ ಹಬ್ಬದಲ್ಲಿ ನೀಡಬೇಕೆಂಬ ನಿಯಮವಿದೆ. ಇದಾದ ಮರುದಿನ ಅಕ್ಕಿಹಿಟ್ಟು ಮಾಡುತ್ತಾರೆ. ಹಿಟ್ಟು ಹಾಕುವ ಮಡಿಕೆಯನ್ನು ಪೂಜಿಸುತ್ತಾರೆ. ಒಂದು ವೀಳ್ಯದ ಪಟ್ಟಿ ಹಾಕಿ, ಎಣ್ಣೆಹಚ್ಚಿ, ಅದನ್ನು ಮಡಕೆಯೊಳಗೆ ಹಾಕಿ ಮುಚ್ಚುತ್ತಾರೆ. ಮರುದಿನ ಅಕ್ಕಿ ಅರೆದು ದೊಣ್ಣೆ ಮಾಡಿ ದೊಣ್ಣೆರೊಟ್ಟಿ ಸುಡುತ್ತಾರೆ.

ಹೊಸ ಅಳಿಯ ಮತ್ತು ಮಗಳು ಐದು ದಿನಗಳು ಅತ್ತೆಯ ಮನೆಯಲ್ಲಿ ಉಳಿಯುತ್ತಾರೆ. ತಮ್ಮ ಮನೆಗೆ ಹೊರಡುವ ದಿನ ವಿಶೇಷ ಅಡಿಗೆಯ ಊಟ ಮಾಡಿ ಮಾವನ ಮನೆಯವರಿಗೆ ಕವಳ ಸಾಮಗ್ರಿ ನೀಡಿ ಹಿಂತಿರುಗುತ್ತಾನೆ.

ಕಾಮನ ಹಬ್ಬ

ವಾಲಗಳ್ಳಿಯ ಹೊಸಹಿತ್ತಲಿನ ಕೃಷಿಕೂಲಿ ಮಾಡುವ ನಾರಾಯಣ ಕಣಿಯಾ ಮುಕ್ರಿ ಅವರನ್ನು ಸಂದರ್ಶಿಸಿ ಪಡೆದ ಮಾಹಿತಿ ಆಧರಿಸಿದೆ. ಹೋಳಿ ಹುಣ್ಣಿಮೆಯ ದಿನ ಕಾಮನನ್ನು

ಸುಟ್ಟು ಹಬ್ಬವನ್ನು ಆಚರಿಸುವುದು ಎಲ್ಲಾ ಸಮುದಾಯಗಳಲ್ಲಿಯು ಕಂಡುಬರುತ್ತದೆ. ಎಲ್ಲರಂತೆ ಮುಕ್ರಿಯರು ಈ ಹಬ್ಬವನ್ನು ಆಚರಿಸುತ್ತಾರೆ. ಇವರು ಒಂದು ಉದ್ದನೆಯ ಕೋಲಿಗೆ ಹುಲ್ಲು ಕಟ್ಟನ್ನು ಕಟ್ಟಿ ಮನುಷ್ಯನ ರೂಪ ಮಾಡುತ್ತಾರೆ. ಅದನ್ನು ಪ್ರತಿಯೊಂದು ಮನೆಯ ಬಾಗಿಲು ಮುಂದೆ ತೆಗೆದುಕೊಂಡು ಹೋಗುತ್ತಾರೆ. ಮನೆಗೆ ಬಂದಾಗ ಮನೆಯಲ್ಲಿ ಕಟ್ಟಿಗೆಯನ್ನು ಮತ್ತು ಇತರ ಕೆಲವು ವಸ್ತುಗಳನ್ನು ಕೊಡುತ್ತಾರೆ. ಇದು ಮನೆ ಮನೆಗೆ ಸಾಗುತ್ತದೆ. ಇವರ ವಾಸಿಸುವ ನೆಲೆಯಲ್ಲಿ ಒಂದು ಕಡೆ ಕಾಮನ ಕಟ್ಟೆಯಿರುತ್ತದೆ(ವಾಲಗಳ್ಳಿಯ ಹೊಸ ಹಿತ್ತಲಿನಲ್ಲಿರುವುದು ಕಾಮನಕಟ್ಟೆ ಇರುವುದು ಕ್ಷೇತ್ರಕಾರ್ಯದಲ್ಲಿ ಕಾಣಲಾಗಿದೆ). ಕಾಮನಮೂರ್ತಿ ಯೊಂದಿಗೆ ಎಲ್ಲವೂ ತಂದು ಕಾಮನಕಟ್ಟೆಯಲ್ಲಿ ಸಂಗ್ರಹಿಸಿರುತ್ತಾರೆ. ಇಲ್ಲಿ ಗುಡ್ಡೆಗೆ ಬೆಂಕಿ ಹಾಕಲಾಗುತ್ತದೆ. ಆಗ ಎಲ್ಲರಿಗೂ ನೀರು ಸಿಂಪಡಿಸುತ್ತಾರೆ. ನಂತರ ಅದರ ಬೂದಿಯನ್ನು ಮೈಗೆ ಒರೆಸಿಕೊಳ್ಳುತ್ತಾರೆ. ಆಮೇಲೆ ಹೊಳೆ ಅಥವಾ ಹಳ್ಳಕ್ಕೆ ಹೋಗಿ ಮಿಂದು ಬರುತ್ತಾರೆ. ಈ ದಿನ ಹಲವಾರು ವೇಷಗಳನ್ನು ಹಾಕಿ ಮುಕ್ರಿ ಯುವಕರು ಮನೆಯ ಮುಂದೆ ಸಾಮೂಹಿಕವಾಗಿ ಕುಣಿಯುತ್ತಾರೆ.

ಸೇಡಿ ಸಂಕ್ರಾಂತಿ

ನಾಡಿನಾದ್ಯಂತ ಜನವರಿ ೧೪ನೇ ತಾರೀಖು ಮಕರ ಸಂಕ್ರಾಂತಿಯನ್ನು ಆಚರಿಸುತ್ತಾರೆ. ಈ ಮಕರ ಸಂಕ್ರಾಂತಿಯನ್ನು ಮುಕ್ರಿಯರ ಸೇಡಿ ಸಂಕ್ರಾಂತಿ ಎಂದು ಕರೆಯುತ್ತಾರೆ. ತುಳಸಿಕಟ್ಟೆಗೆ ಸೇಡಿಯನ್ನು ಬಡಿದು ಬಿಳಿಬಣ್ಣ ಮಾಡಿ ಶುಭ್ರವಾಗಿಸುತ್ತಾರೆ. ತುಳಸಿಗೆ ಸಿಂಗಾರದ ಕೊನೆಯನ್ನು ಮುರಿದು ಹಾಕಿ ಪೂಜೆ ಮಾಡುತ್ತಾರೆ. ಇತ್ತೀಚೆಗೆ ಪೇಟೆಯಲ್ಲಿ ಮಾರಾಟಕ್ಕಿರುವ ಸಂಕ್ರಾಂತಿ ಕಾಳನ್ನು ತಂದು ತುಳಸಿಗೆ ನೈವೇದ್ಯ ಮಾಡುತ್ತಾರೆ. ಸಂಕ್ರಾಂತಿ ದಿನ ಪಾಯಸ, ಅನ್ನ ಮತ್ತಿತರ ಮೊಗೆಕಾಯಿ ಕಡಬು ಸಿಹಿ ತಿಂಡಿ ಮಾಡಿರುತ್ತಾರೆ. ಅಂದು ಮಾಡಿದ ಅಡುಗೆಯನ್ನು ದೇವರಿಗೆ ನೈವೇದ್ಯ ಮಾಡುತ್ತಾರೆ. ಆಮೇಲೆ ಮನೆಯವರು ಎಲ್ಲರೂ ಸೇರಿ ಊಟ ಮಾಡುತ್ತಾರೆ.

ದೀಪಾವಳಿ

ಕೃಷಿ ಆಧಾರಿತ ದುಡಿಮೆಯಲ್ಲಿ ತೊಡಗಿಕೊಂಡಿರುವ ಕೃಷಿಕೂಲಿ ಕಾರ್ಮಿಕರಾದ ಮುಕ್ರಿಯರು ದೀಪಾವಳಿಯನ್ನು ಆಚರಿಸುತ್ತಾರೆ. ಕೃಷಿ ದೇವರಾದ ಬಲೀಂದ್ರನನ್ನು ಪೂಜಿಸುವುದು ಇವರಿಗೆ ದೊಡ್ಡ ಹಬ್ಬವಾಗಿದೆ. ಇದು ಮೂರು, ನಾಲ್ಕು ದಿನಗಳವರೆಗೆ ನಡೆಯುತ್ತದೆ. ಈ ಹಬ್ಬದಲ್ಲಿ ಸಾಮಾನ್ಯವಾಗಿ ೧. ನೀರು ತುಂಬುವುದು, ೨. ಮಕ್ಕಳನ್ನು ಮಿಯಿಸುವುದು, ೩. ದೊಡ್ಡ ಹಬ್ಬ, ೪. ಬಲೀಂದ್ರನನ್ನು ಕಳಿಸುವುದು, ೫. ಹಬ್ಬಗಾಣಿಕೆ ಯಂತಹ ಚಡಂಗಗಳು ನಡೆಯುತ್ತವೆ.

೧. ನೀರು ತುಂಬುವ ಶಾಸ್ತ್ರ

ನರಕ ಚತುರ್ದಶಿಗಿಂತ ಮೊದಲು ಈ ಶಾಸ್ತ್ರ ನಡೆಯುತ್ತದೆ. ಮನೆಯನ್ನು ಸ್ವಚ್ಛ ಮಾಡಿ ಗೋಡೆಗೆ ಸೇಡಿ ಬಡಿಯುತ್ತಾರೆ. ಬಾಸಿಂಗ, ತೊಂಡ್ಲ, ಸೂರ್ಯ, ಚಂದ್ರ ಇತ್ಯಾದಿ ಚಿತ್ರಗಳನ್ನು ಗೋಡೆಯ ಮೇಲೆ ಬರೆಯುತ್ತಾರೆ. ಆವತ್ತು ಕರಿಗೆ ಎಂಬ ಮಣ್ಣಿನ ಮಡಿಕೆಯನ್ನು ತಂದು ಅದಕ್ಕೆ ಸೇಡಿ ಬರೆಯುತ್ತಾರೆ. ಆಮೇಲೆ ನಾಲ್ಕು ಕೋಡ ಮೀಸಲು ನೀರು ತುಂಬುತ್ತಾರೆ. ಅದರ ಮೇಲೆ ತೆಂಗಿನಕಾಯಿ ಇಟ್ಟು ಸಿಂಗಾರ, ವೀಳ್ಯದೆಲೆ, ಮಾವಿನ ತುಂಕಿ, ಅಡಿಕೆ ಹೂಗಳಿಂದ ಸಿಂಗರಿಸುತ್ತಾರೆ. ಇದರ ಪಕ್ಕದಲ್ಲಿ ಸಿದ್ದಿ, ಕೊಳಗ, ಮೊಗೆಕಾಯಿ, ಅಡಿಕೆಗೊನೆ ಇಡುತ್ತಾರೆ. ಇವುಗಳನ್ನು ಬಲೀಂದ್ರ ಪರಿವಾರ ಎನ್ನುತ್ತಾರೆ. ಇವೆಲ್ಲಗಳಿಗೆ ಯಾವುದಾದರೂ ತಿಂಡಿಯ ನೈವೇದ್ಯ ಮಾಡಿ ಪೂಜಿಸುತ್ತಾರೆ. ಇದನ್ನು ನೀರು ತುಂಬುವ ಶಾಸ್ತ್ರ ಎನ್ನುತ್ತಾರೆ.

೨. ಮಕ್ಕಳು ಮಿಯಿಸುವುದು

ನರಕ ಚತುರ್ದಶಿಯನ್ನು ಮುಕ್ರಿಯರು ಮಕ್ಕಳು ಮಿಯಿಸುವುದು ಎನ್ನುತ್ತಾರೆ. ಆವತ್ತು ಬೆಳಿಗ್ಗೆ ಎದ್ದು ಸುತ್ತಮುತ್ತೆಲ್ಲ ಗುಡಿಸಿ ಸ್ವಚ್ಛಗೊಳಿಸುತ್ತಾರೆ ಹಾಗೂ ಮನೆ, ದೇವರಮನೆ, ಬಚ್ಚಲ, ಒಲೆಯನ್ನು ಸಾರಿಸುತ್ತಾರೆ. ಬಚ್ಚಲು ಒಲೆಯ ಮೇಲೆ ಹಂಡೆ ಇಟ್ಟು, ಸೇಡಿ ಬರೆದು ಹಂಡೆಯ ಕಂಠಕ್ಕೆ ಹಿಂಡ್ಲ ಬಳ್ಳಿಯನ್ನು ಸುತ್ತಿ, ನೀರು ತುಂಬಿ ನೀರನ್ನು ಕಾಯಿಸುತ್ತಾರೆ. ಆಮೇಲೆ ಮನೆ ಮಂದಿಯೆಲ್ಲಾ ಎಣ್ಣೆಯನ್ನು ಮೈಗೆ ಹಚ್ಚಿಕೊಂಡು ಬಿಸಿ ನೀರಿನ ಸ್ನಾನ ಮಾಡುತ್ತಾರೆ. ಸ್ನಾನದ ನಂತರ ಕೈಮದ್ದಿನ ಗಿಡದ ಸೊಪ್ಪಿಗೆ ಅರಿಶಿಣ, ಮೆಣಸಿನಕಾಳು, ಕಾಳುಜೀರಿಗೆ ಹಾಕಿ ಅರೆದು ಕುಡಿಯುತ್ತಾರೆ. ಸಗಣಿಯಿಂದ ಹುಂಡೆ ಮಾಡಿ ಅದನು ದೇವರು ಎಂದು ಇಟ್ಟು ಅದರ ಮೇಲೆ ಹಿಂಡ್ಲಕಾಯಿ ಇಡುತ್ತಾರೆ. ಈ ಹಿಂಡ್ಲಕಾಯಿಯನ್ನು ಬಲಗಾಲಿನಿಂದ ತುಳಿದು ಹೊಂಡೆ.... ಹೊಂಡೆ.... ಹೊಂಡೆ ಎಂದು ಕೂಗುತ್ತಾರೆ. ಈ ದಿನವನ್ನು ಸಣ್ಣಹಬ್ಬ ಎಂದು ಕರೆಯುತ್ತಾರೆ. ಇವತ್ತಿನ ದಿನವೇ ತುಳಸಿ ವೆಂಕಟರಮಣನಿಗೂ ಪೂಜೆ ಮಾಡುತ್ತಾರೆ.

೩. ದೊಡ್ಡ ಹಬ್ಬ

ಅಮವಾಸ್ಯೆ ದಿನವನ್ನು ಅಂದರೆ ಬಲಿಪಾಡ್ಯವನ್ನು ಮುಕ್ರಿಯರು ದೊಡ್ಡಹಬ್ಬ ಎಂದು ಕರೆಯುತ್ತಾರೆ. ಅಂದು ಬಲೀಂದ್ರಜ್ಜನೆಂಬ ಕರಗಿಯನ್ನು ತುಲಸಿಯ ಎದುರಿಗೆ ತಂದು ಪೂಜಿಸುತ್ತಾರೆ. ಆಮೇಲೆ ಕರಗಿಯನ್ನು ಮನೆಯ ಒಳಗೆ ಕರೆದುಕೊಂಡು ಹೋಗಿ ಅಲ್ಲಿಯೂ ಪೂಜಿಸುತ್ತಾರೆ. ಆವತ್ತು ಪಾಯಸ, ಮೊಗೆಕಾಯಿ ಕಡಬು, ಕಜ್ಜಾಯ ಮಾಡಿ ನೈವೇದ್ಯ ಮಾಡುತ್ತಾರೆ. ಕೆಲವರು ಸರಾಯಿ, ಸೇಂದಿ ಕುಡಿದು ಅಂದರೆ ಕಳ್ಳು ಕುಡಿದು ಸಂತಸ ಪಡುತ್ತಾರೆ. ಈ ದಿನವೇ ಧನಗಳಿಗೆ ಗಂಟೆ ಕಟ್ಟಲಾಗುತ್ತದೆ. ದನಗಳಿಗೆ ಸ್ನಾನ ಮಾಡಿಸಿ ಗಂಟೆಯನ್ನು ತುಳಸಿ

ಗಿಡದ ಹತ್ತಿರ ಇಟ್ಟು ಪೂಜೆ ಮಾಡಿ ದನಗಳಿಗೆ ಕಟ್ಟಲಾಗುತ್ತದೆ. ಇದನ್ನೇ ದನಗಳಿಗೆ ಗಂಟೆ ಕಟ್ಟುವುದು ಎನ್ನುತ್ತಾರೆ. ಕೊಟ್ಟಿಗೆಯ ಎದುರು ಆಕಳ ಹೆಜ್ಜೆಯನ್ನು ಸೇಡಿಯಿಂದ ಬರೆಯಲಾಗುತ್ತದೆ. ಆಕಳ ಕಾಲ ಪೂಜೆ ಮಾಡುತ್ತಾರೆ. ಈ ಪೂಜೆಆಗುವವರೆಗೆ ಆಕಳಿಗೂ ತಿನ್ನಲು ಹುಲ್ಲು/ಸೊಪ್ಪು ಹಾಕುವುದಿಲ್ಲ.

೪. ಕರಗಿ ಕಳಿಸುವುದು

ಅಮವಾಸ್ಯೆಯ ದಿನ ಬೆಳಗ್ಗೆ ಸುಮಾರು ೪ ಗಂಟೆ ಸಮಯಕ್ಕೆ ಬಲೀಂದ್ರನಿಗೆ ಕೊನೆಯ ಪೂಜೆ ಸಲ್ಲಿಸಿ ನೈವೇದ್ಯ ಮಾಡುತ್ತಾರೆ. ಆಮೇಲೆ ಬುತ್ತಿ ಕಟ್ಟಿಕೊಂಡು ಅದರಲ್ಲಿ ಮೊಗೆಕಾಯಿ ಕಡಬನ್ನು ಹಾಕಿರುತ್ತಾರೆ. ಇವುಗಳನ್ನು ತೆಗೆದುಕೊಂಡು ಗದ್ದೆಗೆ ಹೋಗಿ ಗದ್ದೆಯ ಮೂಲೆಯಲ್ಲಿ ನೀರನ್ನು ಚೆಲ್ಲಿ, ಬಲೀಂದ್ರನಲ್ಲಿ ತಮಗೆ ಒಳ್ಳೆಯದು ಮಾಡುವಂತೆ ಪ್ರಾರ್ಥಿಸಿ ಹಿಂದಿರುಗಿ ನೋಡದೆ ಮನೆಗೆ ಬರುತ್ತಾರೆ.

೫. ಹಬ್ಬಗಾಣಿಕೆ

ಕರಗಿಯನ್ನು ಕಳುಹಿಸುವ ವಿಧಿ ಮುಗಿದ ಮೇಲೆ ಮುಕ್ರಿಯರ ಮನೆಯ ಮುಖ್ಯಸ್ಥನು ಹಬ್ಬಗಾಣಿಕೆ ನೀಡುವ ಸಂಪ್ರದಾಯವಿದೆ. ಇವರು ತಾವು ದುಡಿಯುವ ಒಡೆಯರ ಮನೆಗೆ ಹೋಗಿ ಅವನ ಎದುರು ಎಳೆನೀರನ್ನು ಇಟ್ಟು ಕೈಮುಗಿದು ಬರುವುದೇ ಆಗಿದೆ. ಆದರೆ ಇತ್ತೀಚೆಗೆ ಎಳೆನೀರಿಗೆ ಬದಲು ಮೊಗೆಕಾಯಿ ಅಥವಾ ಇತರ ಫಲಗಳನ್ನು ನೀಡುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಒಡೆಯರು ಎಲೆ, ಅಡಿಕೆ, ಹೊಗೆಸೊಪ್ಪು ಮತ್ತು ಹಬ್ಬಕ್ಕೆ ಮಾಡಿದ ತಿಂಡಿಯನ್ನು ನೀಡುತ್ತಾರೆ. ಆದರೆ ಇಂದು ಈ ಹಬ್ಬಗಾಣಿಕೆ ಶಾಸ್ತ್ರ ನಡೆಯುವುದು ಕಡಿಮೆಯಾಗಿದೆ.

ಈ ಹಬ್ಬಕ್ಕೆ ಹೊಸ ಅಳಿಯ ಮಗಳು ಹಬ್ಬಕ್ಕೆ ಬರಲೇಬೇಕೆಂಬ ಪರಿಪಾಠವಿದೆ. ಹೊಸ ಅಳಿಯ ಚೆಂಚಣ್ಣನ್ನು ಮತ್ತು ಹೆಂಡತಿಯ ಜೊತೆಗೆ ಮಾವನ ಮನೆಗೆ ನರಕ ಚತುರ್ದಶಿಯ ಸಂಜೆ ಬರುತ್ತಾನೆ. ಆವತ್ತು ಮಾವನ ಪೂಜೆ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾನೆ. ಮನೆ ಮಂದಿಗೆಲ್ಲ ತಂಬಾಕು ವೀಳ್ಯೆದೆಲೆ ಕೊಟ್ಟು ಹಬ್ಬದೂಟ ಮಾಡಿ ಎರಡು ದಿನ ಉಳಿಯುತ್ತಾನೆ. ಬಲಿಪಾಡ್ಯದಂದು ಮಾವನ ಮನೆಯವರಿಗೆಲ್ಲ ಕವಳವನ್ನು ಹಂಚಿ ಹೆಂಡತಿಯೊಂದಿಗೆ ಮನೆಗೆ ಹಿಂತಿರುಗುತ್ತಾನೆ. ಆವತ್ತು ಹೊಸ ಅಳಿಯ ಮತ್ತು ಮಗಳಿಗೆ ಹೊಸಬಟ್ಟೆಯ ಉಡುಗೊರೆ ಕೊಡುವುದು ನಡೆಯುತ್ತದೆ.

ನವಿಲುಗೋಣದ ಬಂಡಿಹಬ್ಬ

ನವಿಲುಗೋಣವು ಹೊನ್ನಾವರ ತಾಲೂಕಿನಲ್ಲಿ ಬರುವ ಒಂದು ಹಳ್ಳಿ. ಇಲ್ಲಿ ನಾಮಧಾರಿ ನಾಯಕರು, ಬ್ರಾಹ್ಮಣರು, ಹಾಲಕ್ಕಿಗೌಡರು, ಪಟಗಾರರು, ಭಂಡಾರಿ, ಮುಕ್ರಿಯರು ಇತ್ಯಾದಿ

ಸಮುದಾಯಗಳು ನೆಲೆಗೊಂಡಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಎಲ್ಲ ಊರುಗಳಲ್ಲಿ ಬಂಡಿಹಬ್ಬ ಮಾಡುತ್ತಾರೆ. ಅದರಂತೆ ನವಿಲುಗೋಣದಲ್ಲಿಯು ಕೂಡ ಪ್ರತಿ ವರ್ಷ ಮೇ ತಿಂಗಳಲ್ಲಿ ಬಂಡಿಹಬ್ಬ ನಡೆಯುತ್ತದೆ. ಈ ಎಲ್ಲ ಸಮುದಾಯಗಳಿಂದ ಪ್ರತ್ಯೇಕವಾಗಿ ಮುಕ್ರಿಯರ ಕೇರಿ ಇದೆ. ಇವರ ಕೇರಿಯಲ್ಲಿಯೇ ಮಹಾಸತಿ, ಬೀರ(ದೊಡ್ಡಾಳಬೀರ) ಕಗ್ಗನ ಬೀರ(ಸಣ್ಣಾಳಬೀರ) ಎಂಬ ದೇವರ ಚಿಕ್ಕದಾದ ಹಳೆಯ ಕಾಲದ ದೇವಸ್ಥಾನಗಳಿವೆ. ಈ ದೇವಸ್ಥಾನದ ಪೂಜಾರಿಗಳು ಮುಕ್ರಿಯರೇ ಆಗಿದ್ದಾರೆ. ತಿಮ್ಮಪ್ಪ ನಾರಾಯಣ ಮುಕ್ರಿ ಕುಟುಂಬದವರು ಈ ದೇವಸ್ಥಾನದ ಪೂಜಾರಿಗಳಾಗಿದ್ದಾರೆ ಎಂದು ತಿಮ್ಮಪ್ಪನವರೇ ತಿಳಿಸಿದರು. ಅಲ್ಲದೆ ಬಂಡಿಹಬ್ಬ ಎಲ್ಲ ಆಚರಣೆ ಗಳನ್ನು ಇವರೆ ನೆರವೇರಿಸುತ್ತಾರೆ. ಇವರ ಸಂದರ್ಶಿಸಿದಾಗ ಬಂಡಿಹಬ್ಬದ ಕುರಿತು ಮಾಹಿತಿ ನೀಡಿದರು.

ಈ ಬಂಡಿಹಬ್ಬದಲ್ಲಿ ಊರಿನ ಎಲ್ಲಾ ಜಾತಿ ಸಮುದಾಯದವರು ಎಲ್ಲರೂ ಸೇರಿ ಮೇ ತಿಂಗಳಲ್ಲಿ ಒಂದು ದಿನ ನಿಗದಿ ಮಾಡಿ ಹಬ್ಬವನ್ನು ಆಚರಿಸುತ್ತೇವೆ ಎಂದು ತಿಳಿಸಿದರು. ಇಲ್ಲಿ ಮಹಾಸತಿ ತಿಮ್ಮಪ್ಪ ಗಡಿಬಂಟ್, ದೊಡ್ಡಾಳಬೀರ, ಸಣ್ಣಾಳಬೀರ ಎಂಬ ನಾಲ್ಕು ದೇವರುಗಳ ಪೂಜೆ ಆಗುತ್ತದೆ. ದೊಡ್ಡಾಳ ಬೀರ, ಸಣ್ಣಾಳ ಬೀರ ಮೂರ್ತಿಗಳನ್ನು ಕಳಸ ಮಾಡಿ ಅಂಟಿಸುತ್ತಾರೆ ಮತ್ತು ಪೀಠವನ್ನು ತಯಾರಿಸಲಾಗುತ್ತದೆ. ೬ ಬಾಳೆಕಂಬಗಳಿಂದ ನಾಲ್ಕು ಅಡಿ ಉದ್ದ, ನಾಲ್ಕು ಅಡಿ ಅಗಲ ಮಾಡಿಕಟ್ಟುತ್ತಾರೆ. ಇವುಗಳಿಗೆ ಬಾಳೆ ಅಂಬಿ ಹಾಕಿ ಪೀಠ ಸಿದ್ಧ ಮಾಡುತ್ತಾರೆ. ಇದಕ್ಕೆ ತೆಂಗಿನ ಗರಿ ಸಿಗಿಸುತ್ತಾರೆ. ಇದನ್ನು ಅಲಂಕರಿಸುತ್ತಾರೆ. ಆಮೇಲೆ ಬಲಿಬಣ್ಣ ಹಾಕುತ್ತಾರೆ. ಇದನ್ನು ನಾಲ್ಕು ಜನ ಮಾತ್ರ ಮುಟ್ಟಬೇಕು ಹೊರತು ಬೇರೆ ಯಾರು ಮುಟ್ಟುವಂತಿಲ್ಲ. ಆಮೇಲೆ ಪೂಜೆ ಸಲ್ಲಿಸಿ ಕೋಳಿ ಕುರಿ ಬಲಿ ಕೊಡುತ್ತಾರೆ. ಇದನ್ನು ರಾತ್ರಿ ೧ ಗಂಟೆ ನಂತರ ಹೊಳೆಗೆ ಹೊತ್ತೊಯ್ಯುತ್ತಾರೆ. ಇದು ತೆಗೆದುಕೊಂಡು ಹೋಗುವಾಗ ಓಡಬೇಕು. ನಿಧಾನವಾಗಿ ಹೋಗುವಂತಿಲ್ಲ.

ಇದು ಹೊತ್ತೊಯ್ಯುವಾಗ ಯಾರು ಎದುರಿಗೆ ಬರುವಂತಿಲ್ಲ. ಒಂದು ವೇಳೆ ಯಾರಾದರೂ ಬಂದರೆ ಅವರನ್ನು ಕತ್ತಿಯಿಂದ ಕತ್ತರಿಸಿ ಹಾಕಬೇಕೆಂಬ ನಿಯಮವಿದೆ. ಅದಕ್ಕಾಗಿಯೆ ರಾತ್ರಿ ೧ ಗಂಟೆಯ ಹೊತ್ತಿಗೆ ಪೀಠವನ್ನು ಹೊತ್ತೊಯುವುದು ಎಂದು ತಿಮ್ಮಪ್ಪ ತಿಳಿಸುತ್ತಾರೆ. ಇದು ಕೇವಲ ನಮ್ಮ ಕುಟುಂಬದವರು ಮಾತ್ರ ಮಾಡುವುದಿಲ್ಲ. ಬುದ್ಧಿವಂತರು ಮತ್ತು ಎಲ್ಲಾ ಜಾತಿಯವರು ಸೇರಿ ಮಾಡುತ್ತಾರೆ ಎನ್ನುತ್ತಾರೆ.

ನವಿಲುಗೋಣದ ಬಂಡಿಹಬ್ಬದಂತೆಯೇ ಹೆಗಡೆಯ ಬಂಡಿಹಬ್ಬದಲ್ಲಿ ಮುಕ್ರಿಯರು ಕಲಶ ಹೋರುತ್ತಾರೆ ಮತ್ತು ಹಳದೀಪುರದ ಬಂಡಿಹಬ್ಬದಲ್ಲಿ ಮುಕ್ರಿಯರು ಸೇವೆ ಸಲ್ಲಿಸುತ್ತಾರೆ ಎಂಬುದು ಕ್ಷೇತ್ರಕಾರ್ಯದಲ್ಲಿ ಕಂಡುಕೊಳ್ಳಲಾಗಿದೆ.

೪.೬. ದೈವಾರಾಧನೆ

ತಳಸಮುದಾಯವಾದ ಮುಕ್ರಿಗಳು ತಮ್ಮದೇ ಆದ ಪೂಜಾ ವಿಧಿ-ವಿಧಾನಗಳನ್ನು ಹೊಂದಿದ್ದಾರೆ. ಅವರು ವೈಷ್ಣವಾರಾಧಕರು. ಹೀಗಾಗಿ ತಳಸಮುದಾಯಗಳ ವೈಷ್ಣವ ದೈವವಾದ ಹನುಮಂತ ಇವರ ಆರಾಧ್ಯ ದೈವಗಳಲ್ಲೊಂದು. ಮುಕ್ರಿಯರಿಗೆ ಉತ್ತರಕನ್ನಡದ ಚಂದಾವರದ ಹನುಮಂತ ಪ್ರಧಾನ ದೈವವೆಂದು ಹೇಳಲಾಗುತ್ತದೆ. ಉತ್ತರಕನ್ನಡದ ಎಲ್ಲಾ ತಾಲೂಕಿನಲ್ಲಿರುವ ಮುಕ್ರಿಗಳು ಕಡ್ಡಾಯವಾಗಿ ವರ್ಷಕ್ಕೊಮ್ಮೆಯಾದರೂ ಚಂದಾವರದ ಹನುಮಂತನ ದರ್ಶನ ಪಡೆಯುತ್ತಾರೆ. ಮುಕ್ರಿಯರು ಚಂದಾವರದ ಹನುಮಂತನನ್ನು ಕುಲದೇವರೆಂದು ಹೇಳುತ್ತಾರೆ. ಚಂದಾವರದ ಹನುಮಂತನ ಪೂಜಾರಿ ಮಾತ್ರ ಬ್ರಾಹ್ಮಣನಾಗಿದ್ದಾನೆ. ಪೂರ್ವದಲ್ಲಿ ನಾಮಧಾರಿಗಳು ಚಂದಾವರದ ಹನುಮಂತನ ಪೂಜಾರಿಯಾಗಿದ್ದರಂತೆ. ಅವರು ನಿಯಮ ನಿಷ್ಠೆಯಿಂದ ಪೂಜೆ ಮಾಡದಿದ್ದರಿಂದ ಬ್ರಾಹ್ಮಣ ಪೂಜಾರಿಯನ್ನು ನೇಮಿಸಲಾಯಿತಂತೆ ಎಂದು ಮುಕ್ರಿಯರ ಹಿರಿಯ ವಕ್ತೃಗಳು ತಿಳಿಸುತ್ತಾರೆ. ಮುಕ್ರಿ, ಹಾಲಕ್ಕಿ, ಪಟಗಾರ, ನಾಮದಾರಿಯಂತಹ ತಳ ಸಮುದಾಯಗಳೇ ಈ ದೈವದ ಆರಾಧಕರಾಗಿದ್ದಾರೆ. ೧೯೮೫ ರವರೆಗೆ ಈ ದೇವರ ಪ್ರತಿ ಕಾರ್ಯದಲ್ಲಿಯು ಮುಕ್ರಿಗಳಿಗೆ ಅವಕಾಶವಿತ್ತು. ಆದರೆ ಇತ್ತೀಚೆಗೆ ಬ್ರಾಹ್ಮಣ ಪೂಜಾರಿಯ ಪ್ರವೇಶದ ನಂತರ ಮುಕ್ರಿ ಮತ್ತು ತಳಸಮುದಾಯದವರನ್ನು ಕೈಬಿಡಲಾಗಿದೆಯಂತೆ. ಈ ವಿಚಾರವಾಗಿ ಮುಕ್ರಿ ಸಮುದಾಯದವರಲ್ಲಿ ಅಸಮಾಧಾನವಿದೆ. ಈ ಕಾರಣಕ್ಕಾಗಿಯೇ ವಿದ್ಯಾವಂತ ಮುಕ್ರಿ ಯುವಕರು ಹೋರಾಟ ಸಮಿತಿಯೊಂದನ್ನು ರೂಪಿಸಿಕೊಂಡಿದ್ದಾರೆ. ಮದುವೆ, ಹುಟ್ಟು ಮುಂತಾದ ಶುಭ ಅಶುಭ ವಿಚಾರಗಳಿಗೆ ಸಂಬಂಧಿಸಿ ದಂತೆ ಚಂದಾವರದ ಹನುಮಂತನಲ್ಲಿ ಬೇಡಿಕೊಂಡು ಪ್ರಸಾದ ಕೇಳುವ ಪರಿಪಾಠ ಮುಕ್ರಿಯರಲ್ಲಿದೆ. ಮಣ್ಣಿನುಂಡೆಯ ಪ್ರಸಾದದ ಕೇಳಿಕೆಯು ಇಲ್ಲಿ ನಡೆಯುತ್ತದೆ. ಪ್ರತಿ ಮುಕ್ರಿ ಕುಟುಂಬದವರು ಚಂದಾವರದ ಹನುಮಂತನಿಗೆ ಊರ ಬುದುವಂತನ ಮುಖಾಂತರ ಕಾಲಗಾಣಿಕೆಯನ್ನು ಸಲ್ಲಿಸುತ್ತಾರೆ. ಪ್ರತಿ ಮನೆಯವರು ಜಾತಿ ಸಭೆಗಳು, ಕಟ್ಟುಕೊಡುವುದು, ಒಳಗೆ ಕರೆದುಕೊಳ್ಳುವುದು ಈ ಜಾತ್ರೆಯ ಸಂದರ್ಭದಲ್ಲಿ ನಡೆಸುತ್ತಾರೆ. ಇಲ್ಲಾ ಮುಕ್ರಿಗಳ ಮನೆಯಲ್ಲಿ ಸಿಪ್ಪೆ ಸುಲಿಯದ ತೆಂಗಿನ ಕಾಯಿಯನ್ನು ಹನುಮಂತ ದೇವರಿಗೆ ಮುಟ್ಟಿಸಿ ತಂದು ತಮ್ಮ ಮನೆಯೊಳಗೆ ಇರಿಸುತ್ತಾರೆ. ಅದನ್ನು ಚಂದಾವರದ ಹನುಮಂತ ದೇವರೆಂದು ಭಾವಿಸಿ ಪೂಜಿಸಲಾಗುತ್ತದೆ.

ಹಾಗೆಯೇ ಹೆಗಡೆ ಗ್ರಾಮದಲ್ಲಿರುವ ಕಲಿವೀರಭದ್ರನನ್ನು ಆರಾಧಿಸಲಾಗುತ್ತದೆ. ವೀರಭದ್ರ ದೇವರ ಪೂಜಾರಿಯು ಮುಕ್ರಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ದೇವರ ಕಳಸವನ್ನು ಮುಕ್ರಿ ಸಮುದಾಯದ ಪೂಜಾರಿಯೇ ಹೊರುತ್ತಾನೆ. ರಾಮು ಮುಕ್ರಿಯೆನ್ನುವವರು ಅದರ

ಮುಖ್ಯ ಪೂಜಾರಿ. ಪ್ರತಿ ಎರಡು ವರ್ಷಗಳಿಗೊಮ್ಮೆ ಪೂಜಾರತ್ವ ಸಹೋದರರಲ್ಲಿಯೇ ಬದಲಾಗುತ್ತದೆ. ದೇವಸ್ಥಾನದ ಒಳಗೆ ಜಟಿಗ ಇನ್ನಿತರ ಮೂರ್ತಿಗಳಿವೆ. ಜನೇವರಿ-ಫೆಬ್ರುವರಿಗಳ ಮಧ್ಯದಲ್ಲಿ ಇದರ ಜಾತ್ರೆ ನಡೆಯುತ್ತದೆ. ತಣ್ಣೀರಕುಳಿಯಲ್ಲಿ ಕಲಿವೀರಭದ್ರನ ಮೂಲ ಮನೆಯಿದ್ದು ಜಾತ್ರೆಯ ದಿನ ಅಲ್ಲಿಯ ಗೆರ್ಕ್ಕಾಯಮ್ಮನ ದೇವಸ್ಥಾನಕ್ಕೆ ಕಳಸವು ಹೋಗುತ್ತದೆ. ಅಲ್ಲಿಂದ ವಾಪಸ್ಸು ತನ್ನ ದೇವಸ್ಥಾನಕ್ಕೆ ಬೆಳಗ್ಗೆ ಬರುತ್ತದೆ. ಆಮೇಲೆ ಆವತ್ತು ಮಧ್ಯಾಹ್ನವೇ ಹೆಗಡೆಯ ಶಾಂತಿಕಾಂಬ ದೇವಳಕ್ಕೆ ಹೋಗಿ ತನ್ನ ಸ್ಥಾನಕ್ಕೆ ವಾಪಸ್ಸು ಬರುತ್ತದೆ. ನಾಲ್ಕನೆ ದಿನ ಓಕಳಿಯಾದ ಮೇಲೆ ದೇವಸ್ಥಾನದ ಬಾಗಿಲು ಹಾಕಲಾಗುತ್ತದೆ. ಮತ್ತೆ ಒಂಬತ್ತನೆಯ ದಿನ ಬಾಗಿಲು ತೆರೆಯುತ್ತಾರೆ. ಅಂದು ವೀರಭದ್ರ ದೈವಕ್ಕೆ ಕುರಿ ಮತ್ತು ಕೋಳಿಯ ಬಲಿ ಪೂಜೆ ನಡೆಯುತ್ತದೆ. ಕಲಿವೀರಭದ್ರನ ದೇವಳಕ್ಕೆ ಸ್ವಲ್ಪ ದೂರದಲ್ಲಿ ನಾಗದೇವತೆಯ ಮೂಲ ಸ್ಥಾನವಿದೆ. ಅದು ಒಂದು ಗುಹೆಯಾಕಾರದಲ್ಲಿದೆ. ಇಲ್ಲಿ ಯಾವಾಗಲೂ ನೀರು ಸುರಿಯುತ್ತಲೇ ಇರುತ್ತದೆ. ಮುಕ್ರಿಯರ ಪ್ರತಿ ಮನೆಯ ತುಳಸಿಕಟ್ಟೆಯ ಮುಂಭಾಗದಲ್ಲಿ ವೀರಭದ್ರನ ಕಟ್ಟಿಗೆಯ ಚಿಕ್ಕ ಪ್ರತಿಮೆಗಳಿವೆ. ಮುಕ್ರಿಗಳು ಬಬ್ರು ದೈವವನ್ನು ಪೂಜಿಸುತ್ತಾರೆ. ಹೈಗುಂದದಲ್ಲಿ ಬಬ್ರು ದೈವದ ಮೂರ್ತಿ ಇದೆ. ಪಟಗಾರ ಜಾತಿಯವರು ಇದನ್ನು ಪೂಜಿಸುತ್ತಾರೆ.

ಶಿರಸಿ ಮಾರಿಯಮ್ಮನ ಬಗ್ಗೆ ಮುಕ್ರಿಗಳಿಗೆ ವಿಶೇಷ ನಂಬಿಕೆ. ಸಾಲ ಮಾಡಿಯಾದರೂ ಶಿರಸಿಯ ಜಾತ್ರೆಗೆ ಹೋಗುತ್ತಾರೆ. ತಮ್ಮ ಮಕ್ಕಳ ಮದುವೆ, ಶುಭಕಾರ್ಯ ಮುಂತಾದವುಗಳಿಗೆ ಶಿರಸಿ ಮಾರಮ್ಮನ ಜಾತ್ರೆಯಾದ ನಂತರವೇ ಪ್ರಾಶಸ್ತ್ಯ ದಿನಗಳು ಎನ್ನುವ ನಂಬಿಕೆ ಇದೆ. ಮೊದಲೆಲ್ಲ ಶಿರಸಿಗೆ ನಡೆದುಕೊಂಡು ಹೋಗುತ್ತಿದ್ದರಂತೆ. ಸಿಂಧೋಳ್ಳರು(ದುರುಗಮುರಿಗೆ ಯವರು) ಪುಟ್ಟಿಯಲ್ಲಿ ಹೊತ್ತು ತರುವ ದೈವಗಳನ್ನು ಅತ್ಯಂತ ಭಕ್ತಿಯಿಂದ ಪೂಜಿಸುತ್ತಾರೆ. ಅಮ್ಮಾ ಎಂದು ಕರೆಯುವ ತಾಡಿನಕೊಪ್ಪದ ದುರ್ಗಾದೇವಿಯನ್ನು ಪೂಜಿಸುತ್ತಾರೆ. ಇವಳು ಮಾರಿಯಮ್ಮನ ತಂಗಿ ಎಂದು ಮುಕ್ರಿಗಳು ಹೇಳುತ್ತಾರೆ. ಇದರ ಜೊತೆಗೆ ಮುಗ್ವಾ ಗ್ರಾಮದ ಬಿಳಿಯಮ್ಮನನ್ನು ಪೂಜಿಸುತ್ತಾರೆ.

ಮುಕ್ರಿಗಳ ಪ್ರತಿ ಕೊಪ್ಪದಲ್ಲಿಯೂ ಒಂದು ಜಟ್ಟಿಗ ಇರುತ್ತಾನೆ. ಜಟ್ಟಿಗನು ಮುಕ್ರಿಗಳ ಸಾಂಸ್ಕೃತಿಕ ನಾಯಕ. ಮೇಲ್ಮುಖವಾಗಿ ಎದ್ದುನಿಂತ ಕಟ್ಟಿಗೆಯಲ್ಲಿ ತಯಾರಿಸಿದ ಶಿಶ್ನದ ರೂಪವನ್ನು ಹೋಲುವ ಜಟಿಗದ ಸ್ಥಾನವನ್ನು ಎಲ್ಲೆಲ್ಲೂ ಕಾಣಬಹುದು. "ಪಶುಪಾಲನೆ ಮತ್ತೆ ಬೇಟೆಯ ವಿಕಾಸವಾಗುತ್ತಿರುವ ಕಾಲದಲ್ಲಿ ಈ ದೇವರು ಹುಟ್ಟಿರುವ ಸಾಧ್ಯತೆಗಳಿವೆ. ಪಶುಪಾಲನೆ ಮುಖ್ಯವಾದಾಗ ಪುರುಷ ಪ್ರಧಾನಗೊಳ್ಳುತ್ತಾನೆ. ನಾಡಿನ ಒಳಿತಿಗಾಗಿ ಪ್ರಾಣಾರ್ಪಣೆ ಮಾಡಿಕೊಂಡವರನ್ನು ಹೀಗೆ ಪೂಜಿಸಬಹುದೇನೋ."[೩] ತಿರುಪತಿ ವೆಂಕಟರಮಣನನ್ನು ಪೂಜಿಸುವ

ಮುಕ್ರಿಗಳು ಅದರ ಮೂರ್ತಿಯನ್ನು ತುಳಸಿಕಟ್ಟೆಯಲ್ಲಿ ಇಡುತ್ತಾರೆ. ಶ್ರಾವಣ ಮಾಸದ ಶನಿವಾರ ಒಪ್ಪತ್ತು ಪೂಜೆ ಮಾಡುತ್ತಾರೆ. ತುಳಸಿಗೆ ತಪ್ಪುಗಾಣಿಕೆಯನ್ನು ಇಡುತ್ತಾರೆ. ವೈಶಾಖ ಮಾಸದ ಶನಿವಾರ ದೇವರಿಗೆ ಬಿದರಿನಿಂದ ಕಮಾನುಕಟ್ಟಿ ಮಾವಿನ ಎಲೆಗಳನ್ನು ಸೇರಿಸಿ ತುಳಸಿಗೆ ಕಾಯಿ ಒಡೆದು ತುಳಸಿ ಪೂಜೆ ಮಾಡುತ್ತಾರೆ.

ಹೊನ್ನಾವರ ತಾಲ್ಲೂಕಿನ ಮುಗ್ವಾದ ಬಿಳಿಯಮ್ಮ ಕುಮಟಾದ ಬಾಡದ ಅಮ್ಮನವರು, ಹಳದೀಪುರದ ಕೆಂಡದ ಮಾಸ್ತಿ, ಶಿರಸಿಯ ಮಾರಿಕಾಂಬ, ಮುಗ್ವಾದ ಬಣಸಾಲ ಹಕ್ಕಲಿನ ಜಟ್ಟಿಗ, ಭಾಸ್ಕೇರಿ ಗುಡ್ಡದಲ್ಲಿರುವ ಕೀಲು ಕರಿಕಾಲಪರಮೇಶ್ವರಿ ಮುಂತಾದ ದೈವಗಳಿಗೆ ನಡೆದುಕೊಳ್ಳುವ ಇವರು ದೇವಿಕಾನ್ ಹಬ್ಬ, ಬಾಡದ ತೇರು, ಹೊಸಾಕುಳಿ ಜಾತ್ರೆ ಮುಂತಾದವು ಗಳನ್ನು ತಪ್ಪಿಸಿಕೊಳ್ಳುವುದಿಲ್ಲ. ಜಟಿಗ, ಮಾಸ್ತಿ, ನಾಗರ, ಚೌಡಿ, ಮುಂತಾದ ದೈವೆಗಳಿಗೆ ಕೋಳಿಯನ್ನು ಬಲಿಕೊಡಲಾಗುತ್ತದೆ.

ಮುಕ್ರಿಗಳು ವಿವಿಧ ಆದಿವಾಸಿಗಳಂತೆ ಹಿರಿಯರ ಹಬ್ಬವನ್ನು ಪ್ರತೇಕವಾಗಿ ಮಾಡುವುದಿಲ್ಲ. ಆದರೂ ಶನಿವಾರ ಅಥವಾ ಸೋಮವಾರ ಊಟ ಮಾಡುವ ಮೊದಲು ಕಾಗೆಗೆ ಎಡೆ ಹಾಕುತ್ತಾರೆ.

೪.೭. ಜನಪದ ನಾಟೀ ವೈದ್ಯ

ಪ್ರತಿಯೊಂದು ಸಮುದಾಯವು ಬಹುತೇಕ ನಾಟಿ ವೈದ್ಯವನ್ನು ಅನುಕರಿಸುತ್ತವೆ. ನಾಟೀ ಚಿಕಿತ್ಸೆಯನ್ನು ಮಾಡುವ ಕ್ರಮವು ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತದೆ. ಆಯಾ ಸಮುದಾಯದ ನಂಬಿಕೆ, ವಿಶ್ವಾಸ, ಅನುಭವದ ಆಧಾರದ ಮೇಲೆ ನಾಟಿವೈದ್ಯವು ನಿಂತಿರುತ್ತದೆ. ಕಾಡುವಾಸಿ ಸಂಸ್ಕೃತಿಯಿಂದ ಬಂದಿರುವ ಮುಕ್ರಿಗಳು ತಮ್ಮ ಪರಿಸರದಲ್ಲಿ ದೊರೆಯುವ ಸ್ಥಳೀಯವಾದ ಗಿಡಮೂಲಿಕೆಗಳನ್ನೇ ಔಷಧಿಯಾಗಿ ಬಳಕೆ ಮಾಡುತ್ತಾರೆ. ಇಂದಿಗೂ ಸಣ್ಣಪುಟ್ಟ ಖಾಯಿಲೆಗಳಿಗೆಲ್ಲ ಆಸ್ಪತ್ರೆಗೆ ತೆರಳದೆ ತಮ್ಮಲ್ಲಿಯೇ ದೊರೆಯುವ ಗಿಡಮೂಲಿಕೆಗಳನ್ನು ರೋಗ ಚಿಕಿತ್ಸೆಗೆ ಮುಕ್ರಿಯರು ಬಳಸುತ್ತಾರೆ.

ಉತ್ತರಕನ್ನಡ ಪರಿಸರವು ಒಂದು ಕಡೆ ಕಾಡನ್ನು ಮತ್ತೊಂದು ಕಡೆ ಸಮುದ್ರದ ಕರಾವಳಿ ತೀರವನ್ನು ಹೊಂದಿರುವಂಥಾದ್ದು. ಇಲ್ಲಿ ಬಿಸಿಲಿರದಿದ್ದರೂ ಸಮುದ್ರದ ಮೇಲೆ ಗಾಳಿ ಹಾದುಬರುವುದರಿಂದ ವಿಪರೀತ ಸೆಕೆಯಾಗುತ್ತದೆ. ಜೊತೆಗೆ ಕಾಡಿರುವುದರಿಂದ ಸಂಜೆಯಾಗುತ್ತಲೇ ಚಳಿಯ ಅನುಭವವೂ ಆಗುತ್ತದೆ. ಮುಕ್ರಿಗಳು ತಮ್ಮನ್ನು ಸಹಜವಾಗಿ ಕಾಡುವ ಸೀತಜ್ವರಕ್ಕೆ ತುಳಸಿ ಮತ್ತು ಅಸಗುಂದಿ ಬೇರಿನ ಕಷಾಯವನ್ನು ಹಾಳು ಹೊಟ್ಟೆಗೆ

ಕೊಡುತ್ತಾರೆ. ರಕ್ತ ಕೆಟ್ಟು ಮೈಮೇಲೆ ಕುರ ಎದ್ದರೆ ಕುರಕ್ಕೆ ಈಸು(ಈಶ್ವರ) ಬಳ್ಳಿಯ ಎಲೆಯನ್ನು ಕಾಯಿಸಿ ಹಾಕುತ್ತಾರೆ. ಈ ರೀತಿ ಎಲೆ ಹಾಕುವುದರಿಂದ ಕುರವು ಪಕ್ವಾಗಿ ಹೊಡೆದು ಗಾಯ ಗುಣವಾಗುತ್ತದೆ. ರಕ್ತ ಕಡಿಮೆಯಾಗಿ ಮೈ ಬಿಳಿಚಿಕೊಂಡಿದ್ದರೆ, ಬಿಳಿ ಕಾಮಿಣಿಗೆ ಈಸು ಬಳ್ಳಿಯ ಎಲೆಯ ರಸ, ಕಾಳು ಮೆಣಸು, ಬೆಳ್ಳೊಳ್ಳಿಯ ಫಲಕನ್ನು ಅರೆದು ಅದರ ರಸವನ್ನು ಐದು ದಿನದವರೆಗೆ ಬೆಳಿಗ್ಗೆ, ಸಾಯಂಕಾಲ ಕುಡಿಯಲು ಕೊಡುತ್ತಾರೆ. ಮಕ್ಕಳು ಮಲಗಿದಾಗ ಹಾಸಿಗೆಯಲ್ಲಿ ಮೂತ್ರ ವಿಸರ್ಜನೆ ಮಾಡಿಕೊಂಡರೆ ಮುಕ್ಕರಿಕೆ ಬೇರನ್ನು ನಡುವಿಗೆ ಕಟ್ಟುತ್ತಾರೆ. ವೀರ್ಯವರ್ಧನೆಗೆ ಬಿಳಿ ದಾಸವಾಳ ಹೂವನ್ನು ನೆರಳಿನಲ್ಲಿ ಒಣಗಿಸಿ ಪುಡಿಮಾಡಿ ಲಿಂಬೆ ರಸ, ಜೇನು ತುಪ್ಪದ ಮಿಶ್ರಣದೊಂದಿಗೆ ಬೆರೆಸಿ ಕೊಡಲಾಗುತ್ತದೆ. ಹೆಣ್ಣುಮಕ್ಕಳಿಗೆ ಹೆಚ್ಚು ಮುಟ್ಟು ಹರಿಯುತ್ತಿದ್ದರೆ ಕವಲೆ ಮರದ ಸೊಪ್ಪಿನ ರಸವನ್ನು ನಿಂಬೆಯ ರಸದೊಂದಿಗೆ ಬೆರೆಸಿ ಕೊಡಲಾಗುತ್ತದೆ. ವಿಷ ಜಂತುಗಳ ಕಡಿತಕ್ಕೆ ಈಶ್ವರ ಬೇರನ್ನು ನಿಂಬೆಯ ಹಣ್ಣಿನ ರಸದಲ್ಲಿ ತೇಯ್ದು ಕಡಿದ ಜಾಗಕ್ಕೆ ಲೇಪನ ಮಾಡಲಾಗುತ್ತದೆ ಮತ್ತು ಅದೇ ಗಂಧವನ್ನು ನಾಲಿಗೆಗೆ ನೆಕ್ಕಿಸುತ್ತಾರೆ. ಕೆಲವರು ಕಡಿದ ಜಾಗದಲ್ಲಿ ಜಮ್ಮನ ಸೊಪ್ಪನ್ನು ಜಜ್ಜಿ ಅದರ ರಸ ಹಾಕುತ್ತಾರೆ.

ಬಾಣಂತಿಯರಿಗೆ ಜೀರಿಗೆ ಕಷಾಯವನ್ನು ಹಾಳು ಹೊಟ್ಟೆಗೆ ನೀಡುತ್ತಾರೆ. ಹಾಗೆಯೇ ಕಾಸ್ಗನಮರಕ್ಕೆ ಸುತ್ತಿದ ಬಳ್ಳಿಯ ಎಲೆ, ನಂಜಟ್ಟೆ ಬೇರು, ಮೆಣಸಿನ ಕಾಳು, ಐದು ಪಲಕು ಬೆಳ್ಳೊಳ್ಳಿಗಳನ್ನು ಒಂದು ದೊಡ್ಡ ಲೋಟದ ನೀರಿಗೆ ಸೇರಿಸಿ ಅದರ ಅಳತೆಯ ಅರ್ಧ ಭಾಗಕ್ಕೆ ಬರುವವರೆಗೆ ಕುದಿಸುತ್ತಾರೆ. ಈ ರೀತಿ ಕುದಿಸಿದ ನೀರನ್ನು ಸೋಸಿ ಬಾಣಂತಿಯರಿಗೆ ಬೆಳಿಗ್ಗೆ ಸಂಜೆ ಕುಡಿಯಲು ಕೊಡುತ್ತಾರೆ. ಅಕ್ಕಿ ತೊಳೆದ ನೀರಿನಲ್ಲಿ ಕವಡೇಕಾಯಿಯ ಎಲೆಯ ರಸವನ್ನು ಬೆರೆಸಿ ಕೊಟ್ಟರೆ ಹಳೆಯ ರೋಗಗಳು ಹೊರಟುಹೋಗಿ ವ್ಯಕ್ತಿ ಗುಣವಾಗುತ್ತಾನೆಂದು ಮುಕ್ರಿಗಳು ಹೇಳುತ್ತಾರೆ.

ವಾತ ತೊಂದರೆಯಿಂದ ಬಳಲುತ್ತಿದ್ದರೆ ಅದರ ನಿವಾರಣೆಯ ಸಲುವಾಗಿ ಕಸರಕನ ಬಳ್ಳಿಯ ಎಲೆ, ಕಾಂಡ, ಬೇರು ಎಲ್ಲವನ್ನೂ ಒರಳಿನಲ್ಲಿ ಹಾಕಿ ರುಬ್ಬಿ ಅದರ ರಸವನ್ನು ಸೋಸಿ ಕುಡಿಯಲು ಕೊಡಲಾಗುತ್ತದೆ. ಈ ರೀತಿ ಮಾಡುವುದರಿಂದ ವಾತ ನಿವಾರಣೆಯಾಗುತ್ತದಂತೆ. ಚೇಳು ಅಥವಾ ಜರಿ ಕಡಿದರೆ ಕಡಿದ ಸ್ಥಳದಲ್ಲಿ ಔಡಲಕಾಯಿಯ ತೊಗಟೆಯನ್ನು ತೇದು ಹಚ್ಚುತ್ತಾರೆ. ಮಕ್ಕಳಿಗೆ ಕೆಮ್ಮು ಜಾಸ್ತಿ ಆದರೆ ಬೆಳದ ನುಗ್ಗೆಕಾಯಿಯನ್ನು ಒಣಗಿಸಿ ಅದರ ಬೀಜವನ್ನು ಜೇನುತುಪ್ಪದಲ್ಲಿ ತೇದು ತಿನ್ನಿಸಿದರೆ ಕಡಮೆಯಾಗುತ್ತದೆ. ಅತಿಸಾರಕ್ಕೆ ನಿಂಬೆಹಣ್ಣನ್ನು ನೀರೊಟ್ಟೆ ಬೇರಿನೊಂದಿಗೆ ತೇದು ತೆಗೆದುಕೊಂಡರೆ ಪರಿಹಾರವಾಗುತ್ತದೆ.

೪.೭.೧. ಮಾಂತ್ರಿಕ ವೈದ್ಯ

ಲೌಕಿಕ ಜಗತ್ತನ್ನು ನಂಬಿದಷ್ಟೇ ಸಹಜವಾಗಿ ಅಲೌಕಿಕ ಜಗತ್ತನ್ನೂ ಮುಕ್ರಿಯರು ನಂಬುತ್ತಾರೆ. ತಮಗೆ ರೋಗರುಜಿನಗಳು ಬಂದರೆ ಅದಕ್ಕೆ ಅಲೌಕಿಕ ಜಗತ್ತಿನ ಶಕ್ತಿಗಳೇ ಕಾರಣವೆಂದು ನಂಬುತ್ತಾರೆ. ದೈಹಿಕ ರೋಗಗಳಿಗೆ ತಮ್ಮೊಳಗೇ ಚಾಲ್ತಿಯಲ್ಲಿರುವ ನಾಟಿ ವೈದ್ಯವನ್ನು ಅವಲಂಬಿಸಿದಂತೆ ಮಾಂತ್ರಿಕ ವೈದ್ಯವನ್ನೂ ನಂಬುತ್ತಾರೆ. ಸಾಮಾನ್ಯವಾಗಿ ಪ್ರತಿ ಕೊಪ್ಪದಲ್ಲಿರುವ ಗಾಡಿಗನು ನಾಟಿ ವೈದ್ಯ ಮಾಡಿದಂತೆ ಮಾಂತ್ರಿಕ ವೈದ್ಯವನ್ನು ಮಾಡುವವನಾಗಿರುತ್ತಾನೆ. ಹೀಗಾಗಿಯೇ ಗಾಡಿಗನಿಗೆ ಪ್ರತಿ ಕೊಪ್ಪದ ಮುಕ್ರಿಗಳು ಇನ್ನಿಲ್ಲದಷ್ಟು ಗೌರವವನ್ನು ಕೊಡುತ್ತಾರೆ. ಮುಕ್ರಿಗಳಲ್ಲಿ ಸತ್ತವರು ದೆವ್ವವಾಗಿ ಕಾಡುತ್ತಾರೆಂಬ ನಂಬಿಕೆ ಇದೆ. ದೆವ್ವ ಭೂತಗಳ ಆಹ್ವಾನಿಕೆಯು ಮಾನಸಿಕವಾದ ಖಾಯಿಲೆಯ ರೂಪವೆಂಬುದನ್ನು ಮುಕ್ರಿಗಳು ಒಪ್ಪುವುದಿಲ್ಲ. ಏಕೆಂದರೆ ಸತ್ತ ನಂತರವೂ ಆತ್ಮವು ನಿರಂತರವಾಗಿ ಓಡಾಡುತ್ತಲೇ ಇರುತ್ತದೆಂಬ ನಂಬಿಕೆ ಅವರದು. ನಾಟೀ ವೈದ್ಯಕ್ಕೆ ರೋಗ ಗುಣವಾಗದಿದ್ದಾಗ ಮಾಂತ್ರಿಕ ವೈದ್ಯಕ್ಕೆ ಮೊರೆಹೋಗಲಾಗುತ್ತದೆ. ಮಾಂತ್ರಿಕ ವೈದ್ಯದಲ್ಲಿ ಗಾಡಿಗನು ರೋಗ ಯಾವ ಕಾರಣಕ್ಕಾಗಿ ಬಂದಿದೆ ಅದರ ಮೂಲ ಯಾವುದು ಎಂಬುದನ್ನು ಅರಿಯಲು ಕಟ್ಟಿಗೆಯಲ್ಲಿ ತಯಾರಿಸಿದ ಮಣೆಯ ಮೇಲೆ ಅಕ್ಕಿ ಕಾಳನ್ನು ಹಾಕಿ ಸರಿ ಬೆಸ ಲೆಕ್ಕ ಮಾಡಿ ನೋಡಿ ಇಂತಹ ಕಾರಣಕ್ಕಾಗಿ ರೋಗ ಬಂದಿದೆ. ಅದರ ಮೂಲ ಯಾವುದೋ ಒಂದು ನಿರ್ಧಿಷ್ಟವಾದ ಆತ್ಮ ಎಂದು ನಿರ್ಧರಿಸುತ್ತಾನೆ. ವೀಳ್ಯೆದೆಲೆ, ಹಸಿ ತೆಂಗಿನ ಗರಿ, ಬಾಳೆದಿಂಡುಗಳನ್ನು ಚಾಕುವಿನಿಂದ ಕತ್ತರಿಸುತ್ತಾ ಬಂದವರ ಜೊತೆ ಕೇಳಿಕೆಗಳು ನಡೆಯುತ್ತವೆ. ಒಳ್ಳೆಯ ಆತ್ಮವಾಗಿದ್ದರೆ ಅದನ್ನು ನಿರ್ಬಂಧಿಸಿ ಅಲ್ಲಿಯೇ ತುಳಸಿಕಟ್ಟೆಯಲ್ಲಿ ಕೂಡಿ ಹಾಕಲಾಗುತ್ತದೆ. ಅಕಸ್ಮಾತ್ ಅಪಾಯಕಾರಿ ದುಷ್ಟ ಆತ್ಮವು ದೆವ್ವವಾಗಿ ಕಾಡುತ್ತಿದ್ದಲ್ಲಿ ಅದನ್ನು ಕೊಪ್ಪದ ಜಟ್ಟಿಗನ ಗುತ್ತಿನ ಮರದಲ್ಲಿ ಬಂಧಿಸಿಡಲಾಗುತ್ತದೆ. ದೆವ್ವ ಬಿಟ್ಟಿದೆಯಾ ಎಂದು ನೋಡಲು ಗಾಡಿಗ ಅವೇಶದಿಂದ ಕುಣಿಯುತ್ತಾ ತೆಂಗಿನ ಕಾಯನ್ನು ಮೇಲಕ್ಕೆ ತೂರುತ್ತಾನೆ. ಹೋಳಿಕೆಗಳು ಅಂಗಾತ ಬಿದ್ದರೆ ದೆವ್ವ ಬಿಟ್ಟಿದೆಯೆಂತಲೂ ಮಗುಚಿ ಬಿದ್ದರೆ ಬಿಟ್ಟಿಲ್ಲವೆಂತಲೂ ಅರ್ಥ ಮಾಡಿಕೊಳ್ಳುತ್ತಾರೆ.

ಹೊಟ್ಟೆಯಲ್ಲಿ ಮದ್ದು ಇಡುವುದರ ಕುರಿತು ಮುಕ್ರಿಯರಲ್ಲಿ ಹೆಚ್ಚು ನಂಬಿಕೆ ಇದೆ. ದೇವಿಕಾನ ದೇವಳದ ಗುನಗರು ಹೊಟ್ಟೆಯಲ್ಲಿರಿಸಿದ ಮದ್ದನ್ನು ಕೀಳುತ್ತಾರೆ ಎಂದು ಹೇಳಲಾಗುತ್ತದೆ.

ಹಾನ ತೆಗೆಯುವ ಪದ್ಧತಿ ಮುಕ್ರಿಯವರಲ್ಲಿ ಇದೆ. ಯಾವುದೋ ಕಾರಣಕ್ಕೆ ಹೆದರಿದವರನ್ನು ಅಡಿಕೆ ಹಾಳೆಯನ್ನು ಬಿದಿರು ಕಡ್ಡಿಗಳಿಂದ ಚುಚ್ಚಿ ಮಾಡಿದ ಪಡಗದ ಎದರು ಕುಳ್ಳಿರಿಸಿ ಸಣ್ಣ ಕೋಲುಗಳಿಂದ ದೊಂದಿ ಹಚ್ಚಿ ಅಕ್ಕಿ ಕಾಳು, ಕೇಪಳ ಹೂವು, ಅರಿಶಿಣ ಕುಂಕುಮ ಹಾಕಿ

ಕದಡಿದ ನೀರಿಗೆ ಹಾಕಿಕೊಂಡು ಹೆದರಿದವನ ಮುಖಕ್ಕೆ ರಾಚುತ್ತಾರೆ. ಆತ ಬೆಚ್ಚಿದಲ್ಲಿ ಆ ಹಾನವನ್ನು ಮೂರುದಾರಿ ಕೂಡಿದಲ್ಲಿ ಇಡಲಾಗುತ್ತದೆ.

ಚೇಳು ಕಡಿತದ ವಿಷ ಏರುವಿಕೆಯನ್ನು ಕಬ್ಬಿಣದ ಮೊಳೆ ಅಥವಾ ಕುಡುಗೋಲನ್ನು ಕಡಿದ ಜಾಗದಿಂದ ಕೆಳಗೆ ನಿವಾಳಿಸುವ ಮೂಲಕ ವಿಷ ಏರಿದ್ದನ್ನು ಇಳಿಸುವುದಾಗಿ ಹೇಳುತ್ತಾರೆ. ಹಾಗೆಯೇ ಮಕ್ಕಳಿಗೆ ಆಗುವ ದಾಟುಬಕ್ಕೆಯ ನಿವಾರಣೆಗೆ ಮೂರು ದಾರಿ ಸೇರುವಲ್ಲಿ ಎಲೆ, ಅಡಿಕೆ, ನಿಂಬೆಹಣ್ಣು, ಕೋಳಿಮೊಟ್ಟೆ ಇರಿಸಿ ಅರಿಸಿಣದ ನೀರನ್ನು ಅಡ್ಡಕ್ಕೆ ಹಾಕಿ ಮಗುವನ್ನು ದಾಟಿಸಿದರೆ ದಾಟುಬಕ್ಕೆ ನಿವಾರಣೆಯಾಗುವುದಂತೆ. ಅದೇ ರೀತಿಯಾಗಿ ಬಳೆ ಚೂರು, ಬೇವಿನ ಕಡ್ಡಿಯಿಂದ ಸುಟ್ಟರೆ ಜ್ವರ ತೊಲಗುವುದೆಂಬ ನಂಬಿಕೆ ಇವರಲ್ಲಿದೆ.

ಮಕ್ಕಳಿಗೆ ಹಾಗೂ ತಾವು ಸಾಕಿದ ದನಗಳಿಗೆ ದೃಷ್ಠಿ ತೆಗೆಯುವ ಪದ್ಧತಿ ಮುಕ್ರಿಗಳಲ್ಲಿದೆ. ಉಪ್ಪು ಮೆಣಸಿನ ಚೊಟ್ಟು ಬೆಳ್ಳುಳ್ಳಿ ಸಿಪ್ಪೆ ಸಾಸಿವೆ ಕಾಳನ್ನು ಹಾಕಿ ಮಕ್ಕಳನ್ನು ಬಾಗಿಲಲ್ಲಿ ಕೂರಿಸಿಕೊಂಡು ನಿವಾಳಿಸುತ್ತಾರೆ. ಬಳಿಕ ಅದನ್ನು ಬೋಕಿಯಲ್ಲಿ ಹಾಕಿಕೊಂಡು ಮೂರುದಾರಿ ಕೂಡಿದಲ್ಲಿ ಇಟ್ಟು ಬರುತ್ತಾರೆ.

೪.೭.೨. ಪಶು ವೈದ್ಯ

ಮುಕ್ರಿಗಳು ದನಕರುಗಳನ್ನು ಸಾಕುವ ಪ್ರಮಾಣ ಕಡಿಮೆ. ಆದರೆ ತಾವು ಜೀತದಲ್ಲಿರುವ ಮನೆಯ ಯಜಮಾನನ ದನಕರುಗಳನ್ನು ನೋಡಿಕೊಳ್ಳುವುದು ಮುಕ್ರಿಯರೆ. ಹೀಗಾಗಿ ದನಗಕರುಗಳಿಗೆ ಆರೋಗ್ಯದಲ್ಲಿ ಏರುಪೇರಾದರೂ ಅವುಗಳ ಶುಶ್ರೂಷೆ ಮಾಡುವವರೂ ಸಹ ಮುಕ್ರಿಯರಾಗಿದ್ದಾರೆ.

ದನದ ಕಾಲಿನೊಳಗೆ ಹುಳವಾಗಿ ಕೀವು ಸೋರುತ್ತಿದ್ದರೆ ಅದಕ್ಕೆ ಗೊಂಡೆ ಸೊಪ್ಪನ್ನು ಅರೆದು ಕಟ್ಟುತ್ತಾರೆ. ಗುಡ್ಡದಲ್ಲಿ ಸಿಗುವ ಏಕನಾಯ್ಕನ ಬೇರು, ಬಾಯುದುಮ್ಮನ ಬೇರು, ಕುಕ್ಕುರಸನ ಬೇರು, ಅಂಬೂತಾ ಸೊಪ್ಪು, ಕಹಿಬೇವಿನ ಸೊಪ್ಪು ಮುಂತಾದವುಗಳನ್ನು ದನಕರುಗಳ ಮದ್ದಾಗಿ ಬಳಸುತ್ತಾರೆ.

ದನಗಳಿಗೆ ಬಾಯಿ ಮುಳ್ಳಾಗಿ ಏನೂ ತಿನ್ನದಿದ್ದರೆ ಅದರ ನಾಲಿಗೆಯನ್ನು ಉಪ್ಪಿನಿಂದ ತಿಕ್ಕಿ ಹಿರೇಮದ್ದುಗುಣಿಕೆ ಕಾಯಿಯೊಳಗೆ ಜೀರಿಗೆ, ಮೆಣಸು, ಉಪ್ಪು ತುಂಬಿ ತಿನಿಸುತ್ತಾರೆ. ಕಾಲುಬಾಯಿ, ಬಾಯಿಬಾಯಿ ರೋಗವಾದರೆ ಅಕ್ಕಿ, ತುಳಸಿ ಸೊಪ್ಪಿನ ಹೊಗೆಯನ್ನು ಕಾಲಿಗೆ ಮತ್ತು ಮೂಗಿಗೆ ಬಿಡುತ್ತಾರೆ. ಹಸು ಹಾಲು ಕಡಿಮೆ ಕೊಟ್ಟರೆ ಹೊಳೆಯಲ್ಲಿ ಬೆಳೆಯುವ ಆಪನ್ನು ಕೊಟ್ಟರೆ ಹೆಚ್ಚು ಹಾಲು ಕೊಡುತ್ತದೆ.

ದನಗಳಿಗೆ ಚಪ್ಪೆ ರೋಗಬಂದರೆ ಚಪ್ಪೆಗೆ ಕಬ್ಬಿಣದ ಸಲಾಕೆಯಿಂದ ಬರೆ ಎಳೆಯುತ್ತಾರೆ. ಈ ರೀತಿ ಬರೆಹಾಕಿದರೆ ಚಪ್ಪೆರೋಗ ನಿವಾರಣೆಯಾಗುವುದಾಗಿ ಮುಕ್ರಿಗಳು ತಿಳಿಸುತ್ತಾರೆ.

ದನಗರುಗಳಿಗಾಗಲಿ ಕೆಟ್ಟ ದೃಷ್ಟಿ ತಾಕಿದರೆ ಮೆಣಸು, ಉಪ್ಪು, ಬೆಳ್ಳುಳ್ಳಿ ಮೂರು ದಾರಿಯ ಮಣ್ಣು ಮನೆಯ ಮೇಲಿನ ಹುಲ್ಲು ಕೂಡಿಸಿ ಮೂರು ಸಲ ದನಕರುಗಳ ಮುಖದ ಮುಂದೆ ನಿವಾಳಿಸಿ ಒಣಹುಲ್ಲಿನೊಂದಿಗೆ ಸುಡುತ್ತಾರೆ. ಇದನ್ನು ದೃಷ್ಟಿ ತೆಗೆಯುವುದು ಎನ್ನುತ್ತಾರೆ.

ಹೀಗೆ ತಮ್ಮ ಸುತ್ತಮುತ್ತಿನ ಪರಿಸರದಲ್ಲಿ ದೊರೆಯುವ ಗಿಡ ಬಳ್ಳಿಗಳಲ್ಲಿ ತಮಗೆ ಬರುವ ರೋಗ ರುಜಿನಗಳಿಗೆ ಔಷಧಿಯನ್ನು ಮಾಡಿಕೊಳ್ಳುವ ನಾಟಿಪದ್ಧತಿ ಮುಕ್ರಿಯರಲ್ಲಿ ಬಹುಪಾಲು ಜನರಿಗೆ ತಿಳಿದಿದೆ. ಆದರೆ ಇತ್ತೀಚಿನ ಯುವ ಸಮುದಾಯ ನಾಟಿ ವೈದ್ಯವನ್ನು ಅಷ್ಟಾಗಿ ನಂಬಿಲ್ಲ. ಅವರು ಹೆಚ್ಚಾಗಿ ನಗರ ಪ್ರದೇಶದ ಅಲೋಪತಿ ವೈದ್ಯರ ಮದ್ದನ್ನೇ ಹೆಚ್ಚು ನಂಬುತ್ತಾರೆಂಬ ಅಳಲು ಹಿರಿಯ ಮುಕ್ರಿಗಳಲ್ಲಿದೆ.

೪.೮. ಆಹಾರ

ಮುಕ್ರಿಗಳ ಆಹಾರ ತುಂಬಾ ಸರಳವಾದುದು. ಗಂಜಿ, ಅಂಬಲಿಯನ್ನು ಹೆಚ್ಚಾಗಿ ಮಾಡುತ್ತಾರೆ. ಇದರೊಂದಿಗೆ ಉತ್ತರಕನ್ನಡದಲ್ಲಿ ಸುಲಭವಾಗಿ ದೊರೆಯುವ ಒಣ ಮೀನಿನ ತುಂಡನ್ನು ಒಲೆಯಲ್ಲಿ ಹಾಕಿ ಸುಟ್ಟು ಗಂಜಿ ಅಂಬಲಿಯೊಂದಿಗೆ ನೆಂಜಿಕೊಳ್ಳುತ್ತಾರೆ. ಕೂಲಿಗೆ ಹೋದಲ್ಲಿ ಭೂಮಾಲಿಕರು ನೀಡುವ ಮಧ್ಯಾಹ್ನದ ಅರೆಹೊಟ್ಟೆಯ ಗಂಜಿ ಊಟವನ್ನು ಕೂಲಿಗೆ ಹೋದಲ್ಲಿಯೇ ಮುಗಿಸಿಕೊಂಡು ಬರುತ್ತಾರೆ. ಬೆಳಿಗ್ಗೆ ಕೂಲಿಗೆ ಹೋಗುವ ಮೊದಲು ನುಚ್ಚಕ್ಕಿಯ ಗಂಜಿಯೋ, ರಾಗಿಯ ಅಂಬಲಿಯೋ ಇವರ ಊಟ. ರಾತ್ರಿಯಲ್ಲಿ ಸ್ಥಳೀಯವಾಗಿ ಸಿಗುವ ಶೇಂಧಿಯೊಂದಿಗೆ ಒಣಮೀನಿನ ನೆಂಜಿಕೆಯ ಗಂಜಿ ಊಟವೇ ಗತಿ.

ಹಬ್ಬ, ಮದುವೆ ಮುಂತಾದ ವಿಶೇಷ ದಿನಗಳಲ್ಲಿ ಮಾತ್ರ ಕುಚ್ಚಿಗೆ ಅಕ್ಕಿ ಅನ್ನ ಮಾಡುತ್ತಾರೆ. ಅಂದು ಹಸಿ ಮೀನಿನ ಸಾರು, ಸಾಕಿದ ಕೋಳಿಯ ಸಾರಿನ ಸಮಾರಾಧನೆ ಇರುತ್ತದೆ. ಮುಕ್ರಿಗಳು ಮಾಂಸಾಹಾರಿ ಪ್ರಿಯರು. ಆದರೆ ಮೀನಿನ ಹೊರತಾಗಿ ಕುರಿ ಕೋಳಿಯ ಕನಸನ್ನು ಕಾಣಲಾರರು. ಕೋಳಿ ಸಾಕಿದರೂ ಸಹ ನಿತ್ಯದ ಅಡುಗೆಗೆ ಕೋಳಿ ಮಾಡುವುದಿಲ್ಲ. ವಾರಕೊಮ್ಮೆ ಕುಮಟೆ, ಶಿರಸಿ, ಹೊನ್ನಾವರ ಮುಂತಾದ ನಗರ ಪ್ರದೇಶ ಸಂತೆಗೆ ತಾವು ಸಾಕಿದ ಕೋಳಿ ಒಯ್ದು ಮಾರಿ ಬಂದ ಹಣದಲ್ಲಿ ವಾರಕ್ಕಾಗುವಷ್ಟು ಉಪ್ಪು, ಮೆಣಸು, ರಾಗಿ, ನುಚ್ಚನ್ನು ತಂದಾರಷ್ಟೆ. ಇವರಿಗೆ ಕೋಳಿ ಊಟವೆಂದರೆ ಮದುವೆ, ನೆಂಟರು, ತಿಥಿಗಳಂತಹ ವಿಶೇಷ ದಿನಗಳು ಬರಬೇಕು. ಮುಕ್ರಿಯ ಗಂಡು, ಹೆಣ್ಣುಗಳಿಗೆ

ತುಂಬಾ ಪ್ರಿಯವಾದದ್ದು ಕವಳ. ಎಲೆ ಅಡಿಕೆಯೊಂದಿಗೆ, ಹೊಗೆಸೊಪ್ಪಿನ ಎಸಳು ದಿನಾಲೂ ಮೆಲ್ಲುತ್ತಾರೆ. ಇತ್ತೀಚಿನ ಯುವ ಸಮುದಾಯ ಅಂಗಡಿಯಲ್ಲಿ ದೊರೆಯುವ ಗುಟುಕಾ, ಮಧು ಮುಂತಾದವುಗಳನ್ನು ಹೆಚ್ಚಾಗಿ ಬಳಸುತ್ತಾರೆ. ಸಂಜೆಯಾದರೆ ಬಗನಿಯ ಹೆಂಡವೋ, ಸ್ಥಳೀಯವಾಗಿ ಸಿಗುವ ಸರಾಯಿಯನ್ನು ಕುಡಿಯುತ್ತಾರೆ. ಇದನ್ನು ಗಂಡು ಹೆಣ್ಣು ಎಂಬ ಭೇದವಿಲ್ಲ. ಇತ್ತೀಚಿನ ಯುವತಿಯರು ಹೆಂಡದಿಂದ ಸ್ವಲ್ಪ ದೂರವುಳಿದಿದ್ದಾ ರೆಂಬುದು ಅಷ್ಟೇ ಸತ್ಯ. ತಮ್ಮ ಬಡತನಕ್ಕೆ ಮೂಲಕಾರಣವಾದ ಕುಡಿತದಿಂದ ತಮ್ಮವರನ್ನು ಪಾರು ಮಾಡುವುದು ಹೇಗೆ ಎಂದು ಕ್ಷೇತ್ರಕಾರ್ಯಕ್ಕೆ ಹೋದಾಗ ಕೆಲವು ಯುವತಿಯರು ಕೇಳಿದರು. ಅಷ್ಟರಮಟ್ಟಿಗೆ ಜಾಗೃತಿ ಇವರಲ್ಲುಂಟಾಗಿದೆ. ಕುಡಿತದ ವಿರುದ್ಧ ಚಳುವಳಿಯನ್ನು ಮಾಡುತ್ತಿರುವ ಹಾಲಕ್ಕಿ ಒಕ್ಕಲಿಗರ ಸುಕ್ರಿ ಬೊಮ್ಮೇಗೌಡರಂಥವರು ಇವರಲ್ಲಿಯೂ ಹುಟ್ಟಬೇಕಾದ ಅಗತ್ಯವಿದೆ.

೪.೯. ಒಳಾಡಳಿತ ವ್ಯವಸ್ಥೆ

ಮುಕ್ರಿ ಸಮುದಾಯದವರು ತಾವು ನೆಲೆಸಿದ ಊರುಗಳನ್ನು ಆಧರಿಸಿ, ತಮ್ಮ ಸಾಮಾಜಿಕ ಒಗ್ಗಟ್ಟಿಗೆ ಅನುಕೂಲವಾಗುವಂತೆ ಜಾತಿ ಗಡ್ಡೆಗಳನ್ನು ರಚಿಸಿಕೊಂಡಿದ್ದಾರೆ.

ಅವುಗಳು ಕ್ರಮವಾಗಿ ಕುಮಟಾ, ಹೆಗಡೆ, ಹೆಬ್ಬನಕೇರಿ, ಗೋಕರ್ಣಗಳಾಗಿವೆ. ಪಂಚಾಯತಿಯಲ್ಲಿ ಎಲ್ಲಾ ಗಡ್ಡೆಗಳಲ್ಲಿ ಮೀರಿದ ಪಂಚಾಯತಿಯನ್ನು ಗೋಕರ್ಣದಲ್ಲಿ ಹಾಕಲಾಗುತ್ತದೆ.

೧. ಏಳುಹಳ್ಳಿಗಳ ಕುಮಟಾ–ಮಂಕಿ, ವಿವೇಕನಗರ, ಹೆರವಟ್ಟ ಮುಂತಾದವುಗಳು

೨. ಆರು ಹಳ್ಳಿಗಳ ಹೆಗಡೆ ವಿಭಾಗ–ಮಿರ್ಜಾನ, ಕಟ್ಟೆದಿಂಬ, ಗುನಗನಕೊಪ್ಪ, ಚಿಟ್ಟೆಕಂಬಿ, ಜೇನವಕ್ಕಿ, ತಾಡುಕೊಪ್ಪ, ವಾಲ್ಗಳ್ಳಿ ಮುಂತಾದ ಊರುಗಳು ಬರುತ್ತವೆ.

೩. ಹದಿನೆಂಟುಹಳ್ಳಿಗಳ ಹೆಬ್ಬನಕೇರಿ ವಿಭಾಗ–ಹಳದೀಪುರ, ಮುಗ್ವ, ಕವಲಕ್ಕಿ, ಬಾಸ್ಕೇರಿ, ಮೊಗೆಚಿಟ್ಟೆ ಮುಂತಾದ ಊರುಗಳು ಬರುತ್ತವೆ.

೪. ಒಂಬತ್ತು ಹಳ್ಳಿಗಳ ಗೋಕರ್ಣ ವಿಭಾಗ. ಅಶೋಕಿ, ದಂಡೆಬಾಗ, ಬಂಗಲೆಗುಡ್ಡ, ಬೆಲೆಖಾನ್, ದೀವಗಿ

ಈ ರೀತಿ ಊರುಗಳನ್ನು ಗಡ್ಡೆಗಳಾಗಿ ವಿಭಾಗಿಸಿ ಆಂತರಿಕ ಆಡಳಿತ ವ್ಯವಸ್ಥೆಯನ್ನು ಸರಿ ದಾರಿಯಲ್ಲಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರು. ಇವರಲ್ಲಿ ಬಾರಕ, ಬುದುವಂತ, ಕೋಲಕಾರ ಎಂದು ಯಜಮಾನಿಕೆಯ ಶ್ರೇಣೀಕರಣ ಮಾಡಲಾಗಿದೆ. ಅದರ ಮೇಲೆ ಊರಿನ ಹಿರಿಯ ಮುಕ್ರಿ ಪುರುಷರು ಯಜಮಾನನೊಂದಿಗಿರುತ್ತಾರೆ. ಆಮೇಲೆ ಇಡೀ ದೈವವಿರುತ್ತದೆ.

ಕೆಲವು ಹಳ್ಳಿಗಳನ್ನು ಸೇರಿಸಿ ಗಡ್ಡೆ ರಚಿಸಿರುತ್ತಾರೆ. ಪ್ರತಿ ಗಡ್ಡೆಗೂ ಒಬ್ಬ ನಾಯಕನಿರುತ್ತಾನೆ. ಅವನನ್ನು ಬಾರಕ ಎಂದು ಕರೆಯುತ್ತಾರೆ. ಇಂತಹ ನಾಲ್ಕು ಗಡ್ಡೆಗಳನ್ನು ಮೇಲೆ ವಿವರಿಸಲಾಗಿದೆ.

ಪ್ರತಿ ಹಳ್ಳಿಗೊಬ್ಬ ಯಜಮಾನನಿರುತ್ತಾನೆ. ಇವನನ್ನು ಬುದುವಂತ ಎಂದು ಕರೆಯುತ್ತಾರೆ. ಇವನು ಸಾಮಾಜಿಕ ಧಾರ್ಮಿಕ ಕಾರ್ಯಕ್ರಮಗಳ ಯಜಮಾನನೂ ಹೌದು. ಇವನ ಕೈಕೆಳಗೆ ಇಡೀ ಗ್ರಾಮದ ಮುಕ್ರಿ ಸಮುದಾಯದ ಪ್ರತಿಯೊಂದು ಕಾರ್ಯ ನಡೆಯಬೇಕೆಂಬ ನಿಯಮವಿದೆ. ಸಾಮಾಜದಲ್ಲಿ ಬುದುವಂತನಿಗೆ ಅಪಾರ ಗೌರವಿದೆ. ಅವನು ಸಮಾಜದ ಎಲ್ಲಾ ಕಾರ್ಯಗಳಲ್ಲಿ ಮುಂದಿರುತ್ತಾನೆ. ತಮ್ಮ ಊರಿನ ಸಮಸ್ಯೆಗಳನ್ನು ಪರಿಹರಿಸಲು ತಮ್ಮ ಜಾತಿಯ ಎಲ್ಲರ ಸಭೆ ಇಲ್ಲವೇ ಸವಾನುಮತದಿರಬಹುದು. ಒಮ್ಮೊಮ್ಮೆ ದಂಢವನ್ನು ವಿಧಿಸುವ ಹಕ್ಕನ್ನು ಪಡೆದಿರುತ್ತಾನೆ. ತಪ್ಪು ಮಾಡಿದವರಿಗೆ ಒಂದು ರೂಪಾಯಿಯಿಂದ ಹದಿನಾರು ರೂಪಾಯಿ ಯವರೆಗೆ ದಂಡ ವಿಧಿಸುವ ಹಕ್ಕಿದೆ. ಈ ಹಣದಲ್ಲಿ ಕೆಲ ಭಾಗವನ್ನು ಚಂದಾವರ ಹನುಮಂತ ದೇವಸ್ಥಾನಕ್ಕೆ ವಿನಿಯೋಗಿಸಲಾಗುತ್ತದೆ.

ವಿಶೇಷ ಕಾರ್ಯಕ್ರಮಗಳ ಸಂದೇಶವನ್ನು ಜಾತಿಯ ಜನರಿಗೆ ಮುಟ್ಟಿಸುವ ಕೋಲಕಾರ ನಿರುತ್ತಾನೆ.

ಚಪ್ಪಲಿಯಿಂದ ಹೊಡೆಯುವುದು, ಹೊಡೆಸಿಕೊಳ್ಳುವುದು ಅಪರಾಧ. ಹೀಗೆ ಹೊಡೆಸಿ ಕೊಂಡವರನ್ನು ಮತ್ತು ಹೊಡೆದವರನ್ನು ಜಾತಿಯಿಂದ ಹೊರಗೆ ಹಾಕಲಾಗುತ್ತಿತ್ತು. ತಮಗಿಂತ ಕೀಳಾದ ಎಂದು ಭಾವಿಸಿರುವ ಹಳ್ಳೇರ, ಅಗೇರ, ಗಾಮೊಕ್ಕಲ ಮನೆಗಳಲ್ಲಿ ಊಟ ಮಾಡಿದವರಿಗೆ ಸಹಾ ಇದೇ ಶಿಕ್ಷೆ ಕೊಡಲಾಗುತ್ತಿತ್ತು. ಇದನ್ನೆ ಕಟ್ಟುಕೊಡುವುದು ಎನ್ನುತ್ತಾರೆ. ನಂತರ ಅವರು ಸೀಮೆಗೆ ದಂಡಕಟ್ಟಿ ಒಳಗೆ ಬರಬೇಕಿತ್ತು. ಇಲ್ಲದಿದ್ದಲ್ಲಿ ಅವರ ಶವಸಂಸ್ಕಾರ, ಮದುವೆ ಇತರೆ ಧಾರ್ಮಿಕ ಕಾರ್ಯಗಳಲ್ಲಿ ಜಾತಿಯ ಜನರ್‍ಯಾರು ಭಾಗವಹಿಸದಂತೆ ಹೊರಗೆ ಇಡಲಾಗುತ್ತಿತ್ತು.

ಕಟ್ಟು ಕೊಡಿಸಿಕೊಂಡವರು ಜಾತಿಯ ಒಳಗೆ ಬರಬೇಕಾದರೆ ಕೆಲವು ಪದ್ದತಿಗಳನ್ನು ರೂಢಿಸಿಕೊಳ್ಳಲಾಗಿದೆ. ಕಟ್ಟು ತೆಗೆದುಕೊಂಡವರನ್ನು ಚಂದಾವರ ದೇವಸ್ಥಾನಕ್ಕೆ ಕರೆದುಕೊಂಡು ಹೋಗಲಾಗುತ್ತದೆ. ಆ ದೇವಸ್ಥಾನದ ಪೂಜಾರಿಯು ದೇವರ ಮೂರ್ತಿಯನ್ನು ತೊಳೆದು ಅದರ ತೀರ್ಥವನ್ನು ಸ್ನಾನ ಮಾಡಿ ಬಂದ ಅಪರಾಧಿಗೆ ಕೊಡುತ್ತಾನೆ. ಆತ ದೇವರ ಈ ತೀರ್ಥವನ್ನು ಕುಡಿದು ಮೈಗೆಲ್ಲಾ ಹಚ್ಚಿಕೊಂಡಾಗ ತಾನು ಜಾತಿಯ ಒಳಗೆ ಬಂದಂತೆ. ಆ ನಂತರ ಜಾತಿಯ ಜನಕ್ಕೆ ಅನ್ನ ಸಂತರ್ಪಣೆ ಮಾಡಿಸಬೇಕು.

ವಿಧವೆಯರು ಬಸಿರಿಯಾದರೆ ಅದಕ್ಕೆ ಮುಕ್ರಿಗಳಲ್ಲಿ ತೀವ್ರವಾದ ಪ್ರಾಯಶ್ಚಿತವುಂಟು. ಈ ಘಟನೆಗೆ ಕಾರಣನಾದ ವ್ಯಕಿಯನ್ನು ಗೋಕರ್ಣಕ್ಕೆ ಕರೆದುಕೊಂಡು ಹೋಗಿ ತಮ್ಮದೆ ಜಾತಿಯ

ಮನುಷ್ಯನ ಮೂಲಕ ಗಡ್ಡ ತಲೆಯ ಕೂದಲನ್ನು ಬೋಳಿಸಲಾಗುತ್ತದೆ. ಅಲ್ಲಿಂದ ಸಮುದ್ರದ ಸ್ನಾನ ಮಾಡಿಸಿ ಮಹಾಬಲೇಶ್ವರನ ದರ್ಶನ ಮಾಡಿಸಿ ಅಲ್ಲಿಯ ಪುರೋಹಿತರಿಗೆ ಎರಡು ಸಿದ್ದಿ ಅಕ್ಕಿ, ಒಂದು ಕಾಯಿ, ಒಂದು ತಾಮ್ರದ ನಾಣ್ಯ ಕೊಟ್ಟು ಊರಿಗೆ ಕರೆದುಕೊಂಡು ಬರಲಾಗುತ್ತದೆ. ಹಾಗೆ ಬಂದ ಮೇಲೆ ಇಬ್ಬರ ಗೃಹಸ್ಥರ ಎದುರು ಮತ್ತೊಮ್ಮೆ ಸ್ನಾನ ಮಾಡಿಸಿ ಹುಲ್ಲಿನಿಂದ ನಿರ್ಮಿಸಿದ ಗುಡಿಸಿಲಿನಲ್ಲಿ ಅವರನ್ನು ಹೊಕ್ಕು ಹೊರಗೆ ಬರುವಂತೆ ಹೇಳಲಾಗುತ್ತದೆ. ಅದಾದ ನಂತರ ಆ ಗುಡಿಸಿಲಿಗೆ ಬೆಂಕಿಕೊಟ್ಟು ಸುಡಲಾಗುತ್ತದೆ. ಹೀಗೆ ಏಳು ಗುಡಿಸಿಲುಗಳನ್ನು ಸುಟ್ಟಮೇಲೆ ಚಂದಾವರದ ಹನುಮಂತ ದೇವರ ಬಳಿ ಕರೆದುಕೊಂಡು ಹೋಗಿ ತೀರ್ಥ ಕೊಡಿಸಿದ ಮೇಲೆ ಊಟಕ್ಕೆ ಸೇರಿಸಿಕೊಳ್ಳುತ್ತಾರೆ. ಹಾಗೆಯೆ ಮದುವೆಯಾದ ಹೆಣ್ಣು ವ್ಯಭಿಚಾರ ಮಾಡಿದರೆ ಇದೇ ರೀತಿಯ ಶಿಕ್ಷೆಯನ್ನು ಗಂಡನಿಂದ ಕೊಡಿಸಲಾಗುತ್ತದೆ. ಬುದುವಂತನಿಗೆ ಅಪಮಾನ ಮಾಡಿದರೆ ಅಥವಾ ಅವನೆದುರು ಅಸಭ್ಯ ರೀತಿಯಿಂದ ವರ್ತಿಸಿದರೆ ದಂಡ ವಿಧಿಸಲಾಗುತ್ತದೆ. ಕಟ್ಟುಕೊಟ್ಟ ಮೇಲೆ ತಕ್ಷಣ ಬಂದು ಒಪ್ಪಿಕೊಂಡು ಶಿಕ್ಷೆಯನ್ನು ಸ್ವೀಕರಿಸಿದರೆ ಅವರ ಜಾತಿಯ ಒಳಗೆ ಬರುತ್ತಾರೆ. ಇಲ್ಲದಿದ್ದರೆ ಜೀವನ ಪೂರ್ತಿ ಹೊರಗೆ ಇರಬೇಕಾಗುತ್ತದೆ. ಇವರನ್ನು ಬಾಂದೆಯವರೆಂದು ಕರೆಯಲಾಗುತ್ತದೆ. ಇಂತಹ ಎರಡು ಮೂರು ಕುಟುಂಬಗಳು ಈಗಲೂ ಇರುವುದಾಗಿ ಮಾಹಿತಿ ನೀಡಿದ್ದಾರೆ.

ಈ ಬುದುವಂತರ ಮೇಲೆ ಮೂರು ಹಳ್ಳಿಯ, ಹದಿನೆಂಟು ಹಳ್ಳಿಗಳ ಬಾರಕ ಹಾಗೂ ಗಡ್ಡೆಯ ಕೋಲಕಾರರಿರುತ್ತಾರೆ. ಈ ಸಮುದಾಯದೊಳಗೆ ಬರುವ ಸಮಸ್ಯೆಗಳನ್ನು ಆಯಾ ಊರಿನ ಬುದುವಂತರ ಸಂಗಡ ಚರ್ಚಿಸಿ ಬಗೆಹರಿಸುತ್ತಾರೆ. ಅಲ್ಲದೆ ಶಿಕ್ಷೆಯನ್ನು ವಿದಿಸುವ ಅಧಿಕಾರ ಕೂಡಾ ಈ ದೈವದ ಯಜಮಾನನಿಗಿರುತ್ತದೆ. ನಾಲ್ಕು ಗಡ್ಡೆಯ ಬಾರಕ, ಕೋಲಕಾರರು ಮೂರು ವರ್ಷಗಳಿಗೊಮ್ಮೆ ಚಂದಾವರದ ಸಮೀಪ ಹೊಂಜಿಕಟ್ಟೆಯಲ್ಲಿ ಸಭೆ ಸೇರಿ, ಊರಿನ ಬುದುವಂತರು ನೀಡಲಾಗದ ಪರಿಹಾರಗಳಿಗೆ ಉತ್ತರ ಕಂಡುಕೊಳ್ಳುತ್ತಾರೆ. ಈ ಪಂಚಾಯತಿಯು ಹಿಂದಿನ ದಿನಗಳಲ್ಲಿ ಮೂರು ದಿನಗಳಿಂದ ಹತ್ತು ದಿನಗಳವರೆಗೆ ನಡೆಯುತ್ತಿತ್ತು. ಈ ಗಡ್ಡೆ ಪಂಚಾಯತಿಯಲ್ಲಿ ಸಮಾಜದ ಒಗ್ಗಟ್ಟಿಗೆ ಅವಶ್ಯವಾದ ತೀರ್ಮಾನಗಳನ್ನು ಕೈಗೊಳ್ಳಲಾಗುತ್ತದೆ. ಊರು-ಊರುಗಳ ನಡುವೆ ಜಗಳಗಳಿದ್ದಲ್ಲಿ ಕೂಡಾ ಇಲ್ಲಿಯೇ ತೀರ್ಮಾನವಾಗುತ್ತದೆ. ಈ ಗಡ್ಡೆಗಳ ಸಭೆಗಾಗಿ ಪ್ರತಿ ಮನೆಯವರು ನಾಲ್ಕಾಣೆ, ಆರರಿಂದ ಎಂಟು ಸಿದ್ದೆ ಅಕ್ಕಿ ಹಾಗೂ ಒಂದು ಕಾಯನ್ನು ಬುದುವಂತನಿಗೆ ಕೊಡಬೇಕು. ಈಗ ನಾಲ್ಕಾಣೆ ಬದಲಿಗೆ ಪ್ರತಿ ಮನೆಗೂ ಐದು ರೂಪಾಯಿ ಪಡೆಯಲಾಗುತ್ತದೆ.

ಈ ಆಂತರಿಕ ಆಡಳಿತದ ಮೂಲಕ ತನ್ನದೇ ಆದ ವ್ಯವಸ್ಥಿತ ರೀತಿಯಲ್ಲಿ ಸಮಾಜದ ಹೊಣೆಯನ್ನು ಹೊತ್ತುಕೊಂಡು ಕ್ರಮಬದ್ಧವಾಗಿ ನಡೆಸಿಕೊಂಡು ಹೋಗುತ್ತಾರೆ. ಇಲ್ಲಿ ಬುದುವಂತ ಅಂದರೆ ಮುಖ್ಯ ಯಜಮಾನ. ಇವರು ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳಿಗೆ ಮುಂದಾಳು. ಇವರಿಗೆ ಸಮಾಜದಲ್ಲಿ ಒಳ್ಳೆಯ ಗೌರವವಿದೆ. ಇವರ ಬಗ್ಗೆ ಸಮುದಾಯದ ಯಾರೂ ಅವಾಚ್ಯವಾಗಿ ಕೂಡ ಮಾತಾಡುವಂತಿಲ್ಲ. ಹೆಂಗಸರು ಇವರೆದರು ತಲೆ ಎತ್ತಿ ಮಾತಾಡುವುದಿಲ್ಲ. ಬುದುವಂತರ ತೀರ್ಪನ್ನು ಅಪ್ಪಿತಪ್ಪಿ ಕೂಡಾ ಪ್ರಶ್ನೆ ಮಾಡುವಂತಿಲ್ಲ. ಇದರ ವಿಶೇಷವೆಂದರೆ ಕಟ್ಟೆ ಮನೆಗಳಲ್ಲಿ ಹೆಣ್ಣುಮಕ್ಕಳು ಭಾಗವಹಿಸುವುದಿಲ್ಲ. ಆದರೆ ವಿಶೇಷ ಪ್ರಕರಣಗಳಲ್ಲಿ ಅಗತ್ಯವಿದ್ದಾಗ ಮಾತ್ರ ಹೆಣ್ಣುಮಕ್ಕಳನ್ನು ಪಂಚಾಯತಿಗೆ ಕರೆಸಲಾಗುತ್ತದೆ.

ಪಾರಂಪರಿಕ ಕಟ್ಟುಪಾಡುಗಳು ಸಮುದಾಯದ ಹೊಸ ತಲೆಮಾರಿನವರಿಗೆ ಬಿಗಿ ಎನಿಸ ತೊಡಗಿವೆ. ರಾಜಕಾರಣವು ಪ್ರತಿ ಕೊಪ್ಪವನ್ನು ತಲುಪಿರುವುದರಿಂದ ತಮ್ಮ ಮುಖಂಡರನ್ನು ಪ್ರಶ್ನೆ ಮಾಡುವ ಮನೋಭಾವ ಬೆಳೆಯುತ್ತಿದೆ. ಇದರಿಂದ ಸಾಮಾಜಿಕ ಸಂಬಂಧಗಳು ಕ್ಷೀಣಿಸುತ್ತಿವೆ.

ವ್ಯಭಿಚಾರದಂತಹ ಸಂದರ್ಭದಲ್ಲಿ ಅಪರಾಧಿಗೆ ಕೊಡುವ ಶಿಕ್ಷೆಯ ಸ್ವರೂಪ ಮತ್ತು ಮಾದರಿಗಳನ್ನು ಗಮನಿಸಿದರೆ ಸಾಮಾಜಿಕ ಅನೈತಿಕತೆಯ ಬಗ್ಗೆ ಅವರಿಗೆ ಇರಬಹುದಾದ ನೈತಿಕ ಎಚ್ಚರಿಕೆಯನ್ನು ಗಮನಿಸಬಹುದು.

೪.೧೦. ಭಾಷೆ ಮತ್ತು ಸಾಹಿತ್ಯ

ಮುಕ್ರಿಯರ ಮಾತೃ ಭಾಷೆ ಕನ್ನಡವಾದರೂ ಆಡು ಮಾತಿನಲ್ಲಿ ಅನೇಕ ಪದಗಳು ಪ್ರಾದೇಶಿಕವಾದ ಅನನ್ಯತೆಯನ್ನು ಹೊಂದಿದೆ. ಮುಕ್ರಿಗಳ ಕನ್ನಡ ಉತ್ತರಕನ್ನಡ ಜಿಲ್ಲೆಯ ಮೇಲ್ಜಾತಿಯವರ ಕನ್ನಡಕ್ಕಿಂತ ಭಿನ್ನವಾಗಿದೆ. ಇವರ ಭಾಷೆಯಲ್ಲಿ ಸ್ಥಳೀಯವಾಗಿ ಪ್ರಭಾವವನ್ನು ಬೀರಿದ ಕೊಂಕಣಿ ಭಾಷೆಯ ಪ್ರಭಾವವು ಎದ್ದುಕಾಣುತ್ತದೆ. ಮುಕ್ರಿಯರು ಮಾತನಾಡುವ ಕನ್ನಡದ ಕೆಲವು ಪದಗಳನ್ನು ಈ ಕೆಳಗೆ ನೀಡಲಾಗಿದೆ.

೧. ಕವಳು = ಅಡಿಕೆ + ಎಲೆ + ತಂಬಾಕು

೨. ತುಳಸೀ ಪೀಠ = ತುಳಸಿ ಕಟ್ಟೆ

೩. ಹೆದ್ದೂಡೆ = ತೊಡೆ

೪. ರಣ್ಣುಕಾಲು = ಮೊಣಕಾಲು

೫. ಕಿರುಕನ ಬುಟ್ಟು = ಕಿರುಬಳ್ಳು

೬. ನಡುಗನ ಬುಟ್ಟು = ನಡುವಿನ ಬಟ್ಟು

೭. ನಗ್ಗೆನಕೆ – ಲಗ್ನಕ್ಕೆ

೮. ಬತ್ತೆ – ಬರುತ್ತೇನೆ

೯. ತಳುದು – ನೇರವಾಗಿ

೧೦. ಗಂಟಿ – ದನಕರು

೧೧. ಎಚ್ಚರು – ಎತ್ತಿಕೊಳ್ಳುವರು

೧೨. ಕಾವು – ಕಾಯು

೧೩. ಆಸರಿಗೆ – ಕುಡಿಯೋದಕ್ಕೆ

೧೪. ಸಾಲೆ – ಸೀರೆ

೧೫. ಬಳುವಾ – ದೃಷ್ಟಿ

೧೬. ಚಿಗುರೆಣ್ಣೆ – ಸುಗಂಧದೆಣ್ಣೆ

೧೭. ಕೊಕುಮ್ಮ – ಕುಂಕುಮ

೧೮. ಸ್ಯಾಸಕ್ಕಿ – ಸೇಸೆಯಕ್ಕಿ

೧೯. ಸೆಡೆವುದು – ಸಿಡಿಯುವುದು

೨೦. ರಸ್ಗಿ – ಕೀವು

೨೧. ಮನಗ್ಸಿ – ಮಲಗಿಸಿ

೨೨. ತೆಕ್ಕ – ತೆಗೆದುಕೊಂಡು

೨೩. ಹೋದಪೇಟ್ಟಿಗ್ – ಹೋದ ತಕ್ಷಣ

೨೪. ಉಕ್ನೀರು – ಕುದಿಯುವ ನೀರು

೨೫. ಪಿಟ್ಟಿ – ಮಲ

೨೬. ರಾಸಿ – ಬಹಳ

೨೭. ಹಿಂಡ್ರು – ಹೆಂಡರು

೨೮. ತಿಂಬೂಕೆ – ತಿನ್ನೋಕೆ

೨೯. ಚೊರ್ಮ – ಧರ್ಮ

೩೦. ರೋಣಿ – ರೋಮ, ಕೂದಲು

೩೧. ಕುನ್ನಿ – ನಾಯಿಮರಿ

೩೨. ಸಾನ – ಸ್ನಾನ

೩೩. ಕೊದ್ರಿ – ಕುದುರೆ

೩೪. ವಾರಂತ – ನಿರಂತರವಾಗಿ

೩೫. ಮುರಗಲ – ಮೃಗ

೩೬. ದನ ಗ್ವೊಲಿ – ದನದ ಸಮೂಹ, ಗುಂಪು

೩೭. ದಾಬು – ದನದ ಕಣ್ಣಿ

೩೮. ಇಂಬಿಕಾಯಿ – ನಿಂಬೆಕಾಯಿ

೩೯. ಒರುಲಿ – ಗೆದ್ದಲು

೪೦. ಕುಳ್ಳೂನೆ – ಕೂರುವವನು

೪೧. ಸೋಳಿ – ಸೊಳೆ

೪೨. ಕಮ್ಮಗೆ – ರುಚಿಯಾದ

೪೩. ಹುಕಮತ್ತ್ – ಉಪಾಯ

೪೪. ಕತ್ನ – ಜಗಳ

೪೫. ಸಿರುಗು – ಸೆರಗು

೪೬. ನೂತಂಗ – ಹೊಸಬಗೆಯ

೪೭. ಪಾತ್ರಾಡು – ಕುಣಿಯುವುದು

೪೮. ದೆಸಿಯವರ – ಹೆಂಡತಿ ಕಡೆಯವರು

೪೯. ನೀರಿವಾಳು – ಋತುಮತಿ

ಮುಕ್ರಿಯರ ಸಾಹಿತ್ಯ

ಮುಕ್ರಿ ಜನರಲ್ಲಿ ಪುರಾಣದ ಬಗ್ಗೆ ನಿಚ್ಚಳವಾದ ಕಲ್ಪನೆಯಿಲ್ಲ. ಅವರು ತಮ್ಮ ಜನಾಂಗಕ್ಕೆ ಸಂಬಂಧಿಸಿ ಯಾವುದೇ ಪುರಾಣಗಳನ್ನು ಹೇಳುತ್ತಿಲ್ಲ. ಮುಕ್ರಿಯರಿಗೆ ಹೇಳಿಕೊಳ್ಳುವಂತಹ ಯಾವುದೇ ಸಾಂಸ್ಕೃತಿಕ ವೀರನಾಯಕರ ಪರಂಪರೆಯು ಇಲ್ಲ. ಹಾಗಾಗಿ ಅವರದೇ ಆದ ಯಾವುದೇ ಪುರಾಣಗಳು ಕ್ಷೇತ್ರಕಾರ್ಯದಲ್ಲಿ ಲಭ್ಯವಾಗಲಿಲ್ಲ. ಮುಕ್ರಿಗಳು ಮೊದಲು ಹಾಲಕ್ಕಿಗಳಾಗಿದ್ದು ಸಮುದಾಯದ ರೀತಿ ರಿವಾಜುಗಳನ್ನು ಬಿಟ್ಟು ಕಳ್ಳು ಕುಡಿದು ನಿಯಮಗಳನ್ನು ಉಲ್ಲಂಘಿಸಿದ ಕಾರಣಕ್ಕೆ ನ್ಯಾಯಪಂಚಾಯತಿ ಕರೆದಾಗ ಅದಕ್ಕೆ ಅವರು ಯಾವ ಉತ್ತರವನ್ನು ಕೊಡದೇ ಅಸಹಾಯಕರಾಗಿ ಮೌನವಾದ ಕಾರಣ ಪಂಚಾಯತಿಯವರು ಇವರು ಮೂಕರು ಎಂದು ಕರೆದು ಜಾತಿಯಿಂದ ಹೊರಗಿಟ್ಟರು. ಇದನ್ನು ಬಿಟ್ಟರೆ ಇನ್ನು ಯಾವುದೇ ಐತಿಹ್ಯಗಳು ಸಿಗುತ್ತಿಲ್ಲ. ಕೆಲವು ವದಂತಿಗಳನ್ನು ಹೇಳುತ್ತಾರಾದರೂ ಅವು ಮುಕ್ರಿಗಳ ಚರಿತ್ರೆಯನ್ನು ನಿಖರವಾಗಿ ನಿರ್ಮಿಸುವಷ್ಟು ಗಟ್ಟಿಯಾಗಿಲ್ಲ.

ಮುಕ್ರಿಯರ ಕತೆಗಳನ್ನು ಡಾ. ಎಲ್.ಆರ್. ಹೆಗಡೆಯವರು 'ಕರಾವಳಿ ಕತೆಗಳು'ಎಂಬ ಸಂಕಲನದಲ್ಲಿ ಸಂಗ್ರಹಿಸಿದ್ದಾರೆ. ಆದರೆ ಅವರ ಕತೆಗಳು ಹಾಲಕ್ಕಿ ಜನಾಂಗದವರು ಹೇಳುವ ಕತೆಗಳಂತೆ ಇದ್ದು ವರ್ಗ ಆಶಯಗಳೆಲ್ಲಾ ಮಾಮೂಲಿನ ಕಥೆಗಳನ್ನು ಹೋಲುತ್ತವೆ. ಇತ್ತೀಚಿನ ಮುಕ್ರಿ ಸಮುದಾಯದ ಯುವ ಪೀಳಿಗೆಗೆ ಹಳೆಯ ಕಾಲದ ಕತೆಗಳು ಮರೆತು ಹೋಗಿದ್ದು ಡಾ. ಎಲ್.ಆರ್. ಹೆಗಡೆಯವರು ಸಂಗ್ರಹಿಸಿದ ಕತೆಗಳಲ್ಲಿಯ ಕೆಲವನ್ನು ವಿಚಾರಿಸಿದರೂ ತಮಗೇನೂ ಗೊತ್ತಿಲ್ಲದಂತೆ ಮೂಗು ಮುರಿದರೂ ಸುಮಾರು ೪೦-೫೦ ವರ್ಷದ ವಯಸ್ಸಿನ ಕೆಲವರು ಮಾತ್ರ ಈ ಕಥೆಗಳನ್ನು ಗೊತ್ತಿವೆ ಎಂದರು. 'ಸಿಂಗ್ ಬಾಳನ ಕತೆ' (ಸಂಗಾ-ಬಾಳ್ಯಾ) ಮುಕ್ರಿಗಳಲ್ಲಿ ಪ್ರಸಿದ್ಧಿ ಎಂದು ಶ್ರೀ ಹೆಗಡೆಯವರು ಉಲ್ಲೇಖಿಸುತ್ತಾರಾದರೂ ಅದೂ ಕೂಡಾ ಹೊಸ ತಲೆಮಾರಿಗೆ ಪರಿಚಯವಿಲ್ಲ. ಆದರೆ ಹೆಗಡೆ ಗ್ರಾಮದ ಹಲವಾರು ಯುವಕರು ಸಂಗ್ಯಾಬಾಳ್ಯಾ ನಾಟಕದ ಬಗ್ಗೆ ತಿಳಿಸಿದರು.

ಮುಕ್ರಿಗಳ ಸಾಹಿತ್ಯದ ಸಂಗ್ರಹ ಮತ್ತು ವಿಶ್ಲೇಷಣೆಯಾಗಿದ್ದು ಕಡಿಮೆಯೇ ಆದರೂ ಪ್ರಯತ್ನ ಮಾತ್ರ ಹಿಂದಿನಿಂದಲೇ ಆರಂಭವಾಗಿರುವುದು ಗಮನಾರ್ಹ. ೧೯೭೮ರಲ್ಲಿ ಮುಕ್ರಿ ಮತ್ತು ಹೊಲೆಯರ ಪದಗಳು ಎಂಬ ಸಂಗ್ರಹವನ್ನು ಡಾ. ಎಲ್.ಆರ್. ಹೆಗಡೆಯವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟಿಸಿದರು. ಈ ಸಂಕಲನದಲ್ಲಿ ಒನಕೆಹಾಡು. ಬೇಸಾಯದ ಹಾಡು. ಗುಮಟೆ ಪದಗಳು, ಮದುವೆಯ ಹಾಡು. ಕಥನಗೀತೆಗಳು ಮುಂತಾದವುಗಳಿವೆ. ಕುಮಟಾ ತಾಲ್ಲೂಕಿನ ಹೊಳೆಗದ್ದೆ, ಹೆಗಡೆ, ಮಿರ್ಜಾನ, ಹೊಲನಗದ್ದೆಗಳ ಮುಕ್ರಿಯರಿಂದ ಸಂಗ್ರಹಿಸಲಾಗಿತ್ತು.

೧೯೮೫ರಲ್ಲಿ ಐ ಬಿ ಎಚ್ ಪ್ರಕಾಶನದ ವತಿಯಿಂದ ಡಾ. ಎಲ್ ಜಿ ಭಟ್ಟರು ಮುಕರಿಗಳು ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿದರು. ಶ್ರೀಪಾದಶೆಟ್ಟರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಗಾಗಿ ಒಂದು ವಿವರವಾದ ಲೇಖನವನ್ನು ಬರೆದು ಅದು ೧೯೯೮ರಲ್ಲಿ ಪ್ರಕಟವಾಯಿತು. ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಸಾಹಿತ್ಯ ದರ್ಶನದಲ್ಲಿ ಆರ್.ಎಸ್. ಹಿರೇಮಠ ಅವರು ಒಂದು ಲೇಖನವನ್ನು ಬರೆದಿದ್ದು ಅದು ಜನಾಂಗಿಕ ಅಧ್ಯಯನ ಭಾಗ ೧೭ರಲ್ಲಿ ೧೯೯೩ರಲ್ಲಿ ಪ್ರಕಟವಾಯಿತು. ಕ್ರಿ.ಶ ೨೦೦೦ರಲ್ಲಿ ಎನ್ ಆರ್ ನಾಯಕರು ಮುಕ್ರಿಗಳ ಗೀತೆ ಮತ್ತು ಕಥೆಗಳು ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಸಂಸ್ಕೃತಿ ಮಹಿಳಾ ಮಾಲಿಕೆ ಅಡಿಯಲ್ಲಿ ಪ್ರಕಟಸಿದ ಸಂಪುಟ ನಾಲ್ಕರಲ್ಲಿ ಮುಕರಿಗಳು ಎಂಬ ದೀರ್ಘವಾದ ಲೇಖನವನ್ನು ಎಮ್. ವಿ ಶರ್ಮಾ ತದ್ದಲಸೆ ಎಂಬುವರು ಬರೆದಿದ್ದಾರೆ.

ಕಾವ್ಯ

ಮುಕ್ರಿ ಜನರ ಕಾವ್ಯವು ಕರಾವಳಿಯ ಇತರ ಬುಡಕಟ್ಟುಗಳ ಕಾವ್ಯದಂತಿದ್ದು ಅಲ್ಲಲ್ಲಿ ಕೆಲವು ವೈಶಿಷ್ಟ್ಯಗಳನ್ನು ಗಮನಿಸಬಹುದಾಗಿದೆ. ಮುಕ್ರಿಯರಲ್ಲಿ ಹೆಣ್ಣುಮಕ್ಕಳು ಹಾಡು ಹೇಳುವುದರಲ್ಲಿ ಪುರುಷರಿಗಿಂತ ಹೆಚ್ಚು ಪರಿಣಿತರು ಹಾಗೂ ಉತ್ಸಾಹಿಗಳು ಆಗಿದ್ದಾರೆ.

ಮದುವೆಯನ್ನು ತಯಾರು ಮಾಡಲು ಅಕ್ಕನನ್ನು ಕರೆಯಲು ಹೋದ ತಮ್ಮನಿಗೆ ಅಕ್ಕನು ತನ್ನ ಮನೆಯ ಸಮಸ್ಯೆಯನ್ನು ಹೇಳಿಕೊಳ್ಳುತ್ತಾಳೆ.

ಮನೆಯ ಕಾವೋರಿಲ್ಲ, ಮನೆಯ ಕಟುವರಿಲ್ಲ
ನಾ ಹೆಂಗೋ ಬರಲಿ ಮದೂವಿಗೆ
ಎಂದ ಅಕ್ಕ ಹೇಳಿದಾಗ ಅದಕ್ಕೆ ತಮ್ಮನು
ಮನೆಯ ಕಾವರು ಕೊಡುತೆ, ಮನಿಯ ಕಟುವರ ಕೊಡತೆ
ನೀ ಬರೋಲಕ್ಕ ಮದೂವೀಗೆ

ಎಂದು ಬೇಡುತ್ತಾನೆ, ಅವಳು ಮತ್ತೆ ಮತ್ತೆ ನೆಪಗಳನ್ನು ಹೇಳಿದಾಗ ಸಿಟ್ಟಾಗುತ್ತಾನೆ. ಅವನ ಒತ್ತಾಯಕ್ಕೆ ಅಕ್ಕ ಹೊರಡುತ್ತಾಳೆ.

ನಲ್ಲೆಯು ಹಿಂದಿದ್ದಿ ನಮ್ಮನು ಮುಂದಾಗಿ
ಪುತ್ರಗೋಳೆಲ್ಲ ನೆಡೂಗಾಗಿ
ಪುತ್ರಗೋಳೆಲ್ಲ ನೆಡೂಗಾಗಿ ಬರುವಾಗ
ಸಂತೋಸು ತಮ್ಮಯ್ನ ಮನಸೀಗೆ

ಅಂದರೆ ಮುಕ್ರಿಗಳ ಒಟ್ಟು ವಿವೇಕವು ಜೀವನ ಪ್ರೀತಿ ಉಳ್ಳದ್ದು. ತನ್ನ ಬಂಧು ಬಳಗಗಳನ್ನೆಲ್ಲ ಕೂಡಿಕೊಂಡು ಆಚರಿಸುವಂತಾದ್ದು.

ಮದುಮಗನ ತಲೆ ಕೂದಲನ್ನು ತೆಗೆದು ಪನ್ನೆ ಮಾಡುವ ಶಾಸ್ತ್ರವಿದೆ. ಅಲ್ಲಿ ಮುಕರಿ ಹೆಂಗಸರು ಸೇರಿ ಹಾಡುವ ಹಾಡೂ ಅರ್ಥಪೂರ್ಣವಾಗಿದೆ.

'ಪಲ್ಲಿ ಪಲ್ಲಿ ಚಂದಾ ಪಲ್ಲೀ ಮರಿಯನ್ನೇ ಚಂದಾ
ಪಲ್ಲಿ ನೀರುಂಬೂ ಕೆರಿ ಚಂದಾ। ತಮ್ಮಯ್ಯ
ಪಣ್ಣೀ ತಿದ್ದರೆ ಮೊಕ ಚಂದಾ॥
ಗುಬ್ಬಿ ಗುಬ್ಬಿ ಚಂದಾ ಗುಬ್ಬಿಯ ಮರಿ ಚೆಂದಾ
ಗುಬ್ಬಿ ಗುಬ್ಬಿ ಚಂದಾ ಗುಬ್ಬಿಯ ಮರಿ ಚೆಂದಾ
ಗುಬ್ಬಿ ನೀರುಂಬೂ ಕೆರೀ ಚೆಂದಾ। ತಮ್ಮಯ್ಯ
ಹುಬ್ಬೂ ತಿದ್ದೀದಾ ಮೊಕು ಚೆಂದಾ॥
ಕಾಮನ ಗಂಡಿ ನೀರೂ ಬೀಮನ ಗಂಡಿಗೆ ಬೆರಸೀ
ಅರಜುಣ ಗುಂಡಿ ನೀರಾ ಹದಮಾಡಿ। ನೀರೀಗೆ
ಮುದ್ದೂ ತಮ್ಮಯನಾ ಜಳಕವೇ'॥

ಮಗಳನ್ನು ಧಾರೆ ಎರೆದು ಕೊಡುವಾಗಲಂತೂ ಮದುಮಗಳ ತಾಯಿ ಮಾಡುವ ಸಂಭ್ರಮ ಮತ್ತು ಅದರೊಳಗಿನ ನೋವಿನ ಆರ್ದ್ರತೆ ಗಮನಾರ್ಹವಾದುದು.

ತಾಯಿ ತನ ಮಗಳು ತೊಡಿಮ್ಯಾನೆ ಕುಂಡಿಸಿಕಂಡಿ
ಹರಹರ ನನ ಮಗಳು ಪರರೊಸಗ ಪರದೇಶ
ಎತ್ತಿ ಕಯ್ದಾರಿ ಎರೀವನ

ಜರೆದಾಡುವ ಹಾಡು (ಗಂಡಿನವರು)

'ಕುಳ್ಳಿ ಕುಳ್ಳಂದರೆ ನಾವ್ಯೇನೂ ಕುಳ್ಳೂರು?
ಕುಳ್ಳೆಂಬಪ್ಪನೀಯೇ ಬರಲಿಲ್ಲ॥
ಕುಳ್ಳೆಂಬಲಪ್ಪಣಿಯೇ ಬರುಲಿಲ್ಲಾ ನೆಂಟಾರೇ
ಕುಳ್ಳೂಟ್ಕೊಂದು ಹಸಿರಿಯೇ ಮೊದುಲಿಲ್ಲ, ಹೆಣ್ಣಿನ ತಾಯೇ
ನಿಮ ಚಾಲು ನೋಡಿದರೆ ಹೊರುಳೆಲ್ಲ ॥

ಬೆಲ್ಲಕೆ ಹೋದ ಮಾವಾ ಜರಿ ಕಂಡ ಹೆದರಾದ
ಆಸರಂದಿ ಬಾಯಾ ಬಿಡುವರೋ
ಬೆಲ್ಲ ಹೇಳಿ ಬಾಯಿ ಬಿಡಬೇಡಿ ತಂಗದಿರಾ
ಮನಿಗೆ ಹೋಗಿ ಬೆಲ್ಲ ತಿನಬವದೊ ॥

ಬೆಲ್ದ ಮಡ್ಕಿಲ್ ಬೆಲ್ಲಿಲ್ ನೀರ್ ಕೊಡ್ನಲಿ ನೀರಿಲ್ಲ
ಬಾವಿಗೆ ಹೋದೋರೂ (ರೇ) ಬರೂಲಿಲ್ ತಮ್ಮಂದೀರ
ಅರ್ಸರಂದಿ ಬಾಯೇ ಬಿಡೂಬೇಡಿ.
ನೀರಿಗೆ ಹೋದತ್ತೆ ಕೆಪ್ಪಿಕಂಡಿ ಹದರಿತ್ತೇ
ನಿರಂದಿ ಬಾಯೇ ಬಿಡಬೇಡಿ ಅಣ್ಣಾದೀರೇ
ಮನಿಗೆ ಹೋಗಿ ನೀರಾ ಕುಡಿಬವ್ದೋ ॥

ಮಧುವಿಗೆ ವಸ್ತ್ರ ಕೊಟ್ಟಿದ್ದನ್ನು ಜರೆವ ಹಾಡು
'ಗಾಲಿಗೆ ಹಾರಿದ ಚಣ್ಣಾ ದೂಳಿಗೆ ಮಾಸಿದ ಬಣ್ಣಾ
ಇದು ಯೆಂತಾ ಬಣ್ಣಾ? ಹಳ್ಳಿ ಬಣ್ಣಾ । ಮದುವಣ್ಣಾ
ಮಾರಿಗ ಮೂರುಕಾಸೂ ಹಡಿಲಿಲ್ಲ ॥

ಗಾಳಿಗೆ ಹಾರಿದ ಚಣ್ಣಾ ದೂಳಿಗೆ ಮಾಸಿದ ಬಣ್ಣಾ
ಬಚ್ಚೇ ಬೀರಿದರೇ ಬೀದಿಸಣ್ಣಾ? ಹಳ್ಳೀ ಬಣ್ಣಾ। ಮದುವಣ್ಣಾ
ಮಾರಿಗೆ ಮೂರುಕಾಸೂ ಹಡಿಲಿಲ್ಲ ॥'

ಗಂಡಿನವರ ಉತ್ತರ

'ಹತ್ವರಸೀನಾಗಿದ್ದೇ ಭೂಮೀ ಕೆಲಸನೆ ಮಾಡಿ
ಆದರ‍್ಯಾಗೆ ಹತ್ವರವಾ ಗಳಿಸಿದೇ(ಗಳಿಸಿದ) ನನ್ನ ತಮ್ಮಾ
ಕೂತೀ ತಂದಿದನೇ ಹೊಸ ಬಣ್ಣಾ। ಹೆಣ್ಣಿನ ತಂದೇ
ಈ ಬಣ್ಣಾಕ್ಯಂತಾ ಹಳೂ ಬಂತೇ। ಹೆಣ್ಣಿನ ತಾಯೇ
ಉಡುವಳು ಇನ್ನೆಟ್ಟೂ ಚೆಲುಈಯೇ?

ಹೆಣ್ಣು ಗೆದ್ದು ಬರುವುದು

ಚಿನ್ನದ ಕಾಲಕ್ಕಿಯಲ್ಲೇ ಮೇವುದಾ ಕಂಡೆ
ಸೆಣ್ಣಾ ಗ್ವಕನದಾ ಬಯಲಲ್ಲಿ ಏ ತಮ್ಮಯ್ಯ ಕೇಳು
ಏನಕ್ಕಿಲದುರ ಹಿಡುದೇ ತಂದೆ!

ಮಾವ್ನರ ಮಗಳು ಮೊಢ್ಯಗೆ ಹೊನ್ನನೆ ತುಂಬಿ
ಬಿತ್ತುತೆ ಬಂದಳು ಬಯಲಲ್ಲಿ ಸಣ್ಣಮ ಕೇಳು
ಕಟ್ಟುತೆ ಬಂದಳೋ ಕಣಜಾವೊ!
ಈಳಿಯೀಳಿಯೇಗೆದ್ದೆ ಈಳಿಬಾಲಿಯೇ ಗೆದ್ದೆ
ಈಳಿ ಮೈನಾಡು ಗಿಳಿಗೆದ್ದೆ! ತಾಯಿಕೇಳು
ಮಾವನ ಕೂಡಾಡಿ ಮಗುಳ ಗ್ವಿದ್ದೆ

ಶೋಭನದ ಹಾಡು

ನಾರಿಮಿಂದ ಸುದ್ಧಿ ಎಲ್ ಕೇಳಿದ್ಯೋ ತಮ್ಮಯ್ಯ
ಕುಮಟೀಯ ಪ್ಯಾಟೀಲಿ ಹೊಸಸುದ್ಧಿ
ಕುಮಟೀಯ ಪ್ಯಾಟೀಲಿ ಹೊಸಸುದ್ಧಿ ತಮ್ಮಯ್ಯ
ನಾರಿಗೊಂದು ಸೀರೆ ತೆಗುದಾನೆ ತಮ್ಮಯ್ಯ
ಸಾವೀರ ಕೊಟ್ಟಾನೋ ಬೆಲಿಮಾಡಿ

ಮಕ್ಕಳನ್ನು ಆಡಿಸುವ ಹಾಡು

ಎನಿ ಬಂತು ಆನಿ ಮಕ್ಳಾಳೆ
ಬಂದಾ ಬಂದಾ ಆನಿ ಕಟ್ಟಾಕಿ
ಬರುದಿದ್ದ ಆನಿ ಕಟ್ಟಾಕಿ
ಬರುದಿದ್ದ ಆನಿ ಬಿಟ್ಟಾಕಿ
ಆನಿ ಬಂತು ಮಕ್ಕಳೆ ಆನಿ ಸಂಬು ದೇವಾನ ಸುಮ್ಮಾನಿ
ಆನಿ ಬಂತಾನಿ ಬಂದ ಬಂದಾನಿ ಕಟ್ಟಾಕಿ
ಆನಿ ಬಂತು ಆನಿ
ಸಂಬು ದೇವನ ಕುಂಬಾನಿ

ಅತ್ತಿಗೆಯ ಜೊತೆಗಿನ ಜಗಳ

ಸೀರಿ ಒಳ್ಳೇದು ಸೇರುಗೆಲ್ಲ ಅಣ್ಣಯ್ಯ
ಮಡುದಿ ಒಳ್ಳೇದು ಗುಣುವಿಲ್ಲ ಅಣ್ಣಯ್ಯ
ದೂಕಿ ಬಾರವ್ವ ತವರೀಗೆ

ತಮ್ಮನ ಜೊತೆ ಮಮಕಾರ
ಲುಂಬೂ ಬಾವೀಲಿ ಚಂಬೂ ಬಿದ್ದಿದ್ದೇಳಿ
ನಂಬೂ ಬೇಡ ತಮ್ಮ ನೆರಿಯಾರ ಅತ್ತಗದೀರು
ನಂಬೀಸಿ ಕೂರುಳಲರಿವರು

ಒನಕೆ ಹಾಡುಗಳು: ಭತ್ತ ಕಟ್ಟುವಾಗ ಮುಕ್ರಿ ಹೆಣ್ಣುಮಕ್ಕಳ ಹಾಡುಗಳು ಮುಕ್ರಿ ಜನರ ಬದುಕಿನ ಏಳು ಬೀಳುಗಳನ್ನು ಕಲ್ಪಕತೆಯನ್ನು ಅವರು ಅರ್ಥೈಸಿಕೊಳ್ಳುವ ಬಗೆಯನ್ನು ಹಾಗೂ ಜೀವನಾನುಭವವನ್ನು ಪ್ರತಿನಿಧಿಸುತ್ತವೆ.

'ವಳಕ್ಯಾಮಗೇ, ಮುಳ್ಳಾಗೆ ಕೂತ್ಕಂಡೇ
ಬಲ್ಯಂದ್ರ ನನ್ನಾ ದೆಸ್ಯೋರು। ಅದ್ದಾರೇ
ಮುಳ್ಳುಲುದಿ ಹುಂಗ್ಯಾ ಮುಡ್ವಾರೋ ॥೧॥

ಹೇಸೂಕಿಲ್ಲದ ಹೆಣ್ಣೇ, ನಾಚೂಕಿಲ್ಲದೇ ಗಂಡೇ
ಬಾಯೀ ಮುಕ್ಕಾದಾ ಕಡುಗತ್ತೀ। ಜಲುಮವ
ಯಲ್ಲೆ ಕೂಡಿಸಿದೆ ಶ್ರೀ ಹರಿ? ॥೨॥

ಪಾಪಿ ಹೊಟ್ಟೆಲೀ ಯಾಕ್ ಹುಟ್ಟೆ ಸಂಸಾರಾ?
ಕಲ್ಲಾಗು ಕಲ್ಲಾ ಶೀಲಿಯಾಗೂ । ಗೋಕಣುದಾ
ಯೇಳಲು ಬಾಗುಲಿಗ್ಯೂ ಕದವಾಗೂ ॥೩॥

ಕಾನಲಿರುವದು ಕಾನ ತೊಳುಚಿ ಗಿಡ
ತುಂಬಿಕೊಡೆ ದೇವಮ್ಮನಾ ಬನುತುಂಬಿ ಗುನುಗರು
ಹೊತ್ತಾರೆ ಬೆಳ್ಳಿ ಕಲಶವಾ ॥೪॥

ಬಾಗಿಲು ಮುಂದಿನಾ ಬಾಳಿ ಹಿಂದಿನ ಮೇನೇ
ಕಾಕಿನು ಕೆಲವದೂ ತೆರವೆಲ್ಲ । ನಮ್ಮನೀ
ಶಾಲಿಗೆ ಹೋದ ನನುತಮ್ಮ ಬರುಲಿಲ್ಲ ॥೫॥

ಕಾಯಿ ತಂಬಲ್ಲಿ ಬಾಯೆತ್ತಿ ನೋಡುವರೆ
ನಾವ್ ಹೋಗ್ವ ನಮ್ಮ ತೌರಿಗೆ । ಅಪ್ಪನಮನೆಗೆ
ಜೋಡೇಲಿ ಕಾಯು ವಡಂತಿಬಾ ॥೬॥

ಆಚರಿ ಕಲ್ಲಾದ ಕೊಂಬಾ ಮಣ್ಣಾದ
ಮಡವಳ ಮಲ್ಲುಗಿಯ ಶರವಾದ । ಈ ಊರ
ಕೆಲಸ್ಪಿ ಕೇದುಗಿಯ್ದಾ ಯೆಸಳಾದ ॥೭॥'

ಕಥನ ಗೀತೆಗಳು

ಮುಕ್ರಿ ಜನಾಂಗದಲ್ಲಿಯೂ ಉತ್ಕೃಷ್ಟವಾದ ಸಾಹಿತ್ಯವಿದೆ ಎಂಬುದು ಅವರ ಕಥನಗೀತೆಗಳನ್ನು ಗಮನಿಸಿದಾಗ ತಿಳಿಯುತ್ತದೆ. ಯಲುರಾಜನ ಮಡದಿ, ಕಾಳಿಕಮ್ಮನ ಹರಕೆ, ಬರಗಾಲ ದೇಶದ ವ್ಯಾಪಾರ, ಐಟಪಸ್ವಾಮಿ, ಹೊಂದೆರಾಯ, ಬಪ್ಪಿಂಗ ಬಮ್ಮಿಂಗ, ಕುಂತಿ ಸಣ್ಣಮ್ಮ, ಸಿರಿಕವಲಿ, ಸಂಶಯ ಪಿಶಾಚಿ, ಊರ ಪೋರ, ತಮ್ಮನ ಕೊಲೆ ಇಂತಹ ಕಥನಗೀತೆಗಳಲ್ಲಿ ಮುಕ್ರಿ ಜನರ ಭಾವ ಕಲ್ಪಕತೆ, ಕಥನಕಲೆ ಅವರು ಒಪ್ಪಿಕೊಂಡ ಆದರ್ಶದ ಹಾಗೂ ಸರಳ ಬದುಕಿನ ವಿವರಗಳನ್ನು ನೀಡುತ್ತವೆ.

ಯಲುರಾಜನ ಮಡದಿ

ಯಲುರಾಜ ಎನ್ನುವರು ಮದುವೆಯಾಗಿ ತನ್ನ ಹೆಂಡತಿಯೊಂದಿಗೆ ಮೂರು ವರ್ಷ ಕಾಲ ಸುಖವಾಗಿದ್ದ ನಾಲ್ಕನೇ ವರ್ಷ ಆತ ಯುದ್ಧಕ್ಕೆ ಹೋದಾಗ ಅವರ ಹೆಂಡತಿಗೆ ಕಾಮ ಭ್ರಮೆಯುಂಟಾಗುತ್ತದೆ. ಅಕ್ಕನ ಸಂಗಡ ಹೊಳೆಯ ನೀರು ತರಲು ಹೋದ ಆಕೆ ಹೊಲೆಯರವನು ಬರೆದ ಚಿತ್ರ ಕಂಡು ಅವನೊಡನೆ ಬಾಳುವ ನಿಶ್ಚಯ ಮಾಡುತ್ತಾಳೆ. ಆಕೆಯ ಅಕ್ಕ ಇದರಿಂದ ಜಾತಿ ಹೋಗುತ್ತದೆ, ಗಂಡ ಬಂದವನು ಹೊಡೆಯುತ್ತಾನೆ ಎಂದರೂ ಆಕೆ ಕೇಳುವುದಿಲ್ಲ, ಆ ಸಮಯದಲ್ಲಿ ಅಶ್ವತ್ಥ ಕಟ್ಟೆಯ ಮೇಲೆ ಕೊಳಲು ಊದುತ್ತಾ ನೃತ್ಯ ಮಾಡುತ್ತಿದ್ದ ಆ ಹೊಲೆಯರವನು ಅವಳನ್ನು ಕರೆದನು. ಅವಳು ಅಲ್ಲಿಗೆ ಹೋಗಿ ಆತನನ್ನು ಸ್ವೀಕರಿಸಿದಳು. ದಂಡಿಗೆ ಹೋದ ರಾಜನಿಗೆ ಸ್ವಪ್ನ ಬಿದ್ದು ಮನೆಗೆ ಬರುತ್ತಾನೆ. ವಿಷಯ ತಿಳಿದರೂ ಸಿಟ್ಟಿಗೇಳದೇ ಹೆಂಡತಿಯನ್ನು ಆ ಹೊಲೆಯನಿಗೆ ಒಪ್ಪಿಸಿ ಅವಳು ಸತ್ತ ಬಳಿಕ ತಲೆಬುರುಡೆಯನ್ನು ತನಗೆ ತಂದು ಒಪ್ಪಿಸಲು ಹೇಳಿ ಹೋಗುತ್ತಾನೆ. ಅವಳು ಸತ್ತ ಮೇಲೆ ಹೊಲೆಯ ತಂದು ಕೊಟ್ಟ ಅವಳ ತಲೆ ಬುರುಡೆಯಲ್ಲಿದ್ದ ಹಣೆ ಬರಹವನ್ನು ಆತ ಓದಿ ನೋಡಿ ಅದು ವಿಧಿ ಲಿಖಿತ ಎಂದು ತಿಳಿಯುತ್ತಾನೆ. ತಲೆ ಬುರುಡೆಗೆ ತಕ್ಕ ಹೆಣ್ಣಿನ ಗೊಂಬೆ ಮಾಡಿಸಿ ಆ ಬುರುಡೆಗೆ ಚೌಲಿ ಕೂದಲನ್ನು ಹಾಕಿ ಬಾಚಿ ಬಂಗಾರ ತೊಡಿಸಿ ದಿನಾಲೂ ಆ ಬೊಂಬೆಯ ಮುಂದೆ ಕಣ್ಣೀರು ಸುರಿಸುತ್ತಿದ್ದು ಒಂದು ದಿನ ತಾನೂ ಮಡಿದುಹೋದನು. ಸರಳ ಸುಂದರ ನಿರೂಪಣೆಯಿಂದ ಕೂಡಿದ ಇದೊಂದು ಅತ್ಯಂತ ಹೃದಯಸ್ಪರ್ಶಿ ಕಥನಗೀತವಾಗಿದೆ. ಗಂಡನ ಅನುಪಸ್ಥಿತಿಯಲ್ಲಿ ಹೆಣ್ಣಿನ ಕಾಮನೆ ಕೆರಳುವುದು ಆಕೆ ಚಂಚಲಳಾಗಿ ಪರಪುರುಷನ ಸಂಗ

ಮಾಡಿದರೂ ಅದನ್ನು ಸಹಜವೆಂಬಂತೆ ಸ್ವೀಕರಿಸಿದ ರಾಜ ತನ್ನೊಳಗಿನ ಪ್ರೇಮವನ್ನು ಬಚ್ಚಿಟ್ಟು ಕೊಂಡು ಅವಳ ಸಾವಿನ ನಂತರ ಆಕೆಯ ಮೂರ್ತಿಯನ್ನೇ ಮಾಡಿಕೊಂಡು ತನ್ನ ಪ್ರೇಮವನ್ನು ಅಭಿವ್ಯಕ್ತಿಗೊಳಿಸುವುದು ಈ ಕಥನಗೀತದ ವಿಶೇಷ. ಬದುಕನ್ನು ಇದ್ದಂತೆ ಒಪ್ಪಿಕೊಳ್ಳುವ ಅಂತರಂಗದ ನೋವನ್ನು ತೋರಗೊಡದೇ ಪ್ರೀತಿಯ ಪಾರಮ್ಯವನ್ನೇ ಮರೆಯುವ ಈ ಗೀತೆ ಹೊಸತನದಿಂದ ಕೂಡಿದೆ.

ಈ ಕಥನ ಕಲೆ ಮುಕ್ರಿಗಳ ಬದುಕಿನ ಸರಳ ನಿರೂಪಣೆಯು ಹೌದು. ನಿಸ್ವಾರ್ಥ ಪ್ರೇಮಕ್ಕಾಗಿ ಹಂಬಲಿಸುವ ಹೆಣ್ಣು, ಅದನ್ನು ಒಪ್ಪಿಕೊಳ್ಳುವ ರಾಜನ ತ್ಯಾಗ ಅಚ್ಚುಕಟ್ಟಾಗಿ ಮೂಡಿಬಂದಿವೆ.

ಕಾಳಿಕಾಮ್ಮನ ಹರಕೆ

'ಸಂಕರ' ಎಂಬ ರಾಜನಿಗೆ ಬಹುಕಾಲ ಮಕ್ಕಳಿರದೇ ಕಾಳಿಕಾಮ್ಮನಿಗೆ ಹರಕೆ ಹೊತ್ತು ಮಗ ಹುಟ್ಟುತ್ತಾನೆ. ಆದರೆ ಆ ಹರಕೆ ಆತನ ಮದುವೆಯವರೆಗೂ ರಾಜನಿಗೆ ನೆನಪೆ ಆಗುವುದಿಲ್ಲ. ಆಗ ಕಾಳಿಕಮ್ಮದೇವಿ ಕೊರವಂಜಿಯ ವೇಷ ತಾಳಿ ಹೆಣ್ಣಿನ ಮನೆಗೆ ಹೋಗಿ ಗಂಡಿನ ಬಗ್ಗೆ ಊನವಾಗಿದ್ದಾನೆಂದು, ರಾಜಕುಮಾರನ ಬಳಿ ಬಂದು ಮದುವೆ ಯಾಗುವ ಹುಡುಗಿ ಊನವಾಗಿದ್ದಾಳೆಂದು ತಿಳಿಸುತ್ತಾಳೆ. ಮದುಮಗ ತನ್ನ ಹೆಂಡತಿ ಕುಂಟಿ, ಕುರುಡಿಯೆಂದು ತಿಳಿದು ಪಟದ ಕತ್ತಿಗೆ ಇರಿದುಕೊಂಡು ಸಾವನ್ನಪ್ಪುತ್ತಾನೆ. ಇದರಿಂದ ಕಂಗೆಟ್ಟ ರಾಜಕುಮಾರಿ ವ್ರತ ಮಾಡಿ ತಾನೆ ದೇವಲೋಕಕ್ಕೆ ಹೋಗಿ ತನ್ನ ಗಂಡನನ್ನು ಕರೆದುಕೊಂಡು ಬರುತ್ತಾಳೆ. ಕೊನೆಗೆ ಹರಕೆಯನ್ನು ತೀರಿಸಿ ಅವರು ಸುಖವಾಗಿರುತ್ತಾರೆ.

ಈ ಕಥನ ಮುಕ್ರಿಗಳ ನಂಬಿಕೆಯ ನೆಲೆಗಳನ್ನು ಸ್ಥಿರೀಕರಿಸುವ ಕೆಲಸವನ್ನು ಕಾವ್ಯದ ಮೂಲಕ ಮಾಡುತ್ತದೆ. ಇದರ ಜೊತೆ ಅಸಾಮಾನ್ಯ ಹೆಣ್ಣೊಬ್ಬಳ ಸಾಹಸವನ್ನು ಹೇಳುವುದರ ಮೂಲಕ ಹೆಂಗಸರ ಅಸೀಮ ಸಾಹಸಕ್ಕೆ ಸಾಕ್ಷಿಯಾಗಿದೆ. ಹಿಂದುಳಿದ ಜನರಿಗೆ ಹರಕೆಯ ಮೇಲೆ ಅಪಾರ ನಂಬಿಕೆ, ಹರಕೆ ತೀರಿಸದಿದ್ದರೆ ಅನರ್ಥವಾಗುತ್ತದೆ ಎಂಬ ನಂಬಿಕೆಯ ಎಳೆ ಈ ಕಥನ ಗೀತೆಯ ಹಿಂದೆ ಕೆಲಸ ಮಾಡಿದೆ.

ಬಪ್ಪಿಂಗ ಬಮ್ಮಿಂಗ

ಜನಪದ ಕಥನ ಸಾಹಿತ್ಯದಲ್ಲಿ ಇದೊಂದು ಅಪರೂಪದ ಕಥನ. ಒಂದು ಊರಿನಲ್ಲಿ ಇಬ್ಬರು ಗೆಳೆಯರಿದ್ದಾರೆ. ಬಪ್ಪಿಂಗ ಬ್ರಾಹ್ಮಣ ಕುಲದವನು. ಬಮ್ಮಿಂಗ ಹೊಲೆಯ ಕುಲದವನು. ಇಬ್ಬರು ಆಪ್ತ ಗೆಳೆಯರು. ಒಂದು ದಿನ ಇಬ್ಬರು ಪಂಥ ಕಟ್ಟಿಕೊಂಡು ಪಗಡೆಯಾಡಲು

ಕುಳಿತರು. ಸೋತವರು ಗೆದ್ದವನಿಗೆ ತನ್ನ ತಂಗಿಯನ್ನು ಕೊಡಬೇಕು ಎಂಬುದೇ ಇದರ ನಿಯಮ. ಪಗಡೆಯಾಟದಲ್ಲಿ ಬಮ್ಮಿಂಗ ಗೆದ್ದುಬಿಟ್ಟನು. ನಿಯಮದಂತೆ ಬ್ರಾಹ್ಮಣ ಬಪ್ಪಿಂಗನು ತನ್ನ ಮಾತಿಗೆ ಒಪ್ಪಿ ತನ್ನ ತಂಗಿಯನ್ನು ಬಮ್ಮಿಂಗನಿಗೆ ಮದುವೆ ಮಾಡಿಕೊಟ್ಟನು.

ಬ್ರಾಹ್ಮಣ ಹುಡುಗಿಯನ್ನು ಹೊಲೆಯರ ಹುಡುಗನೊಬ್ಬ ಪಗಡೆಯಾಟದಲ್ಲಿ ಗೆದ್ದು ಮದುವೆಯಾಗುವ ಈ ಕಥನ ವಿಕಾರ ಜಾತಿ ವ್ಯವಸ್ಥೆಯ ವಿರುದ್ಧ ಅಂತರಂಗದಲ್ಲಿ ಪ್ರತಿಭಟನೆಯ ಸೊಲ್ಲು ಎನ್ನಬಹುದು. ಈ ಪ್ರತಿಭಟನೆಯ ಕಾವನ್ನು ಸುಪ್ತವಾಗಿ ಇಟ್ಟುಕೊಂಡು ತನ್ನ ಜಾಣ್ಮೆಯಿಂದ ಅದನ್ನು ಗೆದ್ದು ಸ್ಥಾಪಿತ ಹಿತಾಕ್ತಿಗಳನ್ನು ಉಲ್ಲಂಘಿಸುವ ಕ್ರಮವೇ ಅಪರೂಪದ್ದು. ಅನಾದಿಕಾಲದಿಂದ ರೂಪಗೊಂಡು ಜಾತಿ ವಿಕಾರತೆಯನ್ನು ಮೀರಲು ಸಾಧ್ಯ ಎಂಬುದನ್ನು ಈ ಕಥನ ಸಾದರಪಡಿಸುತ್ತದೆ.

ಊರುಪೋರ, ಸಂಶಯ ಪಿಶಾಚಿ ಮುಂತಾದ ಕಥೆಗಳು ಮುಕ್ರಿಯವರಲ್ಲಿ ಇವೆ. ಸಿರಿಕವಲಿ ಎನ್ನುವ ಕಥನ ಮುಕ್ರಿಗಳಲ್ಲಿ ಇದೆ. ಆನಪ್ರಿಯ ಗೋವಿನ ಕಥನವನ್ನೆ ಹೋಲುತ್ತಿದ್ದು ಭಿನ್ನ ಆಶಯವನ್ನು ಹೊಂದಿದ್ದು ಗೋವಿನ ಹಾಡಿಗಿಂತ ಭಿನ್ನ ಜಾಡನ್ನು ತಲುಪುತ್ತದೆ.

ಅಕ್ಕನೇ ತಮ್ಮನನ್ನು ಆಭರಣದ ಆಸೆಗಾಗಿ ಕೊಲ್ಲುವ, ತಂಗಿಯನ್ನೆ ಕಾಡುವ ಅಕ್ಕಂದಿರು, ತಂಗಿಯನ್ನು ಮದುವೆಯಾಗಲು ಹೊರಟ ಅಣ್ಣ-ತಮ್ಮರ ಜಗಳದ ಕಥೆ, ತಮ್ಮನನ್ನೆ ಕಾಡುವ ಅಣ್ಣಂದಿರು, ಇಂತಹ ಹತ್ತಾರು ಕಥೆಗಳು ಮುಕ್ರಿ ಸಮುದಾಯದಲ್ಲಿದೆ. ಎಲ್ಲಾ ಕಥೆಗಳು ಸಮಾಜದ ಪ್ರತಿಬಿಂಬ ಎನ್ನುವುದಾದರೆ ಸಮಾಜವನ್ನು ನೋಡುವ ಲೋಕದೃಷ್ಟಿಯ ಸ್ವರೂಪ ಏನು ಎಂಬುದು ಅರಿವಿಗೆ ಬರುತ್ತದೆ. ಬದುಕನ್ನು ಪ್ರಯೋಗಶಾಲೆ ಮಾಡಿಕೊಂಡಿರುವ ಮುಕ್ರಿಗಳಲ್ಲಿ ಅದು ಸರಾಗ ನಡಿಗೆಗೆಬೇಕಾದ ನೀತಿ ತತ್ವಗಳನ್ನು ಇಂತಹ ಕಥನಗಳ ಮುಖಾಂತರ ಸೃಷ್ಟಿ ಮಾಡಿಕೊಳ್ಳುತ್ತದೆ. ಆ ಮೂಲಕ ಮುಂದಿನ ಪೀಳಿಗೆ ತನ್ನ ಬದುಕನ್ನು ಇನ್ನಷ್ಟು ಹಸನುಗೊಳಿಸಿಕೊಳ್ಳಲಿ ಎಂಬ ಆಶಯವನ್ನು ಕಾಣಬಹುದು.

ಮುಕ್ರಿಗಳಲ್ಲಿ ಅವರದೇ ಆದ ನೃತ್ಯ ಪ್ರಕಾರಗಳಿಲ್ಲ ಅಥವಾ ಕಲಾ ಪ್ರಕಾರಗಳಿಲ್ಲ. ಸಹ ಸಮಾಜಗಳಿಂದ ಹಲವು ಕಲೆಗಳನ್ನು ಸ್ವೀಕರಿಸಿದ್ದಾರೆ. ಸಂಗ್ಯಾಬಾಳ್ಯ, ಗುಂಡುಭಮದಂತಹ ಆಟಗಳನ್ನು ಮುಕ್ರಿಗಳು ಆಡುತ್ತಾರಾದರೂ, ಆ ಆಟಗಳು ಕೋಲಕಾರನ ಮನೆ ಅಥವಾ ಬುದುವಂತನ ಮನೆಯಂಗಳದಲ್ಲಿ ಆಡುವಷ್ಟಕ್ಕೆ ಸೀಮಿತ ಗೊಂಡಿದೆ. ಹೊರಗಡೆ ಆಡುವಷ್ಟು ಅಥವಾ ಊರೂರು ಸುತ್ತುವಷ್ಟು ಶಕ್ತಿ ಅವರಿಗೆ ಬಂದಿಲ್ಲ. ಹಾಗಾಗಿ ಅಂತಹ ಜನಪ್ರಿಯ ಕಲೆ ಅವರಲ್ಲಿ ಇಲ್ಲ. ದೇವಿಕಾನ ಹಬ್ಬದಲ್ಲಿ ಮಾಡುವ ಹಗರಣದಲ್ಲಿ ಸಮಾಜದ ಬೇರೆ ಬೇರೆ

ಸ್ಥರಗಳ ಜನರನ್ನು ಅನುಕರಿಸಿ ಹಾಸ್ಯ ಮಾಡುತ್ತಾರೆ. ಸುಗ್ಗಿಯ ಹಬ್ಬದಲ್ಲಿ ಮಾತ್ರ ಗುಮಟೇ ಪಾಂಗುಗಳನ್ನು ಆಡುತ್ತಾರೆ. ಈ ಗುಮಟೆ ಪಾಂಗುವಿನ ನೃತ್ಯ ತಂಡಗಳು ಇವರಲ್ಲಿ ಇಲ್ಲ. ಬಿಡುವಿನ ವೇಳೆಯಲ್ಲಿ ಮಾತ್ರ ಎರಡೋ ಮೂರೋ ಜನ ಇದನ್ನು ಹಾಡುತ್ತಾರೆ. ಯಕ್ಷಗಾನ ದಂತಹ ಕಲೆ ಇದ್ದರೂ ಸವರ್ಣೀಯರು ಇವರನ್ನು ಸೇರಿಸಿಕೊಳ್ಳದಿದ್ದಕ್ಕೆ ಅಂತಹ ಕಲೆ ಬೆಳೆದು ಬರಲಿಲ್ಲವೇನೋ, ಸಾಮಾಜಿಕ ಆರ್ಥಿಕ ಹಿನ್ನೆಲೆಯೇ ಇದರ ಹಿಂದೆ ಇರುವ ಮುಖ್ಯ ಕಾರಣವಾಗಿದೆ. ಒಂದು ತಂಡವನ್ನು ಕಟ್ಟಿ ಬೆಳೆಸುವ ಶಕ್ತಿ ಮತ್ತು ಸಾಧ್ಯತೆಗಳು ಇವರಲ್ಲಿ ಸಾಧ್ಯವೆ ಎಂಬ ಪ್ರಶ್ನೆ ಕಾಡದಿರಲಾರದು. ಭಾಷೆ ಮತ್ತು ಇತರ ಕಾರಣಗಳಿಂದ ಇವರು ಇನ್ನಷ್ಟು ಕೀಳರಿಮೆಗೆ ಒಳಗಾಗಿರುವ ಸಾಧ್ಯತೆಗಳು ಇಲ್ಲದಿಲ್ಲ. ದೀವರ ಹಸೆ ಚಿತ್ತಾರವನ್ನೇ ಹೋಲುವ ಹಲಿ ಮುಕ್ರಿಗಳಲ್ಲಿ ಇದೆ. ಆದರೆ ಅದು ಅಷ್ಟು ಸೂಕ್ಷ್ಮವಾಗಿಲ್ಲ. ಸ್ವಲ್ಪ ಒರಟು ಒರಟಾಗಿದೆ. ಮದುವೆ ಹಲಿಯಲ್ಲಿ ಬಾಸಿಂಗ, ತೊಂಡಿಲುಗಳನ್ನು ಬರೆದರೇ, ಮನೆಯ ಮುಂದಿನ ಅಂಗಳದಲ್ಲಿ ತುಳಸಿಕಟ್ಟೆಯ ಸುತ್ತ ಗಿಡ, ಮರ, ಕನ್ನಡಿ, ಬಾಚಣಿಕೆ ವಿವಿಧ ಆಭರಣಗಳ ಚಿತ್ರಗಳನ್ನು ಬರೆಯುತ್ತಾರೆ.

ಸುಗ್ಗಿ ಹಾಡುಗಳನ್ನು, ಗುಮಟೇ ಪಾಂಗುಗಳನ್ನು ಎನ್.ಆರ್. ನಾಯಕರು ಸಂಗ್ರಹಿಸಿದ್ದಾರೆ, ಅಚ್ಚರಿ ಎನ್ನುವಂತೆ ಗೇಣುದ್ದದ ಜಮೀನಿಲ್ಲದ ಮುಕ್ರಿಗಳು ಸುಗ್ಗಿ ಹಾಡುಗಳನ್ನು ಯಾಕಾಗಿ ಮತ್ತು ಯಾರಿಗಾಗಿ ಕಲಿತರು ಎಂಬುದನ್ನು ಗಮನಿಸಬೇಕಾಗುತ್ತದೆ. ಒಡೆಯರ ಮನೆಯ ಸುಗ್ಗಿಯನ್ನು ತಮ್ಮ ತಮ್ಮ ಸುಗ್ಗಿಯನ್ನಾಗಿ ಆಚರಿಸುವ ಅನಿವಾರ್ಯತೆ ಮುಕ್ರಿಗಳಿಗೆ ಇದ್ದುದರ ಬಗ್ಗೆ ಅವರಿಗೆ ಅಷ್ಟಾಗಿ ಅರಿವಿದ್ದಂತಿಲ್ಲ. ಇದ್ದರೂ ಪರ್ಯಾಯ ಮಾರ್ಗಗಳನ್ನು ಸೃಷ್ಟಿಸಿಕೊಳ್ಳುವ ಶಕ್ತಿ ಮುಕ್ರಿಗಳಿಗೆ ಬಂದಿಲ್ಲ.

ಸ್ವಂತದ್ದಾದ ಕಲಾ ಪ್ರಕಾರಗಳನ್ನು ಹೊಂದಿಲ್ಲದ ಇವರು ಅನಿವಾರ್ಯವೆಂಬಂತೆ ಇತರರ ಕಲೆಗಳನ್ನು ಅನುಕರಿಸುವ ಮತ್ತು ಅನುಸರಿಸಲು ಮೊರೆಹೋಗುತ್ತಾರೆ. ಅಲ್ಲಿನವರು ಇವರನ್ನು ಒಳಗೆ ಬಿಟ್ಟುಕೊಳ್ಳದಿದ್ದರು ತಮ್ಮೊಳಗೆ ತಾವು ಆಚರಿಸಿಕೊಂಡು ಆನಂದಿಸುತ್ತಾರೆ.

ಪಶ್ಚಿಮ ಘಟ್ಟದ ದಟ್ಟ ಕಾಡಿನ ನಡುವೆ ಬಾಳುವ ಪ್ರತಿ ಸಮುದಾಯಗಳು ತಮ್ಮೊಳಗೆ ಅಗಾಧ ಕಲಾ ಪರಂಪರೆ ಮತ್ತು ನೃತ್ಯ ಪ್ರಕಾರಗಳನ್ನು ಇಟ್ಟುಕೊಂಡಿದ್ದರೂ ಮುಕ್ರಿಗಳು ಇದರಿಂದ ಹೊರಗುಳಿದಿದ್ದಾರೆ ಯಾಕೆ? ಎಂಬ ಪ್ರಶ್ನೆ ಸಹಜವಾದುದು. ತನ್ನ ಸಹ ಸಮಾಜಗಳು ತಮ್ಮ ಸಾಂಸ್ಕೃತಿಕ ಸಂವೇದನೆಗಳಿಂದ ತಮ್ಮ ಪರಿವೇಗಗಳನ್ನು ಬದಲಾಯಿಸಿ ಕೊಳ್ಳಲು ಹಾತೊರೆಯುವಾಗ ಅಂತಹ ಉತ್ಸಾಹ ಹಾಗೂ ಹಂಬಲಗಳು ಈ ಸಮುದಾಯಗಳನ್ನು ಯಾಕೆ ಬಾಧಿಸಲಿಲ್ಲ ಎಂಬುದು ಕೂಡಾ ಮಹತ್ವವಾದುದು. ನಾನು ಮಾತನಾಡಿಸಿದ ಬಹುತೇಕ

ಯುವಕರಲ್ಲಿ ತಮ್ಮನ್ನು ಈ ಸ್ಥಿತಿಗೆ ದೂಡಿದ ಸಮುದಾಯಗಳ ಬಗ್ಗೆ ಅಂತಹ ರೋಷವೇನಿಲ್ಲ. ಆಕ್ರೋಶವಿಲ್ಲ. ಆದರೆ ತಮಗೆ ಸಿಗುವ ಸವಲತ್ತುಗಳನ್ನು ಕಸಿದುಕೊಳ್ಳಲಾಗುತ್ತಿದೆ ಎಂಬ ಅಸಹನೆ ಮಾತ್ರ ಮಡುಗಟ್ಟಿ ನಿಂತಿದೆ. ಅದಕ್ಕಾಗಿ ಕೈಗೊಳ್ಳ ಬೇಕಾದ ಯುದ್ದೋಪಾದಿಯ ತಂತ್ರಗಳ ಬಗ್ಗೆಯು ಅವರಿಗೆ ಅರಿವಿಲ್ಲ. ಅಂತಹ ತಂತ್ರಗಳನ್ನು ಹೆಣೆದು ಕಸಿದುಕೊಳ್ಳುವ ಮಾತು ಹೋಗಲಿ ಹಕ್ಕನ್ನು ಉಳಿಸಿಕೊಳ್ಳಬೇಕೆನ್ನುವ ಮಾತನ್ನು ಆಡಲು ನಿಸ್ಸಹಾಯಕರಾಗಿರುವುದು ಇಲ್ಲಿ ಗಮನಾರ್ಹ.

ನಾವು ಹೊಕ್ಕ ಕೋಪ್ಪಗಳೆಲ್ಲ ಭಾರತದ ಅಸಮಾನ ಹಂಚಿಕೆ, ಶೋಷಣೆಯೇ ಮೈವೆತ್ತಂತೆ ಇವೆ. ಇಲ್ಲಿ ಕುತೂಹಲದ ಕಣ್ಣುಗಳ ಬದಲಾಗಿ ಕರುಣಾಜನಕ ಕಣ್ಣುಗಳಿವೆ. ದುಡಿಯುವ ಬದುಕು ಕಟ್ಟಿಕೊಳ್ಳುವ ಹಾತೊರೆಯುವಿಕೆ ಕಂಡರು ಅಂತಹ ಅವಕಾಶಗಳೇ ದೊರೆಯದ ಪರಿಸ್ಥಿತಿ ಇದೆ. ಸಾಮುದಾಯಿಕವಾಗಿ ಹೋರಾಟದ ಬದುಕನ್ನು ಕಟ್ಟಿಕೊಳ್ಳುವ ಯಾವ ತಂತ್ರಗಾರಿಕೆಯು ಈ ಸಮುದಾಯಕ್ಕೆ ಸಿಕ್ಕಿಲ್ಲ. ಜ್ಞಾನಪರಂಪರೆಗಳನ್ನು ಕಟ್ಟಿಕೊಂಡ ಕುರುಹುಗಳು ಎರವಲು ಪಡೆದಂತೆ ಕಾಣುತ್ತದೆ. ಇಂತಹ ಸಂದರ್ಭದಲ್ಲಿ ಸಮುದಾಯವು ತನ್ನ ಅನನ್ಯತೆಯನ್ನು ಸಾಧಿಸಲು ಸಾಧ್ಯವಾಗದೆ ಹೋಗುವ ಸಂಭವವಿದೆ. ಯಾವ ಇಂತಹ ಸಮುದಾಯ ತಬ್ಬಲಿತನವನ್ನು ಅನುಭವಿಸುವ ಅನಿವಾರ್ಯತೆಗೆ ಇಳಿಯುತ್ತದೆ.

ಕರ್ನಾಟಕ ಸಾಹಿತ್ಯ ಅಕಾಡಮಿಯ ಸಂಸ್ಕೃತಿ ಮಹಿಳಾ ಮಾಲಿಕೆಯ ಸಂಪುಟ ೪ರಲ್ಲಿ ಮುಕರಿ ಸಮುದಾಯವನ್ನು ಕುರಿತಂತೆ ವಿದ್ವಾಂಸರೊಬ್ಬರ ಲೇಖನವನ್ನು ಸೇರಿಸಲಾಗಿದೆ. ಹೆರಿಗೆಯ ನೋವಿನಿಂದ ಬಳಲುತ್ತಿರುವ ಹೆಣ್ಣೊಬ್ಬಳ ಚಿತ್ರವನ್ನು ಈ ಬರಹ ನೀಡುತ್ತದೆ. "ಸ್ವಲ್ಪ ದೂರದಿಂದಲೇ ಬಿಡಾರದ ಲಾಟೀನು ದೀಪ ಕಾಣಿಸುತ್ತಿತ್ತು. ನಿಧಾನವಾಗಿ ಬಾಗಿಲು ಬಡಿದು ಕೆಂಚ ಎಂದು ಕರೆದೆವು. ಲಾಟೀನು ಎದುರಿಗೆ ಕುಳಿತ ಕೆಂಚ ಕರೆ ಕೇಳಿ ಗೊಂದಲಗೊಂಡ, ಅದರೂ ಒಡೆದಿರಾ ಇಷ್ಟು ಕತ್ಲೆಯಲ್ಲಿ ನೀವು ಬರೋದೆ ಎಂದ. ಅವನ ಮಾತಿನಲ್ಲಿ ಭೂಮಿಗಿಳಿದು ಬಂದ ಭಗವಂತನನ್ನು ಕಂಡ ಭಾವವಿತ್ತು. ಅವನು ಹಾಸಿದ ಕತ್ತಲೆಯನ್ನು ಕಾಣಿಸುವ ದೀಪ, ಸೆಗಣಿ ಹಾಕಿ ಸಾರಿಸಿದ ನೆಲವು ಹಸಿಹಸಿಯಾಗಿತ್ತು. ಸ್ವಲ್ಪ ಬದಿಯ ಒಲೆಯಲ್ಲಿ ನಿಗಿನಿಗಿ ಉರಿಯುವ ಕೆಂಡದ ರಾಶಿಯ ಎದುರು ನಾಗಿ ಕುಳಿತುಕೊಂಡಿದ್ದಳು. ಲಾಟೀನಿನ ಬೆಳಕನ್ನು ಕೆಂಚ ದೊಡ್ಡದು ಮಾಡಿದ. ಆಗ ಆಕೆ ಸ್ಪಷ್ಟವಾಗಿ ಕಂಡಳು. ಎಲೆ ಅಡಿಕೆ ರಸದಿಂದ ಕೆಂಪಾದ ತುಟಿ, ಹಾಕಿದ್ದ ಕುಪ್ಪಸವನ್ನೆ ಸೀಳಿ ಮುಂದೆ ಬಂದ ಎದೆ. ಏನಾಗಿದೆ ನಾಗಿ ಹುಷಾರಿಲ್ಲವಾ ಎಂದು ಕೇಳಿದೆವು. ತುಂಬಾ ಹೊಟ್ಟೆ ನೋವು ಸೊಂಟ ಜಗಿತ, ಒಡೆದಿರ ಹೆಂಡತಿ ಕಷಾಯ, ಉಪ್ಪಿನ ಕಾಯಿ, ತಿಂಡಿ ಎಲ್ಲಾ ಕೊಟ್ಟು ನೋಡಿದ್ರು

ಏನೋ ಕಳ್ಳ ಬಸ್ರಿ ಆಗಿಯೇನೆ ಅಂದರು" ಹೀಗೆ ಮುಂದುವರಿಯುವ ಲೇಖಕರು "ಮುಕರಿ ಮಹಿಳೆಯರಲ್ಲಿ ಲೈಂಗಿಕ ಸ್ವಾತಂತ್ರ ಅನೈತಿಕವಲ್ಲ, ಮದುವೆಯಾಗಿದ್ದೂ ಮತ್ತೊಬ್ಬನೊಂದಿಗೆ ಅನುರಕ್ತಳಾಗಬಹುದು. ನೈಸರ್ಗಿಕವಾದುದೆಲ್ಲ ನೈತಿಕವಾದುದೆಂಬ ನಿಷ್ಠೆ" ಎಂದು ಪ್ರಮಾಣ ಪತ್ರ ಸಲ್ಲಿಸಿಬಿಡುತ್ತಾರೆ.

ಪುರೋಹಿತಶಾಹಿ ಹಾಗೂ ಪ್ರಭುತ್ವ ಕೇಂದ್ರಿತ ಮನೋಸ್ಥಿತಿಯಿಂದ ಮುಕ್ರಿಗಳ ಕೊಪ್ಪಗಳನ್ನು ನೋಡಿದುದರ ಫಲದಿಂದ ಈ ಬರಹ ಹುಟ್ಟಲ್ಪಟ್ಟಿದೆ. ಜಾತಿಯ ವಿಕಾರತೆ ಹಾಗೂ ಯಜಮಾನಿಕೆ ಧಾರ್ಷ್ಟ್ಯದಿಂದ ಕೆಳ ಸಮುದಾಯಗಳನ್ನು ನೋಡುತ್ತಿರುವಾಗ ಈ ರೀತಿಯ ಮನೋವಿಕಾರದ ಬರಹಗಳು ಹುಟ್ಟಲ್ಪಡುತ್ತವೆ. ಗರ್ಭಿಣಿ ಹೆಣ್ಣೊಬ್ಬಳು ಆರ್ತವಾಗಿ ನರಳುತ್ತಿರುವಾಗ ಲೇಖಕರಿಗೆ ಕೆಂಪನೆಯ ತುಟಿಗಳು ಮತ್ತು ಸೀಳುವ ಎದೆ ಕಾಣಿಸುತ್ತದೆ ಎಂದರೆ ಲೇಖಕನಿಗೆ ಬಡಿದಿರುವ ಕಾಮಪಿತ್ತ ಎಂತಾಹದ್ದು ಎಂಬುದು ಅರಿವಿಗೆ ಬರುತ್ತದೆ. ಅವಳ ಬಸಿರನ್ನು ಕಳ್ಳ ಬಸಿರೆಂದು ತೀರ್ಮಾನಿಸಿದ್ದಲ್ಲದೆ, ಮುಕ್ರಿಗಳಲ್ಲಿ ಲೈಂಗಿಕ ಸ್ವಾತಂತ್ರ್ಯ ಇದೆಯೆಂದು ತೀರ್ಪು ನೀಡುವ ಮಟ್ಟಕ್ಕೆ ಲೇಖಕರು ಹೋಗಿಬಿಡುತ್ತಾರೆ. ಈ ಸ್ವಾತಂತ್ರ್ಯವನ್ನು ಇವರಿಗೆ ಕೊಟ್ಟವರಾದರೂ ಯಾರು?

ಲೈಂಗಿಕ ಸ್ವಾತಂತ್ರ್ಯ ಎನ್ನುವುದು ವ್ಯಕ್ತಿಗೆ ಸಂಬಂಧಿಸಿದೆ ಹೊರತು, ಸಮುದಾಯಕಲ್ಲ. ಮುಕ್ರಿಗಳಲ್ಲಂತೂ ವಿವಾಹ ನಂತರದ ಲೈಂಗಿಕ ಬದುಕು ಅತ್ಯಂತ ಕಟ್ಟುನಿಟ್ಟಿನದ್ದು. ಈಗಾಗಲೇ ಹಲವಾರು ಜನರನ್ನು ಜಾತಿಯಿಂದ ಈ ಕಾರಣಕ್ಕಾಗಿಯೆ ಕಟ್ಟು ಕೊಡಲಾಗಿದೆ. ಇದನ್ನು ಲೇಖಕರು ಗ್ರಹಿಸಿಲ್ಲ ಎಂಬುದು ಅಧ್ಯಯನದ ಕೊರತೆ ಎನ್ನಬಹುದು.

ದುಡಿಯುವುದನ್ನು ತಮ್ಮ ಅತ್ಯಂತ ಪ್ರಾಮಾಣಿಕ ಕರ್ಮ ಎಂಬಂತೆ ಮುಕ್ರಿಗಳು ದೆವ್ವದಂತೆ ದುಡಿಯುತ್ತಾರೆ ಎಂದು ಹೊಗಳುವ ಲೇಖರಿಗೆ, ಅವರನ್ನು ಹಾಗೆ ದುಡಿಸಿಕೊಂಡದ್ದಕ್ಕೆ ಕೊಟ್ಟ ಸಮಪಾಲೇನು ಎಂಬುದನ್ನು ಹೇಳಲು ಜಾಣ ಮರೆವು ಬಂದುಬಿಡುತ್ತದೆ.

ಸಮುದಾಯಗಳನ್ನು ಅಧ್ಯಯನ ಮಾಡಲು ಹೊರಟಾಗ ಲೇಖಕರಿಗೆ ಆ ಸಮುದಾಯದ ಬಗ್ಗೆ ತಾಯಿ ಕರುಳಿನ ಮಮಕಾರ ಇರಬೇಕು. ಅವುಗಳು ಈ ಸ್ಥಿತಿಯಲ್ಲಿರುವುದಕ್ಕೆ ಕಾರಣವಾದ ಸಾವಿರಾರು ವರ್ಷಗಳ ದೌರ್ಜನ್ಯದ ಗಾಯದ ಗುರುತುಗಳನ್ನು ಗ್ರಹಿಸುವ ಹೃದಯ ಸಂವಾದವಾದರು ಇರಬೇಕು. ಅದಿಲ್ಲದೆ ಹೋದಲ್ಲಿ ಇಂತಹ ಯಜಮಾನಿಕೆಯ ಬರಹಗಳು ಹುಟ್ಟುತ್ತವೆ.

ಅಡ್ಡಿಟಿಪ್ಪಣಿಗಳು

೧. ಮೋಹನ್ ಎಚ್.ಎಸ್., ಮುಕ್ತಿ ಸಮುದಾಯ, ೨೦೧೬, ಪು.೮೪

೨. ಎಂಥೋವನ್ ಆರ್.ಇ., ದಿ ಟ್ರೈಬ್ಸ್ ಆ್ಯಂಡ್ ಕಾಸ್ಟ್ಸ್ ಆಫ್ ಬಾಂಬೆ ೧೯೯೦, ಪು.೬೫

೩. ಮೋಹನ್ ಎಚ್.ಎಸ್., ಮುಕ್ತಿ ಸಮುದಾಯ, ೨೦೧೬, ಪು.೫೬

೪. ಅದೇ, ಪು.೯೩

೫. ಅದೇ, ಪು.೯೪

ಅಧ್ಯಾಯ ಐದು

ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿ

ಅಧ್ಯಾಯ ಐದು

ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿ

ಕರ್ನಾಟಕವು ವೈವಿಧ್ಯಮಯ ಭೂಪ್ರದೇಶವನ್ನು ಹೊಂದಿದೆ. ಆಯಾ ಭೂಪ್ರದೇಶಕ್ಕೆ ಸಂಬಂಧಿಸಿದಂತೆ ಅಲ್ಲಿ ನೆಲೆಸಿದ ಜನರ ಸಂಸ್ಕೃತಿ, ಸಮುದಾಯಗಳಲ್ಲಿಯು ಭಿನ್ನತೆಯನ್ನು ಕಾಣುತ್ತೇವೆ. ಕೊರಗ ಸಮುದಾಯವು ಕೇವಲ ದಕ್ಷಿಣಕನ್ನಡ ಜಿಲ್ಲೆಗೆ ಹೇಗೆ ಸೀಮಿತವೊ ಹಾಗೆಯೇ ಉತರ ಕನ್ನಡದಲ್ಲಿ ಹಾಲಕ್ಕಿ ಒಕ್ಕಲಿಗ ಮುಂತಾದ ವಿಶಿಷ್ಟ ಸಮುದಾಯಗಳಿವೆ. ಇವನ್ನು ಕರ್ನಾಟಕದ ಬೇರೆ ಪ್ರದೇಶದಲ್ಲಿ ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಮುಕ್ರಿ ಎನ್ನುವ ದಲಿತ ಸಮುದಾಯವೂ ಸಹ ಉತ್ತರಕನ್ನಡ ಜಿಲ್ಲೆಯಲ್ಲಿ ಮಾತ್ರ ಕಂಡುಬರುವ ಸಮುದಾಯ ವಾಗಿದೆ. ಈ ಅಧ್ಯಾಯದಲ್ಲಿ ಮುಕ್ರಿ ಸಮುದಾಯದ ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲಾಗಿದೆ. ಇದಕ್ಕಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ವ್ಯಾಪಕ ಕ್ಷೇತ್ರಕಾರ್ಯ ಮಾಡಲಾಗಿದೆ. ನಿಶ್ಚಿತ ಪ್ರಶ್ನಾವಳಿಯ ಮೂಲಕ ಮಾಹಿತಿಯನ್ನು ಕಲೆಹಾಕಲಾಗಿದೆ. ಕಲೆ ಹಾಕಲಾದ ಮಾಹಿತಿಯನ್ನು ಈ ಅಧ್ಯಾಯದಲ್ಲಿ ಬಳಸಿಕೊಳ್ಳಲಾಗಿದೆ.

ಹಾಲಕ್ಕಿಗಳನ್ನು ಹೋಲುವ ಆದರೆ ಹಾಲಕ್ಕಿಗಳಲ್ಲದ ಮುಕ್ರಿ ಸಮುದಾಯವು ಸಾಮಾಜಿಕವಾಗಿ ಅಸ್ಪೃಶ್ಯ ತಳಸಮುದಾಯವಾಗಿದೆ.

೫.೧. ಮುಕ್ರಿ ಸಮುದಾಯದ ಸಮೀಕ್ಷೆಗೊಳಪಟ್ಟ ಕುಟುಂಬಗಳ ಜನಸಂಖ್ಯೆ ವಿವರ

ಜನಸಂಖ್ಯೆ. ತುಂಬಾ ಕಡಿಮೆಯೆಂದೇ ಹೇಳಬಹುದು. ಉತ್ತರಕನ್ನಡ ಜಿಲ್ಲೆಯ ಕುಮಟಾ ಮತ್ತು ಹೊನ್ನಾವರ ತಾಲೂಕಿನೊಳಗೆ ಮಾತ್ರ ಹರಡಿಕೊಂಡಿರುವ ಈ ಸಮುದಾಯದ ನೆಲೆ ಹಾಗೂ ಜನಸಂಖ್ಯೆಯು ಈ ಕೆಳಗಿನಂತಿದೆ.

ಕೋಷ್ಟಕ ೫.೧. ಸಮೀಕ್ಷೆಗೊಳಪಟ್ಟ ಕುಮಟಾ ತಾಲೂಕಿನ ಮುಕ್ರಿ ಸಮುದಾಯದ ಗ್ರಾಮವಾರು, ಕುಟುಂಬವಾರು ಮತ್ತು ಜನಸಂಖ್ಯೆ ವಿವರ

ಕ್ರ.ಸಂ.	ಗ್ರಾಮ	ಕುಟುಂಬ	ಜನಸಂಖ್ಯೆ		
			ಗಂಡು	ಹೆಣ್ಣು	ಒಟ್ಟು
೧	ಕುಮಟಾ	೬೭	೧೨೬	೧೪೬	೨೭೨
೨	ಕಲಬಾಗ	೭	೧೮	೧೮	೩೬
೩	ಕೂಜಳ್ಳಿ	೨೫	೫೬	೬೫	೧೨೧
೪	ಗೋಕರ್ಣ	೭೪	೧೫೪	೧೬೭	೩೨೧
೫	ದಿವಗಿ	೧೯	೩೮	೩೮	೭೬
೬	ಮಿರ್ಜಾನ	೨೩	೪೮	೪೧	೮೯
೭	ವಾಲಗಳ್ಳಿ	೧೮	೪೬	೩೯	೮೫
೮	ಹೆಗಡೆ	೨೩೩	೪೪೯	೪೬೭	೯೧೬
	ಒಟ್ಟು	೪೪೨	೯೩೫	೯೮೧	೧೯೧೬

ಕುಮಟಾ ತಾಲೂಕಿನಲ್ಲಿ ಕುಮಟಾ ನಗರದಲ್ಲಿಯೇ ೬೭ ಕುಟುಂಬಗಳು ನೆಲೆಸಿವೆ. ಇಲ್ಲಿಯ ಒಟ್ಟು ಜನಸಂಖೆಯು ೨೭೨ ಇದೆ. ಇದರಲ್ಲಿ ಪುರುಷರು ೧೨೬ ಹಾಗೂ ಮಹಿಳೆಯರು ೧೪೬ ಜನರಿದ್ದಾರೆ. ಅದರಾಚೆಗೆ ಗೋಕರ್ಣದಲ್ಲಿ ೭೪ ಕುಟುಂಬಗಳು ನೆಲೆಸಿವೆ. ಇಲ್ಲಿಯ ಜನಸಂಖ್ಯೆಯು ೩೨೧, ಪುರುಷರು ೧೫೪ ಹಾಗೂ ಮಹಿಳೆಯರು ೧೬೭ ಜನರಿದ್ದಾರೆ. ಪ್ರಾಯಶಃ ಪ್ರವಾಸಿಕೇಂದ್ರವಾಗಿ ಗೋಕರ್ಣ ಗುರುತಿಸಿಕೊಂಡಿರುವುದರಿಂದ ಇಲ್ಲಿ ಚಿಕ್ಕ ಪುಟ್ಟ ಕೂಲಿ ಕೆಲಸಗಳು ಹೆಚ್ಚಾಗಿ ದೊರೆಯುತ್ತವೆಂಬ ಕಾರಣಕ್ಕೆ ಗೋಕರ್ಣದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮುಕ್ರಿಗಳು ನೆಲೆಸಿರುವ ಸಾಧ್ಯತೆಗಳಿವೆ. ಇನ್ನುಳಿದಂತೆ ಕಲಬಾಗದಲ್ಲಿ ಕೇವಲ ಏಳು ಕುಟುಂಬಗಳು ಮಾತ್ರ ನೆಲೆಸಿವೆ. ಒಟ್ಟು ಜನಸಂಖ್ಯೆ ೩೬ ಇದೆ. ಇದರಲ್ಲಿ ಮಹಿಳೆ ಪುರುಷ ಇಬ್ಬರೂ ಸಮಪ್ರಮಾಣದಲ್ಲಿದ್ದಾರೆ. ಕೂಜಳ್ಳಿಯಲ್ಲಿ ೨೫ ಕುಟುಂಬಗಳಿವೆ. ಒಟ್ಟು ಜನಸಂಖ್ಯೆ ೧೨೧ ಇದೆ. ಇದರಲ್ಲಿ ಪುರುಷರು ೫೬, ಮಹಿಳೆ ೬೫ ಜನರಿದ್ದಾರೆ.

ದಿವಗಿಯಲ್ಲಿ ೧೯ ಕುಟುಂಬ, ವಾಲಗಳ್ಳಿಯಲ್ಲಿ ೧೮ ಕುಟುಂಬಗಳಿವೆ. ಮಿರ್ಜಾನದಲ್ಲಿ ೨೩ ಕುಟುಂಬಗಳಿದ್ದು ೪೮ ಪುರುಷ, ೪೧ ಮಹಿಳೆಯರಿದ್ದಾರೆ. ಹೆಗಡೆಯಲ್ಲಿ ಅತೀ ಹೆಚ್ಚು ಮುಕ್ರಿ ಕುಟುಂಬಗಳಿವೆ. ಇಲ್ಲಿ ೨೦೯ ಕುಟುಂಬಗಳಿದ್ದು ೯೧೬ ಜನಸಂಖ್ಯೆ ಇದೆ. ಮಿರ್ಜಾನದಲ್ಲಿ ೧೯ ಕುಟುಂಬಗಳಿವೆ. ಒಟ್ಟು ಜನಸಂಖ್ಯೆ ೭೬, ಪುರುಷ ೩೮ ಹಾಗೂ ಮಹಿಳೆ ೩೮ ರಷ್ಟಿದ್ದಾರೆ.

ಕುಮಟಾ ತಾಲೂಕಿನಲ್ಲಿರುವ ಮುಕ್ರಿ ಸಮುದಾಯದವರ ಒಟ್ಟು ಕುಟುಂಬಗಳು ೪೪೨, ಒಟ್ಟು ಜನಸಂಖ್ಯೆ ೧೯೧೬, ಪುರುಷ ೯೩೫, ಮಹಿಳೆ ೯೮೧ರಷ್ಟಿದ್ದಾರೆ. ಈ ತಾಲೂಕಿನಲ್ಲಿ ಲಿಂಗ ಪ್ರಮಾಣವು ೧೦೦೦ ಪುರುಷರಿಗೆ ೧೦೪೯.೧೯ರಷ್ಟು ಮಹಿಳೆಯರ ಪ್ರಮಾಣವಿರುವುದು ಕಂಡುಬರುತ್ತದೆ.

ಹೊನ್ನಾವರ ತಾಲೂಕು

ಹೊನ್ನಾವರ ತಾಲೂಕಿನಲ್ಲಿ ಕರ್ಕಿಯಲ್ಲಿರುವ ಮುಕ್ರಿಯರ ೧೨೧ ಕುಟುಂಬಗಳಿದ್ದು ಒಟ್ಟು ೫೫೬ ಜನಸಂಖ್ಯೆ ಇದೆ. ಇದರಲ್ಲಿ ಪುರುಷರು ೨೬೫, ಮಹಿಳೆ ೨೯೧ರಷ್ಟಿದ್ದಾರೆ. ಕಡತೋಕದಲ್ಲಿ ೧೪೧ ಕುಟುಂಬಗಳಿವೆ. ಒಟ್ಟು ಜನಸಂಖ್ಯೆಯು ೬೫೫ ಇದೆ. ಇದರಲ್ಲಿ ಪುರುಷರು ೩೨೬ ಹಾಗೂ ಮಹಿಳೆಯರು ೩೨೯ರಷ್ಟಿದ್ದಾರೆ. ಇನ್ನು ಚಂದಾವರ ಗ್ರಾಮದಲ್ಲಿ ಕೇವಲ ೨೨ ಮುಕ್ರಿ ಕುಟುಂಬಗಳಿವೆ. ಒಟ್ಟು ಜನಸಂಖ್ಯೆ ೧೦೨ ಇದೆ. ಇದರಲ್ಲಿ ಪುರುಷರು ೪೭, ಮಹಿಳೆ ೫೫ರಷ್ಟಿದ್ದಾರೆ.

ಕೋಷ್ಟಕ ೫.೨. ಸಮೀಕ್ಷೆಗೊಳಪಟ್ಟ ಹೊನ್ನಾವರ ತಾಲೂಕಿನ ಮುಕ್ರಿ ಸಮುದಾಯದ ಗ್ರಾಮವಾರು ಕುಟುಂಬ ಮತ್ತು ಜನಸಂಖ್ಯೆ ವಿವರ

ಕ್ರ.ಸಂ.	ಗ್ರಾಮ	ಕುಟುಂಬ	ಜನಸಂಖ್ಯೆ		
			ಗಂಡು	ಹೆಣ್ಣು	ಒಟ್ಟು
೧	ಕರ್ಕಿ	೧೨೧	೨೬೫	೨೯೧	೫೫೬
೨	ಕಡತೋಕ	೧೪೧	೩೨೬	೩೨೯	೬೫೫
೩	ಚಂದಾವರ	೨೨	೪೭	೫೫	೧೦೨
೪	ಧಾರೇಶ್ವರ	೫	೭	೧೩	೨೦
೫	ನವಿಲುಗೋಣ	೧೪	೩೨	೩೪	೬೬

೬	ಮುಗ್ವಾ	೫೯	೯೭	೧೩೧	೨೨೮
೭	ಹಳದೀಪುರ	೧೩೦	೩೪೯	೩೨೪	೬೭೩
೮	ಹೊಸಕುಳಿ	೨೮	೪೩	೬೦	೧೦೩
	ಒಟ್ಟು	೫೨೦	೧೧೬೬	೧೨೩೭	೨೪೦೩

ಧಾರೇಶ್ವರ ಗ್ರಾಮದಲ್ಲಿ ಕೇವಲ ೫ ಕುಟುಂಬಗಳು ಮಾತ್ರ ನೆಲೆಸಿವೆ. ಒಟ್ಟು ೨೦ ಜನವಿದ್ದು ಇದರಲ್ಲಿ ಪುರುಷರು ೭ ಜನ ಮಹಿಳೆಯರು ೧೩ ಜನ ಸಮೀಕ್ಷೆಗೆ ದೊರೆತ ಜನಸಂಖ್ಯೆಯಾಗಿದೆ.

ನವೀಲುಗೋಣ ಗ್ರಾಮದಲ್ಲಿ ೧೪ ಕುಟುಂಬಗಳಿವೆ. ಇಲ್ಲಿಯ ಮುಕ್ರಿ ಜನಸಂಖ್ಯೆ ಒಟ್ಟು ೬೬, ಇದರಲ್ಲಿ ಪುರುಷ ೩೨, ಮಹಿಳೆ ೩೪ ಜನರಿದ್ದಾರೆ.

ಮುಗ್ವಾ ಗ್ರಾಮದಲ್ಲಿ ೫೯ ಮುಕ್ರಿ ಕುಟುಂಬಗಳಿವೆ. ಒಟ್ಟು ಜನಸಂಖ್ಯೆ ೨೨೮, ಪುರುಷರು ೯೭, ಮಹಿಳೆಯರು ೧೩೧ ಜನರಿದ್ದಾರೆ.

ಹಳದಿಪುರ ಗ್ರಾಮದಲ್ಲಿ ೧೩೦ ಕುಟುಂಬಗಳಿವೆ. ಇಲ್ಲಿಯ ಮುಕ್ರಿ ಜನಸಂಖ್ಯೆ ಒಟ್ಟು ೬೭೩, ಇದರಲ್ಲಿ ಪುರುಷ ೩೪೯, ಮಹಿಳೆ ೩೨೪ ಜನರಿದ್ದಾರೆ.

ಹೊಸಕುಳಿ ಗ್ರಾಮದಲ್ಲಿ ೨೮ ಕುಟುಂಬಗಳಿವೆ. ಒಟ್ಟು ಮುಕ್ರಿ ಜನಸಂಖ್ಯೆ ೧೦೩, ಇದರಲ್ಲಿ ಪುರುಷ ೪೩, ಮಹಿಳೆ ೬೦ ಜನರಿದ್ದಾರೆ.

ಹೊನ್ನಾವರ ತಾಲೂಕಿನಲ್ಲಿ ನೆಲೆಸಿರುವ ಮುಕ್ರಿ ಸಮುದಾಯದ ಒಟ್ಟು ಕುಟುಂಬಗಳು ೫೨೦, ಒಟ್ಟು ಜನಸಂಖ್ಯೆ ೨೪೦೩, ಪುರುಷರು ೧೧೬೬, ಮಹಿಳೆಯರು ೧೨೩೭ ಜನರಿದ್ದಾರೆ.


ಈ ತಾಲೂಕಿನ ಮುಕ್ರಿ ಸಮುದಾಯದ ಒಟ್ಟು ಜನಸಂಖ್ಯೆಯಲ್ಲಿ ಪುರುಷರ ಪ್ರಮಾಣ ಶೇಕಡ ೪೮.೫೨ ರಷ್ಟಿದೆ. ಮಹಿಳೆಯರ ಪ್ರಮಾಣ ಶೇಕಡ ೫೧.೪೮ ರಷ್ಟಿದೆ. ಅಂದರೆ ಪುರುಷರಿಗಿಂತ ಮಹಿಳೆಯರು ಶೇಕಡ ೨.೯೬ರಷ್ಟು ಹೆಚ್ಚಿದ್ದಾರೆ.

ಕೋಷ್ಟಕ ೫.೩. ಸಮೀಕ್ಷೆಗೊಳಪಟ್ಟ ಉತ್ತರಕನ್ನಡದ ಕುಮಟಾ ಮತ್ತು ಹೊನ್ನಾವರ ತಾಲೂಕಿನ ಮುಕ್ರಿ ಸಮುದಾಯದ ಒಟ್ಟು ಜನಸಂಖ್ಯೆ ವಿವರ

ಕ್ರಸಂ	ಗ್ರಾಮ	ಕುಟುಂಬ	ಜನಸಂಖ್ಯೆ		
			ಗಂಡು	ಹೆಣ್ಣು	ಒಟ್ಟು
೧	ಕುಮಟಾ	೪೪೨	೯೩೫	೯೮೧	೧೯೧೬
೨	ಹೊನ್ನಾವರ	೫೨೦	೧೧೬೬	೧೨೩೭	೨೪೦೩
೩	ಒಟ್ಟು	೯೬೨	೨೧೦೧	೨೨೧೮	೪೩೧೯

ಕುಮಟಾ ಹಾಗೂ ಹೊನ್ನಾವರ ಎರಡೂ ತಾಲೂಕುಗಳ ಮುಕ್ರಿಯರ ಒಟ್ಟು ಕುಟುಂಬಗಳು ೯೬೨ ಇವೆ. ಒಟ್ಟು ಜನಸಂಖ್ಯೆಯು ೪೩೧೯ ಇದೆ. ಇದರಲ್ಲಿ ಪುರುಷ ೨೧೦೧ ಹಾಗೂ ಮಹಿಳೆ ೨೨೧೮ ರಷ್ಟಿದ್ದಾರೆ. ಅಂದರೆ ಎರಡೂ ತಾಲೂಕುಗಳ ನಡುವೆ ಮಹಿಳೆಯರಿಗಿಂತ ೧೧೭ರಷ್ಟು ಪುರುಷರ ಸಂಖ್ಯೆ ಕಡಿಮೆ ಇದೆ. ಅಂದರೆ ಒಟ್ಟು ಮುಕ್ರಿ ಸಮುದಾಯದ ಜನಸಂಖ್ಯೆಯಲ್ಲಿ ಪುರುಷರು ಶೇಕಡ ೪೮.೬೪ ರಷ್ಟಿದ್ದರೆ ಮಹಿಳೆಯರು ಶೇಕಡ ೫೧.೩೬ ರಷ್ಟಿದ್ದಾರೆ. ಒಟ್ಟು ಎರಡೂ ತಾಲೂಕಿನಲ್ಲಿರುವ ಮುಕ್ರಿಯರ ಲಿಂಗಾನುಪಾತವು ಸಾವಿರ ಪುರುಷರಿಗೆ ೧೦೫೫ ಮಹಿಳೆಯರಿದ್ದಾರೆ. ಅಂದರೆ ಶೇಕಡ ೫೫ ರಷ್ಟು ಮಹಿಳೆಯರ ಪ್ರಮಾಣ ಹೆಚ್ಚಿದೆ.

ವೃತ್ತಚಿತ್ರ ೫.೧. ಉತ್ತರಕನ್ನಡದ ಕುಮಟಾ ಮತ್ತು ಹೊನ್ನಾವರ ತಾಲೂಕಿನ ಮುಕ್ರಿ ಸಮುದಾಯದ ಒಟ್ಟು ಜನಸಂಖ್ಯೆ ಪ್ರಮಾಣ





ಒಟ್ಟಾರೆಯಾಗಿ ಕ್ಷೇತ್ರಕಾರ್ಯದಲ್ಲಿ ದೊರೆತ ಮುಕ್ರಿ ಜನಸಂಖ್ಯೆಯನ್ನು ಮೇಲೆ ವಿವರಿಸಲಾಗಿದೆ. ಇದರಾಚೆಗೂ ಮುಕ್ರಿಗಳು ಇರುವುದಾಗಿ ತಿಳಿಯಿತು. ಆದರೆ ಆ ಕುಟುಂಬಗಳಾವು ದೊರೆಯಲಿಲ್ಲ. ಭೂಮಾಲಿಕರೂ ಅಲ್ಲದ, ಗೇಣಿದಾರರೂ ಆಗಿರದ, ಕೇವಲ ಕೂಲಿಯನ್ನು ನೆಚ್ಚಿಕೊಂಡು ಜೀವನ ನಿರ್ವಹಣೆ ಮಾಡುವವರು ಮುಕ್ರಿಗಳು. ಕೂಲಿಯನ್ನು ಹುಡುಕಿಕೊಂಡು ಗೋವಾ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹೀಗೆ ಬೇರೆ ಬೇರೆ ಕಡೆ ವಲಸೆಹೋಗಿದ್ದಾರೆಂದು ವಕ್ತೃಗಳು ತಿಳಿಸಿದರು. ಈ ರೀತಿ ವಲಸೆ ಹೋದ ಕುಟುಂಬಗಳು ಶೇಕಡ ೧೦ ರಿಂದ ೧೫ ಇರಬಹುದು. ಹೀಗೆ ವಲಸೆಹೋದ ಕುಟುಂಬಗಳನ್ನು ಗಣನೆಗೆ ತೆಗೆದುಕೊಂಡರೂ ಇಡೀ ಕರ್ನಾಟಕದಲ್ಲಿ ಮುಕ್ರಿಗಳ ಜನಸಂಖ್ಯೆಯು ೨೦,೦೦೦ ಕೂಡ ತಲುಪಲಾರದು.

ಲಿಂಗಾನುಪಾತ

ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ೮ ಗ್ರಾಮಗಳಲ್ಲಿ ಹಾಗೂ ಹೊನ್ನಾವರ ತಾಲೂಕಿನ ೮ ಗ್ರಾಮಗಳಲ್ಲಿ ಮುಕ್ರಿ ಸಮುದಾಯದವರು ನೆಲೆಸಿದ್ದಾರೆ. ಈ ಎರಡು ತಾಲೂಕಿನೊಳಗೆ ನೆಲೆಸಿರುವ ಮುಕ್ರಿಯರ ಗ್ರಾಮವಾರು ಲಿಂಗಾನುಪಾತವನ್ನು ಈ ಕೆಳಗೆ ಗಮನಿಸಲಾಗಿದೆ.

ಕೋಷ್ಟಕ ೫.೪. ಸಮೀಕ್ಷೆಗೊಳಪಟ್ಟ ಕುಮಟಾ ತಾಲೂಕಿನ ಮುಕ್ರಿಯರ ಗ್ರಾಮವಾರು ಲಿಂಗಾನುಪಾತ

ಕ್ರಸಂ	ಗ್ರಾಮ	ಲಿಂಗಾನುಪಾತ
೧	ಕುಮಟಾ	೧೧೫೮
೨	ಕಲಬಾಗ	೧೦೦೦
೩	ಕೂಜಳ್ಳಿ	೧೧೬೦
೪	ಗೋಕರ್ಣ	೧೦೫೧
೫	ದಿವಗಿ	೧೦೦೦
೬	ಮಿರ್ಜಾನ	೮೫೪
೭	ವಾಲಗಳ್ಳಿ	೮೪೭
೮	ಹೆಗಡೆ	೧೦೪೦
	ಒಟ್ಟು	೧೦೪೯

ಕುಮಟಾ ತಾಲೂಕಿನಲ್ಲಿರುವ ಗ್ರಾಮವಾರು ಮುಕ್ರಿಯರ ಲಿಂಗಾನುಪಾತವನ್ನು ನೋಡಲಾಗಿ ಕುಮಟಾದಲ್ಲಿ ಸಾವಿರ ಪುರುಷರಿಗೆ ೧೧೫೮ ಮಹಿಳೆಯರಿದ್ದಾರೆ. ಕಲಾಭಾಗದಲ್ಲಿ ಸಾವಿರ ಪುರುಷರಿಗೆ ಸಾವಿರ ಮಹಿಳೆಯರಿದ್ದಾರೆ. ಅದೇ ರೀತಿ ಕೂಜಳ್ಳಿಯಲ್ಲಿ ೧೧೬೦ ಮಹಿಳೆಯರಿದ್ದಾರೆ. ಗೋಕರ್ಣದಲ್ಲಿ ೧೦೫೧, ದಿವಗಿಯಲ್ಲಿ ೧೦೦೦, ಮಿರ್ಜಾನದಲ್ಲಿ ೮೫೪, ವಾಲಗಳ್ಳಿಯಲ್ಲಿ ೮೪೭, ಹೆಗಡೆಯಲ್ಲಿ ೧೦೪೦ ಮಹಿಳೆಯರಿರುವುದು ತಿಳಿದುಬರುತ್ತದೆ.

ಕಲಬಾಗ, ದಿವಗಿಯಲ್ಲಿ ಮಾತ್ರ ಪುರುಷರಿಗೆ ಸಮಾನವಾಗಿ ಮಹಿಳೆಯರಿದ್ದಾರೆ. ಮಿರ್ಜಾನ, ವಾಲಗಳ್ಳಿಯಲ್ಲಿ ಪುರುಷರಿಗಿಂತ ಕಡಿಮೆ ಪ್ರಮಾಣದಲ್ಲಿ ಮಹಿಳೆಯರಿರುವುದು ತಿಳಿಯುತ್ತದೆ. ಇನ್ನುಳಿದ ನಾಲ್ಕು ಗ್ರಾಮಗಳಲ್ಲಿಯು ಪುರುಷರ ಪ್ರಮಾಣಕ್ಕಿಂತ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಕುಮಟಾ ತಾಲೂಕಿನಲ್ಲಿ ಸರಾಸರಿ ಸಾವಿರ ಪುರುಷರಿಗೆ ೧೦೪೯ ಮಹಿಳೆಯರಿರುವುದು ತಿಳಿಯುತ್ತದೆ.

ಕೋಷ್ಟಕ ೫.೫. ಸಮೀಕ್ಷೆಗೊಳಪಟ್ಟ ಹೊನ್ನಾವರ ತಾಲೂಕಿನ ಗ್ರಾಮವಾರು ಮುಕ್ರಿಯರ ಲಿಂಗಾನುಪಾತ

ಕ್ರಸಂ	ಗ್ರಾಮ	ಲಿಂಗಾನುಪಾತ
೧	ಕರ್ಕಿ	೧೯೮
೨	ಕಡತೋಕ	೧೦೦೯
೩	ಚಂದಾವರ	೧೧೭೦
೪	ಧಾರೇಶ್ವರ	೧೮೫೭
೫	ನವಿಲುಗೋಣ	೧೦೬೨
೬	ಮುಗ್ವಾ	೧೩೫೧
೭	ಹಳದೀಪುರ	೯೨೮
೮	ಹೊಸಕುಳಿ	೧೪೯೫
	ಒಟ್ಟು	೧೦೬೦

ಹೊನ್ನಾವರ ತಾಲೂಕಿನ ಎಂಟು ಗ್ರಾಮಗಳಲ್ಲಿ ಮುಕ್ರಿಯರು ನೆಲೆಸಿದ್ದಾರೆ. ಈ ತಾಲೂಕಿನ ಮುಕ್ರಿಯರ ಗ್ರಾಮವಾರು ಲಿಂಗಾನುಪಾತವು ಈ ಕೆಳಗಿನಂತಿದೆ.

ಹೊನ್ನಾವರ ತಾಲೂಕಿನ ಕರ್ಕಿ ಗ್ರಾಮದಲ್ಲಿ ಮುಕ್ರಿಯರ ಸಾವಿರ ಪುರುಷರಿಗೆ ೧೯೦೮ ಮಹಿಳೆಯರು, ಕಡತೋಕದಲ್ಲಿ ೧೦೦೯, ಚಂದಾವರದಲ್ಲಿ ೧೧೭೦, ಧಾರೇಶ್ವರದಲ್ಲಿ ೧೮೫೭, ನವಿಲುಗೋಣದಲ್ಲಿ ೧೦೬೨, ಮುಗ್ವಾದಲ್ಲಿ ೧೩೫೧, ಹಳದೀಪುರದಲ್ಲಿ ೯೨೮, ಹೊಸಕುಳಿಯಲ್ಲಿ ೧೪೩೫ ಮಹಿಳೆಯರಿರುವುದು ತಿಳಿದುಬರುತ್ತದೆ. ಈ ತಾಲೂಕಿನೊಳಗೆ ಮುಕ್ರಿಯರು ನೆಲೆಸಿರುವ ೮ ಗ್ರಾಮಗಳನ್ನು ನೋಡಲಾಗಿ ಎಂಟು ಗ್ರಾಮಗಳಲ್ಲಿ ಸಾವಿರ ಪುರುಷರಿಗಿಂತ ಮಹಿಳೆಯರ ಪ್ರಮಾಣ ಹೆಚ್ಚಾಗಿರುವುದು ತಿಳಿಯುತ್ತದೆ. ಕೇವಲ ಹಳದೀಪುರ ಗ್ರಾಮದಲ್ಲಿ ಮಾತ್ರ ಪುರುಷರಿಗಿಂತ ಮಹಿಳೆಯರು ಕಡಿಮೆ ಪ್ರಮಾಣದಲ್ಲಿದ್ದಾರೆ. ಒಟ್ಟಾರೆಯಾಗಿ ಈ ತಾಲೂಕಿನಲ್ಲಿ ಮುಕ್ರಿಯರ ಲಿಂಗಾನುಪಾತವನ್ನು ಗಮನಿಸಲಾಗಿ ಸರಾಸರಿಯಾಗಿ ಸಾವಿರ ಪುರುಷರಿಗೆ ೧೦೬೦ ರಷ್ಟು ಮಹಿಳೆಯರಿದ್ದಾರೆ.

ಕೋಷ್ಟಕ ೫.೬. ಸಮೀಕ್ಷೆಗೊಳಪಟ್ಟ ತಾಲೂಕುವಾರು ಮುಕ್ರಿಯರ ಲಿಂಗಾನುಪಾತ

ಕ್ರಸಂ	ಗ್ರಾಮ	ಲಿಂಗಾನುಪಾತ
೧	ಕುಮಟಾ	೧೦೪೯
೨	ಹೊನ್ನಾವರ	೧೦೬೦
	ಒಟ್ಟು	೧೦೫೫

ಕುಮಟಾ ತಾಲೂಕಿನಲ್ಲಿ ಮುಕ್ರಿಯರ ಸಾವಿರ ಪುರುಷರಿಗೆ ೧೦೪೯ ಮಹಿಳೆಯರಿದ್ದಾರೆ. ಹೊನ್ನಾವರ ತಾಲೂಕಿನಲ್ಲಿ ೧೦೦೦ ಪುರುಷರಿಗೆ ೧೦೬೦ ಮಹಿಳೆಯರಿದ್ದಾರೆ. ಎರಡೂ ತಾಲೂಕನ್ನೊಳಗೊಂಡು ಮುಕ್ರಿಯರ ಸರಾಸರಿ ಸಾವಿರ ಪುರುಷರಿಗೆ ೧೦೫೫ ಮಹಿಳೆಯರಿದ್ದಾರೆ. ಅಂದರೆ ಪುರುಷರಿಗಿಂತ ಮಹಿಳೆಯರ ಪ್ರಮಾಣವು ಮುಕ್ರಿಯಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ.

ಸಮೀಕ್ಷೆಗೊಳಪಡಿಸಿದ ಮುಕ್ರಿ ಸಮುದಾಯದಲ್ಲಿ ಲಿಂಗಾನುಪಾತವು ಸಾವಿರಕ್ಕಿಂತ ತೀರಾ ಕಡಿಮೆಯಿರುವುದು ಕುಮಟಾ ತಾಲೂಕಿನ ವಾಲಗಳ್ಳಿ ಮತ್ತು ಮಿರ್ಜಾನ ಹಾಗೂ ಹೊನ್ನಾವರ ತಾಲೂಕಿನ ಹಳದೀಪುದಲ್ಲಿ ಕಂಡುಬರುತ್ತದೆ. ಮಹಿಳೆಯರು ಸಾಮಾಜಿಕವಾಗಿ ಅನ್ಯಾಯಕ್ಕೆ ಒಳಗಾಗಿರುವುದನ್ನು ಸಾವಿರಕ್ಕಿಂತ ಕಡಿಮೆ ಇರುವ ಲಿಂಗಾನುಪಾತ ತೋರಿಸುತ್ತದೆ.

ಡಾ. ಟಿ.ಆರ್. ಚಂದ್ರಶೇಖರ ಅವರು "ಮಾನವ ಅಭಿವೃದ್ಧಿ ಮಾನವ ಬಡತನ ಮತ್ತು ಮಾನವ ಹಕ್ಕುಗಳು" ಎಂಬ ಕೃತಿಯಲ್ಲಿ 'ಲಿಂಗ ಅಸಮಾನತೆಯು ಬಡತನದ ಜೊತೆಗೆ

ಗಟ್ಟಿಯಾದ ಸಹಸಂಬಂಧ ಹೊಂದಿದೆ"[೧] ಎಂಬ ಮಾರ್ಥಾ ನುಸುಚೌಮ್‌ರ ಮಾತನ್ನು ಉಲ್ಲೇಖಿಸಿದ್ದಾರೆ. ಅಲ್ಲದೆ ಅದೇ ಕೃತಿಯಲ್ಲಿ ಲಿಂಗಾನುಪಾತ ಕಡಿಮೆ ಇರುವುದಕ್ಕೆ ಈ ಕೆಳಗಿನ ಕಾರಣಗಳನ್ನು ನೀಡಿದ್ದಾರೆ.

೧. ಹೆಣ್ಣು ಶಿಶುಗಳ ಮರಣ ಪ್ರಮಾಣವು ಗಂಡುಶಿಶುಗಳ ಮರಣ ಪ್ರಮಾಣಕ್ಕಿಂತ ಅಧಿಕವಾಗಿರುವುದು.

೨. ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿನ ಏರಿಕೆಯಿಂದಾಗಿ ಮತ್ತು ಅವರ ಶಿಕ್ಷಣ ಮಟ್ಟದಲ್ಲಿನ ಸುಧಾರಣೆಯಿಂದಾಗಿ ಸಂತಾನೋತ್ಪತ್ತಿ ಪ್ರಮಾಣದಲ್ಲಿ ಇಳಿಕೆ ಉಂಟಾಗುವುದು.

೩. ಅಲ್ಟ್ರಾಸೌಂಡ್ ತಂತ್ರಜ್ಞಾನದ ಬಳಕೆಯಿಂದ ಹೆಣ್ಣು ಭ್ರೂಣಗಳ ಪತ್ತೆ ಮತ್ತು ಹತ್ಯೆ ನಡೆಯುತ್ತಿರುವುದು.

೪. ಗಂಡು ಮಗುವಿನ ಬಗ್ಗೆ ಪಾಲಕರಲ್ಲಿರುವ ಅತಿಯಾದ ವ್ಯಾಮೋಹ

೫. ಹೆಣ್ಣುಮಕ್ಕಳಲ್ಲಿ ಕಂಡುಬರುತ್ತಿರುವ ಅಧಿಕವಾದ ಅಪೌಷ್ಠಿಕತೆ

೬. ಸಮಾಜದಲ್ಲಿ ಕಂಡುಬರುವ ಲಿಂಗ ಅಸಮಾನತೆ.[೨]

ಮುಕ್ರಿಯರು ನೆಲೆಸಿರುವ ಕಡಿಮೆ ಲಿಂಗಾನುಪಾತವಿರುವ ವಾಲಗಳ್ಳಿಯಲ್ಲಿ ಮುಕ್ರಿಯರ ಕೇರಿಯಲ್ಲಿ ಪ್ರಾಥಮಿಕ ಶಾಲೆ ಇದೆ ಮತ್ತು ಸ್ವಲ್ಪ ದೂರದಲ್ಲೆ ಪ್ರೌಢಶಾಲೆ ಇರುವುದು ಕ್ಷೇತ್ರಕಾರ್ಯದಲ್ಲಿ ಕಂಡುಕೊಳ್ಳಲಾಗಿದೆ. ಅದೇ ರೀತಿ ಮಿರ್ಜಾನ ಮತ್ತು ಹಳದೀಪುರಗಳು ಹೆದ್ದಾರಿಯಲ್ಲಿವೆ. ಅದರಲ್ಲೂ ಹೆದ್ದಾರಿಯ ಸ್ವಲ್ಪ ದೂರದಲ್ಲೆ ಮುಕ್ರಿಯರ ಮನೆಗಳಿವೆ. ಇವರಿಗೂ ಕೂಡ ಶೈಕ್ಷಣಿಕ ಸೌಲಭ್ಯಗಳನ್ನು ಪಡೆಯುವ ಅವಕಾಶಗಳು ಸುಲಭವಾಗಿವೆ. ಈ ಕಾರಣಗಳಿಂದ ವಾಲಗಳ್ಳಿ ಮಿರ್ಜಾನ, ಹಳದೀಪುರಗಳಲ್ಲಿ ನೆಲೆಸಿರುವ ಮುಕ್ರಿಯರ ಸಾಕ್ಷರತೆ ಮತ್ತು ಶೈಕ್ಷಣಿಕ ಮಟ್ಟವನ್ನು ಬೇರೆ ಊರುಗಳಲ್ಲಿ ನೆಲೆಸಿರುವ ಮುಕ್ರಿಯರ ಹೋಲಿಸಿದರೆ ಹೆಚ್ಚಾಗಿರುವುದು ಕಂಡುಬರುತ್ತದೆ. ಇಲ್ಲಿ ಪುರುಷರಂತೆ ಸ್ತ್ರೀಯರ ಸಾಕ್ಷರತೆಯಲ್ಲಿ ಏರಿಕೆಯನ್ನು ಮತ್ತು ಶೈಕ್ಷಣಿಕ ಮಟ್ಟದಲ್ಲಿ ಸುಧಾರಣೆಯಾಗಿರುವುದು ಕಂಡುಬಂದಿದೆ. ಇದರಿಂದ ಇಲ್ಲಿ ಸಂತಾನೋತ್ಪತ್ತಿ ಪ್ರಮಾಣ ಕಡಿಮೆಯಾಗಿರುವುದು ಏಕೆಂದರೆ ಶಿಕ್ಷಿತ ಮಹಿಳೆಯರು ಮತ್ತೆ ಮತ್ತೆ ಗರ್ಭಿಣಿಯರಾಗಲು ಬಯಸುವುದಿಲ್ಲ. ಶಿಕ್ಷಿತ ದಂಪತಿಗಳಲ್ಲಿ ಅತಿಯಾದ ಗಂಡುಮಗುವಿನ ಬಗ್ಗೆ ವ್ಯಾಮೋಹವಿರುತ್ತದೆ. ಈ ಗಂಡುಮಗುವಿನ ಬಗೆಗಿನ ಅತಿಯಾದ ವ್ಯಾಮೋಹ ಇರುವುದರಿಂದ ಹೆಣ್ಣುಮಗು ಹುಟ್ಟದ ಹಾಗೆ ಮಾಡುವ ಇಲ್ಲದೆ ಅದನ್ನು ಭ್ರೂಣದ ಹಂತದಲ್ಲೇ ಹತ್ಯೆ ಮಾಡುವ ಸಂಭವವಿರುತ್ತದೆ. ಇದು ಲಿಂಗಾನುಪಾತ ಕಡಿಮೆಯಾಗಲು ಕಾರಣವಾಗಿದೆ.

ಸಾಕ್ಷರತೆಯಲ್ಲಿ ಏರಿಕೆಯಿಂದ ಮತ್ತು ಶೈಕ್ಷಣಿಕ ಘಟ್ಟದ ಸುಧಾರಣೆಯಿಂದ ಪ್ರಸ್ತುತ ಸಂದರ್ಭದಲ್ಲಿ ದುಡಿಮೆಯ ಅವಕಾಶಗಳು ವಿಸ್ತಾರವಾಗಿವೆ. ಇದರಿಂದ ಶಿಕ್ಷಿತ ಮುಕ್ರಿ ಯುವಕ-ಯುವತಿಯರು ಬೇರೆ ಬೇರೆ ಕ್ಷೇತ್ರಗಳ ಹೊಸ ದುಡಿಮೆಯಲ್ಲಿ ತೊಡಗಿಕೊಂಡಿದ್ದಾರೆ. ಈ ಅವಕಾಶಗಳು ಅವರ ಬಡತನವನ್ನು ನಿರ್ಮೂಲನೆ ಮಾಡಿವೆ ಎಂದಿಲ್ಲ. ಆದರೆ ಭೂಮಾಲೀಕರ ಅಥವಾ ಮೇಲ್ಜಾತಿಯ ಮನೆಗಳಲ್ಲಿಯ ಬಿಟ್ಟಿಜೀತದ ಬದಲು ದಿನನಿತ್ಯದ ಬದುಕಿಗೆ ಬೇಕಾಗುವ ಕೂಲಿ ಕೆಲಸಗಳನ್ನು ನೀಡಿವೆ ಅಷ್ಟೆ. ಅವರು ಇನ್ನೂ ಕಡುಬಡವರಾಗಿಯೇ ಇದ್ದಾರೆ. ಅದಕ್ಕಾಗಿ ದಿನನಿತ್ಯದ ಬದುಕು ಸಾಗಿಸಲು ಕೂಲಿ ಕೆಲಸದಲ್ಲಿ ತೊಡಗಿಕೊಳ್ಳಬೇಕಾದ ಅನಿವಾರ್ಯತೆಯಿದೆ ಮುಕ್ರಿ ಮಹಿಳೆಯರು ನಿತ್ಯದ ಕೂಲಿ ಕೆಲಸದಲ್ಲಿ ತೊಡಗಿಕೊಳ್ಳಲೇಬೇಕು. ದಿನನಿತ್ಯ ಕೆಲಸಕ್ಕೆ ಹೋಗದಿದ್ದರೆ ಕೆಲಸ ಕಳೆದುಕೊಳ್ಳಲೇಬೇಕು. ದಿನನಿತ್ಯ ಕೆಲಸಕ್ಕೆ ಹೋಗದಿದ್ದರೆ ಕೆಲಸ ಕಳೆದುಕೊಳ್ಳಬೇಕಾದ ಸಂದರ್ಭ ಬರುತ್ತದೆ. ಈ ಆತಂಕದಿಂದ ಅವರು ಹೆಚ್ಚು ಮಕ್ಕಳನ್ನು ಹೇರಲು ಮನಸು ಮಾಡುವುದಿಲ್ಲ. ಇದು ಸಂತಾನೋತ್ಪತ್ತಿ ಪ್ರಮಾಣ ಕಡಿಮೆ ಮಾಡುತ್ತದೆ. ಇದರಿಂದ ಇವರಲ್ಲಿ ಗಂಡುಮಗುವಿನ ಬಯಕೆಯು ಇವರನ್ನು ಲಿಂಗಪತ್ತೆಗೆ ಹಚ್ಚುತ್ತದೆ. ಇವರು ಹೊರಗೆ ದುಡಿಯುವುದರಿಂದ ಇವರ ಸಂಪರ್ಕ ಜಾಲ ವಿಸ್ತಾರವಾಗಿರುವುದರಿಂದ ಲಿಂಗಪತ್ತೆ ಮಾಡುವ ಭ್ರಷ್ಟ ವೈದ್ಯರಿಂದ ಲಿಂಗಪತ್ತೆ ಮಾಡಿಸುತ್ತಾರೆ. ಆಗ ಹೆಣ್ಣು ಭ್ರೂಣವಾದರೆ ಹತ್ಯೆ ಮಾಡುತ್ತಾರೆ. ಇದು ಲಿಂಗಾನುಪಾತ ಕಡಿಮೆಯಾಗಲು ಕಾರಣವಾಗಿದೆ.

ಮಹಿಳೆಯರು ಹೊರಗಿನ ದುಡಿಮೆಯನ್ನು ಮಾಡಿದರೂ ಅವರು ಮತ್ತೆ ಗೃಹಕೃತ್ಯಗಳನ್ನು ಮಾಡಬೇಕಾದ ಅನಿವಾರ್ಯತೆಯಿದೆ. ಇದರಿಂದ ಮಹಿಳೆಯರು ಹೆಚ್ಚುಕಾಲ ದುಡಿಮೆಯಲ್ಲಿ ತೊಡಗಿದಂತಾಗುತ್ತದೆ. ಇಂತಹ ದುಡಿಮೆಯ ದಣಿವೆಯಿಂದ ಮಾನಸಿಕ ಒತ್ತಡ ಮತ್ತು ದೈಹಿಕ ದುರ್ಬಲತೆಯನ್ನು ಅನುಭವಿಸುತ್ತಾರೆ. ಇಂತಹ ದೈಹಿಕ ದುರ್ಬಲತೆಗೆ ಪೌಷ್ಠಿಕತೆಯ ಅಗತ್ಯವಿರುತ್ತದೆ. ಕಡುಬಡವರಾದ ಮುಕ್ರಿಯರಿಗೆ ಪೌಷ್ಠಿಕ ಆಹಾರ ಸೇವನೆ ಮಾಡುವುದು ಸಾಧ್ಯವಾಗುವುದಿಲ್ಲ. ಇದರಿಂದ ಆರೋಗ್ಯ ಹದಗೆಟ್ಟು ಮಹಿಳೆಯರ ಮರಣ ಪ್ರಮಾಣ ಏರಿಕೆಯಾವುದು ಸಾಧ್ಯತೆಯಿದೆ. ಮುಂದುವರೆದು ಇವರು ಕೂಲಿ ಕೆಲಸದಲ್ಲಿ ತೊಡಗಿಕೊಂಡಿರುವುದರಿಂದ ಹೆಚ್ಚುಮಕ್ಕಳನ್ನು ಹೆತ್ತದೆ ಒಂದೇರಡು ಮಕ್ಕಳನ್ನು ಹೇರುವ ಬಯಕೆಯನ್ನು ಹೊಂದಿ ಅಲ್ಲದೆ ಶಿಕ್ಷಿತರಾದ ಕಾರಣಕ್ಕೆ ಕುಟುಂಬ ಯೋಜನೆಯನ್ನು ಪಾಲಿಸಲು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ಮುಂದಾಗುತ್ತಾರೆ. ಆದರೆ ಶಸ್ತ್ರ ಚಿಕಿತ್ಸೆಯನ್ನು ಮಹಿಳೆಯರು ಮಾಡಿಸಿಕೊಂಡಿದ್ದು ಸಂದರ್ಶನದಲ್ಲಿ ತಿಳಿದಿದೆ. ಇದು ಕೂಡ ಮಹಿಳೆಯರನ್ನು ದೈಹಿಕ ದುರ್ಬಲರನ್ನಾಗಿ ಮಾಡುತ್ತದೆ. ಏಕೆಂದರೆ ಶಸ್ತ್ರ ಚಿಕಿತ್ಸೆಯ ನಂತರ ಕಠಿಣ ಪರಿಶ್ರಮದಲ್ಲಿ ತೊಡಗಿಕೊಳ್ಳುವಂತಿಲ್ಲ ಎಂದು

ವೈದ್ಯರು ಸಲಹೆ ನೀಡಿದರೂ ಕಡಬಡವರಾದ ಮುಕ್ರಿ ಮಹಿಳೆಯರಿಗೆ ಅದು ಅನಿವಾರ್ಯವಾಗಿದೆ. ಇದು ಕೂಡ ಆರೋಗ್ಯ ಕೆಡಿಸುತ್ತದೆ.

ಹೊರಗಿನ ದುಡಿಮೆಯ ಅವಕಾಶಗಳಿಂದ ಮತ್ತು ಶೈಕ್ಷಣಿಕ ಮಟ್ಟದ ಸುಧಾರಣೆಗಳಿಂದ ಈ ಊರುಗಳಲ್ಲಿಯ ಮುಕ್ರಿಯರು ಆಧುನಿಕತೆಯ ಪ್ರಭಾವಕ್ಕೆ ಒಳಗಾಗುತ್ತಿರುವುದು ಕ್ಷೇತ್ರಕಾರ್ಯದಲ್ಲಿ ಅವಲೋಕಿಸಲಾಗಿದೆ. ಆಧುನಿಕತೆಯ ಪ್ರಭಾವಕ್ಕೆ ಒಳಗಾಗುತ್ತಿದ್ದಂತೆ ಬುಡಕಟ್ಟು ಮೂಲದ ಮಾತೃಪ್ರಧಾನ ವ್ಯವಸ್ಥೆಯ ಆಚರಣೆಗಳಿಂದ, ಮೌಲ್ಯಗಳಿಂದ ಇಲ್ಲಿಯ ಮುಕ್ರಿಯರು ಸಾವಧಾನವಾಗಿ ದೂರಸರಿಯುತ್ತಿದ್ದಾರೆ. ಕಾರಣ ಮುಕ್ರಿಯರಲ್ಲಿ ಲಿಂಗ ಅಸಮಾನತೆಯು ತಲೆಯೆತ್ತಿದೆ ಎಂಬುದು ಕ್ಷೇತ್ರಕಾರ್ಯದಲ್ಲಿ ತಿಳಿದುಬಂದಿದೆ. ಇಲ್ಲಿ ಪುರುಷರ ಪ್ರಾಧಾನ್ಯತೆಯಿಂದ ಗಂಡು ಮಗುವಿನ ಬಯಕೆ ಅತಿಯಾಗಿರುವುದು ಸಂದರ್ಶನದಲ್ಲಿ ಕಂಡುಕೊಳ್ಳಲಾಗಿದೆ. ಮುಂದುವರೆದು ಹಿಂದೂ ಧರ್ಮದ ಮೌಲ್ಯಗಳಾದ ಗಂಡು ಮಗನಿಂದಲೇ ಮೋಕ್ಷ ಪ್ರಾಪ್ತಿಯಾಗುತ್ತದೆ. ಗಂಡು ಮಗನೇ ಸದ್ಗತಿಗೆ ಕಾರಣನು. ಗಂಡುಮಗನಿಂದಲೇ ಎಲ್ಲಾ ಶಾಸ್ತ್ರಗಳು ನಡೆಯಬೇಕು ಇತ್ಯಾದಿ ಅಂಶಗಳ ಪ್ರಭಾವಕ್ಕೆ ಒಳಗಾಗಿರುವುದನ್ನು ಕಂಡುಕೊಳ್ಳಲಾಗಿದೆ. ಇದರಿಂದ ಬುಡಕಟ್ಟು ಮೂಲದ ಪ್ರಭಾವಗಳಿಂದ ವಿಮುಖರಾಗುತ್ತಿರುವುದು ಕ್ಷೇತ್ರಕಾರ್ಯದಿಂದ ಸ್ಪಷ್ಟಪಡಿಸಲಾಗಿದೆ.

ವಾಲಗಳ್ಳಿ, ಮಿರ್ಜಾನ ಮತ್ತು ಹಳದೀಪುರದಲ್ಲಿ ಮುಕ್ರಿಯರು ಹೆದ್ದಾರಿಯ ಮೇಲಿರುವುದರಿಂದ ಶೈಕ್ಷಣಿಕ ಮಟ್ಟದಲ್ಲಾದ ಸುಧಾರಣೆ, ಸಾಕ್ಷರತೆ ಏರಿಕೆ, ದುಡಿಯುವ ಹೊಸ ಅವಕಾಶಗಳು ಇವರನ್ನು ಆಧುನಿಕತೆಯ ಪ್ರಭಾವಕ್ಕೆ ಒಳಗಾಗುವಂತೆ ಮಾಡಿವೆ. ಆ ಮುಕ್ರಿಯರು ಆಧುನಿಕತೆಯ ಪ್ರಭಾವಕ್ಕೆ ಒಳಗಾಗುವಂತೆ ಮಾಡಿವೆ. ಆ ಮುಕ್ರಿಯರು ಆಧುನಿಕತೆಗೆ ಹೊಂದಿಕೊಂಡಂತೆ ಲಿಂಗಾನುಪಾತದಲ್ಲಿ ಇಳಿಕೆಯಾಗುತ್ತಿರುವುದನ್ನು ಇವುಗಳು ಸೂಚಿಸುತ್ತವೆ.

ಸಮೀಕ್ಷೆಗೊಳಪಡಿಸಿದ ಮುಕ್ರಿ ಸಮುದಾಯದ ಲಿಂಗಾನುಪಾತದಲ್ಲಿ ವಾಲಗಳ್ಳಿ, ಮಿರ್ಜಾನ, ಹಳದೀಪುರ ಅತ್ಯಂತ ಕಡಿಮೆ ಲಿಂಗಾನುಪಾತವಿದ್ದರೆ ಕಲಬಾಗ ಮತ್ತು ದಿವಗಿಯಲ್ಲಿ ಪುರುಷರಿಗೆ ಸಮನಾಗಿ ಮಹಿಳೆಯರ ಸಂಖ್ಯೆ ಇರುವುದು ಕಂಡುಬರುತ್ತದೆ. ಆದರೆ ಕುಮಟಾ ತಾಲೂಕಿನ ಕುಮಟಾ, ಕೊಜಳ್ಳಿ, ಗೋಕರ್ಣ, ಹೆಗೆಡೆ ಹಾಗೂ ಹೊನ್ನಾವರ ತಾಲೂಕಿನ ಕರ್ಕಿ, ಕಡತೋಕ, ಚಂದಾವರ, ಧಾರೇಶ್ವರ, ನೀವಿಲುಗೋಣ, ಮುಗ್ವಾ, ಹೊಸಕುಳಿ ಇವೆಲ್ಲ ಊರುಗಳಲ್ಲಿ ಲಿಂಗಾನುಪಾತ ಅಧಿಕವಾಗಿರುವುದು ಕಂಡುಬರುತ್ತದೆ.

ಲಿಂಗಾನುಪಾತ ಅಧಿಕವಾಗಿರುವ ಈ ಊರುಗಳಲ್ಲಿಯ ಮುಕ್ರಿಯ ನೆಲೆಗಳು ಬೆಟ್ಟದ ತಳದಲ್ಲಿ, ಹಳ್ಳದ ದಡದಲ್ಲಿ, ಹೊಳೆಯ ಸಮೀಪದಲ್ಲಿ ಹಾಗೂ ಕಾಡಿಗೆ ಹತ್ತಿರದಲ್ಲಿರುವುದು

ಕಂಡುಬರುತ್ತದೆ. ಈ ನೆಲೆಗಳಲ್ಲಿರುವ ಮುಕ್ರಿಯರ ಮೇಲು ಆಧುನಿಕತೆಯ ಪರಿಚಯ ಮತ್ತು ಪ್ರಭಾವವಾಗಿದೆ. ಆದರೂ ಇವರು ತಮ್ಮ ಬುಡಕಟ್ಟು ಮೂಲದ ಆಚರಣೆಗಳು ಮತ್ತು ಮೌಲ್ಯಗಳನ್ನು ಬಿಟ್ಟಿರದೆ ಇರುವುದು ಕಂಡುಬಂದಿದೆ. ಜೊತೆಗೆ ಇವರು ಆಧುನಿಕತೆಯ ಕೆಲವು ಅಂಶಗಳ ಪ್ರಭಾವಕ್ಕೊಳಗಾಗಿರುವುದನ್ನು ಕ್ಷೇತ್ರಕಾರ್ಯದಲ್ಲಿ ಅವಲೋಕಿಸಲಾಗಿದೆ. ಇವರಲ್ಲಿ ವಾಲಗಳ್ಳಿ, ಮಿರ್ಜಾನ, ಹಳದೀಪುರಗಳಲ್ಲಿ ಕಂಡುಬರುವ ಸಾಕ್ಷರತೆಯ ಏರಿಕೆ ಮತ್ತು ಶೈಕ್ಷಣಿಕ ಮಟ್ಟದ ಸುಧಾರಣೆಯು ಇಲ್ಲಿ ಕಂಡುಬರುವುದಿಲ್ಲ. ಅಲ್ಲದೆ ಇಲ್ಲಿಯ ಮುಕ್ರಿಯರ ಪಾರಂಪರಿಕ ಕೃಷಿಕೂಲಿ, ಭೂಮಾಲಿಕರ ಅಥವಾ ಮೇಲ್ಜಾತಿಯ ಮನೆಗಳಲ್ಲಿ ಜೀತದಿಂದ ಇವರಿಗೆ ಹೊರಗೆ ಬರಲು ಸಾಧ್ಯವಾಗಿದೆ. ಕೆಲವರು ಭೂಮಾಲಿಕರ ಮತ್ತು ಮೇಲ್ಜಾತಿಯವರ ಮನೆಯ ಜೀತ ಬಿಟ್ಟಿದ್ದಾರೆ. ಆದರೂ ಸ್ಥಳೀಯವಾಗಿ ದೊರೆಯುವ ಕೆಲಸಗಳಲ್ಲಿ, ದುಡಿಮೆಯಲ್ಲಿ ತೊಡಗಿಕೊಂಡಿದ್ದಾರೆ. ಅಂದರೆ ತಾವು ನೆಲೆಸಿರುವ ಪ್ರದೇಶದಲ್ಲಿಯ ಕೃಷಿಕೂಲಿ ಮತ್ತು ಇತರ ಕೂಲಿ ಕೆಲಗಳಲ್ಲಿ ತೊಡಗಿಕೊಂಡಿದ್ದಾರೆ ತಮ್ಮ ನೆಲೆಯಿಂದ ಹೊರಗೆ ಬರಲು ಅಲ್ಲಿಯ ಮುಕ್ರಿಯರಿಗೆ ಸಾಧ್ಯವಾಗಿಲ್ಲ. ಕಾರಣ ಇವರಲ್ಲಿ ಬುಡಕಟ್ಟು ಮೂಲದ ಆಚರಣೆಗಳು ಮತ್ತು ಮೌಲ್ಯಗಳು ದಟ್ಟವಾಗಿ ಉಳಿದುಕೊಂಡಿರುವುದಕ್ಕೆ ಕಾರಣವಾಗಿದೆ. ಆದ್ದರಿಂದ ಇವರಲ್ಲಿ ಮಾತೃಪ್ರಧಾನ ವ್ಯವಸ್ಥೆ ಇನ್ನೂ ಜೀವಂತವಾಗಿದೆ. ಇದರಿಂದ ಈ ನೆಲೆಗಳಲ್ಲಿ ಮುಕ್ರಿಯರಲ್ಲಿ ಹೆಣ್ಣುಮಕ್ಕಳಿಗೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತಾರೆ. ಇಲ್ಲಿ ಯಾವುದೇ ನಿರ್ಬಂಧಗಳಲ್ಲದೆ ಮಹಿಳೆಯರು ಮುಕ್ತ ಅವಕಾಶಗಳನ್ನು ಹೊಂದಿದ್ದಾರೆ. 'ವಾಸ್ತವವಾಗಿ ಸಮಾಜದಲ್ಲಿ ಅವಕಾಶಗಳು ಪುರುಷರಿಗೆ ಸಮಾನವಾಗಿ ಮಹಿಳೆಯರಿಗೆ ಇದ್ದ ಪಕ್ಷದಲ್ಲಿ ಅದು ಸಾವಿರಕ್ಕಿಂತ ಅಧಿಕವಿರಬೇಕು'.[೩] ಇದರಂತೆ ಲಿಂಗಾನುಪಾತವು ಈ ನೆಲೆಗಳಲ್ಲಿ ಅಧಿಕವಾಗಿದೆ.

ಈ ರೀತಿಯ ಅವಕಾಶಗಳು ಮಹಿಳೆಯರಿಗೆ ಮುಕ್ತವಾಗಿದ್ದರೂ ಇವರಲ್ಲಿಯು ಕೂಡ ಪುರುಷ ಪ್ರಧಾನ ವ್ಯವಸ್ಥೆಯ ಪ್ರಭಾವದಿಂದ ದೂರ ಉಳಿದಿಲ್ಲ. ಇವರು ಕೂಡ ಗಂಡುಮಗುವಿನ ಬಯಕೆಯನ್ನು ಹೊಂದಿದ್ದಾರೆ. ಆದರೆ ಇವರಿಗೆ ಹೆಣ್ಣುಮಕ್ಕಳನ್ನು ಹೆತ್ತು ಹೇರುವುದು ಹೊರೆಯಾಗಿಲ್ಲ. 'ದೇವರು ಎಷ್ಟು ಮಕ್ಕಳು ಕೊಡುತ್ತಾನೆ ಅಷ್ಟು ಮಕ್ಕಳನ್ನು ನಾವು ಹೇರುತ್ತೆವೆ. ದೇವರ ಕೊಟ್ರೆ ನಾವೇಕೆ ಬೇಡ ಏನ್ನಬೇಕು' ಎನ್ನುವುದನ್ನು ಸಂದರ್ಶನದಲ್ಲಿ ಕಂಡುಕೊಳ್ಳಲಾಗಿದೆ. ಇದರಿಂದ ಸಂತಾನೋತ್ಪತ್ತಿ ಪ್ರಮಾಣ ಹೆಚ್ಚಿನ ಮಟ್ಟದಲ್ಲಿರುತ್ತದೆ. ಇದರಿಂದ ದಂಪತಿಗಳು ಗಂಡುಮಗುವಾಗುವವರೆಗೂ ಮಕ್ಕಳನ್ನು ಪಡೆಯುತ್ತಿರುತ್ತಾರೆ. ಅಲ್ಲದೆ ಈ ನೆಲೆಗಳಲ್ಲಿಯೆ ಮುಕ್ರಿಯರಲ್ಲಿ ಬಾಲ್ಯವಿವಾಹ ಪ್ರಮಾಣ ಅಧಿಕವಾಗಿದೆ. ಇದು ಕೂಡ ಸಂತಾನೋತ್ಪತ್ತಿ ಪ್ರಮಾಣ ಅಧಿಕವಾಗಲು ಮತ್ತು ಲಿಂಗಾನುಪಾತದ ಹೆಚ್ಚಳಕ್ಕೆ ಕಾರಣವಾಗಿದೆ.

ಒಟ್ಟು ಜೀವನಾಯುಷ್ಯವನ್ನು ತೆಗೆದುಕೊಂಡರೆ ಮಹಿಳೆಯರ ಜೀವನಾಯುಷ್ಯವು ಪುರುಷರ ಜೀವನಾಯುಷ್ಯಕ್ಕಿಂತ ಅಧಿಕವಾಗಿರುತ್ತದೆ.[೪] ಕ್ಷೇತ್ರಕಾರ್ಯದಲ್ಲಿ ಅತ್ಯಂತ ಹೆಚ್ಚು ವಯಸ್ಸಾದವರು ಮಹಿಳೆಯರಿರುವುದು ಕಂಡುಬಂದಿದೆ. ವೃದ್ಧರಲ್ಲಿ ಹೆಚ್ಚು ವಯಸ್ಸಿನವರು ಅಜ್ಜಿಯರೆ ಇದ್ದರೆ ವಿನಹ ಅಜ್ಜಂದಿರ ಪ್ರಮಾಣ ಕಡಿಮೆಯಾಗಿತು. ಕರ್ಕಿ, ಮುಗ್ವಾ ಇಂತಹ ಹೆಚ್ಚು ವಯಸ್ಸಿನ ಅಜ್ಜಿಯರು ಇರುವುದು ಕಂಡಿದೆ. ಇದರಿಂದ ಮುಕ್ರಿಯರಲ್ಲಿ ಮಹಿಳೆಯರ ಜೀವನಾಯುಷ್ಯ ಜಾಸ್ತಿ ಆಗಿದೆ. ಇದು ಕೂಡ ಲಿಂಗಾನುಪಾತ ಹೆಚ್ಚಳಕ್ಕೆ ಕಾರಣವಾಗಿದೆ.

ಈ ನೆಲೆಗಳಲ್ಲಿ ವಾಸಿಸುವ ಮುಕ್ರಿಯರು ಪುರುಷ ಪ್ರಧಾನ ಮೌಲ್ಯಗಳಿಗೆ ಒಳಗಾದರೂ ಮಾತೃಪ್ರಧಾನ ವ್ಯವಸ್ಥೆಯ ಅಂತರ್ಗತವಾಗಿ ಪೋಷಿಸಿಕೊಂಡು ಬರುತ್ತಿರುವುದನ್ನು ಲಿಂಗಾನುಪಾತದ ಹೆಚ್ಚಳವು ಸೂಚಿಸುತ್ತದೆ. ಅಲ್ಲದೆ ಇವರ ನೆಲೆಗಳಲ್ಲಿಯ ಭೌಗೋಳಿಕ ವಾತಾವರಣವು ಇದಕ್ಕೆ ಸ್ಫೂರ್ತಿಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಸಮೀಕ್ಷೆಗೊಳಪಡಿಸಿದ ಮುಕ್ರಿ ಸಮುದಾಯದ ವಯೋಗುಂಪುಗಳು ಹೀಗಿವೆ. ಹುಟ್ಟಿದ ಮಗುವಿನಿಂದ ಹಿಡಿದು ೬ ವರ್ಷದೊಳಗಿನ ಮಕ್ಕಳು, ಆರು ವರ್ಷದಿಂದ

ಕೋಷ್ಟಕ ೫.೭. ಸಮೀಕ್ಷೆಗೊಳಪಟ್ಟ ಮುಕ್ರಿ ಸಮುದಾಯದ ಲಿಂಗವಾರು ವಯೋಗುಂಪುಗಳ ವಿವರ

ವಯೋಗುಂಪು	ಕುಮುಟಾ			ಹೊನ್ನಾವರ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೦-೬	೬೬	೪೭	೧೧೩	೯೦	೯೧	೧೮೧
೬-೧೭	೧೩೩	೧೪೩	೨೭೬	೨೦೬	೨೦೦	೪೦೬
೧೮-೪೦	೪೬೯	೫೦೮	೯೭೭	೫೫೬	೬೧೦	೧೧೬೬
೪೧-೬೦	೨೦೩	೨೦೭	೪೧೦	೨೧೬	೨೫೫	೪೭೧
೬೧+ರ ಮೇಲ್ಪಟ್ಟವರು	೬೪	೭೬	೧೪೦	೯೮	೮೧	೧೭೯
ಒಟ್ಟು	೯೩೫	೯೮೧	೧೯೧೬	೧೧೬೬	೧೨೩೭	೨೪೦೩

೧೭ ವರ್ಷದೊಳಗಿನ ಮಕ್ಕಳು, ೧೮ ವರ್ಷಕ್ಕೆ ಕಾಲಿಸಿದವರಿಂದ ಹಿಡಿದು ೪೦ ವರ್ಷದೊಳಗಿನವರು. ೪೧ ವರ್ಷದಿಂದ ೬೦ ವರ್ಷದೊಳಗಿನ ಪ್ರಬುದ್ಧರು, ೬೦ ವರ್ಷದ ಮೇಲಿರುವ ವಯೋವೃದ್ಧರು ಎಂದು ಪರಿಗಣಿಸಲಾಗಿದೆ.

ಕುಮಟಾ ತಾಲೂಕು

ಕುಮಟಾ ತಾಲೂಕಿನ ಮುಕ್ರಿಯರ ೦-೬ ವಯೋಮಾನದ ಒಟ್ಟು ಮಕ್ಕಳ ಸಂಖ್ಯೆಯು ೧೧೩, ಇದರಲ್ಲಿ ೬೬ ಗಂಡು, ೪೭ ಹೆಣ್ಣುಮಕ್ಕಳಿದ್ದಾರೆ. ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಶೇಕಡ ೫.೮೯ ಇವೆ.

ಆರು ವರ್ಷದ ಮೇಲ್ಪಟ್ಟು ೧೭ನೇ ವಯಸ್ಸಿನೊಳಗಿನ ಮಕ್ಕಳು ಕುಮಟಾ ತಾಲೂಕಿನಲ್ಲಿ ಒಟ್ಟು ೨೭೬ ಇವೆ. ಇದರಲ್ಲಿ ಗಂಡುಮಕ್ಕಳು ೧೩೩, ಹೆಣ್ಣುಮಕ್ಕಳು ೧೪೩ ಇವೆ. ಅಂದರೆ ಕುಮಟಾ ತಾಲೂಕಿನ ಮುಕ್ರಿ ಸಮುದಾಯದ ೬ರ ಮೇಲ್ಪಟ್ಟ ೧೭ರ ಒಳಗಿನ ಒಟ್ಟು ಪ್ರಮಾಣವು ಶೇಕಡ ೧೪.೪೦ ರಷ್ಟಿದೆ.

೧೮-೪೦ರ ಮಧ್ಯದ ವಯೋಮಾನದವರ ಸಂಖ್ಯೆಯು ಒಟ್ಟು ಸಂಖ್ಯೆಯು ೯೭೭, ಇದರಲ್ಲಿ ಪುರುಷರು ೪೬೯, ಮಹಿಳೆಯರು ೫೦೮ ಜನರಿದ್ದಾರೆ. ತಾಲೂಕಿನ ಮುಕ್ರಿ ಜನಸಂಖ್ಯೆಯಲ್ಲಿ ಈ ವಯೋಮಾನದವರು ಶೇಕಡ ೫೦.೯೯ರಷ್ಟಿದ್ದಾರೆ.

ಕುಮಟಾ ತಾಲೂಕಿನ ೪೦+-೬೦ರ ವಯೋಮಾನದ ಮುಕ್ರಿಯವರ ಒಟ್ಟು ಸಂಖ್ಯೆಯು ೪೧೦ ಇದೆ. ಇದರಲ್ಲಿ ಪುರುಷರು ೨೦೩ ಹಾಗೂ ಮಹಿಳೆಯರು ೨೦೭ ಜನರಿದ್ದಾರೆ. ತಾಲೂಕಿನ ಮುಕ್ರಿ ಜನಸಂಖ್ಯೆಯಲ್ಲಿ ಈ ವಯೋಮಾನದವರು ಶೇಕಡ ೨೧.೪೦ ರಷ್ಟಿದ್ದಾರೆ. ಕುಮಟಾದಲ್ಲಿ ಶೇಕಡ ೪೫.೮೫ ಪುರುಷರು ಹಾಗೂ ಶೇಕಡ ೫೪.೧೫ರಷ್ಟು ಮಹಿಳೆಯರಿದ್ದಾರೆ.

೬೦ ವರ್ಷಗಳಿಗಿಂತ ಮೇಲ್ಪಟ್ಟ ವಯೋಮಾನದ ಮುಕ್ರಿಯರು ಕುಮಟಾ ತಾಲೂಕಿನಲ್ಲಿ ಒಟ್ಟು ೧೪೦ ಜನರಿದ್ದಾರೆ. ಇದರಲ್ಲಿ ಪುರುಷರು ೬೪, ಮಹಿಳೆಯರು ೭೬ ಜನರಿದ್ದಾರೆ. ಅಂದರೆ ಶೇಕಡ ೭.೩೦ ರಷ್ಟಿದ್ದಾರೆ.

ಹೊನ್ನಾವರ ತಾಲೂಕಿನ ಮುಕ್ರಿಯರ ವಯೋಗುಂಪುವಾರು ಜನಸಂಖ್ಯೆ ವಿವರ

ಹೊನ್ನಾವರ ತಾಲೂಕಿನ ಮುಕ್ರಿಯರ ೦-೬ ವಯೋಮಾನದ ಒಟ್ಟು ಮಕ್ಕಳ ಸಂಖ್ಯೆಯು ೧೮೧, ಇದರಲ್ಲಿ ೯೦ ಗಂಡು, ೯೧ ಹೆಣ್ಣುಮಕ್ಕಳಿದ್ದಾರೆ. ತಾಲೂಕಿನ ಮುಕ್ರಿಯರ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಶೇಕಡ ೭.೫೩ ರಷ್ಟು ಇರುವವರು.


ಆರು ವರ್ಷದ ಮೇಲ್ಪಟ್ಟು ೧೭ನೇ ವಯಸ್ಸಿನೊಳಗಿನ ಮಕ್ಕಳು ಹೊನ್ನಾವರ ತಾಲೂಕಿನಲ್ಲಿ ಒಟ್ಟು ೪೦೬ ಇವೆ. ಇದರಲ್ಲಿ ಗಂಡುಮಕ್ಕಳು ೨೦೬, ಹೆಣ್ಣುಮಕ್ಕಳು ೨೦೦ ಇವೆ. ಅಂದರೆ ಹೊನ್ನಾವರ ತಾಲೂಕಿನ ಮುಕ್ರಿ ಸಮುದಾಯದ ೬ರ ಮೇಲ್ಪಟ್ಟ ೧೭ರ ಒಳಗಿನ ಒಟ್ಟು ಪ್ರಮಾಣವು ಶೇಕಡ ೧೬.೮೯ ರಷ್ಟಿದೆ.

೧೮-೪೦ರ ಮಧ್ಯದ ವಯೋಮಾನದವರ ಸಂಖ್ಯೆಯು ಒಟ್ಟು ಸಂಖ್ಯೆಯು ೧೧೬೬ ಇದರಲ್ಲಿ ಪುರುಷರು ೫೫೬, ಮಹಿಳೆಯರು ೬೧೦ ಜನರಿದ್ದಾರೆ. ತಾಲೂಕಿನ ಮುಕ್ರಿ ಜನಸಂಖ್ಯೆಯಲ್ಲಿ ಈ ವಯೋಮಾನದವರು ಶೇಕಡ ೪೮.೫೨ ರಷ್ಟಿದ್ದಾರೆ.

ಹೊನ್ನಾವರ ತಾಲೂಕಿನ ೪೦+-೬೦ರ ವಯೋಮಾನದ ಮುಕ್ರಿಯವರ ಒಟ್ಟು ಸಂಖ್ಯೆಯು ೪೭೧ ಇದೆ. ಇದರಲ್ಲಿ ಪುರುಷರು ೨೧೬ ಹಾಗೂ ಮಹಿಳೆಯರು ೨೨೫ ಜನರಿದ್ದಾರೆ. ತಾಲೂಕಿನ ಮುಕ್ರಿ ಜನಸಂಖ್ಯೆಯಲ್ಲಿ ಈ ವಯೋಮಾನದವರು ಶೇಕಡ ೧೯.೬೦ ರಷ್ಟಿದ್ದಾರೆ.

೬೦ ವರ್ಷಗಳಿಗಿಂತ ಮೇಲ್ಪಟ್ಟ ವಯೋಮಾನದ ಮುಕ್ರಿಯರು ಹೊನ್ನಾವರ ತಾಲೂಕಿನಲ್ಲಿ ಒಟ್ಟು ೧೭೯ ಜನರಿದ್ದಾರೆ. ಇದರಲ್ಲಿ ಪುರುಷರು ೯೮, ಮಹಿಳೆಯರು ೮೧ ಜನರಿದ್ದಾರೆ. ಅಂದರೆ ಶೇಕಡ ೭.೪೪ ರಷ್ಟಿದ್ದಾರೆ.

ವೃತ್ತಚಿತ್ರ ೫.೨. ಮುಕ್ರಿ ಸಮುದಾಯದ ಜನಸಂಖ್ಯೆ



ಸಮೀಕ್ಷೆಗೊಳಪಡಿಸಿದ ಮುಕ್ರಿ ಸಮುದಾಯದ ಎರಡು ತಾಲೂಕುಗಳ ವಯೋಗುಂಪುವಾರು ಜನಸಂಖ್ಯೆಯನ್ನು ನೋಡಿದಾಗ ೦-೬ ವರ್ಷದೊಳಗಿನ ಹಾಗೂ ೬-೧೭ ವರ್ಷದ ಮಕ್ಕಳ ಸಂಖ್ಯೆ ಕಡಿಮೆಯಿರುವುದು ತಿಳಿಯುತ್ತದೆ. ಇದು ಜನಸಂಖ್ಯಾ ನಿಯಂತ್ರಣವನ್ನು ಸೂಚಿಸುತ್ತದೆ. ಈ ವಯೋಮಾನದವರ ಪ್ರಮಾಣವನ್ನು ಎರಡು ತಾಲೂಕುಗಳನ್ನು ತುಲನೆ ಮಾಡಿ ನೋಡಿದಾಗ ಹೊನ್ನಾವರ ತಾಲೂಕಿನಲ್ಲಿ ಸ್ವಲ್ಪ ಪ್ರಮಾಣ ಹೆಚ್ಚಳವಿರುವುದು ಕಂಡುಬರುತ್ತದೆ. ಕಾರಣ ಹೊನ್ನಾವರ ತಾಲೂಕಿನಲ್ಲಿ ಮುಕ್ರಿಗಳು ನೆಲೆಸಿರುವ ಊರುಗಳು ಕಾಡಿನ ಸಮೀಪ, ಬೆಟ್ಟದ



ತಳದಲ್ಲಿರುವ ಗ್ರಾಮಗಳಲ್ಲಿ ನೆಲೆಸಿದ್ದಾರೆ. ಇವರು ಕೃಷಿ ಮತ್ತು ಕೃಷಿ ಸಂಬಂಧಿತ ವೃತ್ತಿಗಳಲ್ಲಿ ತೊಡಗಿಕೊಂಡಿದ್ದಾರೆ. ಅಲ್ಲದೆ ಮುಕ್ರಿಯರು ನೆಲೆಸಿರುವ ಕೆಲವು ಗ್ರಾಮಗಳು ಹೊನ್ನಾವರ ಪಟ್ಟಣದಿಂದ ದೂರ ಇವೆ. ಇದರಿಂದ ಜನನ ಪ್ರಮಾಣ ಕಡಿಮೆ ಇರುವ ಸಾಧ್ಯತೆಯಿದೆ.

ಆದರೆ ಹೊನ್ನಾವರ ತಾಲೂಕಿಗಿಂತ ಕುಮಟಾ ತಾಲೂಕಿನಲ್ಲಿ ೧೮-೪೦ ವರ್ಷದೊಳಗಿನ ಹಾಗೂ ೪೦-೬೦ ವರ್ಷದ ವಯೋಮಾನದವರು ಹೆಚ್ಚಾಗಿದ್ದಾರೆ. ೬೦+ ವರ್ಷಗಳ ಮೇಲ್ಪಟ್ಟ ವಯೋಮಾನದವರು ಎರಡು ತಾಲೂಕುಗಳಲ್ಲಿ ಒಂದೇ ಪ್ರಮಾಣದಲ್ಲಿದದರೂ ಹೊನ್ನಾವರದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಹೆಚ್ಚಳವಿದೆ. ಇದು ಇಲ್ಲಿ ಮರಣ ಪ್ರಮಾಣ ಹೆಚ್ಚಿರುವ ಸಾಧ್ಯತೆ ಇದೆ. ಏಕೆಂದರೆ ಇವರ ಬಡತನವು ಇವರು ಕಠಿಣವಾದ ದೈಹಿಕ ಶ್ರಮದಲ್ಲಿ ತೊಡಗಿಕೊಂಡಿರುವುದರ ಫಲವಾಗಿದೆ.

ಸಮುದಾಯದ ಪಾರಂಪರಿಕ ವೃತ್ತಿ

ಮುಕ್ರಿಯರು ಉತ್ತರಕನ್ನಡ ಜಿಲ್ಲೆಯ ಮೂಲಿಗರು. ಉತ್ತರಕನ್ನಡ ಜಿಲ್ಲೆಯ ಗುಡ್ಡಗಳ ಇಳಿಜಾರಿನಲ್ಲಿ ಕುಮ್ರಿ ಬೇಸಾಯವನ್ನು ಮಾಡುತ್ತಿದ್ದ ಈ ಸಮುದಾಯವನ್ನು ಅರಣ್ಯ ನೀತಿ, ಕಾಯ್ದೆಗಳು ಭೂಮಿಯಿಂದ ದೂರವಾಗುವಂತೆ ಮಾಡಿತು. ನಿಮ್ಮ ಮೂಲ ಕಸುಬೇನು ಎಂದು ಮುಕ್ರಿಗಳನ್ನು ಕೇಳಿದರೆ ತಮ್ಮ ಮೂಲ ವೃತ್ತಿಯೇ ಜೀತವೆಂದು ಹೇಳುತ್ತಾರೆ. ಭೂಒಡೆಯರಲ್ಲಿ ಜೀತದ ಕೂಲಿಗಳಾಗಿ ಜೀವನ ಸಾಗಿಸುವುದೇ ಮೂಲವೆಂದು ನಂಬಿರುವ ಜನರಿವರು. ತುಂಬಾ ಹಳೆಯ ತಲೆಮಾರಿನ ವ್ಯಕ್ತಿಗಳನ್ನು ಕೇಳಿದಾಗ ತಮ್ಮ ಅಜ್ಜ, ಮುತ್ತಜ್ಜರು ಕಾಡಿನಲ್ಲಿ ಕುಮ್ರಿ ಬೇಸಾಯ ಮಾಡಿ ಅದರಿಂದ ಬರುತ್ತಿದ್ದ ರಾಗಿ ಮುಂತಾದ ಧಾನ್ಯಗಳಿಂದ ಜೀವನ ಮಾಡುತ್ತಿದ್ದರಂತೆ ಹಾಗೂ ಅರಣ್ಯ ಉತ್ಪನ್ನಗಳ ಸಂಗ್ರಹಣೆಯನ್ನು ಮಾಡಿ ಮಾರುತ್ತಿದ್ದರಂತೆ. ಬ್ರಿಟೀಷರು ಭಾರತಕ್ಕೆ ಬಂದು ಹೊಸ ಹೊಸ ಕಾನೂನುಗಳನ್ನು ಹುಟ್ಟುಹಾಕಿದ ತರುವಾಯ ತಾವು ಮತ್ತೊಬ್ಬರಲ್ಲಿ ಜೀತ ಮಾಡದೆ ಗತ್ಯಂತರವಿರಲಿಲ್ಲ ಎಂದು ಅಳಲನ್ನು ತೋಡಿಕೊಳ್ಳುತ್ತಾರೆ. ಕೃಷಿಭೂಮಿ ಇವರಿಂದ ದೂರವಾದರೂ ಕೃಷಿಯಿಂದ ಇವರು ದೂರವಾಗಿಲ್ಲ. ಇಂದಿಗೂ ಕೃಷಿಕೂಲಿಗಳಾಗಿ ಜೀವನ ಸಾಗಿಸುವವರ ಪ್ರಮಾಣವೇ ಇವರಲ್ಲಿ ಹೆಚ್ಚಿದೆ. ಮುಕ್ರಿ ಸಮುದಾಯದ ಕುರಿತು ಕೃತಿ ಬರೆದಿರುವ ಲೇಖಕರು ಅವರ ಮೂಲ ವೃತ್ತಿಯನ್ನು ಗುರುತಿಸಲು ಸಾಧ್ಯವಾಗಿಲ್ಲ ವೆನಿಸುತ್ತದೆ. 'ಮುಕ್ರಿ ಸಮುದಾಯಕ್ಕೆ ತನ್ನದೆಯಾದ ಕುಲಕಸುಬಾಗಲಿ ಅಥವಾ ಪಾರಂಪರಿಕ ವೃತ್ತಿಯಾಗಲಿ ಇಲ್ಲ. ಇವರ ಪಾರಂಪರಿಕ ವೃತ್ತಿ ಯಾವುದೆಂದರೆ ಒಡೆಯರ ಒಕ್ಕಲಾಗಿ ಬದುಕಿದ್ದು. ಹಾಗಾಗಿ ಪರ್ಯಾಯ ಕುಶಲ ಕೆಲಸಗಳು ಅವರನ್ನು ಸಿದ್ಧಿಸಿಲ್ಲ. ಅದಕ್ಕೆ ಬದಲಾಗಿ ಕೃಷಿ ಕೂಲಿಯಲ್ಲಿಯೇ ತಮ್ಮ ಸೂಕ್ಷ್ಮತೆಯನ್ನು ಮರೆಯಲು ಪ್ರಯತ್ನಿಸಿದ್ದಾರೆ.'[೫]

ಎಂದು ಮೋಹನ ಚಂದ್ರಗುತ್ತಿ ತಿಳಿಸುತ್ತಾರೆ. ಭೂಒಡೆಯರಿಗಿಂತ ಹೆಚ್ಚಾಗಿ ಕೃಷಿಯ ಬಗ್ಗೆ ತಿಳುವಳಿಕೆ ಭೂರಹಿತರಾದ ಮುಕ್ರಿಗಳಿಗಿದೆ. ಕೃಷಿಯಿಂದ ದೂರವಾಗದೆ ಅದಕ್ಕೆ ಪೂರಕವಾದ ಕೃಷಿಕೂಲಿಗೆ ಅಂಟಿಕೊಂಡಿರಲು ಪ್ರಾಯಶಃ ಅವರ ಮೂಲವೃತ್ತಿಯೇ ಕಾರಣವಾಗಿರುವ ಸಾಧ್ಯತೆಗಳು ಇವೆ. ಬಹುತೇಕ ಇವರ ಆಚರಣೆಗಳು ಕೃಷಿಸಂಬಂಧೀ ಆಚರಣೆ ಗಳಾಗಿರುವುದನ್ನು ಗಮನಿಸಬಹುದು.

ಸಮೀಕ್ಷೆಗೊಳಪಟ್ಟ ಕುಮಟಾ ಹಾಗೂ ಹೊನ್ನಾವರ ತಾಲೂಕುಗಳ ಮುಕ್ರಿಯರ ಕಾಯಕಾರ್ಹ ವಲ್ಲದ ಗುಂಪುಗಳ ವಿವರ

೦-೧೮ ವಯೋಮಾನದೊಳಗಿನ ಮಕ್ಕಳು ಭಾರತೀಯ ನಿಯಮದ ಪ್ರಕಾರ ಯಾವುದೇ ಕೆಲಸ ನಿರ್ವಹಿಸಲು ಅರ್ಹವಾದವರಲ್ಲ. ಈ ವಯೋಮಾನದ ಮಕ್ಕಳನ್ನು ಬಾಲಕರೆಂದು ಪರಿಗಣಿಸಲಾಗುತ್ತದೆ. ಹಾಗೆಯೇ ಭಾರತೀಯ ಸೇವಾ ನಿಯಮದ ಪ್ರಕಾರ ಸೇವಾ ನಿವೃತ್ತಿಯ ವಯಸ್ಸನ್ನು ೬೦ ವರ್ಷಗಳೆಂದು ನಿಗದಿಗೊಳಿಸಲಾಗಿದೆ.

ಕೋಷ್ಟಕ ೫.೮. ಸಮೀಕ್ಷೆಗೊಳಪಟ್ಟ ಕುಮಟಾ ಹಾಗೂ ಹೊನ್ನಾವರ ತಾಲೂಕುಗಳ ಮುಕ್ರಿಯರ ಕಾಯಕಾರ್ಹವಲ್ಲದ ಗುಂಪಗಳ ವಿವರ

ವಯೋಗುಂಪು	ಕುಮುಟಾ			ಹೊನ್ನಾವರ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೦-೧೮	೧೯೯	೧೯೦	೩೮೯	೨೯೭	೨೯೧	೫೮೮
೬೦+ರ ಮೇಲ್ಪಟ್ಟ	೬೪	೭೬	೧೪೦	೯೮	೮೧	೧೭೯
ಒಟ್ಟು	**೨೬೩**	**೨೬೬**	**೫೨೯**	**೩೯೫**	**೩೭೨**	**೭೬೭**

ಹೀಗಾಗಿ ೬೦ರ ವಯಸ್ಸನ್ನು ಮೀರಿದವರೂ ಸಹ ಯಾವುದೇ ವೃತ್ತಿಯನ್ನು ನಿಯಮಾನುಸಾರ ಮಾಡಲು ಬರುವುದಿಲ್ಲ. ಹೀಗಾಗಿ ಈ ಎರಡು ವಯೋಗುಂಪುಗಳನ್ನು ಕಾಯಕ ನಿರತರಾಗಲು ಅರ್ಹವಲ್ಲದ ಗುಂಪೆಂದೇ ಪರಿಗಣಿಸಲಾಗುತ್ತದೆ.

ಕುಮಟಾ ತಾಲೂಕಿನ ಮುಕ್ರಿಯರಲ್ಲಿ ೦-೧೮ರೊಳಗಿನ ವಯೋಮಾನದವರು ಒಟ್ಟು ೩೮೯ ಜನರಿದ್ದಾರೆ. ಇದರಲ್ಲಿ ೧೯೯ ಗಂಡು ಹಾಗೂ ೧೯೦ ಹೆಣ್ಣುಮಕ್ಕಳಿದ್ದಾರೆ. ಅರವತ್ತರ ಮೇಲ್ಪಟ್ಟ ವಯೋಮಾನದ ಮುಕ್ರಿಯರು ಈ ತಾಲೂಕಿನಲ್ಲಿ ಒಟ್ಟು ೧೪೦ ಜನರಿದ್ದಾರೆ. ಇದರಲ್ಲಿ ಪುರುಷರು ೬೪ ಹಾಗೂ ಮಹಿಳೆಯರು ೭೬ರಷ್ಟಿದ್ದಾರೆ. ಒಟ್ಟಾಗಿ ಹೇಳುವುದಾದರೆ ಎರಡೂ ಗುಂಪುಗಳು ಸೇರಿ ಒಟ್ಟು ೫೨೯ ಜನರಿದ್ದಾರೆ. ಇದರಲ್ಲಿ ಪುರುಷರು ೨೬೩ ಹಾಗೂ ಮಹಿಳೆಯರು ೨೬೬ ಜನರಿದ್ದಾರೆ.

ಹೊನ್ನಾವರ ತಾಲೂಕಿನಲ್ಲಿ ಮುಕ್ರಿಯರ ೦-೧೮ರೊಳಗಿನ ವಯೋಮಾನದವರು ಒಟ್ಟು ೫೮೭ ಜನರಿದ್ದಾರೆ. ಇದರಲ್ಲಿ ೨೯೬ ಗಂಡು ಹಾಗೂ ೨೯೧ ಹೆಣ್ಣುಮಕ್ಕಳಿದ್ದಾರೆ. ಅರವತ್ತರ ಮೇಲ್ಪಟ್ಟ ವಯೋಮಾನದ ಮುಕ್ರಿಯರು ಈ ತಾಲೂಕಿನಲ್ಲಿ ಒಟ್ಟು ೧೭೯ ಜನರಿದ್ದಾರೆ. ಇದರಲ್ಲಿ ಪುರುಷರು ೯೮ ಹಾಗೂ ಮಹಿಳೆಯರು ೮೧ ರಷ್ಟಿದ್ದಾರೆ. ಒಟ್ಟಾಗಿ ಹೇಳುವುದಾದರೆ ಎರಡೂ ಗುಂಪುಗಳು ಸೇರಿ ಒಟ್ಟು ೭೬೬ ಜನರಿದ್ದಾರೆ. ಇದರಲ್ಲಿ ಪುರುಷರು ೩೯೪ ಹಾಗೂ ಮಹಿಳೆಯರು ೩೭೨ ಜನರಿದ್ದಾರೆ.

ಕೋಷ್ಟಕ ೫.೯. ಸಮೀಕ್ಷೆಗೊಳಪಟ್ಟ ಕಾಯಕಾರ್ಹವಲ್ಲದ ಮುಕ್ರಿಯರ ಒಟ್ಟಾರೆ ಜನಸಂಖ್ಯೆ

ತಾಲೂಕು	ಗಂಡು	ಹೆಣ್ಣು	ಒಟ್ಟು
ಕುಮಟಾ	೨೬೩	೨೬೬	೫೨೯
ಹೊನ್ನಾವರ	೩೯೪	೩೭೨	೭೬೬
ಒಟ್ಟು	೬೫೭	೬೩೮	೧೨೯೫

ಕುಮಟಾ ಹಾಗೂ ಹೊನ್ನಾವರ ಎರಡೂ ತಾಲೂಕುಗಳನ್ನೊಳಗೊಂಡು ಇರುವ ಒಟ್ಟು ಜನಸಂಖ್ಯೆಯು ೪೩೧೯. ಇದರಲ್ಲಿ ಪುರುಷರು ೨೧೦೧ ಹಾಗೂ ಮಹಿಳೆಯರು ೨೨೧೮ ಜನರಿದ್ದಾರೆ. ಈ ಒಟ್ಟಾರೆ ಜನಸಂಖ್ಯೆಯಲ್ಲಿ ಕಾಯಕಾರ್ಹರಲ್ಲದವರು ಒಟ್ಟು ೧೨೯೫, ಇದರಲ್ಲಿ ಪುರುಷರು ೬೫೭ ಹಾಗೂ ಮಹಿಳೆಯರು ೬೩೮ ಜನರಿದ್ದಾರೆ.

ಮುಕ್ರಿಯರ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೨೯.೯೮ ರಷ್ಟು ಜನರು ಕಾಯಕ ನಿರತರಾಗಲು ಅರ್ಹರಾಗಿರುವುದಿಲ್ಲ. ಶೇಕಡ ೩೧.೨೭ ಪುರುಷರು ಹಾಗೂ ಶೇಕಡ ೨೮.೭೯ ಮಹಿಳೆಯರು ಕಾಯಕಾರ್ಹರಾಗಿರುವುದಿಲ್ಲ.

ಕೋಷ್ಟಕ ೫.೧೦. ಕಾಯಕಾರ್ಹರಾದ ಮುಕ್ರಿಯರ ಜನಸಂಖ್ಯೆ

ತಾಲೂಕು	ಗಂಡು	ಹೆಣ್ಣು	ಒಟ್ಟು
ಕುಮಟಾ	೬೭೨	೭೧೫	೧೩೮೭
ಹೊನ್ನಾವರ	೭೭೨	೮೬೫	೧೬೩೭
ಒಟ್ಟು	೧೪೪೪	೧೫೮೦	೩೦೨೪

೧೮ ವರ್ಷದ ಮೇಲ್ಪಟ್ಟು ಹಾಗೂ ೬೦ ವರ್ಷದವರೆಗಿನ ವಯೋಮಾನದವರು ಕಾಯಕ ನಿರತರಾಗಲು ಯೋಗ್ಯರೆಂದು ಪರಿಗಣಿಸಲಾಗಿದೆ. ಈ ರೀತಿ ಕಾಯಕಾರ್ಹವಾದವರಲ್ಲಿ ಕುಮಟಾ ತಾಲೂಕಿನ ಮುಕ್ರಿಯರು ಒಟ್ಟು ೧೩೮೭ ಜನರಿದ್ದಾರೆ. ಇದರಲ್ಲಿ ಪುರುಷರು ೬೭೨ ಹಾಗೂ ಮಹಿಳೆಯರು ೭೧೫ ಜನರಿದ್ದಾರೆ.

ಹೊನ್ನಾವರ ತಾಲೂಕಿನಲ್ಲಿ ಒಟ್ಟು ೧೬೩೭ ಜನರಿದ್ದಾರೆ. ಇದರಲ್ಲಿ ಪುರುಷರು ೭೭೨ ಹಾಗೂ ಮಹಿಳೆಯರು ೮೬೫ ಜನರಿದ್ದಾರೆ. ಒಟ್ಟಾರೆಯಾಗಿ ಎರಡೂ ತಾಲೂಕುಗಳ ಕಾಯಕಾರ್ಹವಾದ ಮುಕ್ರಿಯರ ಸಂಖ್ಯೆಯು ಒಟ್ಟು ೩೦೨೪ ಇದೆ. ಇದರಲ್ಲಿ ಪುರುಷರು ೧೪೪೪ ಹಾಗೂ ಮಹಿಳೆಯರು ೧೫೮೦ ರಷ್ಟಿದ್ದಾರೆ. ಅಂದರೆ ಎರಡೂ ತಾಲೂಕುಗಳನ್ನೊಳಗೊಂಡು ಕಾಯಕಾರ್ಹವಾದ ಮುಕ್ರಿಯರು ಶೇಕಡ ೭೦.೦೧ರಷ್ಟಿದ್ದಾರೆ. ಶೇಕಡ ೩೩.೪೩ ಪುರುಷರು ಹಾಗೂ ಶೇಕಡ ೩೬.೫೮ ಮಹಿಳೆಯರು ಕಾಯಕಾರ್ಹರಾಗಿದ್ದಾರೆ.

ಕಾಯಕಾರ್ಹವಲ್ಲದ ಮತ್ತು ಕಾಯಕಾರ್ಹವಾದ ಜನಸಂಖ್ಯೆಯನ್ನು ಲೆಕ್ಕ ಹಾಕುವುದಕ್ಕೆ ಜನಸಂಖ್ಯಾಶಾಸ್ತ್ರದಲ್ಲಿ ಅವಲಂಬನಾತ್ಮಕ ಅನುಪಾತ ಎಂಬ ಪರಿಕಲ್ಪನೆಯನ್ನು ಬಳಸಲಾಗುತ್ತದೆ. ಅವಲಂಬನಾತ್ಮಕ ಅನುಪಾತವೆಂದರೆ ೦–೧೮ ವರ್ಷಗಳ ವಯೋಮಾನದವರು ಮತ್ತು ೬೦ ವರ್ಷಗಳ ಮೇಲ್ಪಟ್ಟ ವಯೋಮಾದನವರನ್ನು ಒಟ್ಟು ಸೇರಿಸಿ ೧೮–೬೦ ವರ್ಷಗಳ ವಯೋಮಾನದವರಿಗೆ ಅನುಪಾತ ಮಾಡುವದೇ ಆಗಿದೆ. ಅಂದರೆ ಮುಕ್ರಿಯರಲ್ಲಿ ಕಾಯಕಾರ್ಹವಲ್ಲದ ಜನಸಂಖ್ಯೆಯನ್ನು ಕಾಯಕಾರ್ಹ ಜನಸಂಖ್ಯೆ ಜೊತೆಗೆ ಅನುಪಾತ ಮಾಡುವುದೇ ಆಗಿದೆ. ಇವರಲ್ಲಿ ಅವಲಂಬನಾತ್ಮಕ ಅನುಪಾತ ಅಧಿಕವಾಗಿದೆ. ಇದು ದುಡಿಯುವ ವರ್ಗದವರ ಸಂಖ್ಯೆ ಅಧಿಕವಾಗಿರುವುದು ಸೂಚಿಸುತ್ತದೆ. ದುಡಿಯುವ ಸಾಮರ್ಥ್ಯವುಳ್ಳವರ ಸಂಖ್ಯೆ ಅಧಿಕವಾಗಿದ್ದರೂ ಕೂಡ ಇವರಲ್ಲಿ ಬಡತನ ಎದ್ದು ಕಾಣುತ್ತಿರುವುದು ವಿಪರ್ಯಾಸ ಸಂಗತಿಯಾಗಿದೆ. ಇದು ಇವರು ಶ್ರೀಮಂತರಿಂದ ಶೋಷಣೆಗೆ ಒಳಗಾಗುತ್ತಿರುವುದನ್ನು ಸೂಚಿಸುತ್ತದೆ.

ಕೋಷ್ಟಕ ೫.೧೧. ಸಮೀಕ್ಷೆಗೊಳಪಟ್ಟ ಕುಮಟಾ ಮತ್ತು ಹೊನ್ನಾವರ ತಾಲೂಕುಗಳ ಕಾಯಕಾರ್ಹವಾದ ಹಾಗೂ ಕಾಯಕನಿರತರ ಗುಂಪಿನ ವಿವರ

ಕ್ರಸಂ	ತಾಲೂಕು	ಕಾಯಕಾರ್ಹರು			ಕಾಯಕನಿರತರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧.	ಕುಮಟಾ	೬೭೨	೭೧೫	೧೩೮೭	೬೯೪	೭೩೫	೧೪೨೯
೨.	ಹೊನ್ನಾವರ	೭೭೨	೮೬೫	೧೬೩೭	೭೯೬	೮೮೫	೧೬೮೧
	ಒಟ್ಟು	೧೪೪೪	೧೫೮೦	೩೦೨೪	೧೪೯೦	೧೬೨೦	೩೧೧೦

ಕುಮಟಾ ತಾಲೂಕಿನಲ್ಲಿರುವ ಮುಕ್ರಿ ಸಮುದಾಯದ ಕಾಯಕಾರ್ಹರು ಒಟ್ಟು ೧೩೮೭ ಜನರಿದ್ದಾರೆ. ಇದರಲ್ಲಿ ಪುರುಷರು ೬೭೨, ಮಹಿಳೆಯರು ೭೧೫ ಜನರಿದ್ದಾರೆ. ಆದರೆ ಕಾಯಕದಲ್ಲಿ ನಿರತರಾದವರು ಒಟ್ಟು ೧೪೨೯ ಜನರಿದ್ದಾರೆ. ಇದರಲ್ಲಿ ಪುರುಷರು ೬೯೪, ಮಹಿಳೆಯರು ೭೩೫ ಜನರಿದ್ದಾರೆ. ಅಂದರೆ ಒಟ್ಟು ಕಾಯಕಾರ್ಹ ಗುಂಪಿಗಿಂತ ಹೆಚ್ಚುವರಿಯಾಗಿ ೪೨ ಜನ ಕಾಯಕನಿರತರಾಗಿದ್ದಾರೆ. ಪುರುಷರಲ್ಲಿ ೨೨, ಮಹಿಳೆಯರು ೨೦ ಜನ ಹೆಚ್ಚುವರಿಯಾಗಿ ಕಾಯಕನಿರತವಾಗಿರುವುದು ಈ ತಾಲೂಕಿನಲ್ಲಿ ಕಂಡುಬಂದಿದೆ.

ಹೊನ್ನಾವರ ತಾಲೂಕಿನಲ್ಲಿ ಮುಕ್ರಿಯರ ಒಟ್ಟು ಜನಸಂಖ್ಯೆಯಲ್ಲಿ ಕಾಯಕಾರ್ಹವಾದವರು ಒಟ್ಟು ೧೬೩೭. ಇದರಲ್ಲಿ ಪುರುಷರು ೭೭೨, ಮಹಿಳೆಯರು ೮೬೫ ಜನರಿದ್ದಾರೆ. ಆದರೆ ಕಾಯಕನಿರತರಾದವರು ೧೬೮೧, ಇದರಲ್ಲಿ ಪುರುಷರು ೭೯೬, ಮಹಿಳೆಯರು ೮೮೫ ಜನರಿದ್ದಾರೆ. ಅಂದರೆ ಪುರುಷರಲ್ಲಿ ೨೪, ಮಹಿಳೆಯರಲ್ಲಿ ೨೦ ಜನ ಹೆಚ್ಚಿನ ಸಂಖ್ಯೆಯಲ್ಲಿ ಕಾಯಕನಿರತರಾಗಿದ್ದಾರೆ. ಒಟ್ಟಾರೆಯಾಗಿ ಈ ತಾಲೂಕಿನಲ್ಲಿ ಕಾಯಕಾರ್ಹರಿಗಿಂತ ಕಾಯಕನಿರತರು ೪೪ ಜನ ಹೆಚ್ಚಿದ್ದಾರೆ.

ಎರಡೂ ತಾಲೂಕುಗಳನ್ನು ಗಮನಿಸಲಾಗಿ ಮುಕ್ರಿಯರ ಒಟ್ಟು ಜನಸಂಖ್ಯೆಯಲ್ಲಿ ಕಾಯಕಾರ್ಹರು ಒಟ್ಟು ಶೇಕಡ ೭೦.೦೧ ಜನರಿದ್ದಾರೆ. ಆದರೆ ಕಾಯಕನಿರತರು ಶೇಕಡ ೭೨ ರಷ್ಟಿದ್ದಾರೆ. ಅಂದರೆ ಕಾಯಕಾರ್ಹರಿಗಿಂತ ಕಾಯಕನಿರತರು ಶೇಕಡ ೨ ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಾರೆ.

ಕೋಷ್ಟಕ ೫.೧೨. ಸಮೀಕ್ಷೆಗೊಳಪಟ್ಟ ಮುಕ್ರಿ ಸಮುದಾಯದವರಲ್ಲಿ ವಿವಿಧ ಕಾಯಕದಲ್ಲಿ ತೊಡಗಿರುವವರ ವಿವರ

ಕಸುಬುಗಳು	ಕುಮಟಾ			ಹೊನ್ನಾವರ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಕೃಷಿ	೨	–	೨	–	–	–
ಕೃಷಿಕೂಲಿ	೬೪೨	೭೦೫	೧೦೬೨	೭೦೬	೮೦೧	೧೫೦೭
ಬೀದಿ ವ್ಯಾಪಾರ	೧	೨	೩	೧		೧
ಮೀನುಗಾರಿಕೆ				೨		೨
ಸರ್ಕಾರಿ	೯	೪	೧೩	೪೨	೪೨	೮೪
ಖಾಸಗಿ	೫	೩	೮	೯	೧೬	೨೫
ಇತರೆ	೩೫	೨೧	೫೬	೩೬	೨೬	೬೨
ಒಟ್ಟು	೬೯೪	೭೩೫	೧೪೨೯	೭೯೬	೮೮೫	೧೬೮೧

ಹಿಂದಿನಿಂದಲೂ ಮುಕ್ರಿಯರು ಕೃಷಿಯಲ್ಲಿ ತೊಡಗಿದ ಉದಾಹರಣೆಗಳಿಲ್ಲ. ಈಗಿನ ತಲೆಮಾರಿನವರಿಗೆ ಪೂರ್ವದಲ್ಲಿರುವ ಜಾತಿ ನಿರಾಕರಣೆ, ಅಸ್ಪೃಶ್ಯತೆಗಳು ಹೆಚ್ಚಾಗಿ ಕಾಡುತ್ತಿಲ್ಲವಾದರೂ ಕೃಷಿಯ ಕಡೆ ಮುಖಮಾಡಿದ ಕುಟುಂಬಗಳು ಅತ್ಯಂತ ಕಡಿಮೆಯೆಂದು ಹೇಳಬಹುದು. ಮುಕ್ರಿಯರು ನೆಲೆಸಿರುವ ಕುಮಟಾ ತಾಲೂಕನ್ನು ಅವಲೋಕಿಸಿದರೆ ಕೇವಲ ಇಬ್ಬರು ಮಾತ್ರ ಭೂಮಿಯನ್ನು ಹೊಂದಿದವರು ಕಂಡುಬರುತ್ತಾರೆ. ಇಬ್ಬರಲ್ಲಿ ಒಬ್ಬರಿಗೆ ಐದು ಎಕರೆ ಹಾಗೂ ಮತ್ತೊಬ್ಬರಿಗೆ ಎರಡು ಎಕರೆ ಕೃಷಿಭೂಮಿ ಇದೆ. ಇಬ್ಬರೂ ಮಳೆಯನ್ನು ಆಶ್ರಯಿಸಿದ್ದಾರೆ. ತಮ್ಮ ಭೂಮಿಯೊಳಗೆ ತೆಂಗು ಹಾಗೂ ಗೇರು ತೋಟವನ್ನು ಮಾಡಿಕೊಂಡಿದ್ದಾರೆ. ಕೃಷಿಭೂಮಿಯಲ್ಲಿ ಇಬ್ಬರು ತೋಡುಬಾವಿಯನ್ನು ಹೊಂದಿದ್ದು ಮಳೆಬಾರದ ಕಾಲಕ್ಕೆ ತೋಟಕ್ಕೆ ನೀರುಹಾಯಿಸಲು ತೋಡುಬಾವಿಗಳನ್ನು ಆಶ್ರಯಿಸಿದ್ದಾರೆ.

ಮುಕ್ರಿಯರಲ್ಲಿ ಕೃಷಿಕೂಲಿಗಳೇ ಅತ್ಯಧಿಕವಾಗಿದ್ದಾರೆ. ಗ್ರಾಮದ ಬೇರೆ ಸಮುದಾಯಗಳಿಗೆ ಸೇರಿದ ಭೂಒಡೆಯರ ಭೂಮಿಯೊಳಗೆ ಕೆಲಸ ನಿರ್ವಹಿಸುವ ಕಾರ್ಯವನ್ನು ಈ ಸಮುದಾಯದವರು ಮಾಡುತ್ತಾರೆ. ಉತ್ತರಕನ್ನಡದ ಕೃಷಿಯಂದರೆ ಮಳೆಗಾಲದಲ್ಲಿ ಭತ್ತದ ಬಿತ್ತನೆ, ಕೊಯ್ಲು ಇತ್ಯಾದಿ ಇರುತ್ತದೆ. ಇನ್ನು ಬೇಸಿಗೆ ಕಾಲದಲ್ಲಿ ತೆಂಗು ತೋಟದಲ್ಲಿ ಕಾಯಿ ಆರಿಸುವುದು, ಗೇರು ಕೊಯ್ಯುವುದು, ಒಣಗಿದ ತೆಂಗಿನ ಕಾಯಿಂದ ಕೊಬ್ಬರಿ ಗಿಟುಗವನ್ನು ಚಿಪ್ಪಿನಿಂದ ಬೇರ್ಪಡಿಸುವ ಕ್ರಿಯೆ ಮಾಡುವುದು ಇತ್ಯಾದಿ ಕೆಲಸ ನಿರ್ವಹಿಸುತ್ತಾರೆ. ಈ ರೀತಿ ಕೃಷಿಕೂಲಿಯನ್ನು ಅವಲಂಬಿಸಿದ ಮುಕ್ರಿಯರು ಕುಮಟಾದಲ್ಲಿ ಒಟ್ಟು ೧೦೬೨ ಜನರಿದ್ದಾರೆ. ಇದರಲ್ಲಿ ಪುರುಷರು ೬೪೨ ಜನರಿದ್ದರೆ ಮಹಿಳೆಯರು ೭೦೫ ಜನರಿದ್ದಾರೆ. ಬೀದಿ ಬದಿಯಲ್ಲಿ ಡಬ್ಬಾ ಅಂಗಡಿಯ ವ್ಯಾಪಾರವನ್ನು ನಡೆಸುವವರು ಈ ತಾಲೂಕಿನಲ್ಲಿ ಒಬ್ಬ ಪುರುಷ ಹಾಗೂ ಇಬ್ಬರು ಮಹಿಳೆಯರಿದ್ದಾರೆ. ಸರ್ಕಾರಿ ವಲಯದಲ್ಲಿ ಕೆಲಸ ಮಾಡುವವರು ಒಟ್ಟು ೧೩ ಜನರಿದ್ದಾರೆ. ಇದರಲ್ಲಿ ೯ ಜನ ಪುರುಷರು ಹಾಗೂ ೪ ಜನ ಮಹಿಳೆಯರಿದ್ದಾರೆ. ಒಂಬತ್ತು ಜನ ಪುರುಷರಲ್ಲಿ ನಾಲ್ಕು ಜನ ಪ್ರಾಥಮಿಕ ಶಾಲಾ ಶಿಕ್ಷಕರು, ಮೂರು ಜನ ಪೋಲೀಸ್, ಇಬ್ಬರು ಕಂದಾಯ ಇಲಾಖೆಯಲ್ಲಿ ಅಟೆಂಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನು ನಾಲ್ಕು ಜನ ಮಹಿಳೆಯರಲ್ಲಿ ಇಬ್ಬರು ಪ್ರಾಥಮಿಕ ಶಾಲಾ ಶಿಕ್ಷಕಿಯರಾದರೆ ಇನ್ನಿಬ್ಬರು ಅಂಗನವಾಡಿ ಕಾರ್ಯಕರ್ತರಾಗಿದ್ದಾರೆ. ಖಾಸಗಿ ವಲಯದಲ್ಲಿ ಒಟ್ಟು ಎಂಟು ಜನ ಕಾರ್ಯನಿರ್ವಹಿ ಸುತ್ತಿದ್ದಾರೆ. ಪುರುಷರಲ್ಲಿ ಮೂವರು ಬೇರೆಯವರ ಅಂಗಡಿಯಲ್ಲಿ ಡಿಟಿಪಿ ಆಪರೇಟರ್ ಆಗಿಯು ಇಬ್ಬರು ಮೋಟರ್ ಬೈಕ್ ಷೋರೂಮಿನಲ್ಲಿಯು ಕೆಲಸ ಮಾಡುತ್ತಿದ್ದಾರೆ. ಮೂವರು ಮಹಿಳೆಯರಲ್ಲಿ ಇಬ್ಬರು ಜನರಲ್ ಸ್ಟೋರಿನಲ್ಲಿ ಕೆಲಸ ಮಾಡಿದರೆ ಒಬ್ಬರು ಖಾಸಗಿ ಕಂಪನಿಯೊಂದರಲ್ಲಿ ಡಿಟಿಪಿ ಆಪರೇಟರಾಗಿದ್ದಾರೆ. ಉಳಿದಂತೆ ಒಟ್ಟು ೫೬ ಜನ

ಇತರೆ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಅಂದರೆ ಪುರುಷರು ಹಮಾಲಿ, ರಿಕ್ಷಾ ಚಾಲಕ ಇತ್ಯಾದಿ ಕೃಷಿಯೇತರ ಕೂಲಿಗಳಾಗಿದ್ದರೆ ಮಹಿಳೆಯರು ಪರರ ಮನೆಗಳಲ್ಲಿ ಪರಿಚಾರಕಿಯರಾಗಿ ಕಾರ್ಯನಿರ್ವಹಿಸುತ್ತಿರುವರು.

ಹೊನ್ನಾವರ

ಹೊನ್ನಾವರ ತಾಲೂಕಿನಲ್ಲಿರುವ ಮುಕ್ರಿಗಳಲ್ಲಿ ಒಬ್ಬರೂ ಕೃಷಿಕರಿರುವುದಿಲ್ಲ. ಆದರೆ ಕೃಷಿಕೂಲಿಗಳಾಗಿ ಕಾರ್ಯನಿರ್ವಹಿಸುವವರು ಅಧಿಕವಾಗಿದ್ದಾರೆ. ಭತ್ತ ಹಾಗೂ ತೆಂಗು, ಗೇರು ತೋಟಗಳಲ್ಲಿ ಕಾರ್ಯನಿರ್ವಹಿಸುತ್ತಾರೆ. ಇಂತಹ ಕೃಷಿಕೂಲಿಗಳು ಒಟ್ಟು ೧೫೦೭ ಜನರಿದ್ದಾರೆ. ಇದರಲ್ಲಿ ಪುರುಷರು ೭೦೬ ಜನರಿದ್ದರೆ ಮಹಿಳೆಯರು ೮೦೧ ಜನರಿದ್ದಾರೆ. ಬೀದಿಯಲ್ಲಿ ಡಬ್ಬ ಅಂಗಡಿಯ ವ್ಯಾಪಾರವನ್ನು ಒಬ್ಬ ವ್ಯಕ್ತಿ ಮಾತ್ರ ಮಾಡುತ್ತಿದ್ದಾನೆ. ಮೀನುಗಾರರೊಂದಿಗೆ ಕೂಲಿಯಾಗಿ ಹೋಗುವವರು ಇಬ್ಬರು ಪುರುಷರಿದ್ದಾರೆ. ಸರ್ಕಾರಿ ಕೆಲಸದಲ್ಲಿ ಈ ತಾಲೂಕಿನಲ್ಲಿ ಅಧಿಕ ಮುಕ್ರಿಯರು ಕಂಡುಬರುತ್ತಾರೆ. ಒಟ್ಟು ೮೪ ಸರ್ಕಾರಿ ವಲಯದ ಕೆಲಸಗಾರರಿದ್ದಾರೆ. ಇದರಲ್ಲಿ ಪುರುಷ ಮತ್ತು ಮಹಿಳೆ ಸಮಪ್ರಮಾಣ ದಲ್ಲಿದ್ದಾರೆ. ೪೨ ಜನ ಪುರುಷರಲ್ಲಿ ಹತ್ತು ಜನ ಪ್ರಾಥಮಿಕ ಶಾಲಾ ಶಿಕ್ಷಕರಿದ್ದಾರೆ. ಎಂಟು ಜನ ಪ್ರೌಢಶಾಲಾ ಶಿಕ್ಷಕರು, ಇಬ್ಬರು ಪಿಯು ಕಾಲೇಜಿನ ಉಪನ್ಯಾಸಕರಿದ್ದಾರೆ. ಒಬ್ಬರು ಪೋಲೀಸ್ ಇಲಾಖೆಯಲ್ಲಿ ಸರ್ಕಲ್ ಇನ್ಸಪೆಕ್ಟರಾಗಿಯು ಇನ್ನೂ ಒಂಭತ್ತು ಜನ ಪೋಲೀಸ್ ಕಾನಸ್ಟೇಬಲ್ ಗಳಾಗಿಯು ಕಾರ್ಯನಿರ್ವಹಿಸುತ್ತಿದ್ದಾರೆ. ಇಬ್ಬರು ಬ್ಯಾಂಕ್ ನೌಕರರು ಮತ್ತು ನಾಲ್ಕು ಜನ ಜೀವವಿಮಾ ನಿಗಮದಲ್ಲಿಯು ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನುಳಿದವರಲ್ಲಿ ಇಬ್ಬರು ಕಂದಾಯ ಇಲಾಖೆಯಲ್ಲಿ ಎರಡನೇ ದರ್ಜೆ ಸಹಾಯಕರಾಗಿದ್ದರೆ ಇಬ್ಬರು ವಿದ್ಯುತ್‌ಚಕ್ತಿ ಮಂಡಲಿಯಲ್ಲಿ ಸಹಾಯಕರಾಗಿಯು, ಇಬ್ಬರು ಲೈನ್‌ಮ್ಯಾನು ಗಳಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇನ್ನುಳಿದಂತೆ ೪೨ ಮಹಿಳೆಯರಲ್ಲಿ ೧೨ ಜನ ಮಹಿಳೆಯರು ಪ್ರಾಥಮಿಕ ಶಾಲಾ ಶಿಕ್ಷಕರಾಗಿಯು, ೮ ಜನ ಪ್ರೌಢಶಾಲಾ ಶಿಕ್ಷಕರಾಗಿಯು ಕಾರ್ಯನಿರ್ವಹಿಸುತ್ತಿದ್ದಾರೆ. ಇಬ್ಬರು ಕೋರ್ಟಿನಲ್ಲಿ ಪ್ರಥಮ ದರ್ಜೆ ಸಹಾಯಕರಾಗಿಯು ಇನ್ನು ೪ ಜನ ಶಿಕ್ಷಣ ಇಲಾಖೆಯಲ್ಲಿ ಕಿರಿಯ ಸಹಾಯಕರಾಗಿಯು ಕಾರ್ಯನಿರ್ವಹಿಸುತ್ತಿದ್ದಾರೆ. ೬ ಜನ ಅಟೆಂಡರ್ ಆಗಿದ್ದಾರೆ. ೮ ಜನ ಕಾನಸ್ಟೇಬಲ್‌ಗಳಾಗಿಯು ಇಬ್ಬರು ಆರೋಗ್ಯ ಇಲಾಖೆಯಲ್ಲಿ ದಾದಿಯರಾಗಿದ್ದಾರೆ.

ಖಾಸಗಿ ವಲಯದಲ್ಲಿ ಒಟ್ಟು ೨೫ ಜನ ಕೆಲಸಗಾರರಿದ್ದಾರೆ. ಇದರಲ್ಲಿ ೯ ಪುರುಷರು, ೧೬ ಮಹಿಳೆಯರಿದ್ದಾರೆ. ಪುರುಷರಲ್ಲಿ ೪ ಜನ ಬಟ್ಟೆ ಅಂಗಡಿಯಲ್ಲಿಯು ೪ ಜನ ಖಾಸಗಿ ಕಂಪನಿಯಲ್ಲಿಯು ಒಬ್ಬರು ಬ್ರೆಡ್ ಅಂಗಡಿಯಲ್ಲಿಯು ಕೆಲಸಗಾರರಾಗಿದ್ದಾರೆ. ಮಹಿಳೆಯರಲ್ಲಿ

೧೦ ಜನರು ಬಟ್ಟೆ ಅಂಗಡಿಯಲ್ಲಿ ಕೆಲಸಗಾರರಾಗಿದ್ದರೆ ನಾಲ್ಕು ಜನ ಜನರಲ್ ಸ್ಟೋರಿನಲ್ಲಿಯು ಇನ್ನುಳಿದ ಇಬ್ಬರು ಡಿಟಿಪಿ ಆಪರೇಟರಾಗಿಯು ಕಾರ್ಯ ನಿರ್ವಹಿಸುತ್ತಿರುವರು.

ಇತರೆ ಕೃಷಿಯೇತರ ಕೂಲಿಗಳಾಗಿ ಕಾರ್ಯನಿರ್ವಹಿಸುವವರು ಒಟ್ಟು ೬೨ ಜನರಿದ್ದಾರೆ. ಅಟೋಚಾಲನೆ, ಗೌಂಡಿ ಕೆಲಸ, ಹಮಾಲಿ ಮುಂತಾದ ಕೆಲಸಗಳನ್ನು ೩೬ ಪುರುಷರು ನಿರ್ವಹಿಸಿದರೆ ೨೬ ಮಹಿಳೆಯರಲ್ಲಿ ಗೌಂಡಿ ಕೆಲಸದ ಸಹಾಯಕಿಯರಾಗಿ ಮನೆಗೆಲಸದ ಆಳುಗಳಾಗಿ ಇತ್ಯಾದಿ ಕೆಲಸಗಳನ್ನು ನಿರ್ವಹಿಸುತ್ತಿರುವರು

ಕೋಷ್ಟಕ ೫.೧೩. ಸಮೀಕ್ಷೆಗೊಳಪಟ್ಟ ಉತ್ತರಕನ್ನಡ ಜಿಲ್ಲೆಯ ಕಾಯಕನಿರತ ಮುಕ್ರಿಯರ ವಿವರ

ಕ್ರಸಂ	ವಿವರ	ಗಂಡು	ಹೆಣ್ಣು	ಒಟ್ಟು
೧	ಕೃಷಿ	೨	–	೨
೨	ಕೃಷಿಕೂಲಿ	೧೩೪೭	೧೫೦೭	೨೮೫೪
೩	ವ್ಯಾಪಾರ	೨	೨	೪
೪	ಮೀನುಗಾರಿಕೆ	೨	–	೨
೫	ಸರ್ಕಾರಿ ಹುದ್ದೆ	೫೧	೪೬	೯೭
೬	ಖಾಸಗಿ ಹುದ್ದೆ	೧೪	೧೯	೩೩
೭	ಇತರೆ	೭೧	೪೭	೧೧೮
	ಒಟ್ಟು	೧೪೮೯	೧೬೨೧	೩೧೧೦

ಕುಮಟಾ ಹಾಗೂ ಹೊನ್ನಾವರ ತಾಲೂಕುಗಳೆರಡರಲ್ಲಿರುವ ಮುಕ್ರಿ ಸಮುದಾಯದ ಒಟ್ಟು ಕೆಲಸಗಾರರನ್ನು ನೋಡಲಾಗಿ ಕೆಲಸಗಾರರ ಪ್ರಮಾಣವು ಶೇಕಡವಾರುಗಳಲ್ಲಿ ಈ ಕೆಳಗಿನಂತಿದೆ. ಕೃಷಿಕರು ಶೇಕಡ ೦.೦೬, ಕೃಷಿಕೂಲಿ ಶೇಕಡ ೯೧.೭೬, ವ್ಯಾಪಾರ ಶೇಕಡ ೦.೧೨, ಮೀನುಗಾರಿಕೆ ಶೇಕಡ ೦.೦೬, ಸರ್ಕಾರಿ ಹುದ್ದೆ ಶೇಕಡ ೩.೧೧, ಖಾಸಗಿ ಹುದ್ದೆ ಶೇಕಡ ೧.೦೬, ಇತರೆ ಕೆಲಸ ಶೇಕಡ ೩.೭೯ ರಷ್ಟಿದೆ. ಒಟ್ಟಾರೆ ಕೆಲಸಗಾರರಲ್ಲಿ ಪುರುಷ ಕೆಲಸಗಾರರು ಶೇಕಡ ೪೭.೮೭ ಹಾಗೂ ಮಹಿಳಾ ಕೆಲಸಗಾರರು ಶೇಕಡ ೫೨.೧೩ರಷ್ಟಿದ್ದಾರೆ.

ಮುಕ್ರಿ ಸಮುದಾಯದ ಮನೆಗಳ ಸ್ವರೂಪ

ಮುಕ್ರಿಗಳು ಸುಂದರವಾದ ವನರಾಶಿಯ ಒಳಗೆ ಗುಂಪುಗುಂಪಾಗಿ ಮನೆ ಕಟ್ಟಿಕೊಳ್ಳುತ್ತಾರೆ. ಕೊಪ್ಪವನ್ನು ದೂರದಿಂದ ನೋಡಿದರೆ ಅತ್ಯಂತ ಸುಂದರವಾಗಿ ಕಾಣುತ್ತದೆ ನಿಜ. ಆದರೆ ಒಳಗೆ ಹೋದಂತೆಲ್ಲ ಮುಕ್ರಿಗಳ ಬದುಕಿನ ಧಾರುಣತೆ ಅರಿವಿಗೆ ಬರುತ್ತದೆ. ಸಮುದ್ರದ ತಡಿಯಲ್ಲಿ ಮತ್ತು ನೀರಿನ ಹರಿವು ಇರುವಲ್ಲಿ ನೋಡಿ ಮನೆ ಕಟ್ಟಿಕೊಳ್ಳುವ ಮುಕ್ರಿಗಳ

ಮನೆಗಳು ಈಗ ಸಾಂಪ್ರದಾಯಿಕ ಸ್ಥಿತಿಯಿಂದ ಹೊರಬಂದಿವೆ. ಹಿಂದೆಲ್ಲ ಮನೆಗೆ ಮನೆ ಮುಖ ಕೊಟ್ಟು ಅಥವಾ ಒಂದನ್ನು ಹಿಂಬಾಲಿಸಿದಂತೆ ಕಾಣುವ ಮನೆಗಳನ್ನು ನೋಡಬಹುದಾಗಿತ್ತು, ಈವತ್ತು ಪರಿಸ್ಥಿತಿ ಹಾಗಿಲ್ಲ.

ಮನೆಗಳು ಎಂದರೆ ನಮ್ಮ ಕಲ್ಪನೆಯನ್ನು ಮೀರಿ ಮನೆಗಳನ್ನು ಕಾಣಬಹುದು. ತೆಂಗಿನ ಮಡಿಲನ್ನು ಹೊದ್ದ ಮನೆಗಳಿಗೆ ಇಲ್ಲಿ ಬರಗಾಲವಿಲ್ಲ. ಅಡಕೆ ದಬ್ಬೆಯ ತಟ್ಟಿಗಳನ್ನು ಕಟ್ಟಿ ಅದನ್ನೆ ಗೋಡೆಗಳಂತೆ ಬಳಸಿದ ಮನೆಗಳು ಇವೆ. ಅಡಿಕೆಯ ದಬ್ಬೆಗೆ ಮಣ್ಣನ್ನು ಬಳಿಸಿಕೊಂಡು ಗೋಡೆಯ ರೀತಿ ರಚಿಸಿರುವುದನ್ನು ಕಾಣಬಹುದು. ಸರ್ಕಾರ ಬಹುತೇಕ ಕಡೆ ಜನತಾ ಮನೆಗಳನ್ನು ಕಟ್ಟಿರುವುದರಿಂದ ಬಹುಪಾಲು ಮನೆಗಳು ಅನ್ನೆ ಹೋಲುತ್ತವೆ. ಉತ್ತರ ದಿಕ್ಕಿನ ಕಡೆ ಮುಖಮಾಡಿ ಮನೆ ಕಟ್ಟಿಕೊಳ್ಳುವ ಇವರ ಮನೆಗಳು ಕೆಲವೊಂದು ಕಡೆ ಪೂರ್ವ ಅಥವಾ ಪಶ್ಚಿಮಾಭಿಮುಖವಾಗಿ ಇರುತ್ತವೆ. ಆದರೆ ದಕ್ಷಿಣ ದಿಕ್ಕಿಗೆ ಮಾತ್ರ ಮನೆಯನ್ನು ಕಟ್ಟಿಕೊಂಡಿದ್ದಾರೆ. ಸರ್ಕಾರಿ ನೌಕರಿಗೆ ಹೋದವರು ಮಾತ್ರ ಆರ್‌ಸಿಸಿ ಮನೆಗಳನ್ನು ನಿಲ್ಲಿಸಿ ಚಪ್ಪರ ಆಸರೆಗಾಗಿ ಉಪಯೋಗಿಸುತ್ತಾರೆ. ಮನೆಯ ಮುಂದಿನ ಮಾಡು ಪೂರ್ಣ ಬಾಗಿದ್ದು ತಲೆಬಾಗಿ ಒಳಗೆ ಹೋಗಬೇಕಾಗುತ್ತದೆ. ಎತರದ ಮಾಡನ್ನು ನಿರ್ಮಿಸಲು ಹಣ ಜಾಸ್ತಿ ಬೇಕಾಗುತ್ತದೆ ಎಂದಿರಬಹುದು ಅಥವಾ ಗಾಳಿಬೀಸಿ ಮನೆಯ ಮಾಡು ಕಿತ್ತುಕೊಂಡು ಹೋಗುತ್ತದೆ ಎಂದಿರಬಹುದು ಅಥವಾ ಮಳೆಯ ಇರಚಲಿನಿಂದ ರಕ್ಷಿಸಿಕೊಳ್ಳಲು ಈ ಯೋಜನೆ ಮಾಡಿಕೊಂಡಿರಬಹುದು. ದಿನಕರ ದೇಸಾಯಿಯವರು ಮುಕ್ರಿಗಳ ಮನೆಗಳನ್ನು ನೋಡಿ ಬರೆದಿರುವ ಪದ್ಯ ಇಲ್ಲಿದೆ.

"ಗುಡಿಸಿಲು ಸಣ್ಣಾ
ತೋಯ್ದಿದೆ ಮಣ್ಣಾ
ಸೋರುವುದಣ್ಣ ಅಲ್ಲಲ್ಲಿ!
ಮಡಿಕಿಯ ತುಂಡು
ಸುತ್ತುವ ಮುಂಡು
ಜಿರಿಜಿರಿಯಾಗಿದೆ ಅಲ್ಲಲ್ಲಿ"[೨]

ಈ ಪದ್ಯವೊಂದೇ ಸಾಕು ಮುಕ್ರಿಗಳು ಬದುಕಿನ ಚಿತ್ರಣಕ್ಕೆ.

ಕೆಲವರ ಮನೆಗಳಲ್ಲಿ ಹಕ್ಕೊಳ್ಳಿ ಅಥವಾ ಹಕ್ಕೆ ಹೊಳ್ಳಿ ಎಂಬ ಎತ್ತರದ ಹೊಳ್ಳಿಯನ್ನು (ಒಂದು ಮಂಚದ ವಿಸ್ತಾರದ ಕಟ್ಟೆಯನ್ನು) ಹೊರಗಿನ ಜಗಲಿಯಲ್ಲಿ ಕಟ್ಟುತ್ತಾರೆ. ಹಾಗೆ

ಕಟ್ಟುವಾಗಲೇ ಅದಕ್ಕೆ ಒಳಗಡೆ ಟೊಳ್ಳು ಬರುವಂತೆ ಮಾಡಿಕೊಂಡಿರುತ್ತಾರೆ. ಈ ಹಕ್ಕೆಗೆ ಮುಂಭಾಗದಲ್ಲಿ ಚಿಕ್ಕ ಬಾಗಿಲನ್ನು ಮಾಡಿರುವುದರಿಂದ ರಾತ್ರಿ ಸಮಯದಲ್ಲಿ ಕೋಳಿಗಳನ್ನು ಕೂಡಿಹಾಕಲು ಬಳಸುತ್ತಾರೆ. ನರಿ, ನಾಯಿ, ಬೆಕ್ಕುಗಳಿಂದ ರಕ್ಷಿಸಲು ಈ ವ್ಯವಸ್ಥೆ ರೂಪುಗೊಂಡಿರುತ್ತದೆ.

ಮನೆಯ ಮುಂಭಾಗಕ್ಕೆ ಗೋಡೆಗೆ ತಾಗಿಕೊಂಡು ೧' ಎತ್ತರವಾದ ೩'/೪' ಅಗಲವಾದ ೧೫'/೨' ಉದ್ದವಾದ ಕಟ್ಟೆ ಇರುತ್ತದೆ. ಅದಕ್ಕೆ ಹೊಳ್ಳೆ ಎನ್ನುವರು. ಆ ಕಟ್ಟೆಯ ಮಧ್ಯಭಾಗದಲ್ಲಿ ಮೆಟ್ಟು (ಮೆಟ್ಟಿಲು) ಇರುತ್ತದೆ. ಈ ಕಟ್ಟೆಯನ್ನು ದಿನದ ಹಗಲೆಲ್ಲ ವಿಶ್ರಮಿಸಿಕೊಳ್ಳಲು ಉಪಯೋಗಿಸುತ್ತಾರೆ. ಯುವಕರು ರಾತ್ರಿ ಮಲಗಲು ಬಳಸುತ್ತಾರೆ.

ಮನೆಯ ಒಳಗೆ ಮೂರು ಭಾಗಗಳನ್ನು ಮಾಡಬಹುದು. ೧.ಅಡಿಗೆಯ ಮನೆ ೨. ಮಲಗಿಕೊಳ್ಳುವ ಕೋಣೆ ೩. ಸಂಗ್ರಹಣ ಕೋಣೆ ಎಂದು ವಿಭಾಗಿಸಬಹುದು.

ಒಳಗೆ ಅಡುಗೆ ಕೋಣೆ ಮತ್ತು ಹೆರಿಗೆ, ತೊಟ್ಟಿಲು ತೂಗುವ ಕೋಣೆ ಎಲ್ಲವು ಒಳಭಾಗದಲ್ಲಿಯೇ ಆಗುತ್ತದೆ. ಮನೆಗಳಿಗೆ ಒಂದು ಕಿಟಕಿ ಅಥವಾ ಎರಡು ಕಿಟಕಿಗಳನ್ನು ನೋಡಬಹುದಾದರೂ ನಾನು ನೋಡಿದ ಕೆಲವು ಮನೆಗಳಿಗೆ ಕಿಟಕಿಯೇ ಇರಲಿಲ್ಲ. ಕತ್ತಲು ಕವಿದುಕೊಂಡು ಹಾಗೆ ಇತ್ತು. ಹೊರಭಾಗದಲ್ಲಿ ಬಾಗಿಲುಗಳಿಗೆ ತೋಳುಗಳನ್ನು ಇಡುತ್ತಾರಾದರೂ ಅವುಗಳಿಗೆ ಅಂತಹ ಕುಸುರಿಯ ಕೆಲಸವನ್ನೇನು ಮಾಡಿರಲಿಲ್ಲ. ಕೆಲವು ಕಡೆಯಂತೂ ಕಚ್ಚಾ ಮರವನ್ನೆ ನಿಲ್ಲಿಸಿದ್ದನ್ನು ನೋಡಿದ್ದೇನೆ. ಮನೆ ಚಿಕ್ಕದಿರುವುದರಿಂದ ಹಿಂಬಾಗಿಲಿನ ಅವಶ್ಯಕತೆ ಬಹುತೇಕ ಮನೆಗಳಿಗೆ ಇಲ್ಲ. ಮುಕ್ರಿಗಳ ಸಮುದಾಯದ ಅನನ್ಯತೆಯ ಸಂಕೇತವಾದ ಮನೆಗಳು ಈಗ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಅದಕ್ಕೆ ಬದಲಾಗಿ ಸರ್ಕಾರಿ ವಿನ್ಯಾಸಿತ ಮನೆಗಳು ಈಗ ಮುಕ್ರಿಯವರ ಮನೆಗಳಾಗಿವೆ. ಮಳೆಗಾಲಕ್ಕೆ ತಮ್ಮನ್ನು ರಕ್ಷಿಸಿಕೊಳ್ಳುವ ಪ್ರಾಕೃತಿಕ ವಿನ್ಯಾಸಿತ ಮನೆಗಳ ಬದಲಾಗಿ ಸರ್ಕಾರಿ ರೂಪಿತ ಮನೆಗಳು ಬಂದಿವೆ. ಇವು ನಿಜವಾಗಿಯೂ ಮುಕ್ರಿಯವರ ಬದುಕಿಗೆ ಒಳಿತಲ್ಲವಾದರೂ ಅನಿವಾರ್ಯವಾಗಿ ಅವರು ಅದರಲ್ಲಿ ವಾಸಿಸುತ್ತಿದ್ದಾರೆ ಮತ್ತು ವಾಸಿಸಲೇಬೇಕು.

ಉತ್ತರಕನ್ನಡ ಜಿಲ್ಲೆಯಲ್ಲಿ ಮುಕ್ರಿಯರು ಮೂಲತಃ ಅಸ್ಪೃಶ್ಯರು. ಇವರು ಇತರ ಸಮುದಾಯಗಳೊಂದಿಗೆ ಬೆರೆಯದೆ, ಪ್ರತ್ಯೇಕವಾಗಿ ಊರ ಹೊರಭಾಗದಲ್ಲಿ ಹಾಡಿಗಳನ್ನು ರಚಿಸಿಕೊಂಡು ಗುಂಪುಗುಂಪಾಗಿ ನೆಲೆಸುವವರು. ಆದರೆ ಜನಸಂಖ್ಯೆ ಹೆಚ್ಚಾದಂತೆಲ್ಲಾ ಊರೂ ಬೆಳೆಯುತ್ತದೆ. ಹೀಗೆ ಊರು ಬೆಳೆದ ಪರಿಣಾಮವಾಗಿ ಎಷ್ಟೋಕಡೆ ಮುಕ್ರಿಯರ ಹಾಡಿಗಳು ಊರನಡುವೆ ಆಗಿಬಿಟ್ಟಿವೆ. ಊರ ಮಧ್ಯದಲ್ಲಿದ್ದರೂ ಮುಕ್ರಿಯರು ಇಂದಿಗೂ ತಮ್ಮ ಅನನ್ಯತೆಯ

ಸಂಕೇತವಾಗಿ ಪ್ರತ್ಯೇಕ ಹಾಡಿಯನ್ನು ಬಿಟ್ಟುಕೊಟ್ಟಿಲ್ಲ. ಸಾಮಾನ್ಯವಾಗಿ ಮುಕ್ರಿಯರ ಹಾಡಿಗಳಲ್ಲಿ ಇತರ ಸಮುದಾಯದವರು ನೆಲೆಸಿದ ಉದಾಹರಣೆಗಳಿಲ್ಲವೆಂದೇ ಹೇಳಬಹುದು. ಹಿಂದೆ ಹಾಡಿಗಳಲ್ಲಿ ಗುಡ್ಲುಗಳನ್ನು ಹಾಕಿಕೊಂಡು ಜೀವಿಸುತ್ತಿದ್ದ ಮುಕ್ರಿಯರು ಇತರ ಸಮುದಾಯಗಳ ಸಂಪರ್ಕದಿಂದಾಗಿ ತಮ್ಮ ಮನೆಗಳ ಮಾದರಿಯನ್ನು ಬದಲಿಸಿ ಕೊಂಡಿದ್ದಾರೆ.

ಅಂದರೆ ಮುಕ್ರಿ ಸಮುದಾಯದ ವಿದ್ಯಾವಂತರು ಹೆಚ್ಚಾಗಿ ಆಧುನಿಕತೆಗೆ ತೆರೆದು ಕೊಂಡಿದ್ದಾರೆಂದು ಹೇಳಬಹುದು. ಮುಕ್ರಿಯರ ಒಟ್ಟಾರೆ ಮನೆಗಳು ಅವರ ಆರ್ಥಿಕತೆಯನ್ನು ಪ್ರತಿಬಿಂಬಿಸುವ ಸಾಧನವಾದೀತೆಂಬುದರಿಂದಾಗಿ ಮುಕ್ರಿಯರ ವಾಸದ ಮನೆಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ.

ಕೋಷ್ಟಕ ೫.೧೪. ಸಮೀಕ್ಷೆಗೊಳಪಟ್ಟ ಕುಮಟಾ ತಾಲೂಕಿನ ಮುಕ್ರಿ ಸಮುದಾಯದ ಮನೆಗಳ ಸ್ವರೂಪ

ಗ್ರಾಮ	ಕುಟುಂಬ	ಮನೆಗಳ ಸ್ವರೂಪ					
		ಗುಡಿಸಲು	ಟಿನ್	ಆರ್‌ಸಿಸಿ	ಹೆಂಚಿನ	ಜನತಾ	ಬಾಡಿಗೆ
ಕುಮಟಾ	೬೭	೩	೧	೧	೬೦	೨	೧
ಕಲಬಾಗ	೭			೧	೬		
ಕೂಜಳ್ಳಿ	೨೫			೧	೨೪		
ಗೋಕರ್ಣ	೭೪	೧೫			೫೧	೬	೨
ದಿವಗಿ	೧೯	೧			೧೫	೩	
ಮಿರ್ಜಾನ	೨೩	೨			೧೯	೨	
ವಾಲಗಳ್ಳಿ	೧೮				೧೬	೨	
ಹೆಗಡೆ	೨೦೯	೧೯	೨	೫	೧೭೦	೧೩	
ಒಟ್ಟು	**೪೪೨**	**೪೦**	**೩**	**೭**	**೩೬೧**	**೨೮**	**೩**

ಕುಮಟಾ ತಾಲೂಕಿನಲ್ಲಿ ಎಂಟು ಊರುಗಳಲ್ಲಿ ಮುಕ್ರಿಯರ ಒಟ್ಟು ೪೪೨ ಕುಟುಂಬಗಳು ನೆಲೆಸಿವೆ. ಬಹುತೇಕ ಎಲ್ಲಾ ಊರುಗಳಲ್ಲಿಯು ಮುಕ್ರಿಯರು ಪ್ರತ್ಯೇಕ ಹಾಡಿಗಳಲ್ಲಿಯೇ ನೆಲೆಸಿದ್ದಾರೆ.

ಕುಮಟಾ ಪಟ್ಟಣದಲ್ಲಿ ೬೭ ಮುಕ್ರಿ ಕುಟುಂಬಗಳಿವೆ. ೬೭ ರಲ್ಲಿ ೬೦ ಕುಟುಂಬಗಳು ಹೆಂಚಿನ ಮನೆಗಳಾಗಿವೆ. ಇನ್ನು ಒಂದು ಮನೆ ಮಾತ್ರ ಸುತ್ತಲೂ ಟಿನ್ ಕಟ್ಟಿಕೊಂಡು ಮನೆ ರಚಿಸಿಕೊಳ್ಳಲಾಗಿದೆ. ಕಾಂಕ್ರಿಟ್ ಮನೆ ಒಂದಿದೆ. ಇತ್ತೀಚೆಗೆ ಹೊಸಾಗಿ ವಸತಿ ಯೋಜನೆಯಡಿ ೨ ಮನೆಗಳನ್ನು ಕಟ್ಟಲಾಗಿದೆ. ಒಂದು ಕುಟುಂಬ ಮಾತ್ರ ಮುಕ್ರಿಯರ ಹಾಡಿಗೆ ಹೊಂದಿಕೊಂಡಂತಿರುವ ಮನೆಯೊಂದರಲ್ಲಿ ಬಾಡಿಗೆ ಇದೆ.

ಕಲಬಾಗದಲ್ಲಿ ೭ ಮುಕ್ರಿ ಕುಟುಂಬಗಳಿವೆ. ೬ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ. ಒಂದು ಮನೆ ಮಾತ್ರ ಆರ್.ಸಿ.ಸಿ ಮನೆಯಾಗಿದೆ.

ಕೂಜಳ್ಳಿಯಲ್ಲಿ ೨೫ ಮುಕ್ರಿ ಕುಟುಂಬಗಳಿವೆ. ಇವುಗಳಲ್ಲಿ ೨೪ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ. ಒಂದು ಮನೆ ಮಾತ್ರ ಆರ್.ಸಿ.ಸಿ ಮನೆಯಾಗಿದೆ.

ಗೋಕರ್ಣದಲ್ಲಿ ೭೪ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ಈ ಹಿಂದೆ ವಸತಿ ಯೋಜನೆಯಡಿ ೫೧ ಕುಟುಂಬಗಳು ಹೆಂಚಿನ ಮನೆಗಳನ್ನು ರಚಿಸಿಕೊಂಡಿವೆ. ಇನ್ನೂ ೧೫ ಕುಟುಂಬಗಳು ಮೇಲ್ಛಾವಣಿಗೆ ಕೊರಡಂಚನ್ನು ಹೊದಿಸಿದ ಗುಡಿಸಿಲಿನಲ್ಲಿಯೇ ಜೀವಿಸುತ್ತಿವೆ. ಇತ್ತೀಚೆಗೆ ೬ ಕುಟುಂಬಗಳು ವಸತಿ ಯೋಜನೆಯಡಿ ಮನೆಗಳನ್ನು ಕಟ್ಟಿಕೊಂಡಿವೆ. ಎರಡು ಕುಟುಂಬಗಳು ಮುಕ್ರಿ ಕೊಪ್ಪಕ್ಕೆ ಹತ್ತಿರದಲ್ಲಿಯೇ ಬಾಡಿಗೆ ಮನೆ ಹೊಂದಿವೆ.

ದಿವಗಿಯಲ್ಲಿ ೧೯ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ಈ ಹಿಂದೆ ವಸತಿ ಯೋಜನೆಯಡಿ ೧೫ ಕುಟುಂಬಗಳು ಹೆಂಚಿನ ಮನೆಗಳನ್ನು ರಚಿಸಿಕೊಂಡಿವೆ. ಇನ್ನೂ ೧ ಕುಟುಂಬ ಮಾತ್ರ ಮೇಲ್ಛಾವಣಿಗೆ ಕೊರಡಂಚನ್ನು ಹೊದಿಸಿದ ಗುಡಿಸಿಲಿನಲ್ಲಿಯೇ ಜೀವಿಸುತ್ತಿದೆ. ಇತ್ತೀಚೆಗೆ ೩ ಕುಟುಂಬಗಳು ವಸತಿ ಯೋಜನೆಯಡಿ ಮನೆಗಳನ್ನು ಕಟ್ಟಿಕೊಂಡಿವೆ.

ಮಿರ್ಜಾನದಲ್ಲಿ ೨೩ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ೧೯ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ. ಇನ್ನೂ ೨ ಕುಟುಂಬ ಮಾತ್ರ ಮೇಲ್ಛಾವಣಿಗೆ ಕೊರಡಂಚನ್ನು ಹೊದಿಸಿದ ಗುಡಿಸಿಲಿನಲ್ಲಿವೆ. ಇತ್ತೀಚೆಗೆ ೨ ಕುಟುಂಬಗಳು ವಸತಿ ಯೋಜನೆಯಡಿ ಮನೆಗಳನ್ನು ಕಟ್ಟಿಕೊಂಡಿವೆ.

ವಾಲಗಳ್ಳಿಯಲ್ಲಿ ೧೮ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ೧೬ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ. ಇನ್ನೂ ೨ ಕುಟುಂಬಗಳು ವಸತಿ ಯೋಜನೆಯಡಿ ಮನೆಗಳನ್ನು ಕಟ್ಟಿಕೊಂಡಿವೆ.

ಹೆಗಡೆಯಲ್ಲಿ ೨೦೯ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ೧೭೦ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ. ೫ ಕುಟುಂಬಗಳು ಆರ್.ಸಿ.ಸಿ ಹೊಂದಿವೆ. ಇನ್ನೂ ೧೯ ಕುಟುಂಬಗಳು ಮೇಲ್ಛಾವಣಿಗೆ ಕೊರಡಂಚನ್ನು ಹೊದಿಸಿದ ಗುಡಿಸಿಲಿನಲ್ಲಿವೆ. ೨ ಕುಟುಂಬಗಳು ಟಿನ್ ಮನೆ ಹೊಂದಿವೆ. ಇತ್ತೀಚೆಗೆ ೧೩ ಕುಟುಂಬಗಳು ವಸತಿ ಯೋಜನೆಯಡಿ ಮನೆಗಳನ್ನು ಕಟ್ಟಿಕೊಂಡಿವೆ.

ಕೋಷ್ಟಕ ೫.೧೫. ಸಮೀಕ್ಷೆಗೊಳಪಟ್ಟ ಹೊನ್ನಾವರ ತಾಲೂಕಿನ ಮುಕ್ರಿ ಸಮುದಾಯದ ಮನೆಗಳ ಸ್ವರೂಪ

ಗ್ರಾಮ	ಕುಟುಂಬ	ಮನೆಗಳ ಸ್ವರೂಪ					
		ಗುಡಿಸಲು	ಟಿನ್	ಆರ್‌ಸಿಸಿ	ಹೆಂಚಿನ	ಜನತಾ	ಬಾಡಿಗೆ
ಕರ್ಕಿ	೧೨೧	೧೪	೫	೫	೮೪	೧೩	
ಕಡತೋಕ	೧೪೧	೧೦		೬	೧೦೦	೨೫	
ಚಂದಾವರ	೨೨			೨	೧೬	೦೪	
ಧಾರೇಶ್ವರ	೦೫				೦೫		
ನವಿಲುಗೋಣ	೧೪			೧	೦೯	೦೪	
ಮುಗ್ವಾ	೫೯	೧೨	೦೧	೦೧	೩೬	೦೯	
ಹಳದೀಪುರ	೧೩೦	೧೯	೧೩	೧೩	೬೧	೧೩	೧೧
ಹೊಸಕುಳಿ	೨೮	೦೨			೦೬	೨೦	
ಒಟ್ಟು	೫೨೦	೫೭	೧೯	೨೮	೩೧೭	೮೮	೧೧

ಹೊನ್ನಾವರ ತಾಲೂಕಿನಲ್ಲಿ ಎಂಟು ಊರುಗಳಲ್ಲಿ ಮುಕ್ರಿಯರ ಒಟ್ಟು ೫೨೦ ಕುಟುಂಬಗಳು ನೆಲೆಸಿವೆ. ಕುಮಟಾದಂತೆ ಇಲ್ಲಿಯೂ ಬಹುತೇಕ ಎಲ್ಲಾ ಊರುಗಳಲ್ಲಿಯೂ ಮುಕ್ರಿಯರು ಪ್ರತ್ಯೇಕ ಹಾಡಿಗಳಲ್ಲಿಯೇ ನೆಲೆಸಿದ್ದಾರೆ.

ಕರ್ಕಿಯ ಎಂಟು ಗ್ರಾಮಗಳಲ್ಲಿ ೧೨೧ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ೮೪ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ. ೫ ಮನೆ ಮಾತ್ರ ಸುತ್ತಲೂ ಟಿನ್ ಕಟ್ಟಿಕೊಂಡು ಮನೆ ರಚಿಸಿಕೊಳ್ಳಲಾಗಿದೆ. ೫ ಕಾಂಕ್ರಿಟ್ ಮನೆಗಳಿವೆ. ವಸತಿ ಯೋಜನೆಯಡಿ ೧೩ ಮನೆಗಳನ್ನು ಕಟ್ಟಲಾಗಿದೆ. ೧೪ ಕುಟುಂಬ ಇಂದಿಗೂ ಗುಡಸಿಲಿನಲ್ಲಿಯೇ ವಾಸಿಸುತ್ತಿವೆ.

ಕಡತೋಕದಲ್ಲಿ ೧೪೧ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ೧೦೦ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ. ೬ ಕಾಂಕ್ರಿಟ್ ಮನೆಗಳಿವೆ. ವಸತಿ ಯೋಜನೆಯಡಿ ೨೫ ಮನೆಗಳನ್ನು ಕಟ್ಟಲಾಗಿದೆ. ೧೦ ಕುಟುಂಬ ಇಂದಿಗೂ ಗುಡಸಿಲಿನಲ್ಲಿಯೇ ವಾಸಿಸುತ್ತಿವೆ.

ಚಂದಾವರದಲ್ಲಿ ೨೨ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ೧೬ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ. ೨ ಕಾಂಕ್ರಿಟ್ ಮನೆಗಳಿವೆ. ವಸತಿ ಯೋಜನೆಯಡಿ ೪ ಮನೆಗಳನ್ನು ಕಟ್ಟಲಾಗಿದೆ.

ಧಾರೇಶ್ವರದಲ್ಲಿ ೫ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ೦೫ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ.

ನವಿಲುಗೋಣದಲ್ಲಿ ೧೪ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ೦೯ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ. ೧ ಕಾಂಕ್ರಿಟ್ ಮನೆ, ವಸತಿ ಯೋಜನೆಯಡಿ ೪ ಮನೆಗಳನ್ನು ಕಟ್ಟಲಾಗಿದೆ.

ಮುಗ್ವಾದಲ್ಲಿ ೫೯ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ೩೬ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ. ೧ ಕಾಂಕ್ರಿಟ್ ಮನೆ, ವಸತಿ ಯೋಜನೆಯಡಿ ೦೯ ಮನೆಗಳನ್ನು ಕಟ್ಟಲಾಗಿದೆ. ೧೨ ಗುಡಿಸಲುಗಳಿವೆ.

ಹಳದೀಪುರದಲ್ಲಿ ೧೩೦ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ೬೧ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ. ೧೩ ಕಾಂಕ್ರಿಟ್ ಮನೆ, ವಸತಿ ಯೋಜನೆಯಡಿ ೧೩ ಮನೆಗಳನ್ನು ಕಟ್ಟಲಾಗಿದೆ. ೧೩ ಟಿನ್ ಮನೆ ಹಾಗೂ ೧೯ ಗುಡಿಸಲುಗಳಿವೆ.

ಹೊಸಕುಳಿಯಲ್ಲಿ ೨೮ ಮುಕ್ರಿ ಕುಟುಂಬಗಳಿವೆ. ಇದರಲ್ಲಿ ೬ ಕುಟುಂಬಗಳು ಹೆಂಚಿನ ಮನೆಗಳನ್ನು ಹೊಂದಿವೆ. ವಸತಿ ಯೋಜನೆಯಡಿ ೨೦ ಮನೆಗಳನ್ನು ಕಟ್ಟಲಾಗಿದೆ. ಹಾಗೂ ೨ ಗುಡಿಸಲುಗಳಿವೆ.

ಕೋಷ್ಟಕ ೫.೧೬. ಸಮೀಕ್ಷೆಗೊಳಗಾದ ಉತ್ತರಕನ್ನಡ ಜಿಲ್ಲೆಯ ಮುಕ್ರಿಯರ ಮನೆಗಳ ಸ್ವರೂಪ

ತಾಲೂಕು	ಕುಟುಂಬ	ಮನೆಗಳ ಸ್ವರೂಪ					
		ಗುಡಿಸಲು	ಟಿನ್	ಆರ್‌ಸಿಸಿ	ಹೆಂಚಿನ	ಜನತಾ	ಬಾಡಿಗೆ
ಕುಮಟಾ	೪೪೨	೪೦	೩	೭	೩೬೧	೨೮	೩
ಹೊನ್ನಾವರ	೫೨೦	೫೭	೧೯	೨೮	೩೧೭	೮೮	೧೧
ಒಟ್ಟು	೯೬೨	೯೭	೨೨	೩೫	೬೭೮	೧೧೬	೯೭

ಉತ್ತರಕನ್ನಡದಲ್ಲಿ ನೆಲೆಸಿರುವ ಮುಕ್ರಿ ಸಮುದಾಯದವರು ಒಟ್ಟು ಎರಡು ತಾಲೂಕುಗಳಲ್ಲಿ ಹಂಚಿಹೋಗಿದ್ದಾರೆ. ಪ್ರಮುಖವಾಗಿ ಕುಮಟಾ, ಹೊನ್ನಾವರ ತಾಲೂಕುಗಳಲ್ಲಿ ನೆಲೆಸಿದ್ದು ಅವರ ಮನೆಗಳ ಸ್ವರೂಪ ಈ ಕೆಳಗಿನಂತೆ ಶೇಕಡವಾರುಗಳಲ್ಲಿ ಕೊಡಲಾಗಿದೆ.

ಎರಡೂ ತಾಲೂಕುಗಳನ್ನೊಳಗೊಂಡು ಮುಕ್ರಿಯರ ವಾಸದ ಮನೆಗಳಲ್ಲಿ ಗುಡಿಸಲು ಶೇಕಡ ೧೦.೦೮, ಟಿನ್ ಮನೆ ಶೇಕಡ ೨.೨೮, ಆರ್.ಸಿ.ಸಿ ಮನೆಗಳು ಶೇಕಡ ೩.೬೩, ಹೆಂಚಿನ ಮನೆಗಳು ಶೇಕಡ ೭೦.೪೭. ವಿವಿಧ ವಸತಿ ಯೋಜನೆಗಳ ಮನೆಗಳು ಶೇಕಡ ೧೨.೦೫ ರಷ್ಟಿದ್ದಾರೆ.

ಬಚ್ಚಲು (ಸ್ನಾನದ ಕೋಣೆ) ಹಾಗೂ ಶೌಚಾಲಯ

ಮುಕ್ರಿಗಳ ಮನೆಗಳಲ್ಲಿ ಸ್ನಾನದ ಕೋಣೆ ಹಾಗೂ ಶೌಚಾಲಯ ಕಾಣುವುದು ಅಪರೂಪ. ಅವರು ಪ್ರತಿದಿನ ಸ್ನಾನ ಮಾಡುವುದು ಕಡಿಮೆ. ಬೆಳಗಿನ ಸಮಯ ಸ್ನಾನ ಮಾಡದೆ ಸಂಜೆ ಕೂಲಿ ಕೆಲಸ ಮುಗಿಸಿ ಬಂದ ಮೇಲೆ ಮಾಡುವುದೇ ಹೆಚ್ಚಾಗಿ ಕಂಡುಬರುತ್ತದೆ. ತೆಂಗಿನ ಮರದ ಬುಡದಲ್ಲಿ ಒಂದು ಸಣ್ಣ ಒಲೆಯನ್ನು ಮಾಡಿಕೊಂಡು ಅಲ್ಲಿ ನೀರು ಕಾಯಿಸಿ ಬಯಲಲ್ಲಿ ಸ್ನಾನ ಮಾಡುತ್ತಾರೆ. ಹೆಂಗಸರು ನಾಲ್ಕು ಕಂಬಗಳನ್ನು ನಿಲ್ಲಿಸಿ ಸೀರೆಯನ್ನು ಮರೆಮಾಡಿಕೊಂಡ ಸ್ಥಳದಲ್ಲಿ ಸ್ನಾನ ಮಾಡುವುದನ್ನು ಕಾಣಬಹುದು. ಅದಕ್ಕೆ ಮೇಲೆ ಮಾಡುಗಳೇನು ಇರುವುದಿಲ್ಲ. ಮಳೆಗಾಲದಲ್ಲಿ ಮನೆಯ ಒಳಗಡೆ ನೀರು ಕಾಯಿಸಿಕೊಂಡು ಬಂದು ಸ್ನಾನ ಮಾಡುವದನ್ನು ಕಾಣಬಹುದಾಗಿದೆ. ನೀರು ಕಾಯಿಸಲು ಕೆಲವು ಜನರು ಹೊರಗೆ ದೊಡ್ಡ ಮಣ್ಣಿನ ಗಡಿಗೆಯನ್ನು ಬಳಸುತ್ತಾರೆ. ಕೆಲವು ಕುಟುಂಬಗಳು ಅಲ್ಯೂಮಿನಿಯಂ, ತಾಮ್ರದ ಹಂಡೆಯನ್ನು ಬಳಸುವುದನ್ನು ಕಾಣುತ್ತೇವೆ. ಅಪರೂಪವೆನ್ನುವಂತೆ ಕೆಲವು ಮನೆಗಳಲ್ಲಿ ಮಾತ್ರ ಸ್ನಾನದ ಮನೆ ಮಾಡಿಕೊಂಡಿರುವುದನ್ನು ಕಾಣಬಹುದು. ಕಾಡಿನ ಸಹಚರ್ಯವನ್ನು ಒಳಗೊಂಡಿರುವ ಮುಕ್ರಿಗಳು ಈಗಲೂ ಉರುವಲನ್ನು ಬಳಸುತ್ತಾರೆ. ಗ್ಯಾಸ್ ಕನೆಕ್ಷನ್ ಅಪರೂಪವೆನ್ನುವಂತೆ ಇದೆ. ಕೆಲವರಿಗೆ ಮನೆಯೇ ಇಲ್ಲ ಇನ್ನು ಬಚ್ಚಲಿಗೆ ಮಾಡು ಬರುವುದಾದರೂ ಹೇಗೆ? ಹಸಿ ಕಟ್ಟಿಗೆಯನ್ನು ಕಡಿದುಕೊಂಡು ಬಂದು ಒಣಗಿಸಿ ಅದನ್ನೆ ಉರುವಲಾಗಿ ಬಳಸುತ್ತಾರಾದರೂ ಕೆಲವರಿಗೆ ಹಸಿ ಕಟ್ಟಿಗೆಯೇ ಆಧಾರ. ತೀರಾ ನಿರ್ಗತಿಕರಂತೂ ಸಣ್ಣ ಪುಟ್ಟ ಪುಳ್ಳು ಪೊರಕಲನ್ನು ಬಳಸುವುದನ್ನು ಕಾಣಬಹುದಾಗಿದೆ. ಹತ್ತಾರು ಹೆಂಗಸರು(ಹೆಂಗಸರು ಮಾತ್ರ) ಕಾಡಿಗೆ ಹೋಗಿ ಕಟ್ಟಿಗೆಯ ಹೊರೆಯನ್ನು ತರುತ್ತಾರೆ.

ಕೋಷ್ಟಕ ೫.೧೭. ಸಮೀಕ್ಷೆಗೊಳಪಟ್ಟ ಕುಮಟಾ ತಾಲೂಕಿನ ಬಚ್ಚಲು ಮತ್ತು ಶೌಚಾಲಯ ಸ್ವರೂಪ

ಗ್ರಾಮ	ಕುಟುಂಬ	ಬಚ್ಚಲು ಮತ್ತು ಶೌಚಾಲಯ ಸ್ವರೂಪ			
		ಬಯಲು	ಪ್ರತ್ಯೇಕ ಬಚ್ಚಲು	ಬಯಲು ಶೌಚಾಲಯ	ಪ್ರತ್ಯೇಕ ಶೌಚಾಲಯ
ಕುಮಟಾ	೬೭	೬೫	೧೭		೨
ಕಲಬಾಗ	೭	೦೬	೧		೧
ಕೂಜಳ್ಳಿ	೨೫	೨೪	೧		೧
ಗೋಕರ್ಣ	೭೪	೬೮	೬	೧	೬
ದಿವಗಿ	೧೯	೧೬	೩		೩
ಮಿರ್ಜಾನ	೨೩	೨೧	೨		೨
ವಾಲಗಳ್ಳಿ	೧೮	೧೬	೨		೨
ಹೆಗಡೆ	೨೦೯	೧೭೨	೩೭	೧೭೨	೧೮
ಒಟ್ಟು	**೪೪೨**	**೩೭೨**	**೭೦**	**೪೦೭**	**೩೫**

ಕುಮಟಾ ತಾಲೂಕಿನಲ್ಲಿ ಒಟ್ಟು ೪೪೨ ಮುಕ್ರಿ ಕುಟುಂಬಗಳಿವೆ. ಇವುಗಳಲ್ಲಿ ಕುಮಟಾ ಗ್ರಾಮದಲ್ಲಿಯೇ ೬೫ ಕುಟುಂಬಗಳು ಬಯಲಿನಲ್ಲಿಯೇ ಸ್ನಾನ ಮಾಡುತ್ತವೆ. ೧೭ ಕುಟುಂಬಗಳಲ್ಲಿ ೧೫ ಕುಟುಂಬಗಳು ನೆರಿಕೆ ಕಟ್ಟಿಕೊಂಡು ಬಚ್ಚಲು ಮಾಡಿಕೊಂಡಿವೆ. ಇದರಲ್ಲಿ ಮಹಿಳೆಯರು ಸ್ನಾನ ಮಾಡುತ್ತಾರೆ. ಇನ್ನುಳಿದ ೨ ಮನೆಯವರು ಮಾತ್ರ ಸರ್ಕಾರದ ಅನುದಾನದ ಸೌಲಭ್ಯ ಪಡೆದು ೨ ಶೌಚಾಲಯಗಳನ್ನು ರಚಿಸಿಕೊಂಡಿದ್ದಾರೆ. ಮಹಿಳೆಯರು ಸ್ನಾನ ಮತ್ತು ಶೌಚ ಕಾರ್ಯ ಎರಡಕ್ಕೂ ಅವನ್ನೇ ಬಳಕೆ ಮಾಡುತ್ತಾರೆ. ಕಲಬಾಗದ ೭ ಕುಟುಂಬಗಳಲ್ಲಿ ೬ ಕುಟುಂಬ ಸ್ನಾನಕ್ಕೆ ಬಯಲನ್ನು ಆಶ್ರಯಿಸಿದ್ದರೆ ೨ ಕುಟುಂಬ ಬಚ್ಚಲಿಗಾಗಿ ನೆರಿಕೆ ಕಟ್ಟಿಕೊಂಡಿದೆ. ಒಂದು ಕುಟುಂಬಕ್ಕೆ ಶೌಚಾಲಯವಿದ್ದರೂ ಬಳಕೆ ಮಾತ್ರ ಶೂನ್ಯವೆಂದೇ ಹೇಳಬಹುದು. ಕೂಜಳ್ಳಿಯಲ್ಲಿ ೨೫ ಕುಟುಂಬಗಳಲ್ಲಿ ೨೪ ಕುಟುಂಬಗಳು ಸ್ನಾನ, ಶೌಚಕ್ಕಾಗಿ ಬಯಲನ್ನೇ ಆಶ್ರಯಿಸಿವೆ. ಒಂದು ಕುಟುಂಬಕ್ಕೆ ಶೌಚಾಲಯವಿದೆ. ಅದನ್ನೇ ಸ್ನಾನ, ಶೌಚಕ್ಕೆ ಬಳಕೆ ಮಾಡುತ್ತಾರೆ. ಗೋಕರ್ಣದಲ್ಲಿ ೭೪ ಕುಟುಂಬಗಳಲ್ಲಿ ೬೮ ಕುಟುಂಬಗಳು ಬಯಲು ಸ್ನಾನ, ಶೌಚ ಮಾಡುತ್ತಾರೆ. ೬ ಕುಟುಂಬಗಳಿಗೆ ಪ್ರತ್ಯೇಕ ಶೌಚಾಲಯವಿದ್ದು ಶೌಚ, ಸ್ನಾನ ಎರಡಕ್ಕೂ

ಅವನ್ನೇ ಬಳಸುತ್ತಾರೆ. ದಿವಗಿಯಲ್ಲಿಯು ೩ ಪ್ರತ್ಯೇಕ ಶೌಚಾಲಯಗಳಿವೆ. ಸ್ನಾನ, ಶೌಚಕ್ಕೆ ಆ ಕೊಠಡಿ ಬಳಕೆಯಾಗುತ್ತವೆ. ಉಳಿದಂತೆ ೧೬ ಕುಟುಂಬಗಳು ಬಯಲನ್ನು ಆಶ್ರಯಿಸಿವೆ. ಮಿರ್ಜಾನನಲ್ಲಿ ೨೩ ಕುಟುಂಬಗಳಿದ್ದು ೨ ಕುಟುಂಬಗಳು ಶೌಚ, ಸ್ನಾನಕ್ಕೆ ಅವುಗಳನ್ನು ಬಳಸಿದರೆ ಉಳಿದ ೨೧ ಕುಟುಂಬಗಳು ಬಯಲನ್ನು ಆಶ್ರಯಿಸಿವೆ. ವಾಲಗಳ್ಳಿಯಲ್ಲಿಯೂ ೨ ಕುಟುಂಬ ಶೌಚ, ಸ್ನಾನಕ್ಕೆ ತಮ್ಮ ಪ್ರತ್ಯೇಕ ಶೌಚಾಲಯವನ್ನು ಬಳಸುತ್ತವೆ. ಉಳಿದಂತೆ ೧೬ ಕುಟುಂಬಗಳೂ ಬಯಲನ್ನೇ ಆಶ್ರಯಿಸಿವೆ. ಅತೀ ಹೆಚ್ಚಿನ ಸಂಖ್ಯೆಯಲ್ಲಿ ಮುಕ್ರಿಯರು ಇರುವ ಗ್ರಾಮ ಹೆಗಡೆ. ಇಲ್ಲಿ ೧೮ ಕುಟುಂಬಗಳಿಗೆ ಪ್ರತ್ಯೇಕ ಶೌಚಾಲಯ ಇವೆ. ಅವರು ಸ್ನಾನ, ಶೌಚಕ್ಕೆ ಅವನ್ನೇ ಬಳಕೆ ಮಾಡುತ್ತಾರೆ. ಇನ್ನುಳಿದ ೧೯ ಕುಟುಂಬಗಳು ನೆರಿಕೆ ಕಟ್ಟಿಕೊಂಡು ಬಚ್ಚಲಾಗಿಸಿಕೊಂಡಿವೆ. ಅಂದರೆ ಒಟ್ಟು ೩೭ ಕುಟುಂಬಗಳು ನೆರಿಕೆ, ಶೌಚಾಲಯ ಕೋಣೆ ಬಳಸುತ್ತವೆಂದಾಯಿತು. ಉಳಿದ ೧೭೨ ಕುಟುಂಬಗಳೂ ಸ್ನಾನ, ಶೌಚಕ್ಕೆ ಬಯಲನ್ನೇ ಆಶ್ರಯಿಸಿವೆ.

ಕೋಷ್ಟಕ ೫.೧೮. ಸಮೀಕ್ಷೆಗೊಳಪಟ್ಟ ಹೊನ್ನಾವರ ತಾಲೂಕಿನ ಬಚ್ಚಲು ಮತ್ತು ಶೌಚಾಲಯ ಸ್ವರೂಪ

ಗ್ರಾಮ	ಕುಟುಂಬ	ಬಚ್ಚಲು ಮತ್ತು ಶೌಚಾಲಯ ಸ್ವರೂಪ			
		ಬಯಲು	ಪ್ರತ್ಯೇಕ ಬಚ್ಚಲು	ಬಯಲು ಶೌಚಾಲಯ	ಪ್ರತ್ಯೇಕ ಶೌಚಾಲಯ
ಕರ್ಕಿ	೧೨೧	೯೯	೪	೧೦೩	೧೮
ಕಡತೋಕ	೧೪೧	೧೦೫	೫	೧೧೦	೩೧
ಚಂದಾವರ	೨೨	೧೮	೨	೧೬	೬
ಧಾರೇಶ್ವರ	೦೫	೫	–	೫	
ನವಿಲುಗೋಣ	೧೪	೯	–	೯	೫
ಮುಗ್ವಾ	೫೯	೪೫	೪	೪೯	೧೦
ಹಳದೀಪುರ	೧೩೦	೧೦೧	೩	೧೦೪	೨೬
ಹೊಸಕುಳಿ	೨೮	೮	–	೦೮	೨೦
ಒಟ್ಟು	೫೨೦	೩೮೬	೧೮	೪೦೪	೧೧೬

ಹೊನ್ನಾವರ ತಾಲೂಕಿನ ಕರ್ಕಿಯಲ್ಲಿ ೧೨೧ ಕುಟುಂಬಗಳಿವೆ. ಇವುಗಳಲ್ಲಿ ೧೮ ಕುಟುಂಬಗಳಿಗೆ ಸರ್ಕಾರ ಕಟ್ಟಿಸಿದ ಪ್ರತ್ಯೇಕ ಶೌಚಾಲಯಗಳಿವೆ. ಆದರೆ ಬಹುತೇಕ ಕುಟುಂಬಗಳು

ಅವುಗಳನ್ನು ಶೌಚ ಕಾರ್ಯಕ್ಕಾಗಿ ಬಳಸದೆ ಬಚ್ಚಲು, ಅಡಿಗೆ ಮಾಡಲು ಬಳಸುತ್ತವೆ. ಇನ್ನುಳಿದಂತೆ ೪ ಕುಟುಂಬಗಳು ನೆರಿಕೆಯ ಬಚ್ಚಲನ್ನು ಹೊಂದಿವೆ. ೯೯ ಕುಟುಂಬಗಳು ಬಯಲನ್ನೇ ಸ್ನಾನ, ಶೌಚಕ್ಕೆ ಆಶ್ರಯಿಸಿವೆ.

ಕಡತೋಕದಲ್ಲಿ ೧೪೧ ಕುಟುಂಬಗಳಿವೆ. ಇವುಗಳಲ್ಲಿ ೧೦೫ ಕುಟುಂಬಗಳು ನೆರಿಕೆ ಬಚ್ಚಲು, ಪ್ರತ್ಯೇಕ ಶೌಚಾಲಯಗಳನ್ನೇ ಬಚ್ಚಲಾಗಿಸಿಕೊಂಡಿರುವ ಉದಾಹರಣೆ ಇದೆ. ಶೌಚಾಲಯಗಳು ೩೧ ಇವೆಯಾದರೂ ಅವುಗಳಲ್ಲಿ ಕನಿಷ್ಟ ೫ ಶೌಚಾಲಯಗಳಾದರೂ ಶೌಚ ಕಾರ್ಯಕ್ಕಾಗಿ ಬಳಕೆಗೊಳ್ಳುವುದಿಲ್ಲ.

ಚಂದಾವರದಲ್ಲಿ ೨೨ ಕುಟುಂಬಗಳಿವೆ. ೬ ಕುಟುಂಬಗಳಿಗೆ ಪ್ರತ್ಯೇಕ ಶೌಚಾಲಯ ಇವೆ. ಅವುಗಳಲ್ಲಿ ೨ ಕುಟುಂಬ ಅವನ್ನು ಬಚ್ಚಲಾಗಿಸಿಕೊಂಡಿವೆ. ೨ ಕುಟುಂಬ ಅನ್ಯ ಕಾರ್ಯಕ್ಕಾಗಿ ಬಳಕೆ ಮಾಡಿಕೊಂಡರೆ ೨ ಕುಟುಂಬಗಳು ಶೌಚಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿವೆ. ೧೮ ಕುಟುಂಬಗಳು ಬಯಲನ್ನೇ ಆಶ್ರಯಿಸಿವೆ.

ಧಾರೇಶ್ವರದಲ್ಲಿ ೫ ಕುಟುಂಬಗಳಿವೆ. ಅವೆಲ್ಲವೂ ಬಯಲು ಶೌಚ ಬಳಸುತ್ತವೆ ಮತ್ತು ಬಯಲಿನಲ್ಲಿಯೇ ಸ್ನಾನ ಮಾಡುತ್ತವೆ. ನವಿಲುಗೋಣದಲ್ಲಿ ೯ ಕುಟುಂಬಗಳು ಸ್ನಾನಕ್ಕೆ ಬಯಲನ್ನು ಆಶ್ರಯಿಸಿವೆ ಹಾಗೆಯೇ ಶೌಚಕ್ಕೂ ಬಯಲನ್ನೇ ಬಳಸುತ್ತವೆ. ೫ ಕುಟುಂಬಗಳಿಗೆ ಪ್ರತ್ಯೇಕವಾದ ಶೌಚಾಲಯವಿದ್ದು ಶೌಚ, ಸ್ನಾನ ಎರಡಕ್ಕೂ ಆ ಶೌಚಾಲಯಗಳನ್ನೇ ಬಳಸುತ್ತಾರೆ. ಮುಗ್ವಾದಲ್ಲಿ ೫೯ ಕುಟುಂಬಗಳಿವೆ. ಅವುಗಳಲ್ಲಿ ೪೫ ಕುಟುಂಬಗಳು ಸ್ನಾನಗೃಹ ಹೊಂದಿರುವುದಿಲ್ಲ. ಪುರುಷರು ಬಯಲಿನಲ್ಲಿ ಸ್ನಾನ ಮಾಡಿದರೆ ಮಹಿಳೆಯರು ಸೀರೆಯ ನೆರಿಕೆ ರಚಿಸಿಕೊಂಡು ಅದರ ಮರೆಯಲ್ಲಿ ಸ್ನಾನ ಮಾಡುತ್ತಾರೆ. ೪ ಕುಟುಂಬಗಳು ತಮ್ಮ ಶೌಚಾಲಯವನ್ನೇ ಬಚ್ಚಲಾಗಿ ಬಳಸುತ್ತವೆ. ಹತ್ತು ಕುಟುಂಬಗಳಿಗೆ ಪ್ರತ್ಯೇಕ ಶೌಚಾಲಯಗಳಿವೆಯಾದರೂ ಅವು ಶೌಚ ಕಾರ್ಯಕ್ಕೆ ಬಳಕೆಗೊಳ್ಳದೆ ಅಡುಗೆ ಮಾಡಲು, ಸ್ನಾನ ಮಾಡಲು, ಉರುವಲು ಕಟ್ಟಿಗೆ ಇಡಲು ಬಳಕೆಗೊಳ್ಳುತ್ತವೆ.

ಹಳದೀಪುರದಲ್ಲಿ ೧೩೦ ಕುಟುಂಬಗಳಿವೆ. ಇದರಲ್ಲಿ ೧೦೧ ಕುಟುಂಬಗಳು ಬಯಲಿನಲ್ಲಿಯೇ ಸ್ನಾನ ಮಾಡುತ್ತವೆ. ಕೇವಲ ೩ ಕುಟುಂಬಗಳು ಚಿಕ್ಕ ಬಚ್ಚಲನ್ನು ಮಾಡಿಕೊಂಡಿವೆ. ೨೬ ಕುಟುಂಬಗಳು ಶೌಚಾಲಯಗಳನ್ನು ಹೊಂದಿವೆ. ಆದರೆ ಅವುಗಳೆಲ್ಲಾ ಬಹುತೇಕ ಬಚ್ಚಲಾಗಿ ಬಳಕೆಗೊಳ್ಳುತ್ತವೆ. ಹೊಸಕುಳಿಯಲ್ಲಿ ೨೮ ಕುಟುಂಬಗಳಲ್ಲಿ ೨೦ ಕುಟುಂಬಗಳಿಗೆ ಸರ್ಕಾರದ ಅನುದಾನದಲ್ಲಿ ನಿರ್ಮಿಸಿದ ಶೌಚಾಲಯಗಳಿವೆ. ಅವುಗಳು ಬಹುತೇಕ ಬಚ್ಚಲಾಗಿ,

ಅಡುಗೆಕೋಣೆಯಾಗಿ, ಕಟ್ಟಿಗೆ ಮತ್ತು ಬೇಡವಾದ ಪದಾರ್ಥಗಳನ್ನು ಇರಿಸಲು ಬಳಕೆಗೊಳ್ಳುತ್ತಿವೆ. ೮ ಕುಟುಂಬಗಳು ಬಯಲನ್ನೇ ಆಶ್ರಯಿಸಿವೆ.

ಒಟ್ಟಾರೆಯಾಗಿ ೫೨೦ ಕುಟುಂಬಗಳಲ್ಲಿ ೩೮೬ ಕುಟುಂಬಗಳು ಸ್ನಾನ, ಶೌಚಕ್ಕೆ ಬಯಲನ್ನೇ ಆಶ್ರಯಿಸಿವೆ. ೧೮ ಕುಟುಂಬಗಳು ಬಚ್ಚಲು ಹೊಂದಿವೆ. ೪೦೪ ಕುಟುಂಬಗಳಿಗೆ ಶೌಚಗೃಹಗಳೇ ಇಲ್ಲ. ೧೧೬ ಕುಟುಂಬಗಳಿಗೆ ಶೌಚಾಲಯಗಳಿವೆಯಾದರೂ ಅವುಗಳಲ್ಲಿ ಬಹುತೇಕ ನಿಗದಿತ ಕೆಲಸಕ್ಕೆ ಬಳಕೆಗೊಳ್ಳದೆ ಇತರೇ ಕಾರ್ಯಗಳಿಗಾಗಿ ಬಳಕೆಗೊಳ್ಳುವುದೇ ಹೆಚ್ಚಾಗಿದೆ.

ಕೋಷ್ಟಕ ೫.೧೯. ಸಮೀಕ್ಷೆಗೊಳಪಟ್ಟ ಕುಮಟಾ ಮತ್ತು ಹೊನ್ನಾವರ ತಾಲೂಕಿನ ಬಚ್ಚಲು ಮತ್ತು ಶೌಚಾಲಯ ಸ್ವರೂಪ

ತಾಲೂಕು	ಕುಟುಂಬ	ಬಚ್ಚಲು ಮತ್ತು ಶೌಚಾಲಯ ಸ್ವರೂಪ			
		ಬಯಲು	ಪ್ರತ್ಯೇಕ ಬಚ್ಚಲು	ಬಯಲು ಶೌಚಾಲಯ	ಪ್ರತ್ಯೇಕ ಶೌಚಾಲಯ
ಕುಮಟಾ	೪೪೨	೩೭೨	೭೦	೪೦೭	೩೫
ಹೊನ್ನಾವರ	೫೨೦	೩೮೬	೧೮	೪೦೪	೧೧೬
ಒಟ್ಟು	೯೬೨	೭೫೮	೮೮	೮೧೧	೧೫೧

ಕುಮಟಾ ಹಾಗೂ ಹೊನ್ನಾವರ ತಾಲೂಕುಗಳಲ್ಲಿ ಸಮೀಕ್ಷೆ ಮಾಡಿದ ಒಟ್ಟು ಕುಟುಂಬಗಳು ೯೬೨ ಇವೆ. ಇವುಗಳಲ್ಲಿ ಶೇಕಡ ೭೮.೭೯ ಕುಟುಂಬಗಳಿಗೆ ಬಯಲು ಸ್ನಾನವೇ ಗತಿ. ಕೇವಲ ಶೇಕಡ ೯.೧೪ ಕುಟುಂಬಗಳಿಗೆ ಬಚ್ಚಲುಗಳಿವೆಯಾದರೂ ಅಸಮರ್ಪಕವಾದ ಬಚ್ಚಲಾಗಿವೆ. ಶೇಕಡ ೮೪.೩೦ ಕುಟುಂಬಗಳು ಬಯಲು ಶೌಚಾಲಯವನ್ನು ಆಶ್ರಯಿಸಿವೆ. ಶೇಕಡ ೧೫.೭೯ ಕುಟುಂಬಗಳು ಶೌಚಾಲಯ ಹೊಂದಿವೆಯಾದರೂ ಶೌಚಕಾರ್ಯಕ್ಕಾಗಿ ಬಳಕೆಗೊಳ್ಳುವವು ಕೇವಲ ಬೆರಳೆಣಿಕೆಯಷ್ಟು ಮಾತ್ರ. ಬಹುತೇಕ ಸ್ನಾನ ಮಾಡಲು, ಕಟ್ಟಿಗೆ ಸಂಗ್ರಹಿಸಲು, ಅಡುಗೆ ಮಾಡಲು ಇತ್ಯಾದಿ ಅನ್ಯಕಾರ್ಯಗಳಿಗಾಗಿಯೇ ಬಳಕೆಗೊಳ್ಳುವುದು ಹೆಚ್ಚು.

ಮುಕ್ರಿಯರು ಸಮುದ್ರದ ಅಥವಾ ನದಿ, ಅಳಿವೆಗಳ ಸಮೀಪವೇ ತಮ್ಮ ನೆಲೆಗಳನ್ನು ಮಾಡಿಕೊಂಡಿವೆ. ಹೀಗಾಗಿ ಅವು ಬಯಲನ್ನೇ ಶೌಚಕ್ಕಾಗಿ ಆಶ್ರಯಿಸಿವೆಯೇನೋ ಎನಿಸುತ್ತದೆ. ಇನ್ನು ಗಂಡಸರು ಕೆಲಸ ಮುಗಿಸಿ ಸಾಯಂಕಾಲ ಮನೆಗೆ ಬಂದಾಗ ಬಿಸಿನೀರನ್ನು ದೇಹದ ಮೇಲೆ ಹಾಕಿಕೊಳ್ಳುತ್ತಾರೆ. ಮಹಿಳೆಯರೂ ಇದೇ ರೀತಿ ಹಗಲು ಕೆಲಸಕ್ಕೆ ಹೋಗಿ ಸಾಯಂಕಾಲ

ಬಂದ ಮೇಲೆ ಮೈಮೇಲೆ ಬಿಸಿನೀರು ಹಾಕಿಕೊಳ್ಳುವುದುಂಟು. ಮಳೆಗಾಲದಲ್ಲಿ ಕೆಲಸದಿಂದ ಬರುವಾಗಲೇ ಮಳೆಯಲ್ಲಿ ತೊಯ್ದುಕೊಂಡು ಬಂದಿರುತ್ತಾರೆ. ಸ್ನಾನದ ಅವಶ್ಯಕತೆಯೇ ಬೀಳುವುದಿಲ್ಲ. ಬಟ್ಟೆ ಬದಲಿಸಿಕೊಂಡರೆ ಮುಗಿಯಿತು ಎನ್ನುವ ಸ್ಥಿತಿ ಅವರದು.

ಭೂ ಒಡೆತನ

ಮುಕ್ರಿ ಸಮುದಾಯದವರು ಮೂಲತಃ ಕೃಷಿಕರಲ್ಲ. ಕೃಷಿಕರಷ್ಟೇ ಅಲ್ಲ ಗೇಣಿದಾರರಾಗಲೂ ಇವರು ಅರ್ಹರಲ್ಲವೆಂದು ಉತ್ತರಕನ್ನಡ ಜಿಲ್ಲೆಯ ಪಾರಂಪರಿಕ ವ್ಯವಸ್ಥೆ ನಂಬಿದೆ. ಆ ನಂಬಿಕೆಗೆ ತಕ್ಕಂತೆಯೇ ಇಂದಿಗೂ ಮುಕ್ರಿಗಳಿದ್ದಾರೆ. ಇಂದಿಗೂ ಮುಕ್ರಿ ಸಮುದಾಯದ ಬಹುಪಾಲು ಜನ ಕೃಷಿಕೂಲಿಗಳಾಗಿದ್ದಾರೆ. ಭೂಮಿ ಮತ್ತು ಮುಕ್ರಿಯರ ಸಂಬಂಧ ಕೇವಲ ಕೂಲಿ ಕೆಲಸಕ್ಕಷ್ಟೇ ಸೀಮಿತವಾಗಿದೆ. ಇಂದಿಗೂ ಈ ವ್ಯವಸ್ಥೆ ಬದಲಾಗದೇ ಇರುವುದು ಆಶ್ಚರ್ಯಕರ ವಿಚಾರ.

ಭೂಮಿಗೆ ಸಂಬಂಧಿಸಿದ ಎಷ್ಟೆಲ್ಲಾ ಸುಧಾರಿತ ಕಾನೂನುಗಳು ಬಂದಿವೆ. ಭೂಹೀನ ಪರಿಶಿಷ್ಟ ಸಮುದಾಯದವರು ಕೃಷಿ ಮಾಡಲು ಆಪೇಕ್ಷಿಸಿದರೆ ಸರ್ಕಾರ ಭೂಮಿಯನ್ನು ಮಂಜೂರು ಮಾಡುತ್ತದೆಂದು ಹೇಳಲಾಗುತ್ತದೆ. ಆದರೆ ಮುಕ್ರಿಯರ ವಿಚಾರದಲ್ಲಿ ಇಂದಿಗೂ ಈ ರೀತಿಯ ಬದಲಾವಣೆಗಳಾಗಿಲ್ಲ. ಅದಕ್ಕೆ ಬಹುಶಃ ಅವರ ಇಚ್ಛಾಶಕ್ತಿಯ ಕೊರತೆಯ ಇರಬಹುದು. ಇಂದು ಮುಕ್ರಿ ಸಮುದಾಯದೊಳಗೆ ಆಧುನಿಕ ಶಿಕ್ಷಣ ಪ್ರವೇಶ ಮಾಡಿದೆ. ಅದರ ಪರಿಣಾಮವಾಗಿ ಎಷ್ಟೋ ಜನ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅಂದರೆ ತಮ್ಮ ಮೂಲವೃತ್ತಿಯಾದ ಕೃಷಿಕೂಲಿಯಿಂದ ಪೂರ್ಣ ವಲ್ಲದಿದ್ದರೂ ಸ್ವಲ್ಪಮಟ್ಟಿಗಾದರೂ ಹೊರಬಂದು ಬೇರೆ ವೃತ್ತಿಗಳನ್ನು ಕೈಗೊಂಡಿದ್ದಾರೆ. ಆದರೆ ಅದರಾಚೆಗೆ ಕೃಷಿ ಭೂಮಿ ಪಡೆಯುವ ಇಚ್ಛೆಯನ್ನು ಮುಕ್ರಿ ಸಮುದಾಯದವರು ಹೊಂದಿರದೇ ಇರುವುದು ಆಶ್ಚರ್ಯವನ್ನುಂಟು ಮಾಡುತ್ತದೆ.

ಕೋಷ್ಟಕ ೫.೨೦. ಸಮೀಕ್ಷೆಗೊಳಪಟ್ಟ ಕುಮಟಾ ತಾಲೂಕಿನ ಭೂಹಿಡುವಳಿದಾರ ಹಾಗೂ ಭೂರಹಿತ ಮುಕ್ರಿ ಕುಟುಂಬಗಳ ವಿವರ

ಕ್ರ ಸಂ.	ಗ್ರಾಮ	ಒಟ್ಟು ಕುಟುಂಬ	ಭೂಹಿಡುವಳಿ ಹೊಂದಿದ ಕುಟುಂಬ	ಭೂಹಿಡುವಳಿ (ಎಕರೆಗಳಲ್ಲಿ)	ಭೂರಹಿತ ಕುಟುಂಬ
೧	ಕುಮಟಾ	೬೭	–	–	೬೭
೨	ಕಲಬಾಗ	೦೭	–	–	೦೭
೩	ಕೂಜಳ್ಳಿ	೨೫	೧	೨	೨೪
೪	ಗೋಕರ್ಣ	೭೪	೧	೧	೭೩
೫	ದಿವಗಿ	೧೯	–	–	೧೯
೬	ಮಿರ್ಜಾನ	೨೩	–	–	೨೩
೭	ವಾಲಗಳ್ಳಿ	೧೮	–	–	೧೮
೮	ಹೆಗಡೆ	೨೦೯			೨೦೯
		೪೪೨	೦೨	೦೩	೪೪೦

ಕುಮಟಾ ತಾಲೂಕಿನಲ್ಲಿ ನೆಲೆಸಿರುವ ಮುಕ್ರಿ ಸಮುದಾಯದ ಒಟ್ಟು ೪೪೨ ಕುಟುಂಬಗಳಲ್ಲಿ ಕೇವಲ ಎರಡು ಕುಟುಂಬಗಳು ಮಾತ್ರ ಕೃಷಿ ಭೂಮಿಯನ್ನು ಹೊಂದಿವೆ. ಕೂಜಳ್ಳಿ ಗ್ರಾಮದಲ್ಲಿ ಕೇವಲ ಒಂದು ಕುಟುಂಬ ಮಾತ್ರ ೨ ಎಕರೆ ಜಮೀನು ಹೊಂದಿದೆ. ಈ ಎರಡು ಎಕರೆ ಭೂಮಿಯಲ್ಲಿ ತೆಂಗು ಇದೆ. ತೆಂಗಿನ ಹೊರತಾಗಿ ಮಧ್ಯದಲ್ಲಿರುವ ಜಾಗದಲ್ಲಿ ಬಾಳೆ, ತರಕಾರಿಗಳನ್ನು ಅಲ್ಪಪ್ರಮಾಣದಲ್ಲಿ ಬೆಳೆದುಕೊಳ್ಳುತ್ತಾರೆ. ಉತ್ತರಕನ್ನಡ ಜಿಲ್ಲೆಯಲ್ಲಿ ಸಹಜವಾಗಿ ಮಳೆ ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ತೆಂಗಿಗೆ ಅಂತಹ ಹೆಚ್ಚುವರಿ ನೀರಿನ ಅವಶ್ಯಕತೆಯೂ ಇಲ್ಲ. ಕೃಷಿ ಭೂಮಿಯಲ್ಲಿ ಒಂದು ತೋಡು ಬಾವಿಯನ್ನು ಮಾಡಿಕೊಂಡಿರುವುದರಿಂದ ಮಳೆ ಬಾರದ ಸಂದರ್ಭದಲ್ಲಿ ತರಕಾರಿ, ಬಾಳೆಗೆ ಆ ಬಾವಿಯ ನೀರನ್ನು ಬಳಕೆ ಮಾಡಿಕೊಳ್ಳುತ್ತಾರೆ.

ಇನ್ನು ಗೋಕರ್ಣದಲ್ಲಿರುವ ಮುಕ್ರಿ ಸಮುದಾಯದ ಒಟ್ಟು ಕುಟುಂಬಗಳಲ್ಲಿ ಕೇವಲ ಒಂದು ಕುಟುಂಬ ಮಾತ್ರ ಒಂದು ಎಕರೆ ಭೂಮಿಯನ್ನು ಹೊಂದಿದೆ. ಈ ಕುಟುಂಬವು ಸಹ ತೆಂಗಿನ ತೋಟವನ್ನು ಮಾಡಿಕೊಂಡು ಸಾಲುಗಳ ಮಧ್ಯದಲ್ಲಿ ತರಕಾರಿ, ಬಾಳೆ ಇತ್ಯಾದಿ

ಬೆಳೆಯುತ್ತಾರೆ. ಹಾಗೆಯೇ ಅದೇ ಭೂಮಿಯಲ್ಲಿ ದನದ ಕೊಟ್ಟಿಗೆ ಮಾಡಿಕೊಂಡು ದನ ಸಾಕಣಿಯನ್ನು ಮಾಡಿಕೊಂಡಿದ್ದಾರೆ. ಕುಮಟಾ ತಾಲೂಕಿನ ಒಟ್ಟು ೪೪೨ ಕುಟುಂಬಗಳಲ್ಲಿ ಭೂಮಿಯನ್ನು ಹೊಂದಿದ ಕುಟುಂಬಗಳು ಎರಡು ಮಾತ್ರವಿದ್ದು ಅವುಗಳ ಶೇಕಡವಾರು ಪ್ರಮಾಣವು ಶೇಕಡ ೦.೪೫ರಷ್ಟು ಮಾತ್ರವಿದೆ. ಇನ್ನು ೯೯.೫೫ ರಷ್ಟು ಕುಟುಂಬಗಳು ಭೂಹೀನವಾಗಿವೆ.

ಕೋಷ್ಟಕ ೫.೨೧. ಸಮೀಕ್ಷೆಗೊಳಪಟ್ಟ ಹೊನ್ನಾವರ ತಾಲೂಕು ಭೂಹಿಡುವಳಿ ಹಾಗೂ ಭೂರಹಿತ ಮುಕ್ರಿ ಕುಟುಂಬಗಳ ವಿವರ

ಕ್ರ ಸಂ.	ಗ್ರಾಮ	ಒಟ್ಟು ಕುಟುಂಬ	ಭೂಹಿಡುವಳಿ ಹೊಂದಿದ ಕುಟುಂಬ	ಭೂಹಿಡುವಳಿ (ಎಕರೆಗಳಲ್ಲಿ)	ಭೂರಹಿತ ಕುಟುಂಬ
೧	ಕರ್ಕಿ	೧೨೧	–	–	೧೨೧
೨	ಕಡತೋಕ	೧೪೧	–	–	೧೪೧
೩	ಚಂದಾವರ	೨೨	–	–	೨೨
೪	ಧಾರೇಶ್ವರ	೫	–	–	೫
೫	ನವಿಲುಗೋಣ	೧೪	–	–	೧೪
೬	ಮುಗ್ವಾ	೫೯	–	–	೫೯
೭	ಹಳದೀಪುರ	೧೩೦	–	–	೧೩೦
೮	ಹೊಸಕುಳಿ	೨೮	–	–	೨೮
		೫೨೦	–	–	೫೨೦

ಹೊನ್ನಾವರ ತಾಲೂಕಿನಲ್ಲಿ ಮುಕ್ರಿಯರ ೫೨೦ ಕುಟುಂಬಗಳು ಸಮೀಕ್ಷೆಯಲ್ಲಿ ದೊರೆತಿವೆ. ಈ ಯಾವ ಕುಟುಂಬಕ್ಕೂ ತಾವು ನೆಲೆಸಿದ ಮನೆಯ ನಿವೇಶನದ ಹೊರತಾಗಿ ಒಂದು ತುಂಡುಭೂಮಿಯೂ ಇಲ್ಲದಿರುವುದು ಕಂಡುಬಂದಿತು. ಅಂದರೆ ಶೇಕಡ ೧೦೦ ರಷ್ಟು ಭೂಹೀನ ಮುಕ್ರಿ ಕುಟುಂಬಗಳು ಈ ತಾಲೂಕಿನಲ್ಲಿವೆ. ಎರಡು ತಾಲೂಕುಗಳ ಮಧ್ಯದಲ್ಲಿ ಕೇವಲ ಎರಡು ಕುಟುಂಬಗಳಿಗೆ ಮಾತ್ರ ಜಮೀನು ಇದ್ದು ಎರಡೂ ಕುಟುಂಬಗಳು ಸಣ್ಣ ಹಿಡುವಳಿದಾರರಾಗಿದ್ದಾರೆ.

ಕೋಷ್ಟಕ ೫.೨೨. ಸಮೀಕ್ಷೆಗೊಳಪಟ್ಟ ಕುಮಟಾ ತಾಲೂಕಿನ ಮುಕ್ರಿ ಸಮುದಾಯದ ಕುಟುಂಬವಾರು ಪಶುಸಂಪತ್ತು

ಗ್ರಾಮ	ಕುಟುಂಬ	ಪಶು ಸಂಪತ್ತು					
		ಎತ್ತು	ಆಕಳು	ಎಮ್ಮೆ	ಕುರಿ	ಮೇಕೆ	ಕೋಳಿ
ಕುಮಟಾ	೬೭	–	೧	–	–	–	೮
ಕಲಬಾಗ	೭	–	೨	–	–	–	೪
ಕೂಜಳ್ಳಿ	೨೫	೦೨	೨೩	–	–	–	೩೫
ಗೋಕರ್ಣ	೭೪	–	೩	–	–	–	೪೪
ದಿವಗಿ	೧೯	–	–	–	–	–	೫
ಮಿರ್ಜಾನ	೨೩	–	–	–	–	–	೨೯
ವಾಲಗಳ್ಳಿ	೧೮	–	–	–	–	–	೩೦
ಹೆಗಡೆ	೨೦೯	೪	೧೪	–	–	–	೧೧೭
ಒಟ್ಟು	**೪೪೨**	**೦೬**	**೪೩**	–	–	–	**೨೭೨**

ಕುಮಟಾ ತಾಲೂಕಿನ ೮ ಊರುಗಳಲ್ಲಿ ಮುಕ್ರಿಯರ ೪೪೨ ಕುಟುಂಬಗಳು ನೆಲೆಸಿವೆ. ತಾಲೂಕಿನ ಕೂಜಳ್ಳಿ ಮತ್ತು ಹೆಗಡೆ ಗ್ರಾಮಗಳಲ್ಲಿ ಮಾತ್ರ ೪ ಎತ್ತುಗಳನ್ನು ಸಾಕಲಾಗಿದೆ. ಎತ್ತನ್ನು ಸಾಕಿರುವ ಕುಟುಂಬಗಳು ಕೃಷಿಭೂಮಿ ಹೊಂದಿರುವುದಿಲ್ಲ. ಆದರೆ ಬೇರೆ ಕೃಷಿಕರಲ್ಲಿ ಎತ್ತನ್ನು ಬಳಸಿ ಕೂಲಿ ಮಾಡುವ ಕುಟುಂಬಗಳಾಗಿವೆ.

ಕುಮಟಾದಲ್ಲಿ ೧, ಕಲಬಾಗದಲ್ಲಿ ೨, ಕೂಜಳ್ಳಿ ೨೩, ಗೋಕರ್ಣದಲ್ಲಿ ೩, ಹೆಗಡೆಯಲ್ಲಿ ೧೪ (ಒಂದೇ ಕುಟುಂಬಕ್ಕೆ ಸೇರಿದವುಗಳಲ್ಲ) ಆಕಳು ಸಾಕಿದ್ದಾರೆ. ಬಹುತೇಕ ಇವು ಕುಟುಂಬದ ಹಾಲಿನ ಸಮಸ್ಯೆ ನೀಗುವ ದೇಶೀ ತಳಿಯ ಆಕಳಾಗಿವೆ. ಜರ್ಸಿ ಅಥವಾ ಇತರೆ ಅಧಿಕ ಹಾಲನ್ನು ನೀಡುವ ತಳಿಗಳನ್ನು ಯಾವುದೊಂದು ಕುಟುಂಬವೂ ಸಾಕಿರುವುದಿಲ್ಲ. ಇನ್ನುಳಿದಂತೆ ಮುಕ್ರಿ ಸಮುದಾಯದ ಶೇಕಡ ೪೦ರಷ್ಟು ಕುಟುಂಬಗಳು ಕೋಳಿಯನ್ನು ಸಾಕಿದ್ದಾರೆ. ಸ್ಥಳೀಯವಾಗಿ ದೊರೆಯುವ ಮೀನಿನ ಹೊರತಾಗಿ ಮುಕ್ರಿಯರ ಮಾಂಸಾಹಾರದ ಅಗತ್ಯವನ್ನು ಅಲ್ಪಮಟ್ಟಿಗೆ ಕೋಳಿಗಳು ಪೂರೈಸುತ್ತವೆ.

ಕೋಷ್ಟಕ ೫.೨೩. ಸಮೀಕ್ಷೆಗೊಳಪಟ್ಟ ಹೊನ್ನಾವರ ತಾಲೂಕಿನ ಮುಕ್ರಿ ಸಮುದಾಯದ ಕುಟುಂಬವಾರು ಪಶುಸಂಪತ್ತು

ಗ್ರಾಮ	ಕುಟುಂಬ	ಪಶು ಸಂಪತ್ತು					
		ಎತ್ತು	ಆಕಳು	ಎಮ್ಮೆ	ಕುರಿ	ಮೇಕೆ	ಕೋಳಿ
ಕರ್ಕಿ	೧೨೧	–	೧	–	–	–	೩೭
ಕಡತೋಕ	೧೪೧	೨	೩೨	–	–	–	೫೬
ಚಂದಾವರ	೨೨	–	೭	–	–	–	–
ಧಾರೇಶ್ವರ	೫	–	–	–	–	–	೪
ನವಿಲುಗೋಣ	೧೪	–	–	–	–	–	೪
ಮುಗ್ವಾ	೫೯	–	–	–	–	–	೪೮
ಹಳದೀಪುರ	೧೩೦	೨೪	೩೬	೨	೪	೧೬	೧೧೫
ಹೊಸಕುಳಿ	೨೮	೨	೨				೧೨
ಒಟ್ಟು	**೫೨೦**	**೨೮**	**೭೮**	**೨**	**೪**	**೧೬**	**೨೭೬**

ಹೊನ್ನಾವರ ತಾಲೂಕಿನ ೮ ಊರುಗಳಲ್ಲಿ ಮುಕ್ರಿಯರ ೫೨೦ ಕುಟುಂಬಗಳು ನೆಲೆಸಿವೆ. ತಾಲೂಕಿನ ಕಡತೋಕ, ಹಳದೀಪುರ, ಹೊಸಕುಳಿ ಗ್ರಾಮಗಳಲ್ಲಿ ಒಟ್ಟು ೨೮ ಎತ್ತುಗಳನ್ನು ಸಾಕಲಾಗಿದೆ. ಎತ್ತನ್ನು ಸಾಕಿರುವ ಕುಟುಂಬಗಳು ಕೃಷಿಭೂಮಿ ಹೊಂದಿರುವುದಿಲ್ಲ. ಆದರೆ ಬೇರೆ ಕೃಷಿಕರಲ್ಲಿಯೆ ಎತ್ತನ್ನು ಬಳಸಿ ಕೂಲಿ ಮಾಡುವ ಕುಟುಂಬಗಳಾಗಿವೆ.

ಕರ್ಕಿ, ಕಡತೋಕ, ಚಂದಾವರ, ಹಳದೀಪುರ, ಹೊಸಕುಳಿಗಳಲ್ಲಿ ೭೮ ಆಕಳು ಸಾಕಿದ್ದಾರೆ. ಬಹುತೇಕ ಇವು ಕುಟುಂಬದ ಹಾಲಿನ ಸಮಸ್ಯೆ ನೀಗುವ ದೇಶೀ ತಳಿಯ ಆಕಳಾಗಿವೆ. ಜರ್ಸಿ ಅಥವಾ ಇತರೆ ಅಧಿಕ ಹಾಲನ್ನು ನೀಡುವ ತಳಿಗಳನ್ನು ಯಾವದೊಂದು ಕುಟುಂಬವೂ ಸಾಕಿರುವುದಿಲ್ಲ. ಹಳದೀಪುರ, ಹೊಸಕುಳಿಗಳಲ್ಲಿ ತಲಾ ಒಂದರಂತೆ ಎರಡು ಎಮ್ಮೆಗಳನ್ನು ಸಾಕಲಾಗಿದೆ. ಹಳದೀಪುರದಲ್ಲಿ ಕೃಷಿಕೂಲಿ ಮಾಡುವ ಎರಡು ಕುಟುಂಬದ ಮಹಿಳೆಯರು ಎರಡೆರಡು ಒಟ್ಟು ೪ ಕುರಿಗಳನ್ನು ಸಾಕಿದ್ದಾರೆ. ಅದರಾಚೆಗೆ ೧೬ ಮೇಕೆಗಳೂ ಕಂಡುಬರುತ್ತವೆ. ಬಹುತೇಕ ಮುಕ್ರಿಯ ೨೮ ಕುಟುಂಬಗಳಲ್ಲಿಯೂ ಕೋಳಿ ಕಂಡುಬರುತ್ತವೆ. ಇವರು ಸಾಕಿರುವ

೨೭೬ ಕೋಳಿಗಳಿವೆ. ಆಶ್ಚರ್ಯವೆಂದರೆ ಹಳದೀಪುರದ ಮುಕ್ರಿ ಸಮುದಾಯದ ಒಂದು ಕುಟುಂಬವು ೧೩ ಹಂದಿಗಳನ್ನು ಸಾಕಿದೆ.

ಹೊನ್ನಾವರ ತಾಲೂಕಿನ ಮುಕ್ರಿ ಸಮುದಾಯದ ಶೇಕಡ ೫.೩೮ ರಷ್ಟು ಕುಟುಂಬಗಳು ಮಾತ್ರ ಪಶುಸಂಪತ್ತನ್ನು ಹೊಂದಿವೆ.

ಸಮೀಕ್ಷೆಗೊಳಪಟ್ಟ ಕುಟುಂಬಗಳ ಪಡಿತರ ಚೀಟಿ ವಿವರ

ಮತದಾರರ ಚೀಟಿ, ಆಧಾರ ಕಾರ್ಡುಗಳಂತೆ ಪಡಿತರ ಚೀಟಿಯು ಇಂದು ಭಾರತೀಯ ನಾಗರೀಕನಿಗೆ ಅತ್ಯವಶ್ಯಕವಾದುದು ಎಂದು ಹೇಳಲಾಗುತ್ತದೆ. ಪಡಿತರ ಚೀಟಿಗಳಲ್ಲಿ ಬಡತನ ರೇಖೆಗಿಂತ ಮೇಲಿರುವವರಿಗೆ, ಬಡತನ ರೇಖೆಗಿಂತ ಕೆಳಗಿರುವವರಿಗೆ ಮತ್ತು ಕಡುಬಡವರಿಗೆಂದು ಮೂರು ರೀತಿಯ ಪಡಿತರ ಚೀಟಿಗಳನ್ನು ಮಾಡಲಾಗಿದೆ. ಬಡತನ ರೇಖೆಗಿಂತ ಮೇಲಿರುವವರಿಗೆ ಕೇಸರಿ ಕಾರ್ಡು, ಬಡತನ ರೇಖೆಗಿಂತ ಕೆಳಗಿರುವವರಿಗೆ ಹಸಿರು ಕಾರ್ಡು, ಕಡುಬಡವರಿಗೆ ಅಂತ್ಯೋದಯ ಕಾರ್ಡುಗಳನ್ನು ಮಾಡಲಾಗಿದೆ. ಬಡತನ ರೇಖೆಯ ಕೆಳಗಿರುವವರಿಗೆ ಕಾರ್ಡಿನೊಳಗಿರುವ ಪ್ರತಿಯೊಬ್ಬ ವ್ಯಕ್ತಿಗೆ ಮಾಸಿಕವಾಗಿ ತಲಾ ೭ ಕಿಲೋಗ್ರಾಂ ಅಕ್ಕಿ, ಒಂದು ಕಿಲೋಗ್ರಾಂ ತೊಗರಿಬೇಳೆ, ಉಪ್ಪು ಮುಂತಾದವುಗಳನ್ನು ಕೇವಲ ರೂಪಾಯಿ ೪೦/-ನ್ನು ಪಡೆದು ನೀಡಬೇಕೆಂದಿದೆ. ಕಡುಬಡವರಿಗೆ ಪ್ರತಿ ಕಾರ್ಡಿಗೆ ೩೨ ಕಿಲೋಗ್ರಾಂ ಅಕ್ಕಿ, ಒಂದು ಕಿಲೋಗ್ರಾಂ ಬೇಳೆ, ಉಪ್ಪು ನೀಡಲಾಗುತ್ತದೆ. ಭಾರತದ ಪ್ರತಿಯೊಬ್ಬ ಪ್ರಜೆಯು ಪಡಿತರ ಚೀಟಿಯನ್ನು ಹೊಂದುವುದು ಆತನ ಹಕ್ಕಾಗಿರುತ್ತದೆ. ಆದರೆ ಇಂದಿಗೂ ಕಾಡುವಾಸಿ ಹಾಗೂ ನಾಡುವಾಸಿ ಬುಡಕಟ್ಟು, ದಲಿತ ಕುಟುಂಬಗಳು ಪಡಿತರ ಚೀಟಿಯನ್ನು ಪಡೆಯಲು ಸೋತಿವೆ ಎಂಬುದನ್ನು ಅಧ್ಯಯನದ ಅಂಕಿಅಂಶಗಳು ತಿಳಿಸುತ್ತವೆ.


ಪ್ರಸ್ತುತ ಮುಕ್ರಿ ಸಮುದಾಯದ ಎಷ್ಟು ಕುಟುಂಬಗಳು ಪಡಿತರ ಚೀಟಿಯನ್ನು ಹೊಂದಿವೆ ಮತ್ತು ಎಷ್ಟು ಕುಟುಂಬಗಳು ಪಡಿತರ ಚೀಟಿ ಪಡೆಯಲು ಸಾಧ್ಯವಾಗಿಲ್ಲ ಎಂಬುದನ್ನು ನೋಡಲಾಗಿದೆ.

ಕೋಷ್ಟಕ ೫.೨೪. ಸಮೀಕ್ಷೆಗೊಳಪಟ್ಟ ಕುಮಟಾ ತಾಲೂಕಿನ ಪಡಿತರ ಚೀಟಿ ಹೊಂದಿದ ಕುಟುಂಬಗಳ ವಿವರ

ಗ್ರಾಮ	ಕುಟುಂಬಗಳು	ಪಡಿತರ ಚೀಟಿ ಹೊಂದಿರುವ ಕುಟುಂಬಗಳು	ಪಡಿತರ ಚೀಟಿ ಹೊಂದಿರದ ಕುಟುಂಬಗಳು
ಕುಮಟಾ	೬೭	೬೫	೨
ಕಲಬಾಗ	೭	೭	೦
ಕೂಜಳ್ಳಿ	೨೫	೨೩	೨
ಗೋಕರ್ಣ	೭೪	೭೨	೨
ದಿವಗಿ	೧೯	೧೯	೦
ಮಿರ್ಜಾನ	೨೩	೨೦	೩
ವಾಲಗಳ್ಳಿ	೧೮	೧೭	೧
ಹೆಗಡೆ	೨೦೯	೨೦೦	೯
ಒಟ್ಟು	**೪೪೨**	**೪೨೩**	೧೯

ಕುಮಟಾ ತಾಲೂಕಿನಲ್ಲಿ ಸರ್ಕಾರಿ ಕೆಲಸ ಹೊಂದಿರುವವರು ಒಟ್ಟು ೧೩ ಜನರಿದ್ದಾರೆ. ಅವರ ಕುಟುಂಬಗಳು ಕೇಸರಿ ಕಾರ್ಡು ಹೊಂದಿವೆ. ಅವುಗಳ ಹೊರತಾಗಿ ಬಹುತೇಕ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳೆಂದು ಪರಿಗಣಿಸಿರುವುದರಿಂದ ಬಹುತೇಕ ಎಲ್ಲಾ ಕುಟುಂಬಗಳೂ ಹಸಿರು ಕಾರ್ಡನ್ನು ಹೊಂದಿವೆ. ಆದರೆ ಕುಮಟಾ ೨, ಕೂಜಳ್ಳಿ ೨, ಗೋಕರ್ಣ ೨, ಮಿರ್ಜಾನ ೩, ವಾಲಗಳ್ಳಿ ೧, ಹೆಗಡೆ ೯ ಹೀಗೆ ಒಟ್ಟು ೧೯ ಕುಟುಂಬಗಳು ಪಡಿತರ ಚೀಟಿಯನ್ನು ಹೊಂದಲು ಸಾಧ್ಯವಾಗಿಲ್ಲ.

ಲಂಬಚಿತ್ರ ೫.೧. ಸಮೀಕ್ಷೆಗೊಳಪಟ್ಟ ಕುಮಟಾ ತಾಲೂಕಿನ ಮುಕ್ರಿ ಸಮುದಾಯದ ಪಡಿತರ ಚೀಟಿ ಹೊಂದಿದ ಮತ್ತು ಪಡಿತರ ಚೀಟಿ ಇಲ್ಲದವರ ಪ್ರಮಾಣ



ಅಂದರೆ ಈ ಕುಟುಂಬಗಳಿಗೆ ಪಡಿತರ ಚೀಟಿ ಇಲ್ಲವೇ ಇಲ್ಲವೆಂದೇನಿಲ್ಲ. ಇತ್ತೀಚೆಗೆ ಆಧಾರ್ ಲಿಂಕ್ ಮಾಡಿಸದೇ ಹೋಗಿರುವುದರಿಂದ ಪಡಿತರ ಚೀಟಿ ರದ್ದಾಗಿವೆ. ಪಡಿತರ ಚೀಟಿ ರದ್ದಾದ ಕುಟುಂಬಗಳು ಮತ್ತೊಮ್ಮೆ ಹೊಸ ಕಾರ್ಡಿಗೆ ಅರ್ಜಿ ಸಲ್ಲಿಸಬೇಕು. ಅನಿಯಮಿತ ಕರೆಂಟ್, ಕೂಲಿಗಾಗಿ ಪರದಾಟ, ನೆಟ್‌ವರ್ಕ್ ಪ್ರಾಬ್ಲಂ ಇತ್ಯಾದಿ ಕಾರಣಗಳಿಗಾಗಿ ಇಂದಿಗೂ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಲಾಗಿಲ್ಲವೆಂದು ವಕ್ತೃಗಳು ತಿಳಿಸಿದರು.


ಕೋಷ್ಟಕ ೫.೨೫. ಸಮೀಕ್ಷೆಗೊಳಪಟ್ಟ ಹೊನ್ನಾವರ ತಾಲೂಕಿನ ಪಡಿತರ ಚೀಟಿ ಹೊಂದಿದ ಕುಟುಂಬಗಳ ವಿವರ

ಗ್ರಾಮ	ಕುಟುಂಬಗಳು	ಪಡಿತರ ಚೀಟಿ ಹೊಂದಿರುವ ಕುಟುಂಬಗಳು	ಪಡಿತರ ಚೀಟಿ ಹೊಂದಿರದ ಕುಟುಂಬಗಳು
ಕರ್ಕಿ	೧೨೧	೧೧೭	೪
ಕಡತೋಕ	೧೪೧	೧೩೮	೩
ಚಂದಾವರ	೨೨	೨೨	೦
ಧಾರೇಶ್ವರ	೫	೫	೦

ನವಿಲುಗೋಣ	೧೪		೧೨		೨	
ಮುಗ್ವಾ	೫೯		೫೭		೨	
ಹಳದೀಪುರ	೧೩೦		೧೦೮		೨೨	
ಹೊಸಕುಳಿ	೨೮		೨೭		೧	
ಒಟ್ಟು	೫೨೦		೪೮೬		೩೪	

ಹೊನ್ನಾವರ ತಾಲೂಕಿನಲ್ಲಿ ಒಟ್ಟು ೮೪ ಜನ ಮುಕ್ರಿಯರು ಸರ್ಕಾರಿ ನೌಕರರಿದ್ದಾರೆ. ಈ ಕುಟುಂಬಗಳ ಹೊರತಾಗಿ ಇನ್ನುಳಿದ ಎಲ್ಲಾ ಕುಟುಂಬಗಳು ಹಸಿರು ಪಡಿತರ ಚೀಟಿ ಹೊಂದಿದವರೆ. ಇಲ್ಲಿಯೂ ೫೨೦ ಕುಟುಂಬಗಳಲ್ಲಿ ೪೮೬ ಕುಟುಂಬಗಳು ಪಡಿತರಚೀಟಿ ಹೊಂದಿವೆ.

ಕೋಷ್ಟಕ ೫.೨. ಸಮೀಕ್ಷೆಗೊಳಪಟ್ಟ ಹೊನ್ನಾವರ ತಾಲೂಕಿನ ಮುಕ್ರಿ ಸಮುದಾಯದ ಪಡಿತರ ಚೀಟಿ ಹೊಂದಿದ ಮತ್ತು ಪಡಿತರ ಚೀಟಿ ಇಲ್ಲದವರ ಪ್ರಮಾಣ



ಆದರೆ ಕರ್ಕಿ ೪, ಕಡತೋಕ ೩, ನವಿಲುಗೋಣ ೨, ಮುಗ್ವಾ ೨, ಹಳದೀಪುರ ೨೨, ಹೊಸಕುಳಿಯ ಒಂದು ಕುಟುಂಬ ಪಡಿತರ ಚೀಟಿ ಹೊಂದಿಲ್ಲದಿರುವುದು ಕ್ಷೇತ್ರಕಾರ್ಯದಲ್ಲಿ ತಿಳಿದುಬಂದಿತು. ಇಂತಹ ಒಟ್ಟು ೩೪ ಕುಟುಂಬಗಳು ಹೊನ್ನಾವರ ತಾಲೂಕಿನಲ್ಲಿ ಕಂಡುಬಂದಿವೆ. ಈ ಕುಟುಂಬಗಳೂ ಸಹ ಆಧಾರ ಲಿಂಕ್ ಮಾಡಲು ಸಾಧ್ಯವಾಗದೆ ಪಡಿತರ ಚೀಟಿಯಿಂದ ವಂಚಿತಗೊಂಡಿವೆ. ಕುಮಟಾ ತಾಲೂಕಿನಲ್ಲಿರುವ ಸಮಸ್ಯೆಯೇ ಇಲ್ಲಿಯೂ ಇರುವುದಾಗಿ ವಕ್ತೃಗಳು ತಿಳಿಸಿದರು.



ಕುಮಟಾ ತಾಲೂಕಿನಲ್ಲಿ ಶೇಕಡ ೯೫.೭೦ ಕುಟುಂಬಗಳು ಪಡಿತರ ಚೀಟಿ ಹೊಂದಿವೆ. ಶೇಕಡ ೪.೩೦ ಕುಟುಂಬಗಳು ಪಡಿತರ ಚೀಟಿಯಿಂದ ವಂಚಿತವಾಗಿವೆ. ಅದೇ ರೀತಿ ಹೊನ್ನಾವರ ತಾಲೂಕಿನಲ್ಲಿ ಶೇಕಡ ೯೩.೪೬ ಮುಕ್ರಿ ಕುಟುಂಬಗಳು ಪಡಿತರ ಚೀಟಿ ಹೊಂದಿವೆ. ಶೇಕಡ ೬.೫೪ ಕುಟುಂಬಗಳು ಪಡಿತರ ಚೀಟಿಯಿಂದ ವಂಚಿತವಾಗಿವೆ.

ಎರಡೂ ತಾಲೂಕುಗಳ ಮಧ್ಯ ಸಮೀಕ್ಷೆ ಮಾಡಿದ ಒಟ್ಟು ಕುಟುಂಬಗಳು ೯೬೨, ಇವುಗಳಲ್ಲಿ ೯೦೯ ಕುಟುಂಬಗಳು ಪಡಿತರ ಚೀಟಿ ಹೊಂದಿವೆ. ಇನ್ನೂ ೫೩ ಕುಟುಂಬಗಳಿಗೆ ಪಡಿತರ ಚೀಟಿ ದೊರೆತಿರುವುದಿಲ್ಲ. ಅಂದರೆ ಒಟ್ಟು ಮುಕ್ರಿ ಕುಟುಂಬಗಳಲ್ಲಿ ಶೇಕಡ ೯೪.೪೯ ಕುಟುಂಬಗಳು ಪಡಿತರ ಚೀಟಿ ಹೊಂದಿವೆ. ಶೇಕಡ ೫.೫೧ ಕುಟುಂಬಗಳು ಪಡಿತರ ಚೀಟಿ ಹೊಂದಲು ಸಾಧ್ಯವಾಗಿರುವುದಿಲ್ಲ.

ಮುಕ್ರಿಯರ ಬದುಕು ಇನ್ನೂ ೧೦೦ ವರ್ಷಗಳಷ್ಟು ಹಿಂದಿದೆಯಂದೇ ಹೇಳಬಹುದು. ಆರ್ಥಿಕವಾಗಿ ಎಷ್ಟೆಲ್ಲಾ ಸಾಧನೆಯಾಗಿದೆ ಎಂದು ಪತ್ರಿಕೆಗಳಲ್ಲಿ ಓದುತ್ತೇವೆಯೇ ಹೊರತು ಆ ಮಾತು ಮುಕ್ರಿಯರ ವಿಚಾರದಲ್ಲಿ ತಪ್ಪಾಗಿದೆಯೆಂದು ತಿಳಿಯಬಹುದು.

೫.೧೩. ಶೈಕ್ಷಣಿಕ ಸ್ಥಿತಿಗತಿ

ಭಾರತೀಯ ಜನಸಂಖ್ಯೆಯ ಬಹುಪಾಲನ್ನು ಈ ದೇಶದ ತಳಸಮುದಾಯಗಳು ಹೊಂದಿವೆ ಎನ್ನುವ ಮಾತು ಚಾಲ್ತಿಯಲ್ಲಿದೆ. 'ಬಡತನಕ್ಕೆ ಬಾಯಿಗಳು ಹೆಚ್ಚು' ಎನ್ನುವ ಗಾದೆ ಮಾತು ಈ ಅರ್ಥದಲ್ಲಿಯೇ ಬಳಕೆಗೊಳ್ಳುತ್ತಿದೆ. ಜನಸಂಖ್ಯೆಯ ಬೆಳವಣಿಗೆಯನ್ನು ತಡೆಯಲು ಜನಸಂಖ್ಯಾಶಾಸ್ತ್ರಜ್ಞರೆಲ್ಲ ಶಿಫಾರಸ್ಸು ಮಾಡುವುದು ಜನತೆಯಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚಬೇಕು. ಅದರಲ್ಲೂ ಮುಖ್ಯವಾಗಿ ಮಹಿಳೆಯರ ಸಾಕ್ಷರತೆಯು ಜನಸಂಖ್ಯೆಯನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದೇ ಹೇಳುತ್ತಾರೆ. ಜನಸಂಖ್ಯೆಯನ್ನು ನಿಯಂತ್ರಿಸುವಲ್ಲಿನ ವೈಫಲ್ಯಗಳ ಕುರಿತು ಆಶೀಶ್ ಬೋಸ್‌ರವರು ಈ ಕೆಳಗಿನ ಕಾರಣಗಳನ್ನು ನೀಡುತ್ತಾರೆ.

೧. ಶೀಘ್ರವಾಗಿ ಅನಕ್ಷರತೆಯನ್ನು ತೊಲಗಿಸುವಲ್ಲಿ ಇರುವ ಭಾರತೀಯರ ವೈಫಲ್ಯ

೨. ಜನಸಾಮಾನ್ಯರ ಕನಿಷ್ಠ ಜೀವನಾವಶ್ಯಕತೆಯನ್ನು ಪೂರೈಸುವಲ್ಲಿ ಇರುವ ಕೊರತೆ

೩. ಸಮಾಜದಲ್ಲಿ ಅನಕ್ಷರತೆಯು ವ್ಯಾಪಕವಾಗಿರುವುದರಿಂದ ಜನಸಂಖ್ಯೆಯ ಬೆಳವಣಿಗೆಯ ನಿಯಂತ್ರಣದ ಮಹತ್ವವನ್ನು ತಿಳಿಸಿಕೊಡುವುದರಲ್ಲಿನ ವೈಫಲ್ಯ.

ಬೋಸ್‌ರವರು ಮಹಿಳಾ ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸಿದಲ್ಲಿ ಮಾತ್ರ ಜನಸಂಖ್ಯೆಯ ನಿಯಂತ್ರಣ ಸಾಧ್ಯವಾಗುತ್ತದೆ ಎಂದು ಒತ್ತಿಹೇಳುತ್ತಾರೆ.

'ಸಾಕ್ಷರತೆಯಲ್ಲಿ ಕರ್ನಾಟಕದ ಸಾಧನೆ ಉತ್ತಮವಾಗಿದೆ. ರಾಜ್ಯದ ಸಾಕ್ಷರತೆಯ ಪ್ರಮಾಣವೂ ರಾಷ್ಟ್ರದ ಸಾಕ್ಷರತಾ ಪ್ರಮಾಣಕ್ಕಿಂತ ಅಧಿಕವಾಗಿದೆ. ಆದರೆ ಪ್ರಾದೇಶಿಕ ಸ್ವರೂಪ ಮತ್ತು ಮಹಿಳಾ ಸಾಕ್ಷರತೆಗೆ ಸಂಬಂಧಿಸಿದಂತೆ ಅದರ ಸಾಧನೆ ಹೇಳಿಕೊಳ್ಳುವಂತಿಲ್ಲ. ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಒಟ್ಟು ಸಾಕ್ಷರತೆಯ ಪ್ರಮಾಣ ಶೇ. ೭೦ಕ್ಕಿಂತ ಕಡಿಮೆ ಇದೆ. ಕರ್ನಾಟಕವು ತನ್ನ ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸಿಕೊಳ್ಳುವುದರಲ್ಲಿ ವಿಫಲವಾಗಿರುವುದಕ್ಕೆ ಸಾಕ್ಷರತೆಯ ಪ್ರಾದೇಶಿಕ ಸ್ವರೂಪವು ನಿದರ್ಶನವಾಗಿದೆ.'[೩] ಈ ಮಾತುಗಳು ಸಮುದಾಯಗಳಿಗೂ ಅನ್ವಯಿಸುತ್ತದೆ. ಕರ್ನಾಟಕದಲ್ಲಿರುವ ಅನುಸೂಚಿತ ಪರಿಶಿಷ್ಟ ಜಾತಿಗಳ ಸಂಖ್ಯೆಯು ೧೦೧ರಷ್ಟಿದೆ. ಈ ೧೦೧ ಸಮುದಾಯಗಳ ಒಟ್ಟು ಸಾಕ್ಷರತಾ ಪ್ರಮಾಣವನ್ನು ಒಟ್ಟಾಗಿ ಪರಿಶಿಷ್ಟ ಜಾತಿಗಳ ಸಾಕ್ಷರತಾ ಪ್ರಮಾಣವೆಂದು ಪರಿಗಣಿಸಲಾಗುತ್ತದೆ. ವಾಸ್ತವವಾಗಿ ಈ ೧೦೧ ಸಮುದಾಯಗಳಲ್ಲಿ ಕೆಲವೇ ಕೆಲವು ಸಮುದಾಯಗಳು ಸಾಕ್ಷರತೆಯನ್ನು ಪಡೆಯುವಲ್ಲಿ ಪೂರ್ಣವಾಗಿ ಯಶಸ್ಸನ್ನು ಸಾಧಿಸಿವೆ ಎಂದು ಹೇಳಲಾಗದಿದ್ದರೂ ಸ್ವಲ್ಪಮಟ್ಟಿಗಾದರು ಅವು ಸಾಕ್ಷರತೆಯ ಅಂಚನ್ನು ತಲುಪುವಲ್ಲಿ ಯಶಸ್ವಿಯಾಗಿವೆ. ಆದರೆ ಬಹುತೇಕ ಪರಿಶಿಷ್ಟ ಜಾತಿಗಳ ಅಲ್ಪ ಜನಸಂಖ್ಯೆಯ ಸಮುದಾಯ ಗಳು ಸಾಕ್ಷರತೆಯ ಅಂಚನ್ನು ತಲುಪಲು ಸಾಧ್ಯವಾಗದ ಸ್ಥಿತಿಯಲ್ಲಿವೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಮಾಂಗ್ ಗಾರುಡಿ ಸಮುದಾಯವನ್ನೇ ನೋಡಬಹುದು.

ಅಸ್ಪೃಶ್ಯತೆ ಎಂಬುದು ಭಾರತಕ್ಕೆ ಅಂಟಿದ ಕಳಂಕವೇ ಸರಿ. ಅಸ್ಪೃಶ್ಯತೆಯ ಆಚರಣೆ ಸಾಮಾಜಿಕ ಪಿಡುಗಾಗಿದೆ. ಭಾರತದ ಅಸ್ಪೃಶ್ಯತೆಗೂ ಹಾಗೂ ಬಡತನಕ್ಕೂ ನಂಟಿದೆ. ಅದೇ ರೀತಿಯಾಗಿ ಅಸ್ಪೃಶ್ಯತೆಗೂ ಮತ್ತು ಅನಕ್ಷರತೆಗೂ ನಂಟಿರುವುದನ್ನು ಇಲ್ಲಿ ನೆನಪಿಸಿಕೊಳ್ಳ ಬೇಕಾಗಿದೆ. ಭಾರತದಲ್ಲಿ ಅನಕ್ಷರಸ್ಥರ ಪ್ರಮಾಣವು ಅಧಿಕವಾಗಿರಲು ಅಸ್ಪೃಶ್ಯತೆಯ ಆಚರಣೆಯೇ ಕಾರಣವೆಂಬುದನ್ನು ಮರೆಯಲಾಗದು. ರಾಜ್ಯದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ, ವಿಭಾಗದಿಂದ ವಿಭಾಗಕ್ಕೆ ಸಾಕ್ಷರತೆಯ ಪ್ರಮಾಣದಲ್ಲಿ ಅಸಮತೋಲನವಿದೆ. ಪ್ರಾಯಶಃ ಈ ರೀತಿಯ ಅಸಮತೋಲನಕ್ಕೆ ಬಡತನ ಎಷ್ಟು ಕಾರಣವೋ ಅಸ್ಪೃಶ್ಯತೆಯೂ ಅಷ್ಟೇ ಕಾರಣವಾಗಿದೆ.

ಕರ್ನಾಟಕದ ಸಾಕ್ಷರತೆ: ಚಾರಿತ್ರಿಕ ನೋಟ

ಕರ್ನಾಟಕದ ಸಾಕ್ಷರತೆಯ ಕುರಿತು ಒಂದು ಹಿನ್ನೋಟವನ್ನು ಬೀರಿದರೆ ಸಾಕ್ಷರತೆಯ ಪ್ರಮಾಣ ದಶಕದಿಂದ ದಶಕಕ್ಕೆ ಹೇಗೆ ವೃದ್ಧಿಗೊಳ್ಳುತ್ತಾ ಸಾಗಿದೆಯೆಂಬುದು ಅರ್ಥವಾಗುತ್ತದೆ. ಭಾರತದ ಜನತೆಯನ್ನು ಸಾಕ್ಷರರಾಗಿಸಲು ಹಿಂದಿನಿಂದಲೂ ಹತ್ತು ಹಲವು ಯೋಜನೆಗಳನ್ನು

ಸರ್ಕಾರವು ರೂಪಿಸುತ್ತಲೇ ಬಂದಿವೆ. ಈ ಪ್ರಯೋಗಗಳಿಗೆ ಕರ್ನಾಟಕ ಹೊರತಾಗಿಲ್ಲ. ಭಾರತ ಹಮ್ಮಿಕೊಂಡ ಹಲವು ಕಾರ್ಯಕ್ರಮಗಳು ಭಾರತದ ಜನತೆಯನ್ನು ಸಾಕ್ಷರರಾಗಿಸಲು ಬಹುತೇಕ ಯಶಸ್ವಿಯಾಗಿವೆಯೆಂದೇ ಹೇಳಬಹುದು. ಇದಕ್ಕೆ ಉತ್ತಮ ಉದಾಹರಣೆ ಕರ್ನಾಟಕದ ಸಾಕ್ಷರತಾ ಪ್ರಮಾಣವನ್ನೇ ಗಮನಿಸಬಹುದು. ೧೯೫೧ರಲ್ಲಿ ಕರ್ನಾಟಕದ ಸಾಕ್ಷರತೆಯ ಪ್ರಮಾಣ ಕೇವಲ ಶೇ. ೨೦.೬೦ ಮಾತ್ರವಿದೆ. ಅಂದರೆ ಶೇ. ೭೯.೪೦ರಷ್ಟು ಜನ ಅನಕ್ಷರರಾಗಿಯೇ ಉಳಿದಿದ್ದರು. ೧೯೬೧ರಲ್ಲಿ ಈ ಪ್ರಮಾಣವು ಶೇ. ೨೫.೪೦ರಷ್ಟಾಗಿದೆ. ಇದರಲ್ಲಿ ಪುರುಷರ ಪ್ರಮಾಣ ಶೇ. ೩೯.೨೦ ಇದ್ದರೆ ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇ. ೧೪.೨೦ ಮಾತ್ರವಿದೆ. ೧೯೫೧ಕ್ಕಿಂತ ೧೯೬೧ರ ಸಾಕ್ಷರತಾ ಸಾಧನೆ ಶೇ. ೦೫.೬೦ರಷ್ಟು ವೃದ್ಧಿಯಾಗಿದೆ. ೧೯೭೧ರಲ್ಲಿಯ ಸಾಕ್ಷರತೆಯ ಪ್ರಮಾಣವು ಶೇ. ೩೧.೫೦ರಷ್ಟಿದೆ. ಇದರಲ್ಲಿ ಪುರುಷರು ಶೇ. ೪೧.೬೦ರಷ್ಟು ಸಾಕ್ಷರರಾಗಿದ್ದಾರೆ. ಮಹಿಳೆಯರು ಶೇ. ೨೧.೦೦ರಷ್ಟು ಸಾಕ್ಷರರಾಗಿದ್ದಾರೆ. ೧೯೭೧ರ ಸಾಕ್ಷರತೆಯ ಪ್ರಮಾಣದಲ್ಲಿ ಶೇ. ೬.೧೦ರಷ್ಟು ಸಾಧನೆಯಾಗಿದೆ.

೧೯೮೧ರ ಸಾಕ್ಷರತಾ ಪ್ರಮಾಣವು ಶೇ. ೩೮.೫೦ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆ ಶೇ. ೪೮.೮೦ರಷ್ಟಿದ್ದರೆ ಮಹಿಳೆಯರ ಸಾಕ್ಷರತೆ ಶೇ. ೨೭.೭೦ರಷ್ಟಿದೆ. ೧೯೭೧ಕ್ಕಿಂತ ೧೯೮೧ರಲ್ಲಿ ಶೇ. ೦೭ರಷ್ಟು ವೃದ್ಧಿಯಾಗಿದೆ. ೧೯೯೧ರಲ್ಲಿಯ ಸಾಕ್ಷರತೆಯ ಪ್ರಮಾಣ ಶೇ. ೫೬.೦೦ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆಯ ಪ್ರಮಾಣ ಶೇ. ೬೭.೩೦ರಷ್ಟಿದ್ದರೆ ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇ. ೪೪.೩೦ರಷ್ಟಿದೆ. ೧೯೯೧ರ ಸಾಕ್ಷರತೆಯಲ್ಲಿ ಶೇ. ೧೭.೫೦ರಷ್ಟು ವೃದ್ಧಿಯಾಗಿದೆ.

೨೦೦೧ರಲ್ಲಿಯ ಸಾಕ್ಷರತೆಯ ಪ್ರಮಾಣವು ಶೇ. ೬೬.೬೪ರಷ್ಟಿದೆ. ಇದರಲ್ಲಿ ಪುರುಷರು ಶೇ. ೭೬.೧೦ ಹಾಗೂ ಮಹಿಳೆಯರು ಶೇ. ೫೬.೦೭ರಷ್ಟು ಸಾಕ್ಷರತೆಯ ಸಾಧನೆ ಮಾಡಿರುವುದು ಕಂಡುಬರುತ್ತದೆ. ಈ ದಶಕದಲ್ಲಿ ವೃದ್ಧಿಗೊಂಡ ಸಾಕ್ಷರತೆಯ ಪ್ರಮಾಣ ಶೇ. ೧೦.೬೪ರಷ್ಟು ವೃದ್ಧಿಯಾಗಿದೆ.

೨೦೧೧ರಲ್ಲಿಯ ಸಾಕ್ಷರತೆಯ ಪ್ರಮಾಣವು ಶೇ. ೭೫.೬೦ರಷ್ಟಿದೆ. ಇದರಲ್ಲಿ ಪುರುಷರು ಶೇ. ೮೨.೮೫ ಹಾಗೂ ಮಹಿಳೆಯರು ಶೇ. ೭೫.೬೦ರಷ್ಟು ಸಾಕ್ಷರತೆಯ ಸಾಧನೆ ಮಾಡಿರುವುದು ಕಂಡುಬರುತ್ತದೆ. ಈ ದಶಕದಲ್ಲಿ ವೃದ್ಧಿಗೊಂಡ ಸಾಕ್ಷರತೆಯ ಪ್ರಮಾಣ ಶೇ. ೮.೯೬ರಷ್ಟಿದೆ.

ಪರಿಶಿಷ್ಟ ಜಾತಿಯ ಸಾಕ್ಷರತಾ ಪ್ರಮಾಣ ಮತ್ತು ಸಾಕ್ಷರತಾ ಅಂತರ

೨೦೦೧ರ ಜನಗಣತಿ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯ ಸಾಕ್ಷರತಾ ಪ್ರಮಾಣವು ಶೇ. ೬೭.೪ರಷ್ಟಿದೆ. ಇದರಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣವು ಶೇ. ೫೭.೪೫ ಇದ್ದರೆ ಪುರುಷರ ಸಾಕ್ಷರತಾ ಪ್ರಮಾಣ ಶೇ. ೭೬.೨೯ರಷ್ಟಿದೆ. ರಾಜ್ಯದ ಪರಿಶಿಷ್ಟ ಜಾತಿಗಳ ಸಾಕ್ಷರತಾ

ಪ್ರಮಾಣವು ಶೇ. ೫೨.೯೦ ಇದೆ. ಇದರಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣವು ಶೇ. ೪೧.೭೦ ಇದ್ದರೆ ಪುರುಷರ ಸಾಕ್ಷರತಾ ಪ್ರಮಾಣ ಶೇ. ೬೩.೮೦ರಷ್ಟಿದೆ. ಅಂದರೆ ಸಾಮಾನ್ಯ ಸಾಕ್ಷರತೆಗೂ ಪರಿಶಿಷ್ಟ ಜಾತಿಗಳ ಸಾಕ್ಷರತೆಗೂ ಇರುವ ಅಂತರ ಒಟ್ಟು ೧೪.೧೪ರಷ್ಟಿದೆ. ಮಹಿಳೆಯರ ಅಂತರ ಶೇ. ೧೫.೭೫, ಪುರುಷರ ಅಂತರ ಶೇ.೧೨.೪೯ರಷ್ಟಿದೆ.

ಕರ್ನಾಟಕ ರಾಜ್ಯದ ೨೦೧೧ರ ಜಿಲ್ಲಾವಾರು ಸಾಕ್ಷರತಾ ಪ್ರಮಾಣ


ಕೋಷ್ಟಕ ೫.೨೬. ಜಿಲ್ಲಾವಾರು ಸಾಕ್ಷರತಾ ಪ್ರಮಾಣ

ಕ್ರ.ಸಂ.	ಜಿಲ್ಲೆ	ಗಂಡು	ಹೆಣ್ಣು	ಒಟ್ಟು
೧.	ಬೆಳಗಾವಿ	೧೭೨೫೫೪೮	೧೩೨೬೪೮೪	೩೦೫೨೦೩೨
೨.	ಬಾಗಲಕೋಟೆ	೬೪೧೩೮೮	೪೭೨೦೨೪	೧೧೧೩೪೧೨
೩.	ವಿಜಯಪುರ	೭೩೦೫೬೬	೫೧೭೭.೦೨	೧೨೪೮೨೬೮
೪.	ಬೀದರ	೫೯೭೧೯೮	೪೪೫೪೭೫	೧೦೪೨೬೭೩
೫.	ರಾಯಚೂರು	೫೭೭೨೧೩	೪೦೨೫೫೬	೯೭೯೭೬೯
೬.	ಕೊಪ್ಪಳ	೪೬೮೭೮೫	೩೪೦೩೩	೫೦೨೮೧೮
೭.	ಗದಗ	೩೯೭೧೭೮	೩೦೨೯೯	೭೦೦೧೭೭
೮.	ಧಾರವಾಡ	೭೧೧೭೭೬	೫೮೯೮೮೮	೧೩೦೧೬೬೪
೯.	ಉತ್ತರಕನ್ನಡ	೫೮೨೦೦೯	೪೯೯೮೦೭	೧೦೮೧೮೧೬
೧೦.	ಹಾವೇರಿ	೬೦೩೭೯೩	೪೮೧೬೫೦	೧೦೮೫೪೪೩
೧೧.	ಬಳ್ಳಾರಿ	೮೧೩೪೪೦	೬೦೮೧೮೧	೧೪೨೧೬೨೧
೧೨.	ಚಿತ್ರದುರ್ಗ	೬೦೭೧೮೮	೪೮೦೨೦೪	೧೦೮೭೩೯೨
೧೩.	ದಾವಣಗೆರೆ	೭೨೦೬೩೭	೫೮೭೯೦೩	೧೩೦೮೫೪೦
೧೪.	ಶಿವಮೊಗ್ಗ	೬೭೪೯೩೮	೫೮೮೦೭೮	೧೨೬೩೦೧೬
೧೫.	ಉಡುಪಿ	೪೬೫೭೦೪	೪೬೦೭೨೫	೯೨೬೪೨೯
೧೬.	ಚಿಕ್ಕಮಗಳೂರು	೪೩೮೨೫೭	೩೮೦೦೮೮	೮೧೮೩೪೫
೧೭.	ತುಮಕೂರು	೧೦೦೬೦೨೪	೮೦೭೩೬೭	೧೮೧೩೩೯೧

೧೮.	ಬೆಂಗಳೂರು(ನಗರ)	೪೦೭೮೦೪೧	೩೪೩೪೨೩೫	೭೫೧೨೨೭೬
೧೯.	ಬೆಂಗಳೂರು(ಗ್ರಾ)	೩೮೫೩೧೧	೩೦೩೪೩೮	೬೮೮೭೪೯
೨೦.	ಮಂಡ್ಯ	೬೩೮೬೬೮	೫೧೦೯೮೧	೧೧೪೯೬೪೯
೨೧.	ಹಾಸನ	೬೬೮೮೩೬	೫೫೬೪೨೦	೧೨೨೫೨೫೬
೨೨.	ದಕ್ಷಿಣಕನ್ನಡ	೮೬೪೦೧೯	೮೦೨೩೦೪	೧೬೬೬೩೨೩
೨೩.	ಕೊಡಗು	೨೧೫೩೦೨	೧೯೭೫೭೫	೪೧೨೮೭೭
೨೪.	ಮೈಸೂರು	೧೦೬೩೭೬೬	೮೯೮೪೧೪	೧೯೬೨೧೮೦
೨೫.	ಚಾಮರಾಜನಗರ	೩೧೨೯೫೭	೨೫೨೩೨೨	೫೬೫೨೭೯
೨೬.	ಗುಲ್ಬರ್ಗಾ	೮೨೮೩೫೯	೫೯೯೦೦೯	೧೪೨೭೩೬೮
೨೭.	ಯಾದಗಿರಿ	೩೦೬೭೫೧	೨೦೩೨೫೨	೫೧೦೦೦೩
೨೮.	ಕೋಲಾರ	೫೬೪೧೧೦	೪೫೨೧೦೯	೧೦೧೬೨೧೯
೨೯.	ಚಿಕ್ಕಬಳ್ಳಾಪುರ	೪೪೨೧೫೮	೩೪೧೦೬೪	೭೮೩೨೨೨
೩೦.	ರಾಮನಗರ	೩೭೮೪೬೧	೨೯೬೨೯೭	೬೭೪೭೫೮
	ಕರ್ನಾಟಕ ರಾಜ್ಯ	**೨೨೫೦೮೩೮೧**	**೧೭೮೩೨೫೮೪**	**೪೦೩೪೦೯೬೫**

೨೦೧೧ರ ಜನಗಣತಿಯ ವರದಿ, ಭಾರತ ಸರ್ಕಾರ

ಲಂಬಚಿತ್ರ: ೫.೩. ೨೦೧೧ರ ರಾಜ್ಯದ ಒಟ್ಟು ಸಾಕ್ಷರತಾ ಪ್ರಮಾಣ





೨೦೧೧ರ ಕರ್ನಾಟಕದ ಒಟ್ಟು ಸಾಕ್ಷರತೆಯ ಪ್ರಮಾಣವು ೪೦,೩೪೦,೯೬೫ ಇದೆ ಇದರಲ್ಲಿ ಪುರುಷರ ಸಂಖ್ಯೆಯು ೨೨೫೦೮೩೮೧(೫೫.೮೦%) ಇದ್ದರೆ ಮಹಿಳೆಯರ ಸಂಖ್ಯೆಯು ೧೭೮೩೨೫೮೪(೪೪.೨೦%) ಇದೆ.

ಕೋಷ್ಟಕ ೫.೨೭. ೨೦೦೧-೨೦೧೧ ಜಿಲ್ಲಾವಾರು ಸಾಕ್ಷರತೆಯ ಪ್ರಮಾಣ

(ಶೇಕಡವಾರುಗಳಲ್ಲಿ)

ಕ್ರಸಂ	ಜಿಲ್ಲೆ	೨೦೦೧	೨೦೧೧
೧.	ಬೆಳಗಾವಿ	೬೪.೨೧	೭೩.೯೪
೨.	ಬಾಗಲಕೋಟೆ	೫೭.೩೦	೬೯.೩೯
೩.	ಬಿಜಾಪುರ	೫೭.೦೧	೬೭.೨೦
೪.	ಬೀದರ್	೬೦.೯೪	೭೧.೦೧
೫.	ರಾಯಚೂರು	೪೮.೮೧	೬೦.೪೬
೬.	ಕೊಪ್ಪಳ	೫೪.೧೦	೬೭.೨೮
೭.	ಗದಗ	೬೬.೧೧	೭೫.೧೮
೮.	ಧಾರವಾಡ	೭೧.೬೧	೮೦.೩೦
೯.	ಉತ್ತರಕನ್ನಡ	೭೬.೬೦	೮೪.೦೩
೧೦.	ಹಾವೇರಿ	೬೭.೭೯	೭೭.೬೦
೧೧.	ಬಳ್ಳಾರಿ	೫೭.೪೦	೬೭.೮೫
೧೨.	ಚಿತ್ರದುರ್ಗ	೬೪.೪೫	೭೩.೮೨
೧೩.	ದಾವಣಗೆರೆ	೬೭.೪೩	೭೬.೩೦
೧೪.	ಶಿವಮೊಗ್ಗ	೭೪.೫೨	೮೦.೫೦
೧೫.	ಉಡುಪಿ	೮೧.೨೫	೮೬.೨೯
೧೬.	ಚಿಕ್ಕಮಗಳೂರು	೭೨.೨೦	೭೯.೨೪
೧೭.	ತುಮಕೂರು	೬೭.೦೧	೭೪.೩೨
೧೮.	ಬೆಂಗಳೂರು	೮೨.೯೬	೮೮.೪೮

೧೯.	ಮಂಡ್ಯ	೬೧.೦೫	೭೦.೧೪
೨೦.	ಹಾಸನ	೬೮.೬೩	೭೫.೮೯
೨೧.	ದಕ್ಷಿಣಕನ್ನಡ	೮೩.೩೫	೮೮.೬೨
೨೨.	ಕೊಡಗು	೭೭.೯೯	೮೨.೫೨
೨೩.	ಮೈಸೂರು	೬೩.೪೮	೭೨.೫೬
೨೪.	ಚಾಮರಾಜನಗರ	೫೦.೮೭	೬೧.೧೨
೨೫.	ಗುಲ್ಬರ್ಗಾ	೫೪.೩೪	೬೫.೬೫
೨೬.	ಯಾದಗಿರಿ	೩೯.೯೦	೫೨.೩೬
೨೬.	ಕೋಲಾರ	೬೫.೮೪	೭೪.೩೩
೨೭.	ಚಿಕ್ಕಬಳ್ಳಾಪುರ	೫೯.೨೪	೭೦.೦೮
೨೮.	ಬೆಂಗಳೂರು(ಗ್ರಾ)	೬೯.೫೯	೭೮.೨೯
೨೯.	ರಾಮನಗರ	೬೦.೭೧	೬೯.೨೦
	ಒಟ್ಟು	೬೬.೬೪	೭೫.೬೦

೨೦೧೧ರ ಜನಗಣತಿಯ ವರದಿ, ಭಾರತ ಸರ್ಕಾರ

ಕರ್ನಾಟಕದ ಜಿಲ್ಲಾವಾರು ಸಾಕ್ಷರತೆಯ ಪ್ರಮಾಣವನ್ನು ಗಮನಿಸಲಾಗಿ ೨೦೦೧ ಹಾಗೂ ೨೦೧೧ರಲ್ಲಾದ ಶೇಕಡವಾರು ಬೆಳವಣಿಗೆಯು ಈ ಕೆಳಗಿನಂತಿದೆ. ೨೦೦೧ ಹಾಗೂ ೨೦೧೧ರ ಮಧ್ಯದಲ್ಲಿರುವ ಜಿಲ್ಲಾವಾರು ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿಯೂ ಸಾಕ್ಷರತೆಯ ಪ್ರಮಾಣವು ವೃದ್ಧಿಗೊಂಡಿರುವುದು. ಕಂಡುಬರುತ್ತದೆ. ಬೆಳಗಾವಿಯ ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ೨೦೦೧ ಹಾಗೂ ೨೦೧೧ರ ಮಧ್ಯದಲ್ಲಿ ಶೇ. ೯.೭೩ರಷ್ಟು ಸಾಕ್ಷರತೆಯ ಪ್ರಮಾಣವು ವೃದ್ಧಿಯಾಗಿದೆ. ಅದೇ ರೀತಿ ಬಾಗಲಕೋಟೆಯ ಸಾಕ್ಷರತಾ ಪ್ರಮಾಣ ಶೇ. ೧೨.೦೯ರಷ್ಟು ಬೆಳವಣಿಗೆಯಾಗಿದೆ. ಬಿಜಾಪುರದ ಸಾಕ್ಷರತಾ ಪ್ರಮಾಣವು ಶೇ. ೧೦.೧೯ ಅಭಿವೃದ್ಧಿಗೊಂಡಿದೆ. ಬೀದರಿನ ಸಾಕ್ಷರತಾ ಪ್ರಮಾಣ ಶೇ. ೧೦.೭೬ ವೃದ್ಧಿಗೊಂಡಿದೆ. ರಾಯಚೂರಿನ ಸಾಕ್ಷರತಾ ಪ್ರಮಾಣ ೨೦೦೧ರಿಂದ ೨೦೧೧ರ ಮಧ್ಯದಲ್ಲಿ ಶೇ. ೧೧.೬೫ರಷ್ಟು ಅಭಿವೃದ್ಧಿಗೊಂಡಿದೆ.

ಕೊಪ್ಪಳದ ಸಾಕ್ಷರತಾ ಪ್ರಮಾಣ ಶೇ. ೧೩.೧೮ರಷ್ಟು ಬೆಳವಣಿಗೆಗೊಂಡಿದೆ. ಗದಗದ ಸಾಕ್ಷರತಾ ಬೆಳವಣಿಗೆ ಪ್ರಮಾಣ ಶೇ. ೯.೦೭ ರಷ್ಟಿದೆ. ಧಾರವಾಡದ ಸಾಕ್ಷರತಾ ಪ್ರಮಾಣ ಶೇ. ೮.೬೯ ವೃದ್ಧಿಗೊಂಡಿದೆ. ಉತ್ತರಕನ್ನಡದ ಸಾಕ್ಷರತಾ ಪ್ರಮಾಣ ಶೇ. ೭.೪೩ ಬೆಳವಣಿಗೆಯಾಗಿದೆ. ಹಾವೇರಿಯಲ್ಲಿ ಇದು ಶೇ. ೯.೮೧ ರಷ್ಟು ಅಭಿವೃದ್ದಿಗೊಂಡಿದೆ. ಬಳ್ಳಾರಿ ಸಾಕ್ಷರತಾ ಪ್ರಮಾಣ ಶೇ. ೧೦.೪೫ರಷ್ಟು ವೃದ್ಧಿಗೊಂಡಿದೆ. ಚಿತ್ರದುರ್ಗದ ಸಾಕ್ಷರತಾ ಪ್ರಮಾಣ ಶೇ. ೯.೩೭ರಷ್ಟು ಅಭಿವೃದ್ಧಿಗೊಂಡಿದೆ. ದಾವಣಗೆರೆಯ ಸಾಕ್ಷರತಾ ಪ್ರಮಾಣ ಶೇ. ೮.೬೭ರಷ್ಟು ವೃದ್ಧಿಗೊಂಡಿದೆ. ಶಿವಮೊಗ್ಗದ ಸಾಕ್ಷರತಾ ಪ್ರಮಾಣ ಶೇ. ೫.೯೮ರಷ್ಟಿದೆ. ಉಡುಪಿಯ ಸಾಕ್ಷರತಾ ಪ್ರಮಾಣ ಶೇ. ೫.೦೪ರಷ್ಟು ಬೆಳವಣಿಗೆಯಾಗಿದೆ. ಚಿಕ್ಕಮಗಳೂರಿನ ಸಾಕ್ಷರತಾ ಪ್ರಮಾಣ ಶೇ. ೭.೦೪ ಬೆಳವಣಿಯಾಗಿದೆ. ತುಮಕೂರಿನ ಸಾಕ್ಷರತಾ ಪ್ರಮಾಣ ಶೇ. ೭.೩೧ ರಷ್ಟು ಅಭಿವೃದ್ಧಿಯಾಗಿದೆ. ಬೆಂಗಳೂರು ನಗರದ ಸಾಕ್ಷರತಾ ಪ್ರಮಾಣ ಶೇ. ೫.೫೨ ರಷ್ಟು ವೃದ್ಧಿಯಾಗಿದೆ. ಮಂಡ್ಯದ ಸಾಕ್ಷರತಾ ಪ್ರಮಾಣ ಶೇ. ೭.೦೯ ರಷ್ಟು ಬೆಳವಣಿಗೆಯಾಗಿದೆ. ಹಾಸನದ ಸಾಕ್ಷರತಾ ಪ್ರಮಾಣ ಶೇ. ೭.೨೬ರಷ್ಟು ಅಭಿವೃದ್ಧಿಗೊಂಡಿದೆ. ದಕ್ಷಿಣ ಕನ್ನಡದ ಸಾಕ್ಷರತಾ ಪ್ರಮಾಣ ಶೇ. ೫.೨೭ರಷ್ಟು ವೃದ್ಧಿಗೊಂಡಿದೆ. ಕೊಡಗಿನ ಸಾಕ್ಷರತಾ ಪ್ರಮಾಣ ಶೇ. ೪.೫೩ರಷ್ಟು ವೃದ್ಧಿಸಿದೆ. ಮೈಸೂರಿನ ಸಾಕ್ಷರತಾ ಪ್ರಮಾಣ ಶೇ. ೯.೦೮ ರಷ್ಟು ಅಭಿವೃದ್ಧಿಗೊಂಡಿದೆ. ಚಾಮರಾಜನಗರದ ಸಾಕ್ಷರತಾ ಪ್ರಮಾಣ ಶೇ. ೧೦.೨೫ರಷ್ಟು ಬೆಳವಣಿಗೆ ಕಂಡಿದೆ. ಗುಲ್ಬರ್ಗಾದ ಸಾಕ್ಷರತಾ ಪ್ರಮಾಣ ಶೇ. ೧೧.೩೧ ರಷ್ಟು ವೃದ್ಧಿಯಾಗಿದೆ. ಯಾದಗಿರಿಯ ಸಾಕ್ಷರತಾ ಪ್ರಮಾಣ ಶೇ. ೧೨.೪೬ ರಷ್ಟು ಬೆಳವಣಿಗೆಯಾಗಿದೆ. ಕೋಲಾರದ ಸಾಕ್ಷರತಾ ಪ್ರಮಾಣ ಶೇ. ೮.೪೯ ವೃದ್ಧಿಯಾಗಿದೆ. ಚಿಕ್ಕಬಳ್ಳಾಪುರದ ಸಾಕ್ಷರತಾ ಪ್ರಮಾಣ ಶೇ. ೧೦.೮೪ ವೃದ್ಧಿಯಾಗಿದೆ. ಬೆಂಗಳೂರು ಗ್ರಾಮಾಂತರದ ಸಾಕ್ಷರತಾ ಪ್ರಮಾಣ ಶೇ. ೮.೭೦ ವೃದ್ಧಿಯಾಗಿದೆ. ರಾಮನಗರದ ಸಾಕ್ಷರತಾ ಪ್ರಮಾಣ ಶೇ. ೧೪.೮೯ರಷ್ಟು ವೃದ್ಧಿಗೊಂಡಿದೆ. ಕರ್ನಾಟಕದ ಸಾಕ್ಷರತಾ ಪ್ರಮಾಣ ಶೇ. ೬೬.೬೪ ಇದ್ದರೆ ೨೦೧೧ರಲ್ಲಿ ಶೇ. ೭೫.೬೦ ಇದೆ. ಅಂದರೆ ಕರ್ನಾಟಕದ ಸಾಕ್ಷರತೆಯ ಒಟ್ಟು ವೃದ್ಧಿಯು ಒಂದು ದಶಕದಲ್ಲಿ ಶೇ. ೮.೯೬ರಷ್ಟಿದೆ.

೨೦೦೧ರಲ್ಲಿ ಸಾಕ್ಷರತೆಯಲ್ಲಿ ಮುಂಚೂಣಿಯಲ್ಲಿದ್ದ ಜಿಲ್ಲೆಯು ದಕ್ಷಿಣಕನ್ನಡ(ಶೇ. ೮೩.೩೫)ವಾಗಿದೆ. ಸಾಕ್ಷರತೆಯಲ್ಲಿ ಹಿಂದುಳಿದಿದ್ದ ಜಿಲ್ಲೆಯು ಯಾದಗಿರಿ (ಶೇ. ೩೯.೯೦) ಆಗಿದೆ. ೨೦೧೧ರಲ್ಲಿ ಸಾಕ್ಷರತೆಯಲ್ಲಿ ಮುಂಚೂಣಿಯಲ್ಲಿರುವ ಜಿಲ್ಲೆ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿರುವುದು ದಕ್ಷಿಣ ಕನ್ನಡ (ಶೇ. ೮೮.೬೨)ವಾಗಿದೆ. ಯಾದಗಿರಿಯು ಹಿಂದುಳಿದ ಜಿಲ್ಲೆ (ಶೇ. ೫೨.೩೬) ಆಗಿದೆ. ಆದರೆ ೨೦೦೧ಕ್ಕೂ ಹಾಗೂ ೨೦೧೧ಕ್ಕೂ ಯಾದಗಿರಿಯ ಸಾಕ್ಷರತೆಯಲ್ಲಿರುವ ಅಂತರವು ಶೇ. ೧೨.೪೬ರಷ್ಟಿದೆ. ದಕ್ಷಿಣಕನ್ನಡ ಜಿಲ್ಲೆಯ ಸಾಕ್ಷರತೆಯ ಅಂತರವು ೨೦೦೧ಕ್ಕಿಂತ ೨೦೧೧ಕ್ಕೆ ಶೇ. ೫.೨೭ರಷ್ಟಿದೆ.

ಕೋಷ್ಟಕ ೫.೨೮. ಕರ್ನಾಟಕದ ವಿಭಾಗವಾರು ಸಾಕ್ಷರತಾ ಪ್ರಮಾಣ ೨೦೦೧–೨೦೧೧ (ಶೇಕಡವಾರುಗಳಲ್ಲಿ)

ವಿಭಾಗ	ಪುರುಷರ	*ಸಾ.ಪ್ರ	ಮಹಿಳೆ	*ಸಾ.ಪ್ರ	ಒಟ್ಟು	*ಸಾ.ಪ್ರ
	೨೦೦೧	೨೦೧೧	೨೦೦೧	೨೦೧೧	೨೦೦೧	೨೦೧೧
ಬೆಂಗಳೂರು	೮೦.೩೦	೮೭.೦೪	೬೩.೯೮	೭೩.೮೫	೭೨..೩೭	೮೦.೨೧
ಮೈಸೂರು	೭೬.೬೨	೮೨.೬೯	೬೧.೩೧	೭೦.೩೯	೬೮.೯೨	೭೬.೫೦
ದಕ್ಷಿಣಕನ್ನಡ	೭೯.೦೩	೮೫.೧೪	೬೩.೦೨	೭೨.೬೯	೭೧.೧೫	೭೮.೯೯
ಬೆಳಗಾವಿ	೭೬.೩೭	೮೩.೨೨	೫೩.೪೮	೬೫.೯೨	೬೫.೧೪	೭೪.೬೯
ಗುಲ್ಬರ್ಗಾ	೬೫.೮೭	೭೪.೮೯	೪೧.೦೭	೫೪.೭೬	೫೩.೬೪	೬೪.೯೩
ಉತ್ತರಕನ್ನಡ	೭೨.೦೧	೭೯.೬೫	೪೮.೩೦	೬೧.೧೨	೬೦.೩೫	೭೦.೫೧
ಕರ್ನಾಟಕ	**೭೬.೦೧**	**೮೨.೮೬**	**೫೬.೮೭**	**೬೭.೮೭**	**೬೬.೬೪**	**೭೫.೪೬**

* ಸಾ.ಪ್ರ: ಸಾಕ್ಷರತಾ ಪ್ರಮಾಣ

ಆಧಾರ: ೨೦೧೧ರ ಜನಗಣತಿಯ ವರದಿ, ೨೦೧೨, ಭಾರತ ಸರ್ಕಾರ

'ಕರ್ನಾಟಕದ ಒಟ್ಟು ಸಾಕ್ಷರತೆಯ ೨೦೦೧ ಹಾಗೂ ೨೦೧೧ರ ಶೈಕ್ಷಣಿಕ ಅಂತರವು ೮.೯೬ ಇದೆ. ಈ ಅಂತರವು ವಿಭಾಗಾವಾರು ಬೆಂಗಳೂರು ವಿಭಾಗದಲ್ಲಿ ೭.೮೪, ಮೈಸೂರು ವಿಭಾಗದಲ್ಲಿ ೭.೫೮, ದಕ್ಷಿಣಕನ್ನಡ ವಿಭಾಗದಲ್ಲಿ ೭.೮೪, ಬೆಳಗಾವಿ ವಿಭಾಗದಲ್ಲಿ ೯.೫೫, ಗುಲ್ಬರ್ಗಾ ವಿಭಾಗದಲ್ಲಿ ೧೧.೨೯, ಉತ್ತರಕನ್ನಡ ವಿಭಾಗದಲ್ಲಿ ೧೦.೧೬ರಷ್ಟಿದೆ'.[೪]

ಕೋಷ್ಟಕ ೫.೨೯. ೨೦೦೧ ಸಾಕ್ಷರತೆಯ ಮಾಹಿತಿ (ಶೇಕಡವಾರುಗಳಲ್ಲಿ)

ಕ್ರಸಂ ವಿವರಗಳು	ಪುರುಷರು	ಮಹಿಳೆಯರು	ಒಟ್ಟು
೦೧. ರಾಜ್ಯದ ಸಾಕ್ಷರತೆ ಪ್ರಮಾಣ	೭೬.೨೯	೫೭.೪೫	೬೭.೦೪
೦೨. ಪ.ಜಾ ಸಾಕ್ಷರತೆ ಪ್ರಮಾಣ	೬೩.೮೦	೪೧.೭೦	೫೨.೯೦
೦೩. ಅಂತರ (೧–೨)	೧೨.೪೯	೧೫.೭೫	೧೪.೧೪

೨೦೦೧ರ ಸಾಕ್ಷರತೆಯ ಮಾಹಿತಿಯ ಪ್ರಕಾರ ರಾಜ್ಯದ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ. ೬೭.೦೪ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇ. ೭೬.೨೯ ಇದ್ದರೆ ಮಹಿಳೆಯರ

ಪ್ರಮಾಣವು ಶೇ. ೫೭.೪೫ರಷ್ಟಿದೆ. ಅದೇ ರೀತಿಯಾಗಿ ರಾಜ್ಯದ ಪರಿಶಿಷ್ಟ ಜಾತಿಯ ಸಾಕ್ಷರತೆಯ ಪ್ರಮಾಣವು ಒಟ್ಟು ಶೇ. ೫೨.೯೦ ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇ. ೬೩.೪೯ ಇದ್ದರೆ ಮಹಿಳೆಯರ ಪ್ರಮಾಣ ಶೇ. ೪೧.೭೦ ಇದೆ. ಸಾಮಾನ್ಯರಿಗೂ ಪರಿಶಿಷ್ಟ ಜಾತಿಗೂ ಇರುವ ಶೈಕ್ಷಣಿಕ ಅಂತರವು ಒಟ್ಟು ಶೇ. ೧೪.೧೪ ಇದೆ. ಇದರಲ್ಲಿ ಪುರುಷರ ಶೈಕ್ಷಣಿಕ ಅಂತರವು ಶೇ. ೧೨.೪೯ ಇದ್ದರೆ ಮಹಿಳೆಯರ ಅಂತರವು ಶೇ. ೧೫.೭೫ರಷ್ಟಿದೆ.

ಕೋಷ್ಟಕ ೫.೩೦. ಸಮೀಕ್ಷೆಗೊಳಪಟ್ಟ ಮುಕ್ರಿ ಸಮುದಾಯದ ಸಾಕ್ಷರತೆ ಪಡೆಯಲು ಅರ್ಹವಾದ ಮತ್ತು ಅರ್ಹವಾಗದವರ ಸಂಖ್ಯೆ ವಿವರ

ತಾಲೂಕು	ಸಾಕ್ಷರತೆ ಪಡೆಯಲು ಅರ್ಹವಾದವರು			ಸಾಕ್ಷರತೆ ಪಡೆಯಲು ಅನರ್ಹವಾದ ಮಕ್ಕಳು (೦-೬ ವಯೋಮಾನದೊಳಗಿನ)		
ಕುಮಟಾ	೮೬೯	೯೩೪	೧೮೦೩	೬೬	೪೭	೧೧೩
ಹೊನ್ನಾವರ	೧೦೭೬	೧೧೪೬	೨೨೨೨	೯೦	೯೧	೧೮೧
ಒಟ್ಟು	೧೯೪೫	೨೦೮೦	೪೦೨೫	೧೫೬	೧೩೮	೨೯೪

ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಕುಮಟಾ, ಹೊನ್ನಾವರ ತಾಲೂಕಿನಲ್ಲಿ ಸಮೀಕ್ಷೆ ಮಾಡಲಾಗಿದೆ. ಮುಕ್ರಿಯರಲ್ಲಿ ೦-೬ ರೊಳಗಿನ ವಯೋಮಾನದ ಮಕ್ಕಳು ಒಟ್ಟು ೨೯೪ ಇವೆ. ಇದರಲ್ಲಿ ಗಂಡುಮಕ್ಕಳು ೧೫೬ ಹಾಗೂ ಹೆಣ್ಣುಮಕ್ಕಳು ೧೩೮ ಇವೆ. ೦-೬ ವಯೋಮಾನದ ಮಕ್ಕಳು ಶಾಲೆಯಲ್ಲಿ ದಾಖಲಾಗಲು ಬರುವಂತಿಲ್ಲ. ಪ್ರತಿಯೊಂದು ಮಗು ಶಾಲಾ ನಿಯಮದ ಪ್ರಕಾರ ಕನಿಷ್ಟ ೫ ವರ್ಷ ಪೂರ್ಣಗೊಂಡು ೬ ವರ್ಷದಲ್ಲಿರಬೇಕು. ಅಂತಹ ಮಕ್ಕಳನ್ನು ಮಾತ್ರ ಶಾಲೆಗೆ ದಾಖಲಿಸಿಕೊಳ್ಳಲಾಗುತ್ತದೆ. ಹೀಗಾಗಿ ಈ ವಯೋಮಾನದ ಮಕ್ಕಳನ್ನು ಸಾಕ್ಷರತೆ ಹೊಂದಲು ಅರ್ಹವಲ್ಲದವರೆಂದೇ ಪರಿಗಣಿಸಲಾಗಿದೆ.

ಕುಮಟಾದಲ್ಲಿ ೦-೬ರೊಳಗಿನ ವಯೋಮಾನದ ಮಕ್ಕಳು ಒಟ್ಟು ೧೧೩ ಇವೆ. ಇದರಲ್ಲಿ ಗಂಡು ೬೬ ಹಾಗೂ ಹೆಣ್ಣು ೪೭ ಮಕ್ಕಳಿವೆ. ಹಾಗೆಯೇ ಹೊನ್ನಾವರದಲ್ಲಿ ಈ ವಯೋಮಾನದ ಮಕ್ಕಳು ಒಟ್ಟು ೨೯೪ ಇವೆ. ಇದರಲ್ಲಿ ಗಂಡು ೧೫೬ ಹಾಗೂ ಹೆಣ್ಣು ೧೩೮ ಮಕ್ಕಳಿವೆ.

ಈ ಮಕ್ಕಳ ಹೊರತಾದ ಎಲ್ಲಾ ಜನರನ್ನು ಸಾಕ್ಷರತೆಗೆ ಅರ್ಹರೆಂದೇ ಪರಿಗಣಿಸಲಾಗಿದೆ. ಹೀಗಾಗಿ ಸಾಕ್ಷರತೆಗೆ ಅರ್ಹವಾದವರು ಎರಡೂ ತಾಲೂಕುಗಳನ್ನೊಳಗೊಂಡು ೪೦೨೫

ಜನರಿದ್ದಾರೆ. ಇದರಲ್ಲಿ ಪುರುಷರು ೧೯೪೫ ಹಾಗೂ ಮಹಿಳೆಯರು ೨೦೮೦ ಜನರಿದ್ದಾರೆ. ಕುಮಟಾ ತಾಲೂಕಿನಲ್ಲಿ ಸಾಕ್ಷರತೆಗೆ ಅರ್ಹವಾದವರು ಒಟ್ಟು ೧೮೦೩ ಜನರಿದ್ದಾರೆ. ಇದರಲ್ಲಿ ಪುರುಷರು ೮೬೯ ಹಾಗೂ ಮಹಿಳೆಯರು ೯೩೪ ಜನರಿದ್ದಾರೆ. ಹೊನ್ನಾವರದಲ್ಲಿ ಸಾಕ್ಷರತೆಗೆ ಅರ್ಹವಾದವರು ಒಟ್ಟು ೨೨೨೨ ಜನರಿದ್ದಾರೆ. ಇದರಲ್ಲಿ ಪುರುಷರು ೧೦೭೬ ಹಾಗೂ ಮಹಿಳೆಯರು ೧೧೪೬ ಜನರಿದ್ದಾರೆ.

ಕೋಷ್ಟಕ ೫.೩೧. ಸಮೀಕ್ಷಿಗೊಳಪಟ್ಟ ೦-೧೪ ವಯೋಮಾನದ ಶಾಲೆಗೆ ಹೋಗುತ್ತಿರುವ ಹಾಗೂ ಶಾಲೆಯಿಂದ ಹೊರಗುಳಿದ ಮುಕ್ರಿ ಸಮುದಾಯದ ಮಕ್ಕಳ ವಿವರ

ತಾಲೂಕು	ಶಾಲೆಗೆ ಹೋಗುತ್ತಿರುವ ಮಕ್ಕಳು			ಶಾಲೆಯಿಂದ ಹೊರಗುಳಿದ ಮಕ್ಕಳು		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಕುಮಟಾ	೩೬೨	೨೨೬	೫೮೮	೬೨	೪೭	೧೦೯
ಹೊನ್ನಾವರ	೩೦೩	೨೮೯	೫೯೨	೫೭	೫೮	೧೧೫
ಒಟ್ಟು	೬೬೫	೫೧೫	೧೧೮೦	೧೧೯	೧೦೫	೨೨೪

ಕುಮಟಾ ತಾಲೂಕಿನ ಮುಕ್ರಿ ಸಮುದಾಯದ ೦-೧೪ ವಯೋಮಾನದ ಶಾಲೆಗೆ ಹೋಗುತ್ತಿರುವ ಒಟ್ಟು ಮಕ್ಕಳು ೫೮೮, ಇದರಲ್ಲಿ ೩೬೨ ಗಂಡು ಹಾಗೂ ೨೨೬ ಹೆಣ್ಣು ಮಕ್ಕಳಿದ್ದಾರೆ. ಈ ತಾಲೂಕಿನಲ್ಲಿ ೦-೧೪ರೊಳಗಿನ ಮಕ್ಕಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳು ಒಟ್ಟು ೧೦೯, ಇದರಲ್ಲಿ ಗಂಡು ೬೨ ಹಾಗೂ ಹೆಣ್ಣು ೪೭ ಮಕ್ಕಳಿವೆ. ಈ ಮಕ್ಕಳು ಶಾಲೆಯಲ್ಲಿ ದಾಖಲಾಗಿಯೂ ಶಾಲೆಯಿಂದ ಹೊರಗುಳಿದಿವೆ.

ಹೊನ್ನಾವರ ತಾಲೂಕಿನಲ್ಲಿ ೦-೧೪ ವಯೋಮಾನದ ಶಾಲೆಗೆ ಹೋಗುತ್ತಿರುವ ಒಟ್ಟು ಮಕ್ಕಳು ೫೯೨, ಇದರಲ್ಲಿ ಗಂಡು ೩೦೩ ಹಾಗೂ ಹೆಣ್ಣು ೨೮೯ ಮಕ್ಕಳಿದ್ದಾರೆ. ಈ ತಾಲೂಕಿನಲ್ಲಿ ಶಾಲೆಯಿಂದ ಹೊರಗುಳಿದ ಮುಕ್ರಿ ಮಕ್ಕಳು ಒಟ್ಟು ೧೧೫ ಇವೆ. ಇದರಲ್ಲಿ ಗಂಡು ೫೭ ಹಾಗೂ ಹೆಣ್ಣು ೫೮ ಮಕ್ಕಳಿವೆ.

ಎರಡೂ ತಾಲೂಕಿನ ನಡುವೆ ೦-೧೪ರ ವಯೋಮಾನದೊಳಗಿನ ಶಾಲೆಗೆ ಹೋಗುತ್ತಿರುವ ಒಟ್ಟು ಮಕ್ಕಳು ೧೧೮೦ ಇವೆ. ಇದರಲ್ಲಿ ಗಂಡು ೬೬೫ ಹಾಗೂ ಹೆಣ್ಣು ೫೧೫ ಮಕ್ಕಳಿವೆ. ಶಾಲೆಯಿಂದ ಹೊರಗುಳಿದ ಒಟ್ಟು ಮಕ್ಕಳು ೨೨೪, ಇದರಲ್ಲಿ ಗಂಡು ೧೧೯ ಹಾಗೂ ಹೆಣ್ಣು ೧೦೫ ಮಕ್ಕಳಿವೆ. ಅಂದರೆ ಶಾಲೆಗೆ ಹೋಗುತ್ತಿರುವ ಮಕ್ಕಳು ಶೇಕಡ ೮೪.೦೪, ಶಾಲೆಯಿಂದ ಹೊರಗುಳಿದ ಮಕ್ಕಳು ಶೇಕಡ ೧೫.೯೬ರಷ್ಟಿದೆ.

ಇಂದು ಕಡ್ಡಾಯ ಶಿಕ್ಷಣ ನೀತಿಯಡಿ ಯಾವ ಮಗುವೂ ಶಾಲೆಯಿಂದ ಹೊರಗುಳಿಯಬಾರದು ಎನ್ನುವ ನಿಯಮವಿದೆ. ಹೀಗಿದ್ದೂ ಶೇಕಡ ೧೫.೯೬ರಷ್ಟು ಮಕ್ಕಳು ಶಾಲೆಗೆ ದಾಖಲಾಗಿಯೂ ಶಾಲೆಯಿಂದ ಹೊರಗುಳಿದಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣಗಳನ್ನು ಪಾಲಕರಲ್ಲಿ ಕೇಳಿದರೆ ತಮ್ಮ ಮಕ್ಕಳು ತಮ್ಮೊಂದಿಗೇ ಕೆಲಸ ಮಾಡುವ ಸ್ಥಳಕ್ಕೆ ಬರುತ್ತವೆಂದೂ, ಇನ್ನೂ ಕೆಲವರು ತಾವು ಕೆಲಸಕ್ಕೆ ಹೋದಾಗ ತಮ್ಮ ಚಿಕ್ಕಮಕ್ಕಳನ್ನು ನೋಡಿಕೊಳ್ಳುವ ಕೆಲಸವನ್ನು ಮಾಡುತ್ತಾರೆ ಮುಂತಾದ ಸಬೂಬುಗಳನ್ನು ತಿಳಿಸುತ್ತಾರೆ. ಉತ್ತರ ಕರ್ನಾಟಕ ಅಥವಾ ಹೈದರಾಬಾದ್ ಕರ್ನಾಟಕದ ಈ ವಯೋಮಾನದ ಮಕ್ಕಳಲ್ಲಿ ಶಾಲೆಯಿಂದ ಹೊರಗುಳಿಯುವ ಪರಿಶಿಷ್ಟ ಜಾತಿಯ ಮಕ್ಕಳ ಪ್ರಮಾಣ ಹೆಚ್ಚಿದೆ. ಅವುಗಳಿಗೆ ಹೋಲಿಸಿದರೆ ಈ ತಾಲೂಕಿನ ಮುಕ್ರಿ ಸಮುದಾಯದ ಮಕ್ಕಳ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣ ಕಡಿಮೆಯಂದೇ ಹೇಳಬಹುದು. ಆದರೆ ಇದು ಅಪೇಕ್ಷಣೀಯವಾದ ವಿಚಾರವಲ್ಲ.


ಕೋಷ್ಟಕ ೫.೩೨. ಸಮೀಕ್ಷೆಗೊಳಪಟ್ಟ ಕುಮಟಾ ತಾಲೂಕಿನಲ್ಲಿ ವ್ಯಾಸಂಗ ಮಾಡುತ್ತಿರುವ ಮುಕ್ರಿ ಸಮುದಾಯದ ಮಕ್ಕಳ ವಿವರ

ಶೈಕ್ಷಣಿಕ ಹಂತ	ವ್ಯಾಸಂಗ ಮಾಡುತ್ತಿರುವ ಮಕ್ಕಳು		
	ಗಂಡು	ಹೆಣ್ಣು	ಒಟ್ಟು
ಪ್ರಾಥಮಿಕ	೧೩೦	೧೨೭	೨೫೭
ಮಾಧ್ಯಮಿಕ	೧೧೬	೯೯	೨೧೫
ಪ್ರೌಢಶಾಲೆ	೧೯೮	೧೭೨	೩೭೦
ಪದವಿಪೂರ್ವ	೮೦	೩೫	೧೧೫
ಪದವಿ	೫೦	೧೮	೬೮
ಸ್ನಾತಕೋತ್ತರ	೫	೧	೦೬
ಡಿಪ್ಲೋಮಾ	೬	೨	೮
ಇತರೆ	೦೮	೨	೧೦
ಒಟ್ಟು	೫೯೩	೪೫೬	೧೦೪೯

ಕುಮಟಾ ತಾಲೂಕಿನಲ್ಲಿ ಮುಕ್ರಿ ಸಮುದಾಯದ ಪ್ರಾಥಮಿಕ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ಒಟ್ಟು ೨೫೭ ಇವೆ. ಇವುಗಳಲ್ಲಿ ಗಂಡು ೧೩೦ ಹಾಗೂ ಹೆಣ್ಣು ೧೨೭ ಇವೆ.

ಮಾಧ್ಯಮಿಕ ಹಂತದ ತರಗತಿಯಲ್ಲಿ ಓದುತ್ತಿರುವ ಮಕ್ಕಳು ಒಟ್ಟು ೨೧೫ ಇವೆ. ಇದರಲ್ಲಿ ಗಂಡು ೧೧೬, ಹೆಣ್ಣು ೯೯ ಇವೆ. ಪ್ರೌಢಶಾಲಾ ಹಂತದಲ್ಲಿ ವ್ಯಾಸಂಗ ಮಾಡುವ ಮಕ್ಕಳು ಒಟ್ಟು ೩೭೦ ಇವೆ. ಇದರಲ್ಲಿ ಗಂಡು ೧೯೮, ಹೆಣ್ಣು ೧೭೨ ಇವೆ.

ವೃತ್ತಚಿತ್ರ ೫.೩. ಸಮೀಕ್ಷೆಗೊಳಪಟ್ಟ ಕುಮಟಾ ತಾಲೂಕಿನಲ್ಲಿ ಮುಕ್ರಿ ಸಮುದಾಯದಲ್ಲಿ ವ್ಯಾಸಂಗ ಮಾಡುತ್ತಿರುವ ಪುರುಷ ಹಾಗೂ ಮಹಿಳೆಯರ ಪ್ರಮಾಣ



ಪದವಿ ಪೂರ್ವ ತರಗತಿಯಲ್ಲಿ ಓದುತ್ತಿರುವ ಮಕ್ಕಳು ೧೧೫ ಇವೆ. ಇದರಲ್ಲಿ ಗಂಡು ೮೦ ಹೆಣ್ಣು ೩೫ ಇವೆ. ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೬೮ ಜನರಿದ್ದಾರೆ. ಇದರಲ್ಲಿ ಗಂಡು ೫೦, ಹೆಣ್ಣು ೧೮ ಜನರಿದ್ದಾರೆ. ಸ್ನಾತಕೋತ್ತರ ಪದವಿಯಲ್ಲಿ ಒಟ್ಟು ೬ ಜನ ಮಾತ್ರ ವ್ಯಾಸಂಗ ಮಾಡುತ್ತಿದ್ದಾರೆ. ಇದರಲ್ಲಿ ೫ ಗಂಡು, ೧ ಹೆಣ್ಣುಮಕ್ಕಳಿದ್ದಾರೆ. ಡಿಪ್ಲೋಮೋದೊಳಗೆ ವ್ಯಾಸಂಗ ಮಾಡುವವರು ಒಟ್ಟು ೮ ಜನರಿದ್ದಾರೆ. ಇದರಲ್ಲಿ ೬ ಗಂಡು ೨ ಹೆಣ್ಣುಮಕ್ಕಳಿದ್ದಾರೆ. ಇಂಜಿನೀಯರಿಂಗ್ ಮತ್ತು ಇತರ ತಾಂತ್ರಿಕ ಶಿಕ್ಷಣ ಪಡೆಯುವವರು ಒಟ್ಟು ೧೦ ಜನರಿದ್ದಾರೆ. ಇದರಲ್ಲಿ ೮ ಗಂಡು ಹಾಗೂ ೨ ಹೆಣ್ಣುಮಕ್ಕಳಿದ್ದಾರೆ. ಕುಮಟಾ ತಾಲೂಕಿನಲ್ಲಿ ಪ್ರಾಥಮಿಕ ಹಂತದಿಂದ ತಾಂತ್ರಿಕ ಹಾಗೂ ಸ್ನಾತಕೋತ್ತರ ತರಗತಿಗಳವರೆಗೆ ವ್ಯಾಸಂಗ ಮಾಡುವವರು ಒಟ್ಟು ೧೦೪೯ ಜನರಿದ್ದಾರೆ. ಇದರಲ್ಲಿ ಪುರುಷರು ೫೯೩ ಹಾಗೂ ಮಹಿಳೆಯರು ೪೫೬ ಜನರಿದ್ದಾರೆ. ಪ್ರಾಥಮಿಕ ಹಂತದಿಂದ ಮೇಲಿನ ಹಂತಕ್ಕೆ ಹೋದಂತೆಲ್ಲಾ



ವ್ಯಾಸಂಗದಲ್ಲಿ ನಿರತರಾದ ಮಹಿಳಾ ಅಭ್ಯರ್ಥಿಗಳ ಪ್ರಮಾಣ ಕಡಿಮೆಯಾಗುತ್ತಾ ಸಾಗಿರುವುದನ್ನು ಕೋಷ್ಟಕ ತೋರಿಸುತ್ತದೆ.


ಕೋಷ್ಟಕ ೫.೩೩. ಸಮೀಕ್ಷೆಗೊಳಪಟ್ಟ ಹೊನ್ನಾವರ ತಾಲೂಕಿನಲ್ಲಿ ವ್ಯಾಸಂಗ ಮಾಡುತ್ತಿರುವ ಮುಕ್ರಿ ಸಮುದಾಯದ ಮಕ್ಕಳ ವಿವರ

ಶೈಕ್ಷಣಿಕ ಹಂತ	ವ್ಯಾಸಂಗ ಮಾಡುತ್ತಿರುವ ಮಕ್ಕಳು		
	ಗಂಡು	ಹೆಣ್ಣು	ಒಟ್ಟು
ಪ್ರಾಥಮಿಕ	೧೫೧	೧೪೪	೨೯೫
ಮಾಧ್ಯಮಿಕ	೧೫೨	೧೪೫	೨೯೭
ಪ್ರೌಢಶಾಲೆ	೨೮೦	೧೮೯	೪೬೯
ಪದವಿಪೂರ್ವ	೯೫	೪೫	೧೪೦
ಪದವಿ	೫೬	೨೨	೭೮
ಸ್ನಾತಕೋತ್ತರ	೬	೧	೦೭
ಡಿಪ್ಲೋಮಾ	೬	೩	೯
ಇತರೆ	೧೨	೦೩	೧೫
ಒಟ್ಟು	೭೫೮	೫೫೨	೧೩೧೦

ಹೊನ್ನಾವರ ತಾಲೂಕಿನಲ್ಲಿ ಮುಕ್ರಿ ಸಮುದಾಯದ ಪ್ರಾಥಮಿಕ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ಒಟ್ಟು ೨೯೫ ಇವೆ. ಇವುಗಳಲ್ಲಿ ಗಂಡು ೧೫೧ ಹಾಗೂ ಹೆಣ್ಣು ೧೪೪ ಇವೆ.

ಮಾಧ್ಯಮಿಕ ಹಂತದ ತರಗತಿಯಲ್ಲಿ ಓದುತ್ತಿರುವ ಮಕ್ಕಳು ಒಟ್ಟು ೨೯೭ ಇವೆ. ಇದರಲ್ಲಿ ಗಂಡು ೧೫೨ ಹೆಣ್ಣು ೧೪೫ ಮಕ್ಕಳಿದ್ದಾರೆ.

ವೃತ್ತಚಿತ್ರ: ೫.೪ ಸಮೀಕ್ಷೆಗೊಳಪಟ್ಟ ಹೊನ್ನಾವರ ತಾಲೂಕಿನಲ್ಲಿ ಮುಕ್ರಿ ಸಮುದಾಯದಲ್ಲಿ ವ್ಯಾಸಂಗ ಮಾಡುತ್ತಿರುವ ಪುರುಷ ಹಾಗೂ ಮಹಿಳೆಯರ ಪ್ರಮಾಣ



ಪ್ರೌಢಶಾಲಾ ಹಂತದಲ್ಲಿ ವ್ಯಾಸಂಗ ಮಾಡುವ ಮಕ್ಕಳು ಒಟ್ಟು ೪೬೯ ಇವೆ. ಇದರಲ್ಲಿ ಗಂಡು ೨೮೦, ಹೆಣ್ಣು ೧೮೯ ಇವೆ.

ಪದವಿ ಪೂರ್ವ ತರಗತಿಯಲ್ಲಿ ಓದುತ್ತಿರುವ ಮಕ್ಕಳು ೧೪೦ ಇವೆ. ಇದರಲ್ಲಿ ಗಂಡು ೯೫ ಹೆಣ್ಣು ೪೫ ಇವೆ.

ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೭೮ ಜನರಿದ್ದಾರೆ. ಇದರಲ್ಲಿ ಗಂಡು ೫೬, ಹೆಣ್ಣು ೨೨ ಜನರಿದ್ದಾರೆ.

ಸ್ನಾತಕೋತ್ತರ ಪದವಿಯಲ್ಲಿ ಒಟ್ಟು ೦೭ ಜನ ಮಾತ್ರ ವ್ಯಾಸಂಗ ಮಾಡುತ್ತಿದ್ದಾರೆ. ಇದರಲ್ಲಿ ೬ ಗಂಡು, ೧ ಹೆಣ್ಣು ಮಕ್ಕಳಿದ್ದಾರೆ. ಡಿಪ್ಲೋಮೋದೊಳಗೆ ವ್ಯಾಸಂಗ ಮಾಡುವವರು ಒಟ್ಟು ೯ ಜನರಿದ್ದಾರೆ. ಇದರಲ್ಲಿ ೬ ಗಂಡು ೩ ಹೆಣ್ಣುಮಕ್ಕಳಿದ್ದಾರೆ.

ಇಂಜಿನೀಯರಿಂಗ್ ಮತ್ತು ಇತರ ತಾಂತ್ರಿಕ ಶಿಕ್ಷಣ ಪಡೆಯುವವರು ಒಟ್ಟು ೧೫ ಜನರಿದ್ದಾರೆ. ಇದರಲ್ಲಿ ೧೨ ಗಂಡು ಹಾಗೂ ೩ ಹೆಣ್ಣುಮಕ್ಕಳಿದ್ದಾರೆ. ಹೊನ್ನಾವರ ತಾಲೂಕಿನಲ್ಲಿ ಪ್ರಾಥಮಿಕ ಹಂತದಿಂದ ತಾಂತ್ರಿಕ ಹಾಗೂ ಸ್ನಾತಕೋತ್ತರ ತರಗತಿಗಳವರೆಗೆ ವ್ಯಾಸಂಗ ಮಾಡುವವರು ಒಟ್ಟು ೧೪೨೫ ಜನರಿದ್ದಾರೆ. ಇದರಲ್ಲಿ ಪುರುಷರು ೮೧೫ ಹಾಗೂ ಮಹಿಳೆಯರು ೬೧೦ ಜನರಿದ್ದಾರೆ. ಈ ತಾಲೂಕಿನಲ್ಲಿಯು ಪ್ರಾಥಮಿಕ ಹಂತದಿಂದ ಮೇಲಿನ ಹಂತಕ್ಕೆ ಹೋದಂತೆಲ್ಲಾ ವ್ಯಾಸಂಗದಲ್ಲಿ ನಿರತರಾದ ಮಹಿಳಾ ಅಭ್ಯರ್ಥಿಗಳ ಪ್ರಮಾಣ ಕಡಿಮೆಯಾಗುತ್ತಾ ಸಾಗಿರುವುದನ್ನು ಕೋಷ್ಟಕ ತೋರಿಸುತ್ತದೆ.




ಕೋಷ್ಟಕ ೫.೩೪. ಸಮೀಕ್ಷೆಗೊಳಪಟ್ಟ ಕುಮಟಾ ಮತ್ತು ಹೊನ್ನಾವರ ತಾಲೂಕುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮುಕ್ರಿ ಸಮುದಾಯದ ಮಕ್ಕಳ ವಿವರ

ಶೈಕ್ಷಣಿಕ ಹಂತ	**ವ್ಯಾಸಂಗ ಮಾಡುತ್ತಿರುವ ಮಕ್ಕಳು**			
ಗಂಡು	**ಹೆಣ್ಣುಒಟ್ಟು**	%		
ಪ್ರಾಥಮಿಕ	೨೮೧	೨೭೧	೫೫೨	೨೩.೩೯
ಮಾಧ್ಯಮಿಕ	೨೬೮	೨೪೪	೫೧೨	೨೧.೭೦
ಪ್ರೌಢಶಾಲೆ	೪೭೮	೩೬೧	೮೩೯	೩೫.೫೬
ಪದವಿಪೂರ್ವ	೧೭೫	೮೦	೨೫೫	೧೦.೮೧
ಪದವಿ	೧೦೬	೪೦	೧೪೬	೬.೧೮
ಸ್ನಾತಕೋತ್ತರ	೧೧	೨	೧೩	೦.೫೭
ಡಿಪ್ಲೋಮಾ	೧೨	೫	೧೭	೦.೭೩
ಇತರೆ	೨೦	೫	೨೫	೧.೦೬
ಒಟ್ಟು	**೧೩೫೧**	**೧೦೦೮**	**೨೩೫೯**	**೧೦೦**

ಉತ್ತರಕನ್ನಡ ಜಿಲ್ಲೆಯ ಕುಮಟಾ ಹಾಗೂ ಹೊನ್ನಾವರ ತಾಲೂಕಿನಲ್ಲಿ ನೆಲೆಸಿರುವ ಶಾಲೆಗೆ ಹೋಗುತ್ತಿರುವ ಮುಕ್ರಿ ಸಮುದಾಯದ ಒಟ್ಟು ಮಕ್ಕಳು ೨೩೫೯ ರಷ್ಟಿದ್ದಾರೆ. ಇದರಲ್ಲಿ ಗಂಡುಮಕ್ಕಳು ೧೩೫೧ ಇದ್ದರೆ ಹೆಣ್ಣುಮಕ್ಕಳು ೧೦೦೮ ರಷ್ಟಿದ್ದಾರೆ.

ವೃತ್ತಚಿತ್ರ: ೫.೫. ಕುಮಟಾ ಹಾಗೂ ಹೊನ್ನಾವರ ತಾಲೂಕಿನಲ್ಲಿ ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ಮುಕ್ರಿಯರ ಪ್ರಮಾಣ



ಶೇಕಡ ೨೫.೦೭ ಪ್ರಾಥಮಿಕ ಹಂತದಲ್ಲಿ ಕಲಿತರೆ ಶೇಕಡ ೨೪.೬೯ ರಷ್ಟು ಮಕ್ಕಳು ಮಾಧ್ಯಮಿಕ ಹಂತದ ತರಗತಿಯಲ್ಲಿ ಕಲಿಯುತ್ತಿದ್ದಾರೆ. ಪ್ರೌಢ ಹಂತದಲ್ಲಿ ಶೇಕಡ ೩೨.೬೨ ರಷ್ಟು ಮಕ್ಕಳು ಕಲಿಯುತ್ತಿದ್ದಾರೆ. ಆದರೆ ಪದವಿಪೂರ್ವ ಹಂತಕ್ಕೆ ತಲುಪುವಷ್ಟರಲ್ಲಿ ಕಲಿಯುವ ಮಕ್ಕಳ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಪದವಿಪೂರ್ವದಲ್ಲಿ ಕಲಿಯುವ ಮಕ್ಕಳ ಪ್ರಮಾಣವು ಶೇಕಡ ೯.೮೬ರಷ್ಟು ಮಾತ್ರವಿದೆ. ಪದವಿ ಹಂತದಲ್ಲಿ ಕೇವಲ ಶೇಕಡ ೫.೬೪ ರಷ್ಟು ಮಕ್ಕಳು ಮಾತ್ರ ಕಲಿಯುತ್ತಿದ್ದಾರೆ. ಸ್ನಾತಕೋತ್ತರದಲ್ಲಿ ಶೇಕಡ ೦.೫೦ದಷ್ಟು ಮಕ್ಕಳು ಮಾತ್ರ ವ್ಯಾಸಂಗ ಮಾಡುತ್ತಿವೆ. ಡಿಪ್ಲೊಮಾ ತರಗತಿಯಲ್ಲಿ ಕೇವಲ ಶೇಕಡ ೦.೬೫ ರಷ್ಟು ಮಕ್ಕಳಿದ್ದರೆ ಇತರೆ ತರಗತಿಗಳಲ್ಲಿ ಶೇಕಡ ೦.೯೬ರಷ್ಟು ಮಕ್ಕಳು ಕಲಿಯುತ್ತಿದ್ದಾರೆ. ವ್ಯಾಸಂಗದಲ್ಲಿ ನಿರತವಾದ ಒಟ್ಟು ಮಕ್ಕಳಲ್ಲಿ ಶೇಕಡ ೫೭ರಷ್ಟು ಗಂಡುಮಕ್ಕಳಿದ್ದರೆ ಶೇಕಡ ೪೩ರಷ್ಟು ಹೆಣ್ಣುಮಕ್ಕಳಿರುವುದು ಕಂಡುಬರುತ್ತದೆ.

ಇವರ ಬಡತನ, ನೆಲೆಸಿದ ಪರಿಸರಗಳು ಈ ಮಕ್ಕಳನ್ನು ಶಾಲೆಯಿಂದ ಹೊರಗುಳಿಯುವಂತೆ ಮಾಡಿರಬೇಕು.

ಮುಕ್ರಿಯರು ಮೂಲತಃ ಪರಿಶಿಷ್ಟ ಜಾತಿಗೆ ಸೇರಿದ ಅಸ್ಪೃಶ್ಯರು. ದುಡಿದುಣ್ಣುವ ಈ ಜನರಿಗೆ ಆಧುನಿಕ ಶಿಕ್ಷಣದ ಅಗತ್ಯ ಅಷ್ಟಾಗಿ ಕಂಡಿರಲಿಲ್ಲವೆಂದು ಹಿಂದಿನ ತಲೆಮಾರಿನ ಹಿರಿಯ ವಕ್ತೃಗಳು ತಿಳಿಸುತ್ತಾರೆ. ಮುಕ್ರಿಯವರಿಗೆ ಆಧುನಿಕ ಶಿಕ್ಷಣದ ಪರಿಚಯವಾದದ್ದೇ ಇತ್ತೀಚಿನ ದಿನಗಳಲ್ಲಿ ಎಂಬುದು ತಿಳಿಯುತ್ತದೆ.

ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆಯಲ್ಲಿ ಸಮಾನತೆ ಬರಬೇಕಾದರೆ ಮುಖ್ಯವಾಗಿ ತಳಜಾತಿಗಳು ಶಿಕ್ಷಣವನ್ನು ಪಡೆಯಲೇಬೇಕೆಂದು ಅಂಬೇಡ್ಕರ್‌ರವರು ತಿಳಿಸುತ್ತಾರೆ. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಹಿಂದುಳಿದ, ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳಿಗೆ ಶಿಕ್ಷಣದಲ್ಲಿ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂದು ತಿಳಿಸಲಾಗಿದೆ. ಶಿಕ್ಷಣ ಮನುಷ್ಯನ ಆತ್ಮಗೌರವವನ್ನು ಹೆಚ್ಚಿಸುತ್ತದೆ ಹಾಗೂ ಅವನು/ಳು ಸ್ವಾಭಿಮಾನದ ಬದುಕನ್ನು ಸಾಗಿಸಲು ಅದು ಆತ್ಮಸ್ಥೈರ್ಯವನ್ನು ನೀಡುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಸರ್ಕಾರ ಭಾರತದ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯ ಶಿಕ್ಷಣ ನೀತಿಯನ್ನು ಅನುಸರಿಸುವಂತೆ ತಿಳಿಸುತ್ತದೆ. ಆದರೆ ಯಾವುದೇ ನೀತಿ ಅಥವಾ ನಿಯಮಗಳು, ಒತ್ತಡಗಳು ಮನುಷ್ಯನಿಗೆ ಆ ಮುಖವಾಗಿ ಮುನ್ನಡೆಸಲು ಸಾಧನವಾಗುವುದಿಲ್ಲ. ಮುಖ್ಯವಾಗಿ ಹಿಂದುಳಿದ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಹಿಂಜರಿಯುವುದೇಕೆ, ಶಾಲೆಗೆ ಸೇರಿಸಿದರೂ ಆ ಮಕ್ಕಳು ಶಾಲೆಯನ್ನು ಪೂರೈಸಲು

ಏಕೆ ಸಾಧ್ಯವಾಗುತ್ತಿಲ್ಲ ಎಂಬುದರ ಆಳಕ್ಕೆ ಇಳಿದು ನೋಡಿದರೆ ಬೇರೆ ಸತ್ಯಗಳೇ ಹೊರ ಬೀಳುತ್ತವೆ. ಭಾರತೀಯರ ಮೂಲಭೂತ ಸಮಸ್ಯೆಗಳಲ್ಲಿ ಬಡತನವೂ ಒಂದು. ಕೇವಲ ಬಡತನವೊಂದೇ ಶಿಕ್ಷಣಕ್ಕೆ ಅಡ್ಡಿ ಎಂದು ನಾವು ತಿಳಿಯಬಾರದು, ಅದರಾಚೆಗೂ ಹಲವಾರು ಸಾಮಾಜಿಕ ಕಾರಣಗಳು ಮಕ್ಕಳು ಶಾಲೆಗೆ ಹೋಗದಂತೆ ತಡೆಯುತ್ತವೆ. ಉದಾಹರಣೆಗೆ ಕರ್ನಾಟಕದಲ್ಲಿ ಅನುಸೂಚಿತ ಪಟ್ಟಿಯಲ್ಲಿರುವ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಸಂಖ್ಯೆ ಒಟ್ಟು ಭಾರತದ ಸಮುದಾಯಗಳಲ್ಲಿ ಶೇಕಡ ಐವತ್ತರಷ್ಟಿದ್ದರೂ ಆ ಸಮುದಾಯಗಳಲ್ಲಿ ನಿಜಕ್ಕೂ ಶಿಕ್ಷಣಕ್ಕೆ ತೆರೆದುಕೊಂಡಿರುವ ಸಮುದಾಯಗಳು ಕೇವಲ ಬೆರಳೆಣಿಕೆಯಷ್ಟಿವೆ. ಈ ಶೇಕಡ ಐವತ್ತರಷ್ಟಿರುವ ಸಮುದಾಯಗಳಲ್ಲಿ ಶೇಕಡ ನಾಲ್ಕರಷ್ಟು ಪರಿಶಿಷ್ಟ ಜಾತಿ ಹಾಗೂ ಪಂಗಡಗಳು ಶಿಕ್ಷಣ ಪಡೆಯಲು ಸಾಧ್ಯವಾಗಿಲ್ಲವೆಂದರೆ ಆಶ್ಚರ್ಯವಾಗುತ್ತದೆ. ಜನಸಮುದಾಯಗಳ ಮಧ್ಯ ಇದ್ದು ನಾಗರೀಕ ಬದುಕನ್ನು ಕಂಡ ಪರಿಶಿಷ್ಟ ಜಾತಿಗಳಲ್ಲಿ ಕೆಲವೇ ಕೆಲವು ಸಮುದಾಯಗಳು ಮಾತ್ರ ಇಂದು ಶಿಕ್ಷಣದಲ್ಲಿ ಅಲ್ಪಮಟ್ಟಿಗೆ ಸ್ಥಾನ ಪಡೆಯಲು ಸಾಧ್ಯವಾಗಿವೆ. ಇಂದು ಸಾರ್ವತ್ರಿಕವಾಗಿ ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿಗಳನ್ನು ನೋಡುವಾಗ ಸಾಮಾನ್ಯವಾಗಿ ಕರ್ನಾಟಕದ ಒಟ್ಟು ಶೈಕ್ಷಣಿಕ ಪ್ರಗತಿ, ಅದರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಪ್ರಗತಿ, ಅದೇ ರೀತಿ ಇತರ ಸಮುದಾಯಗಳ ಶೈಕ್ಷಣಿಕ ಪ್ರಗತಿ ಈ ಮಾದರಿಯಲ್ಲಿ ನೋಡುವುದು ವಾಡಿಕೆ. ಆದರೆ ಇಂದು ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಒಟ್ಟು ಶೈಕ್ಷಣಿಕ ಪ್ರಗತಿ ಎಂಬುದು ಕೇವಲ ಕೆಲವೇ ಕೆಲವು ಸಮುದಾಯಗಳಿಗೆ ಮಾತ್ರ ಸೀಮಿತವಾಗಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಇಂದು ಉದ್ಯೋಗ, ಶಿಕ್ಷಣ ಹಾಗೂ ಇತರ ಸವಲತ್ತುಗಳನ್ನು ಈ ರೀತಿಯ ಕೆಲವು ಸಮುದಾಯಗಳು ಮಾತ್ರ ಅಲ್ಪಮಟ್ಟಿಗಾದರೂ ಪಡೆಯುತ್ತಿವೆ. ಆದರೆ ಇದರಲ್ಲಿಯೇ ಅಲ್ಪಸಂಖ್ಯಾತವಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಶಿಕ್ಷಣದಂತಹ ಮೂಲಭೂತ ಸೌಲಭ್ಯವನ್ನು ಪಡೆಯಲು ಸಾಧ್ಯವಾಗಿಲ್ಲವೆಂಬುದನ್ನು ತಿಳಿಸಲೇಬೇಕಾದ ಅನಿವಾರ್ಯತೆ ಇದೆ. ಈ ಮಾತನ್ನು ಹೇಳಲು ಮುಖ್ಯ ಕಾರಣವೇನೆಂದರೆ ಅವಕಾಶ ದೊರೆಯುವ ಸಮುದಾಯಗಳೊಂದಿಗೆ ಅವಕಾಶವಂಚಿತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ಮೂಲಭೂತ ಸೌಲಭ್ಯಗಳು ದೊರೆಯಬೇಕು ಎಂಬ ಆಶಯವಾಗಿದೆ.

ದಲಿತರಲ್ಲಿಯೇ ದಲಿತರೆಂದು ಪರಿಗಣಿತವಾದ ಮಹಿಳೆಯರು ಶೈಕ್ಷಣಿಕ ಪ್ರಗತಿಯಲ್ಲಿ ತುಂಬಾ ಹಿಂದುಳಿದಿದ್ದಾರೆ. ಮುಖ್ಯವಾಗಿ ಮೇಲ್ವರ್ಗಗಳಲ್ಲಿ ಸಾಮಾಜಿಕ ಕಾರಣಗಳಿಗಾಗಿ ಮಹಿಳೆಯರನ್ನು ಮನೆಯಿಂದ ಹೊರಗೆ ವಿದ್ಯಾಭ್ಯಾಸಕ್ಕಾಗಿ ಕಳಿಸುವುದು ತುಂಬಾ ಅಪರೂಪ ವಾಗಿದೆ. ಹುಡುಗಿಯರು ಹದಿಮೂರು ವರ್ಷದಿಂದ ಹದಿನಾರು ವರ್ಷದೊಳಗೆ

ಋತುಮತಿಯಾಗುವುದು ಪ್ರಕೃತಿ ನಿಯಮ. ಹೀಗೆ ಮೈನೆರೆದ ಮಕ್ಕಳನ್ನು ಶಾಲೆಗೆ, ಅದರಲ್ಲೂ ಊರಿನಾಚೆಗೆ ಇರುವ ಶಾಲೆಗಳಿಗೆ ಕಳಿಸುವುದು(ಸಾಮಾಜಿಕ ಕಾರಣಗಳಿಗಾಗಿ) ಅಪಾಯವೆಂದೇ ಭಾವಿಸುವ ಪಾಲಕರು ಸಾಮಾನ್ಯವಾಗಿ ಉನ್ನತ ಶಿಕ್ಷಣಕ್ಕೆ ಹುಡುಗಿಯರನ್ನು ಕಳಿಸುವುದು ಅತ್ಯಂತ ಅಪರೂಪ.

ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಅವಳಿಗೆ ಬಂಡವಾಳ ತೊಡಗಿಸಿ ಓದಿಸುವುದಕ್ಕಿಂತ ಅದೇ ಹಣವನ್ನು ವರದಕ್ಷಿಣೆಯಾಗಿ ನೀಡಿ ಮದುವೆ ಮಾಡಿಕೊಟ್ಟರೆ ಪಾಲಕರಾದ ತಮ್ಮ ಜವಬ್ದಾರಿ ಕಳಿಯುತ್ತದೆ ಎಂದೇ ಭಾವಿಸುವ ಪಾಲಕರ ಪ್ರಮಾಣವೇ ಹೆಚ್ಚು. ಹೀಗಾಗಿ ಮಹಿಳೆಯರಿಗೆ ಉನ್ನತ ಶಿಕ್ಷಣ ಕೊಡಿಸುವುದರಲ್ಲಿ ಪಾಲಕರು ಹಿಂಜರಿಯುತ್ತಾರೆ. ಮುಕ್ರಿಯಂತಹ ಸಮುದಾಯಗಳು ಇಂದಿಗೂ ಬಾಲ್ಯವಿವಾಹ ಪದ್ಧತಿಯಂತಹ ಅನಿಷ್ಟ ಪದ್ಧತಿಗೆ ಅಂಟಿಕೊಂಡಿವೆ. ಹೀಗಾಗಿ ಹುಡುಗಿಯರು ಪ್ರೌಢಾವಸ್ಥೆಗೆ ಬಂದಂತೆಲ್ಲಾ ಶಾಲೆಯಿಂದ ಹೊರಗುಳಿಯುತ್ತಾರೆ.

ರಾಜಕೀಯ ಸ್ಥಿತಿಗತಿ

ಇಂದು ಭಾರತ ೨೦ನೇ ಶತಮಾನ ದಾಟಿ ೨೧ನೇ ಶತಮಾನದತ್ತ ಹೆಜ್ಜೆ ಇಟ್ಟಿದೆ. ಆದರೆ ಇದರೊಳಗಿನ ಆಂತರಿಕ ಸ್ಥಿತಿ ಮಾತ್ರ ಇನ್ನೂ ಬದಲಾವಣೆ ಕಾಣದೆ ಬಳಲುತ್ತಿದೆ. ಭಾರತ ಜಾತ್ಯಾತೀತ ರಾಷ್ಟ್ರವೆಂದು ಘೋಷಿಸಲ್ಪಟ್ಟಿದೆ. ಆದರೆ ಅದು ಇನ್ನೂ ಉಸಿರಾಡುತ್ತಿರುವುದು ಜಾತಿಯ ಗಾಳಿಯನ್ನೇ, ಪ್ರಬಲ ಜಾತಿಯ ಹಣವಂತ ಸಮೂಹಗಳಿಗೆ ಮಾತ್ರ ಅಧಿಕಾರ ಎಂಬ ಒಂದು ಅನುಶಾಸನ ಮೌಖಿಕ ಅರ್ಥವಂತಿಕೆ(Understanding) ಯಾಗಿ ಇಲ್ಲಿ ಉಳಿದು ಬಂದಿದೆ. ಹೀಗಾಗಿ ಕೆಳ ವರ್ಗ, ಜಾತಿಗಳಿಗೆ ಹೆಚ್ಚಿನ ಸೌಲಭ್ಯಗಳು ದೊರೆಯುವುದು ಭಾರತದ ಇಂದಿನ ಪರಿಸ್ಥಿತಿಯಲ್ಲಿ ಕಷ್ಟಸಾಧ್ಯವಾಗಿದೆ.

ಈ ಕುರಿತು ರಾಮಮನೋಹರ ಲೋಹಿಯಾರವರು ಈ ರೀತಿಯಾಗಿ ತಿಳಿಸುತ್ತಾರೆ. "ರಾಜಕೀಯ ಪಕ್ಷಗಳಲ್ಲಿ ಅಧಿಕಾರದ ಹುದ್ದೆಗಳನ್ನು ಸೂಕ್ತ ಪ್ರಮಾಣದಲ್ಲಿ ನೀಡಬೇಕಾಗಿದೆ. ಸಮಿತಿಗಳನ್ನು ರಚಿಸುವಾಗ ಶೂದ್ರ, ಹರಿಜನ ಮತ್ತು ಮುಸಲ್ಮಾನರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಬೇಕಾಗಿದೆ. ಅಗಸ, ಕ್ಷೌರಿಕ, ಗಾಣಿಗ, ಕಮ್ಮಾರ ಮತ್ತು ಇತರೆ ಹಿಂದುಳಿದ ಜಾತಿಗಳಲ್ಲಿ ನೂರಾರು ಬಗೆಯ ಸಮಸ್ಯೆಗಳಿವೆ. ಅವರ ಕೇರಿಗಳಿಗೆ ಒಳ್ಳೆಯ ರಸ್ತೆಗಳು ಆಗಬೇಕು. ಸುಲಭ ಬೆಲೆಗೆ ಕಚ್ಚಾ ಮಾಲುಗಳು ದೊರೆಯಬೇಕು. ಪೊಲೀಸರ ದಬ್ಬಾಳಿಕೆ ನಿಲ್ಲಬೇಕು. ಇವರಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ದೊರಕಿಸಿಕೊಟ್ಟು ಆ ಮೂಲಕ ಅವರ ವಿಶ್ವಾಸವನ್ನು ಗಳಿಸಿಕೊಂಡು ಈ ನತದೃಷ್ಟ ಜಾತಿಗಳ ಸಂಘಟನೆಯನ್ನು ರಾಜಕೀಯ ಕ್ಷೇತ್ರದೊಳಗೆ ತರುವುದರಿಂದ ಬಹುಜನ ಸಮಾಜ ರೂಪಿತವಾಗಬಲ್ಲದು."[೩] ಇಂದು ಬಲಿಷ್ಠ ಜಾತಿಗಳ

ಒತ್ತಡಗಳ ಮಧ್ಯದಲ್ಲಿಯೂ ಕೆಲವು ನಿರ್ದಿಷ್ಟ ಮೀಸಲಾತಿಯನ್ನು ಪಡೆದ ಹಲವು ಕೆಳ ಜಾತಿಗಳು ಇಂದು ವಿಧಾನಸೌಧ ಮತ್ತು ಪಾರ್ಲಿಮೆಂಟ್ ಮೆಟ್ಟಿಲುಗಳನ್ನು ತುಳಿಯುವಂತಾಗಿದೆ.

ಆದರೆ ಅವುಗಳಾಚೆಯೂ ಬಹುತೇಕ ನಿರ್ಲಕ್ಷಿತ ಜಾತಿ, ಬುಡಕಟ್ಟುಗಳು ಭಾರತದಲ್ಲಿ ಇನ್ನೂ ಇವೆ. ಅವುಗಳ ಇರುವಿಕೆ ಕುರಿತು ಸರ್ಕಾರ ಗಮನವನ್ನು ಹರಿಸುತ್ತಿಲ್ಲ. ಅಂತಹ ನಿರ್ಭಾಗ್ಯ ಜಾತಿ, ಬುಡಕಟ್ಟುಗಳು ಸ್ವತಃ ತಾವು ನಿರ್ಲಕ್ಷಿತರು ಎಂದು ಹೇಳಿಕೊಳ್ಳಲು ಗಂಟಲಿಲ್ಲದ ಅಸಹಾಕತೆಯನ್ನು ಅನುಭವಿಸುತ್ತಿವೆ.

ಇಂದು ಭಾರತದ ರಾಜಕೀಯ ಸ್ತಂಭ ನಿಂತಿರುವುದೇ ಜಾತಿಗಳ ಆಧಾರದ ಮೇಲೆ, ಜನಸಂಖ್ಯಾ ದೃಷ್ಟಿಯಿಂದ ಪ್ರಬಲವಾಗಿರುವ ಬಹುಸಂಖ್ಯಾತ ಜಾತಿಗಳು ಸರ್ಕಾರದಿಂದ ಸಿಗುವ ಅಲ್ಪ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುತ್ತಿವೆ. ಅಂತಹ ಬಹುಸಂಖ್ಯಾತ ಜಾತಿ, ಸಮುದಾಯದವರು ತುಂಬಾ ಪ್ರಜ್ಞಾವಂತಿಕೆಯಿಂದಲೇ ತಾವು ಓಟಿಂಗ್ ಬ್ಯಾಂಕ್ ಎಂಬುದನ್ನು ಸೂಚ್ಯವಾಗಿ ಆಡಳಿತಾರೂಢ ರಾಜಕೀಯ ಪಕ್ಷಗಳಿಗೆ ಮನವರಿಕೆ ಮಾಡುತ್ತಿವೆ. ಹೀಗೆ ಎಚ್ಚರಿಕೆ ಕೊಡುವುದರ ಮೂಲಕ ತಮಗೆ ಬೇಕಾದ ಸೌಲಭ್ಯಗಳನ್ನು ಪಡೆಯುತ್ತಿವೆ.

ಲೋಹಿಯಾರವರು ಗುರುತಿಸಿರುವಂತೆ ಅಲ್ಪ ಜನಸಂಖ್ಯೆಯನ್ನು ಹೊಂದಿದ, ತೀರಾ ನಿಕೃಷ್ಟವೆಂದು ಭಾವಿಸುವ ಸಮುದಾಯಗಳನ್ನು ಆಡಳಿತಾರೂಢ ಸರ್ಕಾರಗಳು ಅಲಕ್ಷಿಸುವ ಅಪಾಯವಿರುವುದು ಕಾಣಬಹುದಾಗಿದೆ.

ಹಾಗೆಯೇ ಈ ಯಾವುದರ ಪ್ರಜ್ಞೆಯಿರದೆ ತಮ್ಮ ಮೂಲ ವೃತ್ತಿಯಿಂದ ವಂಚಿತವಾಗಿರುವ ಬಹುತೇಕ ಅಲೆಮಾರಿ ಹಾಗೂ ನಿರ್ಲಕ್ಷಿತ ಸಮುದಾಯಗಳು ತಮ್ಮ ಸಂಸಾರಿಕ ಬವಣೆಗಳಲ್ಲಿಯೇ ಕಾಲ ನೂಕುವ ಅಸಹಾಯಕ ಸ್ಥಿತಿ ಇರುವುದು.

ಅದರಲ್ಲೂ ಮುಕ್ರಿ ಸಮುದಾಯದಂತಹ ಧ್ವನಿ ಕಳೆದುಕೊಂಡಂತಹ ಅತಿ ಚಿಕ್ಕ ಅಸ್ಪೃಶ್ಯ ಸಮುದಾಯವನ್ನು ಸರ್ಕಾರ ಗುರುತಿಸದೇ ಇರುವ ಸಾಧ್ಯತೆಯು ಇದೆ.

ಉತ್ತರಕನ್ನಡದ ಎಲ್ಲಾ ಜಿಲ್ಲೆಗಳಲ್ಲಿ ಪಸರಿಸಿದ ಮುಕ್ರಿಗಳು ಸರಿಸುಮಾರು ೨೦ ಸಾವಿರ ಜನಸಂಖ್ಯೆಯನ್ನೂ ಮೀರಿಲ್ಲ. ಇಷ್ಟು ಜನಸಂಖ್ಯಾ ಅಲ್ಪಸಂಖ್ಯಾತರಾದ ಮುಕ್ರಿಗಳಿಗೆ ಪೂರ್ಣ ಪ್ರಮಾಣದ ರಾಜಕೀಯ ನಾಯಕತ್ವ ಈವರೆಗೂ ಲಭ್ಯವಾಗಿಲ್ಲ. ಸಾಂವಿಧಾನಿಕ ಸೌಲಭ್ಯಕ್ಕೆ ಅನುಗುಣವಾಗಿ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿ ಸ್ಥಾನಗಳನ್ನು ಮೀಸಲಿಡುವ ವ್ಯವಸ್ಥೆ ಇರುವುದರಿಂದ ಕೆಲವರಿಗೆ ಪ್ರತಿನಿಧಿಯಾಗುವ ಅವಕಾಶ ಲಭ್ಯವಾಗಿದೆ. ಸಮಾಜದ ಒಳಿತಿಗಾಗಿ ಹಂಬಲಿಸುವ ನಾಯಕರು ಆಯ್ಕೆಯಾಗದೆ ಪ್ರಭುತ್ವದ

ತಾಳಕ್ಕೆ ಕುಣಿಯುವ ಜನರನ್ನೇ ನೋಡಿ ಟಿಕೇಟ್ ಕೊಟ್ಟು ಗೆಲ್ಲಿಸಲಾಗುತ್ತದೆ. ಅವರು ಪಕ್ಷದ ನಾಯಕರ ಮರ್ಜಿಯಲ್ಲಿ ಇರಬೇಕಾದ ಅನಿವಾರ್ಯತೆ ಅವರನ್ನು ಕಾಡುತ್ತಿರುತ್ತದೆ. ಭಾರತವೆಂಬ ಹಲವು ಸಮುದಾಯಗಳಿರುವ ದೇಶದಲ್ಲಿ ಮೀಸಲಾತಿಯ ಬೆಂಬಲವಿಲ್ಲದೆ ಅಧಿಕಾರಕ್ಕೆ ಬರುವ ಸ್ಥಿತಿ ದುಸ್ತರವಾಗಿದೆ. ಎರಡೂ ತಾಲೂಕುಗಳಲ್ಲಿ ಕಳೆದ ಎರಡು ಅವಧಿಗಳಿಂದ ಒಬ್ಬ ವ್ಯಕ್ತಿಯು ಜಿಲ್ಲಾಪಂಚಾಯಿತಿಗೆ ಆಯ್ಕೆಯಾಗಿಲ್ಲ ಎನ್ನುವುದಾದರೆ ಪ್ರಭುತ್ವದ ಮರ್ಜಿ ಹೇಗಿದೆ ಎನ್ನುವುದನ್ನು ನಾವು ಗಮನಿಸಬಹುದು. ೨೦೦೬ರ ಜಿಲ್ಲಾ ಪಂಚಾಯಿತಿ ಚುನಾವಣೆಯಲಿ ಶಂಕರ್ ಅಳಗುಂಡಿ ಅವರು ಕುಮಟಾ ತಾಲೂಕಿನ ಕೋನಹಳ್ಳಿ ಜಿಲ್ಲಾ ಪಂಚಾಯತಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು, ೨೦೧೧ರ ತಾಲೂಕು ಪಂಚಾಯಿತಿ ಚುನಾವಣೆಯಲ್ಲಿ ಶ್ರೀಮತಿ ನಾಗವೇಣಿ ಕುಮಟಾ ತಾಲೂಕಿನ ಹೆಗಡೆ ತಾಲೂಕು ಪಂಚಾಯಿತಿ ಕ್ಷೇತ್ರದಿಂದ ಆಯ್ಕೆಯಾಗಿ ಉಪಾಧ್ಯಕ್ಷರು ಕೂಡ ಆಗಿದ್ದರು. ಒಳ್ಳೆಯ ಹೆಸರು ಕೂಡಾ ಇತ್ತು. ಈ ಬಾರಿ ಇವರಿಗೆ ಟಿಕೇಟ್ ಅನ್ನು ನಿರಾಕರಿಸಲಾಯಿತು. ಪ್ರಸ್ತುತ ಶ್ರೀಮತಿ ಗೀತಾ ಮಹಾಬಲೇಶ್ವರ ಮುಕ್ರಿ ಎನ್ನುವವರು ಆಯ್ಕೆಯಾಗಿದ್ದಾರೆ. ಹೊನ್ನಾವರ ತಾಲೂಕಿನಲ್ಲಿ ಶ್ರೀಮತಿ ಸಾವಿತ್ರಿ ಸೋಮಯ್ಯ ಮುಕ್ರಿ ಎನ್ನುವವರು ಆಯ್ಕೆಯಾಗಿದ್ದಲ್ಲದೆ ತಾಲೂಕು ಪಂಚಾಯಿತಿ ಉಪಾಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ಇವರ ಪತಿ ಸೋಮಯ್ಯ ಮುಕ್ರಿ ಕಾಂಗ್ರೆಸ್ ಪಕ್ಷದ ಮುಖಂಡರೂ ಕೂಡಾ ಹೌದು. ಪ್ರಧಾನವಾಗಿ ಎರಡೂ ತಾಲೂಕುಗಳಲ್ಲಿ ಸುಮಾರು ಏಳೆಂಟು ಜನ ಗ್ರಾಮಪಂಚಾಯಿತಿಗೆ ಆಯ್ಕೆಯಾಗಿದ್ದಾರೆ.

ಶ್ರೀಯುತ ಎನ್. ಆರ್. ಮುಕ್ರಿಯವರು ನಿವೃತ್ತ ಪೊಲೀಸ್ ಅಧಿಕಾರಿಯಾಗಿದ್ದು ಸಮಾಜವನ್ನು ಸಂಘಟಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಇವರ ವಿರುದ್ಧವಾದ ಇನ್ನೊಂದು ಸಂಘಟನೆ ಮುಕ್ರಿಗಳಲ್ಲಿಯೇ ಇದೆ. ಇದೆಲ್ಲಕ್ಕೂ ಪರಿಹಾರವಾಗಿ ಜನಾಂಗಿಕ ಕೂಟವೊಂದು ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಕರ್ಕಿಯ ಈಶ್ವರ ಮುಕ್ರಿ ಹೆಗಡೆಯ ಈಶ್ವರ ಮಉಕ್ರಿ, ವಾಲಗಳ್ಳಿಯ ಈಶ್ವರ ಮುಕ್ರಿ ನಾರಾಯಣ ಅಡಗೂಳಿ, ಸಕ್ರಿಯವಾಗಿ ಕೆಲಸಮಾಡುತ್ತಿರುವ ಪ್ರಾಮಾಣಿಕ ಕೆಲಸಗಾರರಾಗಿದ್ದಾರೆ. ಬಹುತೇಕವಾಗಿ ಮುಕ್ರಿಯವರ ಬಗ್ಗೆ ಯಾರೇ ಅಧ್ಯಯನಕ್ಕೆ ಬಂದರೂ ಈಶ್ವರ ಅವರ ಮಾರ್ಗಸೂಚಿಯಿಲ್ಲದೆ ಮುಂದೆ ಹೋಗಲಾಗದು. ಯಾಕೆಂದರೆ ಎಲ್ಲಾ ಊರಿನ ಯುವಕರ ಜೊತೆ ಅವರ ಒಡನಾಟವಿದೆ ಮತ್ತು ಸಮುದಾಯದ ಬಗ್ಗೆ ಅಪಾರ ಅಕ್ಕರೆ ಇದೆ. ನಾರಾಯಣ ಅಡಗೋಳಿ ಎನ್ನುವ ನಿವೃತ್ತ ನೌಕರರೊಬ್ಬರು ಕುಮಟಾ ತಾಲ್ಲೂಕಿನ ತಾಡಕೊಪ್ಪದಲ್ಲಿದ್ದು ಸಮಾಜದ ಬಗ್ಗೆ ತೀವ್ರ ಕಾಳಜಿ ಇರುವ ಸುಸಂಸ್ಕೃತ ವ್ಯಕ್ತಿಯಾಗಿದ್ದಾರೆ. ಅಂಬೇಡ್ಕರ ಭವನಕ್ಕೆ ಹೋರಾಟ ಮಾಡಿದರು. ಮತ್ತು ಹೆಗಡೆಯ ಬಳಿ

ಒಂದಿಷ್ಟು ಜಮೀನನ್ನು ಮುಕ್ರಿ ಜನಾಂಗಕ್ಕೆ ಮಂಜೂರು ಮಾಡಿಸಲು ಪ್ರಯತ್ನಪಟ್ಟರು ಎನ್ನುವ ಕಾರಣಕ್ಕೆ ಅವರಿಗೆ ಅತ್ಯಂತ ಹಿಂಸೆ ಕೊಡಲಾಯಿತಲ್ಲದೇ ಜನ್ಮ ದಿನಾಂಕವನ್ನು ತಿದ್ದಿ ಕಡ್ಡಾಯ ನಿವೃತ್ತಿ ಕೊಡಿಸಲಾಯಿತು. ಶಾನುಭೋಗರೊಬ್ಬರ ಪಿತೂರಿಯಿಂದ ಎರಡು ಮೂರು ದಿನ ಅವರಿಗೆ ಊಟಕ್ಕೆ ಹಣ ಇಲ್ಲದೆ ಗೋಳಾಡುವಂತಾಯಿತು ಎಂದು ಅವರೆ ಹೇಳಿದ್ದಾರೆ. ಹೇಮಂತ ಹಳಕಾರ್ ಎನ್ನುವ ಹೋರಾಟಗಾರರು ಕುಮಟ್ಟಾದಲ್ಲಿದ್ದು ಅನಾರೋಗ್ಯ ಪೀಡಿತ ರಾಗಿದ್ದಾರೆ. ಇವರ ಕುಟುಂಬದ ಎರಡು ತಲೆಮಾರಿನಿಂದ ಅತ್ಯುತ್ತಮ ಶೈಕ್ಷಣಿಕ ಹಿನ್ನಲೆಯನ್ನು ಹೊಂದಿದ್ದಾರೆ. ಹೇಮಂತ ಹಳಕಾರ್ ಅವರ ಅಜ್ಜ ನಾಗಾ ಬೀರ ಮುಕ್ರಿ ೧೯೨೦ರಲ್ಲಿಯೇ ಎಸ್ ಎಸ್ ಸಿ ಪರೀಕ್ಷೆ ಪಾಸ್ ಮಾಡಿದ್ದರಂತೆ. ಶಿರಸಿಯಿಂದ ಬಸ್ ಹತ್ತಲು ಹೋದ ನಾಗಾ ಅವರನ್ನು ಮುಕ್ರಿ ಎನ್ನುವ ಕಾರಣಕ್ಕೆ ಬಸ್ಸಿನಿಂದ ಇಳಿಸುತ್ತಾರೆ. ರೊಚ್ಚಿಗೆದ್ದ ಮುಕ್ರಿಯವರು ಶಿರಸಿಯಿಂದ ಕುಮಟಾಕ್ಕೆ ಹೋಗುವ ಬಸ್ಸಿನ ಒಟ್ಟು ಖರ್ಚನ್ನು ಕೊಟ್ಟು ಒಂಟಿಯಾಗಿ ಬಸ್ಸಿಗೆ ಬರುತ್ತಾರೆ. ಈ ಘಟನೆ ಮುಕ್ರಿ ಸಮುದಾಯದ ಸ್ವಾಭಿಮಾನ ಸ್ಫೋಟಗೊಂಡ ಕಥೆ. ಆದ್ದರಿಂದಲೇ ಹೇಮಂತ್ ಹಳಕಾರ್ ಅವರಿಗೆ ಒಂದು ದೊಡ್ಡ ಪ್ರಮಾಣದಲ್ಲಿ ಜನಾಂಗದ ಮೀಸಲಾತಿಯ ಪರವಾಗಿ ಹೋರಾಟ ಮಾಡಲು ಪ್ರೇರಣೆಯಾಗಿದೆ. ಮೀಸಲಾತಿಯ ದುರುಪಯೋಗದ ಬಗ್ಗೆ ಅವರು ತೀವ್ರವಾಗಿ ಪ್ರಶ್ನಿಸುತ್ತಾರೆ. ಹಾಗೆಯೆ ಗಣಪತಿ ಅಡಿಗುಂಡಿ ಅವರು ನವಲಗುಂದದಲ್ಲಿ ಶಿಕ್ಷಕರಾಗಿದ್ದು ಸಮುದಾಯವನ್ನು ಸೀಮೆಯ ಹೆಸರಲ್ಲಿ ಸಂಘಟಿಸುತ್ತಿದ್ದಾರೆ. ಚಂದಾವರ ಹನುಮಂತನ ದೇವಸ್ಥಾನದಲ್ಲಿ ಮುಕ್ರಿಗಳಿಗೆ ಪ್ರಾತಿನಿದ್ಯವಿಲ್ಲದಿರುವುದನ್ನು ಖಂಡಿಸಿರುವ ಅವರು ಆ ಹನುಮಂತ ಮುಕ್ರಿಗಳ ದೇವರಾಗಿದ್ದು ಅದನ್ನು ಉನ್ನತವರ್ಗದವರು ಕಬ್ಜಾ ಮಾಡಿದ್ದಾರೆ ಎಂಬುದು ಅವರ ವಾದ. ಆರಂಭದಲ್ಲಿ ಮುಕ್ರಿಗಳು ಸೇರಿದಂತೆ ನಾಲ್ಕು ಸಮುದಾಯದವರು ಪೂಜೆ ಮಾಡುತ್ತಿದ್ದು ೧೯೮೫ರ ಮಹಾಸಭೆಯ ನಂತರ ಇವರನ್ನು ದೇವಸ್ಥಾನದ ಆಡಳಿತ ಮಂಡಳಿಯಿಂದ ಹೊರಗೆ ಇಡಲಾಯಿತು. ಇದರ ವಿರುದ್ಧ ಮುಕ್ರಿಗಳು ಸಂಘಟಿತರಾಗುತ್ತಿಲ್ಲ ಮತ್ತು ಪ್ರತಿಭಟಿಸುತ್ತಿಲ್ಲ ಎಂಬುದು ಅವರ ಅಳಲು ಕೂಡ. ವಿನಾಯಕ ಮುಕ್ರಿ ಎನ್ನುವವರು ಶೀರಸಿ ಸಿದಾಪುರ ತಾಲ್ಲೂಕುಗಳಲ್ಲಿ ಮುಕ್ರಿಗಳಲ್ಲಿ ಸಂಘಟನೆ ಮಾಡುತ್ತಿದ್ದಾರೆ.

ರಾಜ್ಯ ಮತ್ತು ರಾಷ್ಟ್ರ ಮಟ್ಟದ ರಾಜಕೀಯದಲ್ಲಿ ಮುಕ್ರಿ ಸಮುದಾಯದ ಪಾತ್ರ ಕೇವಲ ಹಣವಂತ ಮೇಲ್ಜಾತಿಯವರು ಹೇಳುವ ಪಕ್ಷ ಅಥವಾ ವ್ಯಕ್ತಿಗೆ ಮತ ಚಲಾಯಿಸುವ ಮಟ್ಟಕ್ಕೆ ಸೀಮಿತಗೊಂಡಿದೆ. ಹಾಗೆಯೇ ಜಿಲ್ಲಾ ಮಟ್ಟದ ರಾಜಕೀಯ ಕ್ಷೇತ್ರದಲ್ಲಿ ಇವರ ಪಾತ್ರ ಸೊನ್ನೆ ಎಂದು ಹೇಳಬಹುದು.

ದಟ್ಟವಾಗಿ ಒಂದೇ ಕಡೆ ನೆಲೆಸಿರುವ ಮುಕ್ರಿಗಳಲ್ಲಿ ಒಂದಿಬ್ಬರು ಕೇವಲ ಜನಸಂಖ್ಯಾ ಪ್ರಾಬಲ್ಯದಿಂದಾಗಿ ಮತ್ತು ಮೀಸಲಾತಿಯ ಕಾರಣಕ್ಕಾಗಿ ಮಾತ್ರ ತಾಲೂಕು ಪಂಚಾಯತಿಯ

ಒಂದೆರಡು ಸ್ಥಾನಗಳನ್ನು ಗಳಿಸುವ ಮಟ್ಟಕ್ಕೆ ಸೀಮಿತವಾಗಿರುವ ಅಪವಾದಗಳು ಕಂಡುಬರುತ್ತಿವೆ. ಮುಕ್ರಿಯರಲ್ಲಿರುವ ಅಜ್ಞಾನ, ಬಡತನ, ಅನಕ್ಷರತೆ, ಜಾತಿಯ ಅಪಮಾನ ತೊಲಗುವವರೆಗೂ ಇವರ ಸ್ಥಿತಿ ಬದಲಾಗಲಾರದು.

ಇವರ ಏಳಿಗೆಗಾಗಿ ಸರ್ಕಾರ ಮತ್ತು ಸ್ವಯಂ ಸೇವಾ ಸಂಘಟನೆಗಳು ನಿಷ್ಪೃಹತೆಯಿಂದ ಕಾರ್ಯನಿರ್ವಹಿಸಿದಲ್ಲಿ ಮಾತ್ರ ಮುಕ್ರಿಯಂತಹ ಕನಿಷ್ಟಮಟ್ಟದ ಸಮುದಾಯಗಳು ತಮ್ಮ ಕಾಲ ಮೇಲೆ ತಾವು ನಿಂತು ಧ್ವನಿ ತೆರೆದು ತಮಗೆ ದೊರೆಯಬೇಕಾದ ಹಕ್ಕುಗಳನ್ನು ಕೇಳಲು ಶಕ್ತವಾಗುತ್ತವೆ. ಬಹುಶಃ ಲೋಹಿಯಾ, ಗಾಂಧಿ, ಅಂಬೇಡ್ಕರ್‌ರವರು ಇವೆ ಆಶಯಗಳು ಹೊಂದಿದ್ದರು.

ಕೊನೆ ಟಿಪ್ಪಣಿಗಳು

೧. ಚಂದ್ರಶೇಖರ್ ಟಿ.ಆರ್. ಮಾನವ ಅಭಿವೃದ್ಧಿ ಮಾನವ ಬಡತನ ಮತ್ತು ಮಾನವ ಹಕ್ಕುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪, ಪು. ೯೧

೨. ಅದೇ ಪು. ೯೨-೯೫

೩. ಅದೇ ಪು. ೯೧

೪. ಅದೇ ಪು. ೯೪

೫. ಮೋಹನ್ ಎಚ್.ಎಸ್., ಮುಕ್ರಿ ಸಮುದಾಯ, ೨೦೧೬, ಪು. ೯೭

೬. ದಿನಕರ ದೇಸಾಯಿ, ಚುಟುಕು, ೧೯೯೬, ಪು. ೫೪

೭. ಚಂದ್ರಶೇಖರ್ ಟಿ.ಆರ್. ಅಮಾರ್ತ್ಯಸೇನ್, ೨೦೧೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು. ೫೯

೮. ೨೦೧೧ರ ಜನಗಣತಿ ವರದಿ ೨೦೧೨ ಭಾರತ ಸರ್ಕಾರ

೯. ರಾಮ ಮನೋಹರ ಲೋಹಿಯಾ, ಜಾತಿಪದ್ಧತಿ, ೧೯೯೮, ಪತ್ರಿಕಾ ಪ್ರಕಾಶನ, ಬೆಂಗಳೂರು; ಪು. ೧೩೫

ಅಧ್ಯಾಯ ಆರು

ವರ್ತಮಾನದಲ್ಲಿ ಮುಕ್ರಿಯರ ಸಾಮಾಜಿಕ ಸಂಕಥನ

೬.೧. ವರ್ತಮಾನದಲ್ಲಿ ಮುಕ್ರಿ ಸಮುದಾಯದ ಸ್ಥಾನಮಾನ

೬.೨. ಮುಕ್ರಿ ಸಮುದಾಯ ಹಾಗೂ ಇತರ ಸಮಾಜಗಳೊಂದಿಗಿನ ಸಂಬಂಧಗಳು

೬.೩. ಮುಕ್ರಿ ಸಮುದಾಯ ಮತ್ತು ಆಧುನಿಕ ಜಗತ್ತು

ಅಧ್ಯಾಯ ಆರು

ವರ್ತಮಾನದಲ್ಲಿ ಮುಕ್ರಿಯರ ಸಾಮಾಜಿಕ ಸಂಕಥನ

ಮುಕ್ರಿ ಸಮುದಾಯದ ವರ್ತಮಾನದ ಬದುಕು ಹಾಗೂ ಅದು ಸ್ಥಿತ್ಯಂತರಗೊಳ್ಳುತ್ತಿರುವ ಬಗೆಯನ್ನು ಅರಿಯುವ ಪೂರ್ವದಲ್ಲಿ ಸಂಕಥನ ಎಂಬುದರ ಕುರಿತಾಗಿ ಅರಿಯಬೇಕಾದ ಅಗತ್ಯವಿದೆ. ಸಂಕಥನ ಎಂಬುದಕ್ಕೆ ಸಮಾನಾಂತರವಾಗಿ ಇಂಗ್ಲೀಷಿನಲ್ಲಿ ಡಿಸ್‌ಕೋರ್ಸ್ ಎನ್ನುವ ಪದವನ್ನು ಬಳಕೆ ಮಾಡಲಾಗುತ್ತದೆ. ಡಿಸ್‌ಕೋರ್ಸ್ ಎಂಬುದಕ್ಕೆ ಇಂಗ್ಲೀಷ್-ಕನ್ನಡ ಶಬ್ಧಕೋಶದಲ್ಲಿ ವ್ಯಾಖ್ಯಾನ ಎಂದು ಅರ್ಥೈಸಲಾಗಿದೆ. ವ್ಯಾಖ್ಯಾನ ಎಂಬುದು ಡಿಫಿನೇಷನ್ ಎಂಬ ಪದಕ್ಕೆ ಸಮಾನಾರ್ಥಕವಾಗಿ ಬಳಕೆಗೊಳ್ಳುವಂಥಾದ್ದು. ಸಂಕಥನಕ್ಕೂ, ಡಿಸ್‌ಕೋರ್ಸ್ ಎರಡೂ ಪದಗಳನ್ನು ಸಮಾನವಾಗಿ ಪರಿಕಲ್ಪಿಸಿಕೊಳ್ಳುವಲ್ಲಿಯೇ ಅಸಂಬದ್ಧತೆ ಇದೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ 'ಸಂಕಥನ ಎಂಬುದಕ್ಕೆ ೧ ವಿವರಿಸುವಿಕೆ, ವಿಶದಪಡಿಸುವಿಕೆ, ವಿವರಣೆ, ೨ ಹೇಳಿಕೆ ಎಂದಿದೆ.'[೧] ಮೈಕಲ್ ಫೋಕೊ ಎನ್ನುವ ಆಂಗ್ಲ ವಿದ್ವಾಂಸನು ಡಿಸ್‌ಕೋರ್ಸ್ ಎಂಬುದನ್ನು ಈ ಕೆಳಗಿನಂತೆ ವಿವರಿಸುತ್ತಾನೆ. "ಎಲ್ಲಾ ವ್ಯವಸ್ಥೆಗಳನ್ನು ಕಟ್ಟಿಕೊಡುವ ಅಸಮಾನ ಅಧಿಕಾರಾಧಾರಿತ ವೈಚಾರಿಕತೆಯನ್ನು ಸಂಕಥನ ಎಂದು ಕರೆಯುತ್ತಾನೆ"[೨] ಪ್ರಸ್ತುತ ಅಧ್ಯಯನದಲ್ಲಿ ಫೋಕೋನ ವ್ಯಾಖ್ಯಾನದಂತೆಯೇ ಮುಕ್ರಿಯರ ಸಾಮಾಜಿಕ ಬದುಕು ಹಾಗೂ ಅದಕ್ಕೆ ಪೂರಕವಾಗಿರುವ ಸಂಗತಿಗಳನ್ನು ಈ ಅಧ್ಯಯನದಲ್ಲಿ ನೋಡಲಾಗಿದೆ.

ಡಿಸ್‌ಕೋರ್ಸನ್ನು ಕನ್ನಡದಲ್ಲಿ ಸಂಕಥನ ಎಂದು ಅರ್ಥೈಸಲಾಗುತ್ತಿದೆ. ಮೈಸೂರು ವಿಶ್ವವಿದ್ಯಾಲಯವು ಹೊರತಂದಿರುವ ಇಂಗ್ಲೀಷ್ ಕನ್ನಡ ನಿಘಂಟು ಡಿಸ್‌ಕೋರ್ಸ್ ಪದದ

ಅರ್ಥವನ್ನು ಹೀಗೆ ಗುರುತಿಸುತ್ತದೆ. "ಸಂಭಾಷಣೆ, ಸಂವಾದ, ಭಾಷಣ, ಪ್ರಬಂಧ, ಪ್ರವಚನ, ವ್ಯಾಖ್ಯಾನ, ಉಪದೇಶ... ಇತ್ಯಾದಿ. ಆದರೆ ಇವುಗಳಿಗೆ ಹೊರತಾದ ವಿಶಿಷ್ಟ ಅರ್ಥದಲ್ಲಿ ಈ ಪದವನ್ನು ರಾಚನಿಕೋತ್ತರ ಚಿಂತಕರು ಬಳಸುತ್ತಾರೆ.

ಇಂಗ್ಲೀಷಿನಲ್ಲಿ ಬಳಕೆಗೊಳ್ಳುವ ಡಿಸ್‌ಕೋರ್ಸ್ ಪದವು ಮೂಲತಃ ಲ್ಯಾಟೀನ್ ಭಾಷೆಯಿಂದ ಇಂಗ್ಲೀಷಿಗೆ ಬಂದಿದೆ. ಲ್ಯಾಟೀನಿನಲ್ಲಿ Dis+Currere ಎನ್ನುವ ಎರಡು ಪದಗಳಿವೆ. Dis ಎಂದರೆ ದಿಕ್ಕು ಎಂದರ್ಥ, Currere ಎಂದರೆ ಓಡುವುದು ಎಂದರ್ಥ. ಈ ಎರಡೂ ಪದಗಳ ಸಂಯೋಗದಿಂದಾಗಿ ಹುಟ್ಟಿದ ಪದವೇ ಡಿಸ್‌ಕೋರ್ಸ್ ಆಗಿದೆ.

ಡಿಸ್‌ಕೋರ್ಸ್ ಪದವನ್ನು ಬಳಕೆ ಮಾಡಿದ ಪ್ರಮುಖ ವಿದ್ವಾಂಸರಲ್ಲಿ ಮಿಶೆಲ್ ಫುಕೋ (೧೯೨೬-೮೪) ಪ್ರಮುಖನು. ಫ್ರೆಂಚಿನ ತತ್ವಶಾಸ್ತ್ರಜ್ಞ ಹಾಗೂ ಇತಿಹಾಸಕಾರನೆಂದು ಗುರುತಿಸಲಾಗುವ ಫುಕೋನು ತನ್ನ ಹಿಂದಿನವರು ರೂಢಿಸಿಕೊಂಡು ಬಂದಿದ್ದ ಅನೇಕ ವಿಚಾರಗಳನ್ನು ಮತ್ತು ನಿಲುವುಗಳನ್ನು ವಿರೋಧಿಸಿದನು. ಅವನ ಮ್ಯಾಡ್‌ನೆಸ್ ಅಂಡ್ ಸಿವಿಲೈಜೇಶನ್ (೧೯೬೧), ದ ಆರ್ಡರ್ ಆಫ್ ಥಿಂಗ್ಸ್ (೧೯೬೬) ದ ಅರ್ಕಾಲೋಜಿ ನಾಲೆಡ್ಜ್ (೧೯೬೯) ಹಿಸ್ಟೋರಿ ಆಫ್ ಸೆಕ್ಸುಯಾಲಿಟಿ (೧೯೮೪) ಇತ್ಯಾದಿ ಕೃತಿಗಳಲ್ಲಿ ಅವನ ವೈಚಾರಿಕತೆಯಾಗಿ ಡಿಸ್‌ಕೋರ್ಸ್ ಪರಿಕಲ್ಪನೆ ಎದ್ದುಕಾಣುತ್ತದೆ.

"ಪಾಶ್ಚಿಮಾತ್ಯ ಭಾಷಾವಿಜ್ಞಾನಿಗಳೂ ಡಿಸ್ಕೋರ್ಸ್ ಎನ್ನುವ ಪದವನ್ನು ವಿಫುಲವಾಗಿ ಬಳಸುತ್ತಾರೆ. ಹಳೆ ತಲೆಮಾರಿನ ಭಾಷಾಶಾಸ್ತ್ರಜ್ಞರ ಪ್ರಕಾರ ಡಿಸ್‌ಕೋರ್ಸ್ ಎಂಬುದು ಸಂವಾದ ಪದಕ್ಕೆ ಸಮಾನಾರ್ಥಕ ಪದವಾಗಿದೆ. ಯಾವುದೇ ವಾಕ್ಯವನ್ನು ವಿಶ್ಲೇಷಣೆಯ ಹಾಗೂ ವ್ಯಾಖ್ಯಾನದ ಅಚಿತಿಮ ಘಟಕವಾಗಿ ಪರಿಗಣಿಸಿದ್ದಾರೆ. ಫರ್ತ್, ಹ್ಯಾರೀಸ್, ಲಬೋವ್ ಇತ್ಯಾದಿ ಇತ್ತೀಚಿಗಿನ ಭಾಷಾವಿಜ್ಞಾನಿಗಳು ಇಂತಹ ವಾಕ್ಯ ಕೇಂದ್ರಿತ ವ್ಯಾಕರಣವನ್ನು ಸೀಮಿತವಾದುದೆಂದು ವಾದಿಸುತ್ತಾರೆ. ವಾಕ್ಯವನ್ನು ಮೀರುವ ಘಟಕವನ್ನು ಅವರು ಡಿಸ್‌ಕೋರ್ಸ್ ಎಂದು ಕರೆಯುತ್ತಾರೆ" (ರಾಮಚಂದ್ರನ್ ಸಿ ಎನ್: ವಸಾಹತ್ತೋರ ಚಿಂತನೆ: ೨೦೦೨:೧೪-೧೫) ಹ್ಯಾರೀಸ್ ಸ್ಟಬ್ಸ್ ತನ್ನ ಡಿಸ್‌ಕೋರ್ಸ್ ಅನಾಲಿಸಿಸ್ (೧೯೮೩) ಕೃತಿಯಲ್ಲಿ "ಯಾವ ಅಧ್ಯಯನವು ಸ್ವತಂತ್ರ ವಾಕ್ಯಗಳಿಗೆ ಮತ್ತು ಭಾಷಾ ವಿಜ್ಞಾನಿ ಸೃಷ್ಟಿಸಿದ ವಾಕ್ಯಗಳಿಗೆ ಸೀಮಿತವಾಗಿಲ್ಲವೋ ಮತ್ತು ವಾಕ್ಯಗಳ ಸಂದರ್ಭವನ್ನು ಮುಖ್ಯವಾಗಿ ಪರಿಗಣಿಸಲಾಗುವುದೋ ಅದನ್ನು ಸಂವಾದ ವಿಶ್ಲೇಷಣೆ" (ಹ್ಯಾರೀಸ್ ಸ್ಟಬ್ಸ್: ೧೯೮೩:೭) ಎಂದು ಕರೆಯಬಹುದು ಎನ್ನುತ್ತಾನೆ. ಭಾಷಾ ವಿಜ್ಞಾನಿಗಳ ಸಂವಾದ ವಿಶ್ಲೇಷಕರು ಪಠ್ಯ ಮತ್ತು ಡಿಸ್‌ಕೋರ್ಸ್ ಎರಡನ್ನೂ ಭಿನ್ನವಾಗಿಯೇ ಪರಿಗಣಿಸುತ್ತಾರೆ. ಯಾವುದೇ ಒಂದು ಪಠ್ಯವು ಕೇವಲ ಪಠ್ಯವಾಗಿ

ಮಾತ್ರ ಉಳಿಯಬಹುದು. ಪಠ್ಯಕ್ಕೆ ನಿಜವಾದ ಅರ್ಥ ದೊರೆಯುವುದು ಅದು ಬಳಕೆಗೊಳ್ಳುವ ಸಂದರ್ಭ ಹಾಗೂ ಕಾಲಗಳಲ್ಲಿ. ಅಂದರೆ ಒಬ್ಬ ನಂಬರ್ ಪ್ಲೇಟ್ ರಚಿಸುವ ತಂತ್ರಜ್ಞನನ ಅಂಗಡಿಯಲ್ಲಿ ನೂರಾರು ನಂಬರ್ ಪ್ಲೇಟುಗಳು ತೂಗಾಡುತ್ತಿರುತ್ತವೆ. ಅವುಗಳು ಅಂಗಡಿಯಲ್ಲಿರು ವವರೆಗೂ ಕೇವಲ ಪಠ್ಯಗಳಾಗಿ ಮಾತ್ರ ಇರಬಲ್ಲುವು. ಅವೇ ನಂಬರ್ ಪ್ಲೇಟ್‌ಗಳು ವಾಹನಗಳಿಗೆ ಜೋಡಿಸಿದಾಗ ನಂಬರ್ ಪ್ಲೇಟುಗಳಿಗೆ ಅರ್ಥವಂತಿಕೆ ಬರುತ್ತದೆ. ವಾಹನದ ಯಜಮಾನನು ಆ ನಂಬರ್ ಪ್ಲೇಟುಗಳ ಮೂಲಕವೇ ತನ್ನ ವಾಹನವನ್ನು ಗುರುತಿಸಿಕೊಳ್ಳಬಲ್ಲನು. ಅಂದರೆ ಅಂಗಡಿಯಲ್ಲಿರುವ ನಂಬರ್ ಪ್ಲೇಟುಗಳಿಗೆ ಜೀವಂತಿಕೆ ಮೂಡುವುದೇ ಅದು ವಾಹನದ ಮೇಲೆ ರಾರಾಜಿಸಿದಾಗ. ಇದನ್ನೇ ಡಿಸ್‌ಕೋರ್ಸ್ ಎನ್ನುವುದು.

ಸಾಹಿತ್ಯ ವಿಮರ್ಶೆಯಲ್ಲಿಯೂ ಅದರಲ್ಲೂ ವಿಶೇಷವಾಗಿ ಪಾಶ್ಚತ್ಯ ಸಾಹಿತ್ಯ ವಿಮರ್ಶೆಯಲ್ಲಿ ಡಿಸ್‌ಕೋರ್ಸ್ ಪದ ಬಳಕೆಯಾಗುತ್ತಿದೆ. ಜೋನಾಥನ್ ಕಲರ್ ಅವರು ತನ್ನ ರಾಚನಿಕ ಕಾವ್ಯ ಮಿಮಾಂಸೆ (೧೯೭೫) ಕೃತಿಯಲ್ಲಿ ಡಿಸ್‌ಕೋರ್ಸ್ ಕುರಿತು ತಿಳಿಸುತ್ತಾನೆ. "ಯಾವುದೇ ಒಂದು ಕೃತಿಯನ್ನು ಶೂನ್ಯ ಮನಸ್ಥಿತಿಯಿಂದ ಓದಿದರೆ ಆ ಓದಿಗೆ ಅರ್ಥವಿರುವುದಿಲ್ಲ. ಯಾವುದೇ ಓದುಗನು ಒಂದು ಕೃತಿಯಿಂದ ಕೆಲವು ನಿರೀಕ್ಷೆಗಳನ್ನಿರಿಸಿಕೊಂಡಿರುತ್ತಾನೆ. ಅಂತಹ ನಿರೀಕ್ಷೆಗಳನ್ನು ಓದುಗನಿಗೆ ತಲುಪಿಸುವ ಕಾರ್ಯವನ್ನು ಮಾಡುವುದೇ ಡಿಸ್‌ಕೋರ್ಸ್ ಎನ್ನುತ್ತಾನೆ"(ಜೋನಾಥನ್ ಕಲರ್: ೧೯೭೫: ೧೧೩–೧೪)

ಜೋನಾಥನ್ನನ ಡಿಸ್‌ಕೋರ್ಸ್ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಸಂಹಿತೆ ಎನ್ನುವ ಪದವನ್ನು ಬಳಸಬಹುದೆಂದು ಸಿ ಎನ್ ರಾಮಚಂದ್ರನ್(ವಸಾಹತ್ತೋತ್ತರ ಚಿಂತನೆ: ೨೦೦೨:೧೭) ಅಭಿಪ್ರಾಯಪಡುತ್ತಾರೆ. "ಜಫ್ರಿ ಲೀಚನು ಕಥನಶಾಸ್ತ್ರಕ್ಕೆ ಸಂಬಂಧಿಸಿದಂತೆ ಹೇಳುವಾಗ ಕಥನ ಮತ್ತು ವ್ಯಾಖ್ಯಾನಗಳ ಭಿನ್ನತೆಯನ್ನು ತಿಳಿಸಲು ನೆರೇಷನ್ ಹಾಗೂ ಡಿಸ್‌ಕೋರ್ಸ್ ಎನ್ನುವ ಪದಗಳನ್ನು ಬಳಕೆ ಮಾಡಿದ್ದಾನೆ. ಇದನ್ನೇ ಚಾಟ್‌ಮನ್‌ನೂ ಅನುಸರಿಸಿದ್ದಾನೆ" (ರಾಮಚಂದ್ರನ್:೨೦೦೨:೧೭) ಆದರೆ ಫುಕೋನಂತಹ ರಾಚನಿಕ ಚಿಂತಕರು ಡಿಸ್‌ಕೋರ್ಸ್ ಪದವನ್ನು ಭಿನ್ನ ದೃಷ್ಟಿಕೋನದಲ್ಲಿ ಬಳಕೆ ಮಾಡಿರುವರು. ಖಸ್‌ಕೋರ್ಸ್‌ನ್ನು ಭಾಷೆ ಮತ್ತು ಸಾಮಾಜಿಕ ಸಂಸ್ಥೆಗಳ ನಡುವಿನ ಸಂಬಂಧ ಎಂದು ವ್ಯಾಖ್ಯಾನಿಸಬಹುದು ಎಂದು ಹೇಳಲಾಗುತ್ತದೆ. ಅಂದರೆ "ಡಿಸ್‌ಕೋರ್ಸ್ ವಿಶ್ಲೇಷಣೆಯಂದರೆ ವಿಶಿಷ್ಟ ಸೂಚನಾ ಪ್ರಕ್ರಿಯೆಯನ್ನು, ಪರಿಣಾಮತಃ ಜ್ಞಾನದ ವಿಶಿಷ್ಟ ರೂಪಗಳನ್ನು ಸಾಧ್ಯವಾಗಿಸುವ ಸಾಂಸ್ಥಿಕ ನಿಯಮ ನಿಬಂಧನೆಗಳನ್ನು ಗುರುತಿಸುವುದು"(ರಾಮಚಂದ್ರನ್: ೨೦೦೨:೧೮)ಎಂದು ವ್ಯಾಖ್ಯಾನಿಸಲಾಗಿದೆ.

ಪರಂಪರಾಗತ ಆಲೋಚನಾ ಕ್ರಮವನ್ನು ವಸಾಹತುಶಾಹಿ ಆಧುನಿಕ ಆಲೋಚನಾ ಕ್ರಮ ಆಕ್ರಮಿಸಿತು. ಅದೇ ರೀತಿ ೨೦ನೇ ಶತಮಾನದ ಸುಮಾರಿಗೆ ಪರಿಚಿತಗೊಂಡ ಜಾಗತೀಕರಣವು

ವಸಾಹತುಶಾಹಿ ಆಧುನಿಕ ಆಲೋಚನಾ ಕ್ರಮ ಆಕ್ರಮಿಸಿತು. ಈ ಮೂರು ತಲೆಮಾರುಗಳ ಆಲೋಚನಾ ಕ್ರಮ ಒಂದಕ್ಕೊಂದು ಭಿನ್ನವಾಗಿಯೇ ಇರುತ್ತವೆ ಮತ್ತು ಇವೆ. ಆಯಾ ಕಾಲದ ಆಲೋಚನಾ ಕ್ರಮಗಳೇ ಡಿಸ್‌ಕೋರ್ಸ್‌ಗಳನ್ನು ಸೃಷ್ಟಿಸುವಂಥವುಗಳಾಗಿರುತ್ತವೆ. "ಇಂತಹ ಪ್ರಮಾಣ ಸಂಹಿತೆಗಳೇ ನಮ್ಮ ಇಂದ್ರಿಯಾನುಭವ ಗ್ರಹಿಕೆಗಳಿಗೆ ವಸ್ತುನಿಷ್ಠ ಸತ್ಯದ ಸ್ಥಾನವನ್ನು ನೀಡಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಡಿಸ್‌ಕೋರ್ಸ್‌ಗಳನ್ನು ಸೃಷ್ಟಿಸುತ್ತದೆ. ಏನನ್ನು ಹೇಳಬಹುದು ಮತ್ತು ಯಾವ ಪ್ರಕಾರದಲ್ಲಿ? ಒಂದು ಸಂದರ್ಭದಲ್ಲಿ ಯಾವುದು ಉಚಿತ ಮತ್ತು ಯಾವುದು ಅನುಚಿತ? ಯಾರಿಗೆ ಏನನ್ನು ಹೇಳುವ ಅಧಿಕಾರವಿದೆ? ಇವೆಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಡಿಸ್‌ಕೋರ್ಸ್‌ಗಳು, ಅಥವಾ ಅವನ್ನು ರೂಪಿಸುವ ಆಚರಣೆಗಳು ಮತ್ತು ವಿಧಿನಿಷೇಧಗಳು ನಿರ್ಧರಿಸುತ್ತವೆ (ಸೈಮನ್ಸ್:೧೯೭೨:೨೪). ಉದಾಹರಣೆಗೆ ಹೇಳುವುದಾದರೆ ಈ ಭೌತಿಕ ಪ್ರಪಂಚಕ್ಕೆ ಸ್ವತಂತ್ರವಾದ ಅಸ್ತಿತ್ವ ಇದೆ. ಅದರೊಡನಾಡುವ ನಮಗೆ ನಾನಾ ಅನುಭವಗಳಾಗುತ್ತವೆ. ಆ ಅನುಭವಗಳನ್ನು ಹೊರಹೊಮ್ಮಿಸಲು ಭಾಷೆಯನ್ನು ಸಂವಹನವಾಗಿ ಬಳಕೆ ಮಾಡಲಾಗುತ್ತದೆ. ಅಂದರೆ ಭೌತಿಕ ಪ್ರಪಂಚದೊಡನಾಡುವ ನಮಗೆ ಉಂಟಾಗುವ ಪರಿಣಾಮಗಳ ಅನುಭವಗಳನ್ನು ಹಂಚಿಕೊಳ್ಳುವ ಮಾಧ್ಯಮವಾಗಿ ಭಾಷೆ ಕಾರ್ಯಮಾಡುತ್ತದೆ. ಭಾಷೆಯಿರದೆ ಅನುಭವ ಹಂಚಿಕೊಳ್ಳುವ ಕ್ರಮ ಅರಿತಿಲ್ಲ. ಹೀಗಾಗಿ ಭಾಷೆ ಅನುಭವವನ್ನು ಅರ್ಥಮಾಡಿಸುವ ಸಂವಹನ ಮಾರ್ಗವಾಗಿದೆ. ಅಂದರೆ ಭಾಷೆಯಿಂದ ಹೊರತಾದ ಸ್ವತಂತ್ರ ಅಸ್ತಿತ್ವ ವಸ್ತುವಿಗೂ ಇಲ್ಲ, ಅನುಭವಕ್ಕೂ ಇಲ್ಲ. ವಸ್ತು ಮತ್ತು ಅನುಭವಗಳಿಗೆ ರೂಪುಕೊಡುವುದು ಭಾಷೆಯನ್ನು ಸಾಮಾಜಿಕ ಸಂಸ್ಥೆಗಳು ನಿಯಂತ್ರಿಸುತ್ತವೆ. "ಸಾಂಸ್ಥಿಕ ನಿಯಂತ್ರಣದಿಂದಾಗಿ ಜನ್ಮಿಸುವ ಭಾಷೆಯು ರೂಪಿಸುವ ನಮ್ಮ ಗ್ರಹಿಕೆಯನ್ನು ಫುಕೋ ಡಿಸ್‌ಕೋರ್ಸ್ ಎಂದು ಕರೆಯುತ್ತಾನೆ. ಡಿಸ್‌ಕೋರ್ಸಿನಿಂದ ಮುಕ್ತವಾದ, ಎಂದರೆ ಸಾಂಸ್ಥಿಕ ನಿಯಂತ್ರಣ, ಒತ್ತಡಗಳಿಲ್ಲದ ಯಾವ ಜ್ಞಾನವೂ, ಜ್ಞಾನಮಾರ್ಗವೂ ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ, ಮತ್ತು ಯಾವ ಗ್ರಹಿಕೆಯೂ ಸಾಧ್ಯವಿಲ್ಲ"(ರಾಮಚಂದ್ರನ್ ಸಿ ಎನ್: ೨೦೦೨: ೧೯).

ಫುಕೋನ ಸಮಕಾಲೀನನಾದ ಪೆಶೋ(Pecheux) ಡಿಸ್‌ಕೋರ್ಸ್ ವಾದಕ್ಕೆ ಸಂಬಂಧಿಸಿದಂತೆ ಅನೇಕ ಪ್ರಯೋಗಗಳನ್ನು ಮಾಡಿರುವನು. ಅವನ ಪ್ರಕಾರ ಪದ–ವಾಕ್ಯಗಳಿಗೆ ತಮ್ಮದೇ ಆದ ಸ್ವತಂತ್ರ ಅರ್ಥವೆಂಬುದಿಲ್ಲ. ಅರ್ಥಗಳು ಸಾಮಾಜಿಕ ಸಂದರ್ಭಗಳ ಉತ್ಪನ್ನಗಳು(Meanings are socially constructed) ಎಂದು ಹೇಳುತ್ತಾನೆ. (ರಾಮಚಂದ್ರನ್ ಸಿ ಎನ್: ೨೦೦೨: ೨೫). ಡಿಸ್‌ಕೋರ್ಸ್ ಎಂಬುದು ಭೌತಿಕ ಹಾಗೂ ಮಾನಸಿಕ ಅಭಿವ್ಯಕ್ತಿಯ ಅನುಭವಗಳ ಮಧ್ಯದ ಸಂಬಂಧಗಳಿಂದ ಕೂಡಿರುತ್ತದೆ. ಅದು ಪ್ರತಿಯೊಂದೂ ಭಾಷೆ, ಜಾತಿ, ಸಮುದಾಯಗಳ ಸಂಸ್ಕೃತಿಗಳನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ.

ವರ್ತಮಾನದಲ್ಲಿ ಮುಕ್ರಿ ಸಮುದಾಯದ ಸ್ಥಾನಮಾನ

ಮುಕ್ರಿ ಸಮುದಾಯದ ಕುರಿತು ಇಲ್ಲಿಯವರೆಗೂ ಯಾರೂ ಆಳವಾಗಿ ಅಧ್ಯಯನ ನಡೆಸದೆ ಇರುವುದರಿಂದ ಇದಕ್ಕೆ ಸಂಬಂಧಿಸಿದ ದಾಖಲೆಗಳಾವೂ ಸೃಷ್ಟಿಯಾಗಿರುವುದು ಕಂಡುಬರುವುದಿಲ್ಲ. ಎರಡನೆಯದಾಗಿ ಮುಕ್ರಿಯರು ಮೂಲತಃ ಅನಕ್ಷರಸ್ಥರಾಗಿರುವುದರಿಂದ ತಮ್ಮನ್ನು ಕುರಿತು ದಾಖಲೆಗಳನ್ನು ಸೃಷ್ಟಿಸಿ ಚರಿತ್ರೆ ಕಟ್ಟುವ ಕಾರ್ಯ ದೂರದ ಮಾತಾದೀತು. ಮೂರನೆಯದಾಗಿ ಸಾಮಾಜಿಕವಾಗಿ ಅಸ್ಪೃಶ್ಯತೆಯನ್ನು ಅನುಭವಿಸುತ್ತಿರುವ ಇವರು ಪೂರ್ವದಲ್ಲಿ ಕಾಡನ್ನೇ ಅವಲಂಭಿಸಿ ಜೀವನ ನಿರ್ವಹಣೆ ನಡೆಸುವವರಾಗಿದ್ದರು. ಕಾಡಿನ ಕಿರು ಉತ್ಪನ್ನಗಳು, ಬೇಟೆಗಾರಿಕೆ ಮತ್ತು ತಮ್ಮ ಮೂಲ ಕಸುಬೆಂದು ಹೇಳಿಕೊಳ್ಳುವ ಇವರು ಕುಮ್ರಿ ಬೇಸಾಯವನ್ನು ಅವಲಂಬಿಸಿದವರಾಗಿದ್ದರು. ಅಕ್ಷರಸ್ಥ ಸಾಮಾಜದಿಂದ ತೀರಾ ದೂರವುಳಿದಿದ್ದ ಇವರ ಕುರಿತು ಶಿಷ್ಟ ಜಗತ್ತು ದಾಖಲೆಗಳನ್ನು ಸೃಷ್ಟಿಸಿದ ಉದಾಹರಣೆಗಳೂ ಇಲ್ಲ. ಭಾರತಕ್ಕೆ ವ್ಯಾಪಾರ, ಧರ್ಮ ಪ್ರಚಾರಕ್ಕೆಂದು ಬಂದ ವಿದೇಶೀಯರು ನಾನಾ ಕಾರಣಗಳಿಗಾಗಿ ಇಲ್ಲಿಯ ಜಾತಿ ಸಮುದಾಯಗಳ ಕುರಿತು ಅಕ್ಷರ ರೂಪದಲ್ಲಿ ದಾಖಲೀಕರಣ ಮಾಡಿದರು. ಪ್ರಾಯಶಃ ಈ ದಾಖಲೆಗಳು ಅವರ ತಿಳುವಳಿಕೆಯ ಮಿತಿಯಲ್ಲಿದ್ದವು ಹಾಗೂ ಅವರ ಉದ್ದೇಶಗಳಿಗೆ ಪೂರಕವಾಗುವಂತಹ ಮಾಹಿತಿ ಮಾತ್ರ ಅವಾಗಿದ್ದವು. ಆದರೆ ಭಾರತೀಯ ಸಂದರ್ಭ ಮತ್ತು ಸಾಮಾಜಿಕ ಪರಿಸರವನ್ನು ವಸ್ತುನಿಷ್ಠವಾಗಿ ದಾಖಲಿಸಿದ ಉದಾಹರಣೆಗಳು ಕಂಡುಬರುವುದಿಲ್ಲ. ದುರಾದೃಷ್ಟವೆಂದರೆ ವಿದೇಶೀಯರು ನೀಡಿದ ಅಂತಹ ದಾಖಲೆಗಳನ್ನೇ ಭಾರತೀಯ ಅಧ್ಯಯನಗಳು ಆಕರಗಳಾಗಿ ಬಳಸಬೇಕಾದ ಸ್ಥಿತಿ ಒದಗಿರುವುದು.

ವೆರಿಯರ್ ಎಲ್ವಿನ್ ಒಮ್ಮೆ ಮಧ್ಯಪ್ರದೇಶದ ಗೊಂಡಾರ ಕಲಾವಿದರೊಂದಿಗೆ ಮಾತನಾಡುತ್ತಿರುತ್ತಾರೆ. ಕಲಾವಿದ ಹೀಗೆ ಹೇಳುತ್ತಾನೆ "ಮೊದಲಿಗೆ ನಾವೆಲ್ಲ ನಮ್ಮ ದೇವರ ಕೃಪೆಯಿಂದ ತುಂಬಾ ಸಿರಿವಂತರಾಗಿದ್ದೆವು, ಆರೋಗ್ಯವಾಗಿದ್ದೆವು, ಅಷ್ಟರಲ್ಲಿ ರೈಲು ಬಂತು, ಆ ರೈಲಿನ ಚಂದ ನೋಡಿ ನಮ್ಮ ದೇವರು ಕೂಡಾ ಅದನ್ನು ಹತ್ತಿ ಪಟ್ಟಣಕ್ಕೆ ಹೋದ. ಈಗ ನಾವೆಲ್ಲ ಬಡವರಾಗಿದ್ದೇವೆ. ಪಟ್ಟಣದವರು ಸಿರಿವಂತರಾಗಿದ್ದಾರೆ."[೩] ಗೊಂಡ ಕಲಾವಿದನ ಮಾತು. ಅತಿ ಮುಗ್ಧತೆಯಿಂದ ಕೂಡಿದ್ದರೂ ಅದರ ಹಿಂದೆ ಒಂದು ಸತ್ಯದ ಬೆಳಕಿದೆ. ಆಧುನಿಕತೆ ಗೊಂಡರಂತಹ ಎಷ್ಟೋ ಬುಡಕಟ್ಟು ಹಾಗೂ ತಳ ಸಮುದಾಯಗಳನ್ನು ಬುಡಮೇಲು ಮಾಡಿದೆ. ಈ ಮಾತಿಗೆ ಮುಕ್ರಿ ಸಮುದಾಯ ಹೊರತಾಗಿಲ್ಲ.

ಅಧ್ಯಯನದ ದೃಷ್ಟಿಯಿಂದ ಕ್ಷೇತ್ರ ಕಾರ್ಯ ನಡೆಸಿದಾಗ ಮುಕ್ರಿ ಸಮುದಾಯವು ಪ್ರಸ್ತುತ ಕಾಡನ್ನು ತ್ಯಜಿಸಿ ನಾಡಿಗೆ ಪಾದಾರ್ಪಣೆ ಮಾಡಿದ್ದಾರೆ. ಪ್ರಸ್ತುತ ಕಾಡನ್ನು ತ್ಯಜಿಸಿ ನಾಡಿಗೆ

ಬಂದಿದ್ದರೂ ಕಾಡಿನ ಸಂಪರ್ಕವನ್ನು ಇಂದಿಗೂ ಮುಕ್ರಿಗಳು ಕಳೆದುಕೊಳ್ಳಲು ಸಾಧ್ಯವಾಗಿಲ್ಲದಿರುವುದು ಕಂಡುಬಂದಿತು. ಸಾಮಾಜಿಕವಾಗಿ ತೀರಾ ಕೆಳಸ್ಥಾನದಲ್ಲಿರುವ ಮುಕ್ರಿ ಸಮುದಾಯವು ಕಾಡನ್ನು ಅವಲಂಬಿಸಿ ಜೀವನ ಸಾಗಿಸುತ್ತಿದ್ದಾಗ ಆರ್ಥಿಕ ಅಭದ್ರತೆ ಕಾಡುತ್ತಿರಲಿಲ್ಲವೆನಿಸುತ್ತದೆ. ಬ್ರಿಟೀಷ್ ಆಡಳಿತ ವ್ಯವಸ್ಥೆಯ ಸಂದರ್ಭದಲ್ಲಿ ಅರಣ್ಯವಾಸಿ ಬುಡಕಟ್ಟು ಸಮುದಾಯಗಳನ್ನು ತಮ್ಮ ಹಿಡಿತದಲ್ಲಿರಿಸಿಕೊಳ್ಳಲು ಅರಣ್ಯ ಕಾಯ್ದೆ ರೂಪಿಸಲಾಯಿತು. ಇದರಿಂದ ನಿಧಾನವಾಗಿ ಅರಣ್ಯವಾಸಿ ಸಮುದಾಯಗಳಿಗೆ ಅರಣ್ಯವು ದೂರಾಗುತ್ತಾ ಸಾಗಿತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬ್ರಿಟೀಷ್ ಆಡಳಿತ ವೈಖರಿಯನ್ನೇ ಮೈಗೂಡಿಸಿ ಕೊಂಡಿದ್ದ ಭಾರತೀಯ ರಾಜಕೀಯ ಮತ್ತು ಆಡಳಿತಾತ್ಮಕ ವ್ಯವಸ್ಥೆಯು ಬ್ರಿಟೀಷ್ ಆಡಳಿತಕ್ಕಿಂತ ಭಿನ್ನವಾಗಿಯೇನೂ ವರ್ತಿಸಲಿಲ್ಲ. ಬ್ರಿಟೀಷರಿಗಿಂತ ತಾವೇನೂ ಕಡಿಮೆಯಿಲ್ಲ ಎನ್ನುವಷ್ಟು ಶೋಷಣೆ ಮಾಡುತ್ತಲೇ ಬಂದವು. ಆಡಳಿತಾರೂಢ ರಾಜಕೀಯ ವ್ಯವಸ್ಥೆಯು ಮೇಲ್ಜಾತಿಗಳ ಹಿಡಿತದಲ್ಲಿದ್ದಿತು. ಇಂದಿಗೂ ಅದು ಮೇಲ್ಜಾತಿಗಳ ಹಿಡಿತದಿಂದ ದೂರವಾಗಿಲ್ಲ. ಹೀಗಾಗಿ ಕೆಳಜಾತಿ ಸಮುದಾಯಗಳು ಅದರಲ್ಲಿಯೂ ಅಸ್ಪೃಶ್ಯ ಸಮುದಾಯಗಳು, ಬುಡಕಟ್ಟು ಸಮುದಾಯಗಳು ಇನ್ನೂ ಹೆಚ್ಚು ಶೋಷಣೆಗಳನ್ನು ಅನುಭವಿಸುವಂತಾಯಿತು. ಸಂವಿಧಾನಿಕ ವಿಧಿ–ನಿಯಮಗಳಾವೂ ತಳಸಮುದಾಯಗಳ ಪರವಾಗಿದ್ದರು ಅವು ಅನುಷ್ಠಾನ ಹಂತದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗದಂತಹ ಸ್ಥಿತಿಯನ್ನು ಮೇಲ್ಜಾತಿ ರಾಜಕಾರಣ ಸೃಷ್ಟಿಸಿತು ಎಂದರೆ ತಪ್ಪಾಗಲಾರದು. ಬ್ರಿಟೀಷರು ಹುಟ್ಟು ಹಾಕಿದ ಆಧುನೀಕರಣ, ಅಮೇರಿಕಾ ಹುಟ್ಟು ಹಾಕಿರುವ ಜಾಗತೀಕರಣ ಎನ್ನುವ ಬಿಸಿಗಾಳಿಗೆ ತಳಸಮುದಾಯಗಳು, ಬುಡಕಟ್ಟುಗಳು, ಕುಶಲಕರ್ಮಿ ಸಮುದಾಯಗಳು ತತ್ತರಿಸುವಂತಾಯಿತು. ಇದಕ್ಕೆ ಮುಕ್ರಿ ಸಮುದಾಯ ಹೊರತಾಗಿಯೇನೂ ಇಲ್ಲ. ಭಾರತೀಯ ಜಾತಿವ್ಯವಸ್ಥೆಯಂತೆ ಜಾಗತೀಕರಣದ ಆರ್ಥಿಕ ಹಪಾಪಿತನವು ಮುಕ್ರಿಯಂತಹ ಅಲ್ಪಸಂಖ್ಯಾತ ಸಮುದಾಯವು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಇನ್ನೂ ಕೆಳಮುಖವಾಗಿ ಚಲಿಸುವಂತಾಯಿತು.

ಇಂದು ಜಾತಿ ವ್ಯವಸ್ಥೆಯ ಏಣಿಶ್ರೇಣಿಯ ಕಾವು ಕಡಿಮೆಯಾಗಿದೆಯೆಂದು ಮೇಲ್ನೋಟಕ್ಕೆ ಅನಿಸಿದರೂ ಅದು ಮಲಗಿದ ಸರ್ಪದಂತೆ ಎಲ್ಲೋ ಒಂದುಕಡೆ ಭುಸುಗುಟ್ಟುತ್ತಲೇ ಇದೆ. ಪ್ರಸ್ತುತ ಆಧುನಿಕ ಶಿಕ್ಷಣವು ಪೂರ್ಣವಾಗಿಯಲ್ಲದಿದ್ದರೂ ಅಲ್ಪ ಪ್ರಮಾಣದಲ್ಲಿಯಾದರೂ ಮುಕ್ರಿಯಂತಹ ಸಮುದಾಯಗಳ ಮಧ್ಯದಲ್ಲಿ ನುಸುಳಿದೆ. ಇಂದು ಮುಕ್ರಿ ಸಮುದಾಯದ ಮಕ್ಕಳಲ್ಲಿ ಅರ್ಧದಷ್ಟಾದರೂ ಮಕ್ಕಳು ಶಾಲೆಯ ಮುಖ ಕಾಣುವಂತಾಗಿದೆ ಎಂಬುದೇನೋ ನಿಜ. ಆದರೆ ಈ ಶಿಕ್ಷಣವೆಂಬುದು ಮುಕ್ರಿಯಂತಹ ತಳಸಮುದಾಯದ ಸಾಮಾಜಿಕ ಬದುಕನ್ನು ಇಂದಿಗೂ ಪೂರ್ಣವಾಗಿ ಬದಲಿಸಲು ಸಾಧ್ಯವಾಗಿಲ್ಲ ಎಂಬುದನ್ನು ಅವರು ನೆಲೆಸಿರುವ

ಪ್ರತ್ಯೇಕವಾದ ಕೊಪ್ಪಗಳೇ ಸೂಚಿಸುತ್ತವೆ. ಆಧುನಿಕತೆಯ ಪರಿಣಾಮವಾಗಿ ಮುಕ್ರಿ ಸಮುದಾಯ ಅನುಭವಿಸುತ್ತಿರುವ ಅಸ್ಪೃಶ್ಯತೆಯು ಮೇಲ್ನೋಟಕ್ಕೆ ಅಲ್ಪ ಪ್ರಮಾದಲ್ಲಿ ಕಡಿಮೆಯಾಗಿದೆ ಎಂದು ಅನಿಸಿದರೂ ಅಸ್ಪೃಶ್ಯರೆಂಬ ಹಣೆಪಟ್ಟಿಯಿಂದ ಈ ಸಮುದಾಯ ಇಂದಿಗೂ ಹೊರಬರಲು ಸಾಧ್ಯವಾಗಿಲ್ಲವೆಂದು ಸಮುದಾಯದ ವಕ್ತೃಗಳು ತಿಳಿಸುತ್ತಾರೆ.

ಮುಕ್ರಿಯರು ತಮ್ಮ ದೈಹಿಕ ಶ್ರಮಶಕ್ತಿಯಿಂದಾಗಿ ಕೃಷಿ ಹಾಗೂ ಇತರ ಕೂಲಿ ಕೆಲಸಗಳಿಂದ ಹೊಟ್ಟೆಹೊರೆಯುತ್ತಿವೆ. ಮುಕ್ರಿಯರು ಕೂಲಿ ಕೆಲಸಕ್ಕಾಗಿ ಭೂ ಒಡೆಯರು ಇಲ್ಲವೇ ಬಂಡವಾಳಶಾಹಿಗಳ ಆಶ್ರಯವನ್ನು ಹೊಂದಲೇಬೇಕಾದ ಅನಿವಾರ್ಯತೆಯಿದೆ. ಮೇಲ್ವರ್ಗದವರ ಒಡನಾಟದಿಂದಾಗಿ ಪ್ರಸ್ತುತ ಮುಕ್ರಿ ಯುವ ಸಮುದಾಯವು ಹಲವಾರು ಬದಲಾವಣೆಗಳಿಗೆ ಒಳಗಾಗಿದೆ. ಮೇಲ್ವರ್ಗ ತೊಡುವ ಬಟ್ಟೆ, ಮಾತನಾಡುವ ಶೈಲಿ ಇತ್ಯಾದಿ ಅಂಶಗಳಲ್ಲಿ ನಡವಳಿಕೆಯಲ್ಲಿ ಬದಲಾವಣೆ ಕಂಡುಬರುತ್ತಿದೆ. ಹಳೆಯ ಪರಂಪರೆಯನ್ನು ಅನುಸರಿಸುವುದ ರಿಂದಲೇ ತಮಗೆ ಅವಮಾನವಾಗುತ್ತದೆಂದು ಮುಕ್ರಿ ಯುವಸಮೂಹ ಭಾವಿಸಿರುವುದಾಗಿ ವಕ್ತೃಗಳು ತಿಳಿಸುತ್ತಾರೆ. ತಮ್ಮ ಉಡುಗೆ-ತೊಡುಗೆಗಳ, ಮಾತಿನ ಶೈಲಿಯ ಬದಲಾವಣೆಯಿಂದ ಮೇಲ್ಜಾತಿಗಳ ಮೇಲೆ ಯಾವ ಪರಿಣಾಮಗಳು ಆಗುತ್ತಿಲ್ಲ ಎನ್ನುವುದು ಅಷ್ಟೇ ಸತ್ಯ. ಮೇಲ್ವರ್ಗದವರು ಮುಕ್ರಿಯರನ್ನು ಅಸ್ಪೃಶ್ಯರನ್ನಾಗಿಯೇ ನೋಡುತ್ತಿದ್ದರು ಮತ್ತು ಪ್ರಸ್ತುತ ದಿನಗಳಲ್ಲೂ ಅಸ್ಪೃಶ್ಯರೆಂದೆ ಪರಿಗಣಿಸುತ್ತಿದ್ದಾರೆ. ಫಣ ಸಂಸ್ಕೃತಿಯಲ್ಲಿ ಬಡಗೈ ಫಣಕ್ಕೆ ಸೇರಿದ ಕೃಷಿವೃತ್ತಿ ಮೂಲದ ಈ ಸಮುದಾಯ ಜೀವನಕ್ಕೆ ಅವಶ್ಯವಾದ ಆಹಾರ ಸಂಗ್ರಹಣೆಗಾಗಿ ಕಾಡನ್ನೇ ಅವಲಂಬಿಸಿದ್ದುದರಿಂದ ಆರ್ಥಿಕವಾಗಿ ಅಂತಹ ಸಂಕಷ್ಟವನ್ನು ಅನುಭವಿಸುತ್ತಿರಲಿಲ್ಲ ಎಂದು ಹಿರಿಯ ವಕ್ತೃಗಳು ತಿಳಿಸುತ್ತಾರೆ. ಆದರೆ ಕಾಡಿನಿಂದ ಹೊರಬಂದ ತರುವಾಯ ಮುಕ್ರಿ ಸಮುದಾಯವು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಇನ್ನಿಲ್ಲದಷ್ಟು ಕಷ್ಟವನ್ನು ಅನುಭವಿಸ ಬೇಕಾದ ಸಂದರ್ಭ ಒದಗಿ ಬಂದದ್ದು ಅಷ್ಟೇ ಸತ್ಯ. ಕಾಡಿನಿಂದ ಹೊರಬಂದ ಮುಕ್ರಿಯರನ್ನು ಸಾಮಾಜಿಕವಾಗಿ ತುಂಬಾ ಕೆಳಸ್ಥರದಲ್ಲಿ ಇರಿಸಲಾಯಿತು. ಇಂದಿಗೂ ಸಮಾಜದಲ್ಲಿ ಮುಕ್ರಿಯರು ಅಸ್ಪೃಶ್ಯ ಸ್ಥಿತಿಯಲ್ಲಿಟ್ಟಿರುವುದು ಕಂಡುಬರುತ್ತದೆ. ಮುಖ್ಯವಾಗಿ ಅಸ್ಪೃಶ್ಯತೆಯನ್ನು ಅನುಭವಿಸುವ ಸಮುದಾಯಗಳೂ ಸಹ ಈ ಸಮುದಾಯವನ್ನು ತಮಗಿಂತಲೂ ಕೀಳು ಸ್ಥಾನದಲ್ಲಿರಿಸಿ ನೋಡುವುದು ಕಂಡುಬರುತ್ತದೆ. ಜಾತಿ ವ್ಯವಸ್ಥೆಯಲ್ಲಿ ಅಸ್ಪೃಶ್ಯರೆಂದು ಕರೆಯಲ್ಪಡುವವರೂ ಸಹ ದಕ್ಕಲಿಗರಂತಹ ಸಮುದಾಯವನ್ನು ತೀರಾ ಕೆಳಸ್ತರದಲ್ಲಿರಿಸಿ ನೋಡುತ್ತವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಕ್ರಿಯರೂ ಅಂತಹದೇ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಜಾತಿ ವ್ಯವಸ್ಥೆಯಲ್ಲಿ ಕರ್ನಾಟಕದ ಇತರ ಭಾಗಗಳಲ್ಲಿ ದಕ್ಕಲಿಗರಂತೆ ಉತ್ತರಕನ್ನಡ ಜಿಲ್ಲೆಯಲ್ಲಿ ಮುಕ್ರಿಯರನ್ನೂ

ಸಹ ಸಾಮಾಜಿಕವಾಗಿ ಕೊನೆಯ ಸ್ಥಾನವನ್ನು ಕಲ್ಪಿಸಲಾಗಿದೆ. ಬಲಗೈ ಘಣ ಸಂಸ್ಕೃತಿಗೆ ಸೇರಿದ ಸಮುದಾಯಗಳಲ್ಲಿ ತೀರ ಕೆಳಸ್ಥರದಲ್ಲಿರುವ ಮುಕ್ರಿಯರ ಮುಖವನ್ನು ಎದ್ದ ಕೂಡಲೇ ನೋಡಕೂಡದು ಎನ್ನುವ ನಂಬಿಕೆ ಜನಜನಿತವಾಗಿರುವುದನ್ನು ಕಾಣಬಹುದಾಗಿದೆ. ಇಷ್ಟಿದ್ದಾಗ್ಯೂ ದೈಹಿಕ ಶ್ರಮದ ಕಾರ್ಯಗಳಲ್ಲಿ ಮುಕ್ರಿಯರ ಅವಶ್ಯಕತೆ ಅತಿಯಾಗಿ ಇದ್ದುದರಿಂದ ಮುಕ್ರಿಯರನ್ನು ಕೀಳಾಗಿ ಕಂಡರೂ ಕೆಲ ಸಂದರ್ಭಗಳಲ್ಲಿ ಅವರನ್ನು ಅನಿವಾರ್ಯವಾಗಿ ಎಂಬಂತೆ ತೋರಿಕೆಗಾದರೂ ಗೌರವದಿಂದ ಕಾಣುತ್ತಿದ್ದ ಸಂದರ್ಭಗಳುಂಟು. ಒಟ್ಟಿನಲ್ಲಿ ಮುಕ್ರಿಯರು ಗುಂಪುಗುಂಪಾಗಿ ಊರ ಹೊರಭಾಗದಲ್ಲಿ ತಮ್ಮದೇ ಕೊಪ್ಪಗಳಲ್ಲಿ ಜೀವನ ನಿರ್ವಹಣೆ ನಡೆಸುತ್ತಿರುವುದು ಪ್ರಸ್ತುತ ದಿನಗಳಲ್ಲಿ ಕಂಡುಬರುತ್ತಿದೆ.

ಆಂಗ್ಲರ ಪ್ರವೇಶದ ಪೂರ್ವದಲ್ಲಿ ಭಾರತ ಬಹುತೇಕವಾಗಿ ಗಾಂಧಿಯ ಕನಸಿನಂತೆ ಗ್ರಾಮ ಸ್ವರಾಜ್ಯದ ರೂಪದಲ್ಲಿತ್ತು. ತಮಗೆ ಅಗತ್ಯವಾದ ವಸ್ತುಗಳನ್ನು ತಮ್ಮ ಅವಶ್ಯಕತೆಯ ಮಿತಿಯಲ್ಲಿಯೇ ಸಿದ್ದಗೊಳಿಸಿಕೊಳ್ಳುವ ಒಂದು ಪರಂಪರೆ ಭಾರತೀಯರದ್ದಾಗಿತ್ತು. ಈ ರೀತಿಯಲ್ಲಿ ತಮ್ಮ ಹಾಗೂ ಗ್ರಾಮದ ಅಗತ್ಯಗಳನ್ನು ಪೂರೈಸಿಕೊಳ್ಳುವಷ್ಟಕ್ಕೆ ಜಾತಿ ಸಮುದಾಯಗಳು ಸೀಮಿತವಾಗಿದ್ದುದನ್ನು ಚರಿತ್ರೆ ಗುರುತಿಸುತ್ತಿದೆ.

ಆದರೆ ೧೮೫೭ರ ಸುಮಾರು ಭಾರತಕ್ಕೆ ರೈಲಿನ ಪ್ರವೇಶವಾಯಿತು. ಸಾರಿಗೆ ಸೌಲಭ್ಯ ಗಳೊಂದಿಗೆ ಆಧುನಿಕ ಕೈಗಾರಿಕೆಗಳ ಬೆಳವಣಿಗೆಯಾಯಿತು. ಅದಿರು ಕರಗಿಸಿ ಕಬ್ಬಿಣ ತಯಾರಿಸುವ ಪಾರಂಪರಿಕ ಪದ್ಧತಿಯನ್ನೇ ಅನುಸರಿಸಿ ಬೃಹತ್ ಪ್ರಮಾಣದಲ್ಲಿ ತಯಾರಿಸುವ ಕಾರ್ಖಾನೆಗಳ ಉದ್ಭವವು ಭಾರತದಲ್ಲಾಯಿತು. ಜೊತೆಗೆ ತಮ್ಮ ಕುಲಕಸುಬನ್ನೇ ನಂಬಿ ಬದುಕುವ ಜಾತಿ ಸಮುದಾಯದವರು ಹತ್ತು ಹಲವು ಆತಂಕಗಳನ್ನು ಎದುರಿಸಲಾರದೆ ಅಸಹಾಯಕತೆಯಿಂದ ದಿಕ್ಕೇಡಿಗಳಾಗುವ ಸ್ಥಿತಿ ನಿರ್ಮಾಣವಾಯಿತು.

ಪಾರಂಪರಿಕವಾಗಿ ತಮ್ಮ ವೃತ್ತಿಗಳನ್ನು ನಂಬಿಕೊಂಡು ತಮ್ಮ ಪಾಡಿಗೆ ತಾವು ಜೀವನ ಸಾಗಿಸುತ್ತಿದ್ದ ಮುಕ್ರಿಯಂತಹ ಸಮುದಾಯಗಳು ಬ್ರಿಟೀಷರ ಪ್ರವೇಶದಿಂದಾಗಿ ತಮ್ಮ ಮೂಲ ಅಸ್ತಿತ್ವವನ್ನು ಕಳೆದುಕೊಳ್ಳುವ ದಿಕ್ಕೇಡಿ ಸ್ಥಿತಿ ಅನುಭವಿಬೇಕಾದ ಸ್ಥಿತಿ ತಲೆದೋರಿತು. ಕಾಡಿನ ಹೊರತಾಗಿ ಇನ್ನೊಂದು ಜಗತ್ತನ್ನು ಅರಿಯದ ಮುಕ್ರಿಯಂತಹ ಸಮುದಾಯಗಳು ಅನಿವಾರ್ಯವೆಂಬಂತೆ ತಮ್ಮ ಜೀವನ ರೀತಿಯನ್ನೇ ಬದಲಿಸಿಕೊಳ್ಳಬೇಕಾಯಿತು. ಕಾಡನ್ನು ನಂಬಿ ಜೀವನ ಸಾಗಿಸುತ್ತಿದ್ದ ಮುಕ್ರಿಯರು ಕಾಡಿನಿಂದ ಹೊರ ತಳ್ಳಲ್ಪಟ್ಟ ತರುವಾಯ ಅನಿವಾರ್ಯವಾಗಿ ತಮ್ಮ ದೈಹಿಕ ಶ್ರಮಶಕ್ತಿಯನ್ನು ಉಪಯೋಗಿಸಿಕೊಂಡು ಕೂಲಿನಾಲಿಗೆ ಶರಣಾಗಬೇಕಾಯಿತು. ಕಾಡಿನಿಂದ ಮಾತ್ರವಲ್ಲದೆ ಜಾತಿ ವ್ಯವಸ್ಥೆಯಲ್ಲಿಯು ಮುಕ್ರಿಯರನ್ನು

ಪೂರ್ತಿ ಕೆಳಗಿರಿಸಲಾಯಿತು. ಅಸ್ಪೃಶ್ಯತೆಯ ಹಣೆಪಟ್ಟಿ ಕಟ್ಟಿ ಊರಿನಿಂದ ಹೊರಗೆ ಈ ಸಮುದಾಯವನ್ನು ದೀನ ಸ್ಥಿತಿಗೆ ನೂಕಲ್ಪಟ್ಟರು ಹಾಗೂ ಆ ಮೂಲಕ ಆರ್ಥಿಕ ಹಾಗೂ ಸಾಮಾಜಿಕ, ಮಾನಸಿಕವಾಗಿ ಜರ್ಜರಿತವಾಗುವ ಸ್ಥಿತಿಯನ್ನು ಮುಕ್ರಿ ಸಮುದಾಯ ಅನುಭವಿಸುವಂತಾಯಿತು.

ತಮ್ಮ ಪಾಡಿಗೆ ತಾವು ಸ್ವತಂತ್ರವಾಗಿ ಸ್ವಾಭಿಮಾನದಿಂದ ಜೀವನ ನಿರ್ವಹಣೆ ಮಾಡುತ್ತಿದ್ದ ಮುಕ್ರಿ ಹಾಗೂ ಅವರಂತೆ ಜೀವನ ನಿರ್ವಹಣೆ ಮಾಡುತ್ತಿದ್ದ ಬಹುತೇಕ ಅರಣ್ಯವಾಸಿ ಸಮುದಾಯಗಳನ್ನು ಬ್ರಿಟೀಷ್ ಸರ್ಕಾರವು ಅತಂತ್ರಗೊಳಿಸಿತು. ಇದರಿಂದಾಗಿ ಅತಂತ್ರ ಸ್ಥಿತಿಗೆ ನೂಕಲ್ಪಟ್ಟ ಮುಕ್ರಿಯರು ಸಾಮಾಜಿಕವಾಗಿ ತೀರ ಜಾತಿ ಕಾರಣಕ್ಕಾಗಿ ಸಾರ್ವತ್ರಿಕವಾಗಿಯೂ ಹೆಚ್ಚು ಅವಮಾನಗಳಿಗೆ ಗುರಿಯಾಗುವಂತಾಯಿತು. ಕಾಡು ಹಾಗೂ ತಮ್ಮ ದೈಹಿಕ ಸಾಮರ್ಥ್ಯವನ್ನು ನಂಬಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದ ಮುಕ್ರಿಯರು ಹಣಕ್ಕೆ ಹೆಚ್ಚು ಬೆಲೆಕೊಟ್ಟವರಲ್ಲ. ತಾವು ನಂಬಿಕೊಂಡು ಬಂದ ಜೀವನಕ್ರಮಕ್ಕೇ ಹೆಚ್ಚು ಆತುಕೊಂಡಿದ್ದ ಈ ಸಮುದಾಯ ತಮ್ಮ ದುಡಿಮೆಯಲ್ಲಿ ಅಲ್ಪಸ್ವಲ್ಪ ಉಳಿಸಿಕೊಳ್ಳಬೇಕೆಂಬ ಮನೋಭಾವನೆ ಹೊಂದಿರದೆ ಆರ್ಥಿಕವಾಗಿ ನಿರ್ಗತಿಕ ಸ್ಥಿತಿಗೆ ನೂಕಲ್ಪಟ್ಟಿತು. ಹೀಗೆ ಮುಕ್ರಿ ಸಮುದಾಯವು ಅಸಹಾಯಕ ಅಸ್ಪೃಶ್ಯ ಸಮುದಾಯವಾಗಿ ರೂಪಾಂತರಗೊಂಡಿತು. ಆಧುನಿಕ ಕೃಷಿಯಂತ್ರಗಳ ಪ್ರವೇಶದಿಂದಾಗಿ ಹೇಗೋ ದೊರೆಯುತ್ತಿದ್ದ ಕೃಷಿಕೂಲಿಯಿಂದಲೂ ವಂಚಿತವಾಗುವ ಸ್ಥಿತಿ ಬಂದೋದಗಿದೆ. ಕೂಲಿ ಕಾಯಕವೊಂದರಿಂದಲೇ ಇಡೀ ಕುಟುಂಬವನ್ನು ಸಾಕುವುದು ಕಷ್ಟಸಾಧ್ಯದ ಕೆಲಸ. ಕೃಷಿ ಕೂಲಿ ಎಲ್ಲಾ ದಿನಗಳಲ್ಲಿ ದೊರೆಯಲಾರದು. ಕೃಷಿ ಕೂಲಿ ಇಲ್ಲದ ದಿನ ಮೀನಿನ ಬುಟ್ಟಿ ಹೋರಲೋ ಅಥವಾ ಇನ್ನೊಂದು ಕೆಲಸ ಮಾಡಿ ಜೀವನ ನಿರ್ವಹಣೆ ಮಾಡುವ ಸ್ಥಿತಿ ಇದೆ. ಜಾತಿಯಿಂದ ಅಸ್ಪೃಶ್ಯರೆಂಬ ಕಾರಣಕ್ಕೆ ಎಷ್ಟೋಸಾರಿ ಮೀನು ಇತ್ಯಾದಿ ಬುಟ್ಟಿ ಹೋರುವ ಕಾಯಕವು ಇವರಿಗೆ ದೊರೆಯಲಾರದು. ಈ ಕಾರಣಕ್ಕಾಗಿಯೇ ಕೂಲಿಯನ್ನರಸಿ ನಗರ ಪ್ರದೇಶಗಳಿಗೆ, ಗೋವಾ ರಾಜ್ಯಕ್ಕೆ ವಲಸೆ ಹೋಗುವುದು ಉಂಟು. ಎಲ್ಲಿಯೋ ಒಬ್ಬರು ಅರೆಬರೆ ಶಿಕ್ಷಣ ಪಡೆದು ಸರ್ಕಾರದ ಸಣ್ಣಪುಟ್ಟ ಕೆಲಸ ಹಿಡಿದಿರುವರಾದರೂ ಅದರಿಂದ ಸಾಮಾಜಿಕವಾದ ಅಸ್ಪೃಶ್ಯತೆಯ ಕಳಂಕ ಹೋಗಲಾರದೆಂಬ ಅಳಲು ಮುಕ್ರಿಯರನ್ನು ಕಾಡುತ್ತಿದೆ.

ಮನುಷ್ಯ ಆಧುನಿಕತೆಗೆ ತನ್ನನ್ನು ಒಳಗು ಮಾಡಿಕೊಂಡಂತೆಲ್ಲಾ ಆತನ ಜೀವನದ ವಿಧಿವಿಧಾನಗಳು ಬದಲಾವಣೆಗೆ ಒಳಗಾಗುತ್ತವೆ. ಪ್ರಾರಂಭಿಕ ಹಂತದಲ್ಲಿ ಮುಕ್ರಿಯರ ಮೂಲ ಕಸುಬಾದ ಕುಮ್ರಿ ಬೇಸಾಯ ಕ್ರಮವು ಅರಣ್ಯ ಕಾಯ್ದೆಯ ಕಾರಣಕ್ಕಾಗಿ ಕೊನೆಗೊಂಡ ಕಾರಣ ಅವರು ತಮ್ಮ ಮೂಲವೃತ್ತಿಯಿಂದ ದೂರ ಉಳಿಯಬೇಕಾಯಿತು. ಬಿದಿರು, ಹುಲ್ಲು

ಮುಂತಾದ ಸಾಮಾಗ್ರಿಗಳನ್ನು ಕಾಡಿನಿಂದ ತಂದು ಊರ ಜನರಿಗೆ ಮಾರಿ ಜೀವನನಿರ್ವಹಣೆ ನಡೆಸುತ್ತಿದ್ದ ಮುಕ್ರಿಯರು ಕಾಲಾಂತರದಲ್ಲಿ ಜೀವನ ನಿರ್ವಹಣೆಗಾಗಿ ವೃತ್ತಿಯನ್ನು ಬದಲಾವಣೆ ಗೊಳಿಸಿಕೊಳ್ಳುತ್ತಲೇ ಸಾಗುವಂತಾಯಿತು. ಆದರೆ ಮುಕ್ರಿಯರಿಗೆ ಆಧುನಿಕ ಬದುಕಿನ ವಿಧಾನಕ್ಕೆ ತಕ್ಕಂತೆ ತಮ್ಮನ್ನು ಬದಲಿಸಿಕೊಳ್ಳಬೇಕೆಂಬ ಪರಿಜ್ಞಾನವಾಗಲಿ, ಅದಕ್ಕೆ ತಕ್ಕಂತಹ ವಿದ್ಯಾಭ್ಯಾಸ ವಾಗಲೀ ಪಡೆಯಬೇಕೆಂಬ ತುಡಿತ ಕಂಡುಬರುತ್ತಿಲ್ಲ. ಇವರ ಬದಲಾಗದ ಜೀವನ ರೀತಿಗೆ ಸ್ವಲ್ಪ ಅಪವಾದವೆಂಬಂತೆ ಕುಮಟಾದ ವ್ಯಕ್ತಿಯೊಬ್ಬರು ಪೋಲಿಸ್ ಅಧಿಕಾರಿಯಾಗಿ ನಿವೃತ್ತಿ ಗೊಂಡಿದ್ದಾರೆ. ಹೀಗಾಗಿ ಕುಟುಂಬದ ಈ ತಲೆಮಾರಿನ ಮಕ್ಕಳೆಲ್ಲ ಶಿಕ್ಷಣ ಪಡೆಯುವಂತಾಗಿದೆ.

ಆಧುನಿಕ ತಾಂತ್ರಿಕ ಪರಿವರ್ತನೆಯಿಂದಾಗಿ ಇವರ ಸಾಮಾಜಿಕ ಜೀವನದಲ್ಲಿ ಯಾವುದೇ ಬದಲಾವಣೆಗಳನ್ನು ಕಾಣಲು ಸಾಧ್ಯವಾಗದಾಗಿದೆ. ಇಂದು ಸಾಮಾಜಿಕವಾಗಿ ಸ್ಪರ್ಶಿಗಳೆಂದು ತಮ್ಮನ್ನು ತಾವು ಕರೆದುಕೊಂಡರೂ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಇವರು ಅಸ್ಪೃಶ್ಯರಾಗಿಯೇ ಉಳಿದಿದ್ದಾರೆ. ಆರ್ಥಿಕವಾಗಿ ತುಂಬಾ ದುರ್ಬಲ ಸ್ಥಿತಿಯಲ್ಲಿರುವ ಮುಕ್ರಿಯರಿಗೆ ಪ್ರಾಥಮಿಕ ಅವಶ್ಯಕತೆಗಳಾದ ವಿದ್ಯಾಭ್ಯಾಸ, ಆರೋಗ್ಯ, ಆರ್ಥಿಕ ಭದ್ರತೆ ದೊರೆಯದಂತಾಗಿ ಇತರ ಕೆಳವರ್ಗದ ಸಮುದಾಯಗಳಿಗಿಂತಲೂ ಕನಿಷ್ಟ ಜೀವನವನ್ನು ಇವರು ನಡೆಸಬೇಕಾಗಿದೆ.

ಮುಕ್ರಿ ಸಮುದಾಯ ಹಾಗೂ ಇತರ ಸಮಾಜಗಳೊಂದಿಗಿನ ಸಂಬಂಧಗಳು

ಯಾವುದೇ ಒಂದು ಸಮಾಜವು ವಿವಿಧ ಜಾತಿ, ಸಮುದಾಯಗಳನ್ನೊಳಗೊಂಡಿರುತ್ತದೆ. ಅಂತಹ ಸಮಾಜದ ಒಂದು ಭಾಗವಾಗಿ ಮುಕ್ರಿ ಸಮುದಾಯವು ಒಂದಾಗಿದೆ. ಸಮಾಜದ ಇತರ ಜಾತಿ, ಸಮುದಾಯಗಳೊಂದಿಗೆ ಅದೇ ಸಮಾಜದೊಳಗಿರುವ ಮುಕ್ರಿಯಂತಹ ತಳಸಮುದಾಯ ಹೊಂದಿರಬಹುದಾದ ಸಂಬಂಧಗಳನ್ನು ನೋಡಿದಾಗ ಅಸ್ಪೃಶ್ಯ ಸಮುದಾಯ ವೊಂದು ತನಗಿಂತ ಮೇಲ್ಮಟ್ಟದಲ್ಲಿದ್ದೇವೆಂದು ಭಾವಿಸಿದ ಇತರ ಸಮುದಾಯಗಳೊಂದಿಗೆ ಹೇಗೆ ಹೋಲಿಕೆಯಾಗುತ್ತದೆ, ಹೊಂದಾಣಿಕೆ ಮಾಡಿಕೊಂಡಿದೆ ಮತ್ತು ಇತರ ಸಮುದಾಯ ಗಳೊಂದಿಗೆ ಪಡೆದುಕೊಂಡದ್ದೆಷ್ಟು ಹಾಗೂ ಕೊಟ್ಟದ್ದೆಷ್ಟು ಎಂದು ಗಣನೆ ಮಾಡಬೇಕಾಗಿದೆ.

ಮುಕ್ರಿಯರಿಗೂ ಹಾಲಕ್ಕಿ ಒಕ್ಕಲಿಗರಿಗೂ ಉಡುಗೆ ತೊಡುಗೆಗಳಲ್ಲಿ ಸಾಮ್ಯತೆ ಇದೆ. ಆದರೆ ಅದರಾಚೆಗೆ ಹಾಲಕ್ಕಿ ಒಕ್ಕಲಿಗರಿಗೂ ಮುಕ್ರಿಗಳಿಗೂ ಯಾವುದೇ ರೀತಿಯಲ್ಲಿ ಮುಖ್ಯವಾಗಿ ಕುಲ, ರಕ್ತ ಸಂಬಂಧ ಇತ್ಯಾದಿಗಳಲ್ಲಿ ಹೋಲಿಕೆಯಾಗುವುದಿಲ್ಲ. ಮುಕ್ರಿಯರು ಹಾಲಕ್ಕಿ ಒಕ್ಕಲಿಗರು ತಾವು ಒಂದೇ ಮೂಲದವರು ಎಂದು ತಿಳಿಸುವ ಕಥೆಯೊಂದನ್ನು ಹೇಳುತ್ತಾರೆ. ಹಾಗೆಯ ಹಾಲಕ್ಕಿ ಒಕ್ಕಲಿಗರಿಗೆ ಹಾಲಕ್ಕಿಗೌಡರೆಂದೂ ತಮಗೆ ಗಂಜಿಗೌಡರೆಂದೂ ಕರೆಯುವುದಾಗಿ ತಿಳಿಸುತ್ತಾರೆ. ಆದರೆ ಗಂಜಿಗೌಡವೆಂಬುದು ವ್ಯಂಗ್ಯಭರಿತವಾದ ಕುಚೋದ್ಯದ ಮಾತೆಂಬುದನ್ನು

ಅರಿಯಲಾರದಷ್ಟು ಮುಗ್ಧರು ಮುಕ್ರಿಗಳು. ತಮಗೆ ಗೌಡ ಎಂದು ಕರೆಯುತ್ತಾರೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಆದರೆ ಅದರ ಹಿಂದೆ ಇರುವ ವ್ಯಂಗ್ಯದ ಧ್ವನಿ ಮುಕ್ರಿಯರು ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲವೆನಿಸುತ್ತದೆ. ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಹೊಲೆ ಮಾದಿಗರನ್ನು ಊರುಗೌಡರೆಂದು ಮೇಲ್ಜಾತಿಯ ಜನ ಕುಚೋಧ್ಯದಿಂದ ಕರೆಯುವ ವಾಡಿಕೆ ಇದೆ. ಇದೇ ರೀತಿಯ ಕುಚೋಧ್ಯದ ಧ್ವನಿ ಗಂಜಿಗೌಡ ಎನ್ನುವ ಪದದಲ್ಲಿದೆ ಎನಿಸುತ್ತದೆ. ಗಂಜಿಗೌಡ ಎಂಬುದು ಗಂಜಿ ಮಾತ್ರ ಸಂಪಾದಿಸಿಕೊಳ್ಳುವ ದಲಿತ ಎನ್ನುವ ಅರ್ಥದಲ್ಲಿಯೇ ಬಳಕೆಗೊಂಡಿರುವ ಸಾಧ್ಯತೆ ಇದೆ.

ಫಣ ಸಂಸ್ಕೃತಿಯಲ್ಲಿ ಎಡ, ಬಲಗಳನ್ನು ಗುರುತಿಸಲಾಗುತ್ತದೆ. ಕೈಕಸುಬನ್ನು ಆಧರಿಸಿ ಜೀವನನಿರ್ವಹಣೆ ಮಾಡುವ ಸಮುದಾಯಗಳನ್ನು ಎಡಗೈ ಫಣದಲ್ಲಿಯು ಕೃಷಿ ಸಂಸ್ಕೃತಿಯಲ್ಲಿ ತೊಡಗಿಸಿಕೊಂಡ ಸಮುದಾಯಗಳನ್ನು ಬಲಗೈ ಫಣದಲ್ಲಿಯು ಗುರುತಿಸಲಾಗುತ್ತದೆ. ಮುಕ್ರಿಯರು ಯಾವುದೋ ಒಂದು ಕಾಲದಲ್ಲಿ ಕೃಷಿ ಸಂಸ್ಕೃತಿಯನ್ನು ನೆಚ್ಚಿಕೊಂಡು ಕಾಡಿನ ಭೂಮಿಯನ್ನು ಕುಮ್ರಿ ಕ್ರಮದಲ್ಲಿ ಉಳುಮೆ ಮಾಡುತ್ತಿದ್ದರು. ಪ್ರಸ್ತುತ ಕೃಷಿ ಭೂಮಿಯ ಒಡೆತನದಿಂದ ಇವರು ದೂರವಾಗಿದ್ದರೂ ಕೃಷಿ ಕಾಯಕದಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುವ ಮೂಲಕ ಕೃಷಿ ಸಂಬಂಧವನ್ನು ಜೋಪಾನವಾಗಿ ಕಾಪಾಡಿಕೊಂಡಿದ್ದಾರೆ. ಆದರೆ ಇಂದು ಹೊಲೆಯ ಸಮುದಾಯಕ್ಕೂ ಹಾಗೂ ಮುಕ್ರಿ ಸಮುದಾಯಕ್ಕೂ ಯಾವುದೇ ಸಾಮಾಜಿಕ ಸಂಬಂಧಗಳು ಉಳಿದುಕೊಂಡು ಬಂದಿಲ್ಲ. ಪ್ರಾದೇಶಿಕವಾದ ಅಂತರದಿಂದಾಗಿಯೇ ಪ್ರಾಯಶಃ ಮುಕ್ರಿ ಮತ್ತು ಹೊಲೆಯ ಸಮುದಾಯಗಳು ಪರಸ್ಪರ ಹೊಂದಾಣಿಕೆಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಮುಕ್ರಿ ಸಮುದಾಯ ಕಾಡನ್ನು ಆಧರಿಸಿದ ಬುಡಕಟ್ಟು ಲಕ್ಷಣಗಳನ್ನು ಆಂತರ್ಯದಲ್ಲಿ ಉಳಿಸಿಕೊಂಡಿರುವ ಸಮುದಾಯವಾಗಿದೆ. ಕ್ಷೇತ್ರಕಾರ್ಯದ ಅನುಭವದಂತೆ ಮುಕ್ರಿ ಹುಡುಗಿ ಅಥವಾ ಹುಡುಗನು ತಮ್ಮ ಸಮುದಾಯಕ್ಕೆ ತಿಳಿಯದಂತೆ ಬೇರೆ ಸಮುದಾಯದವರ ಜೊತೆಗೆ ದೈಹಿಕ ಸಂಬಂಧಗಳನ್ನು ಹೊಂದಿದ್ದರೆ ಅಥವಾ ವಿವಾಹವಾಗಿದ್ದರೆ ಅಂಥವರನ್ನು ಜಾತಿ ಪಂಚಾಯತಿಯ ನಿರ್ಣಯದಂತೆ ಜಾತಿಯಿಂದ ಬಹಿಷ್ಕರಿಸಲಾಗುತ್ತದೆ. ಇದನ್ನು ಸಮುದಾಯ ಇಂದಿಗೂ ನಿರ್ದಿಷ್ಟವಾಗಿ ಉಳಿಸಿಕೊಂಡು ಬಂದಿದೆ.

ಇತರ ಸಮಾಜಗಳೊಂದಿಗೆ ಮುಕ್ರಿಯರ ಸಂಬಂಧ ಕೇವಲ ದುಡಿಮೆಗೆ ಸಂಬಂಧಿಸಿದ್ದಾಗಿದೆ. ಅದರಾಚೆಗೆ ಇವರನ್ನು ಅಸ್ಪೃಶ್ಯರನ್ನಾಗಿ ಇತರ ಸಮಾಜದವರು ಪರಿಗಣಿಸುತ್ತಾರೆ. ಆದರೆ ಮಾದಿಗ ಮತ್ತು ಹೊಲೆಯ ಮುಂತಾದ ಸಮಾಜದಲ್ಲಿ ತೀರಾ ಕೆಳಸ್ತರದಲ್ಲಿರುವ ಸಮುದಾಯಗಳು ಸಹ ಇವರನ್ನು ತಮಗಿಂತ ಕೀಳು ಎಂದು ಭಾವಿಸುತ್ತವೆ.

ಇಂದು ಆಧುನಿಕ ಕೃಷಿಯಂತ್ರಗಳ ಪ್ರವೇಶದಿಂದಾಗಿ ಮುಕ್ರಿ ಸಮುದಾಯದವರು ತಮ್ಮ ಕೃಷಿಕೂಲಿ ಕೆಲಸದಿಂದಲೂ ದೂರವಾಗಿ ಇತರೆ ಬದಲೀ ವೃತ್ತಿಗಳಲ್ಲಿ ಅವರು ತೊಡಗಿ ಕೊಂಡಿದ್ದಾರೆ. ಮುಖ್ಯವಾಗಿ ಕೃಷಿಯೇತರ ಕೂಲಿಗಳಾಗಿ, ಚರಂಡಿ ಸ್ವಚ್ಛಗೊಳಿಸುವ ಕಾರ್ಮಿಕರಾಗಿ ಕೆಲಸ ಮಾಡುವಂತಾಗಿದೆ. ಮುಕ್ರಿ ಸಮುದಾಯವು ಇತರ ಮೇಲ್ಜಾತಿಯ ಯಾವುದೇ ಸಮುದಾಯಗಳೊಂದಿಗೆ ಯಾವುದೇ ರಕ್ತ ಸಂಬಂಧಗಳನ್ನು ಏರ್ಪಡಿಸಿಕೊಂಡ ಉದಾಹರಣೆಗಳು ದೊರೆಯುವುದಿಲ್ಲ.

ಬ್ರಾಹ್ಮಣರಾದಿಯಾಗಿ ಸಮಾಜದೊಳಗಿರುವ ಬಹುತೇಕ ಎಲ್ಲಾ ಸಮುದಾಯಗಳು ಮುಕ್ರಿಯರನ್ನು ಅಸ್ಪೃಶ್ಯರೆಂದು ಪರಿಗಣಿಸುತ್ತವೆ. ಮುಕ್ರಿಯರಿಗೆ ನಗರ ಪ್ರದೇಶಗಳ ಹೋಟೆಲಿನೊಳಗೆ ಪ್ರವೇಶ ದೊರೆತಿದೆಯಾದರೂ ಹಳ್ಳಿಗಾಡಿನಲ್ಲಿ ಹೋಟೆಲ್‌ನಂತಹ ಸಾರ್ವಜನಿಕ ಸ್ಥಳಗಳೊಳಗೆ ಪ್ರವೇಶ ಪಡೆಯಲು ಸಾಧ್ಯವಾಗಿಲ್ಲ. ಆದರೆ ಇತ್ತೀಚೆಗೆಕೆಲವು ಹಳ್ಳಿಗಳಲ್ಲಿ ಕೆಲವು ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶಿಸಲು ಅವಕಾಶವಿದೆ. ಭೂ ಒಡೆಯರಿಗೆ ಅವಶ್ಯವಾದ ಕೂಲಿಕಾರರಾಗಿ ಕಾರ್ಯ ನಿರ್ವಹಿಸುವುದಕ್ಕೇ ಇವರ ಬದುಕು ಸೀಮಿತವಾಗಿದೆ.

ಮುಕ್ರಿ ಸಮುದಾಯ ಮತ್ತು ಆಧುನಿಕ ಜಗತ್ತು.

ಆಧುನಿಕತೆ ಭಾರತೀಯರಿಗೆ ಅಧ್ಯಯನದ ಹೊಸ ಹೊಸ ಅವಕಾಶಗಳನ್ನು ಸೃಷ್ಟಿಸಿದರೂ ಅಧ್ಯಯನಕ್ಕೆ ವಸ್ತುಗಳಾಗಿರುವ ಬುಡಕಟ್ಟು ಹಾಗೂ ನಿರ್ಲಕ್ಷಿತ ಸಮುದಾಯಗಳ ಪರಿಸ್ಥಿತಿ ಹೆಚ್ಚು ಹೆಚ್ಚು ಶೋಚನೀಯ ಸ್ಥಿತಿಯನ್ನೇ ಕಾಣುವಂತಾಗಿದೆ. ಬಹುಶಃ ಮಧ್ಯಕಾಲೀನ ಭಾರತದಲ್ಲಿ ತಮ್ಮ ಪಾರಂಪರಿಕ ವೃತ್ತಿಯಿಂದಾಗಿ ತುಂಬಾ ಸ್ವಾವಲಂಬಿಗಳಾಗಿದ್ದ ಮುಕ್ರಿಯರು ಆ ಕಾಲದಲ್ಲಿ ಆರ್ಥಿಕವಾಗಿ ಶೋಚನೀಯ ಸ್ಥಿತಿಯನ್ನು ಬಹುಶಃ ತಲುಪಿರಲಿಲ್ಲ ಎನಿಸುತ್ತದೆ. ಅಸ್ಪೃಶ್ಯತೆಯಂತಹ ಸಾಮಾಜಿಕವಾದ ನಿಷೇಧಗಳು ಇವರ ಮೇಲಿದ್ದರೂ ಕೂಡಾ ಒಪ್ಪಿತ ವ್ಯವಸ್ಥೆಯಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದರೂ ಕಾಡಿನ ವಾಸದಿಂದಾಗಿ ಇವರಿಗೆ ಸಾಮಾಜಿಕ ಭಾದೆ ಅಷ್ಟಾಗಿ ತಾಗಿರಲಿಲ್ಲ ಎನಿಸುತ್ತದೆ. ಆದರೆ ನಾಡಿನ ಇತರ ಸಮುದಾಯಗಳೊಂದಿಗೆ ಸಹಬಾಳ್ವೆ ಮಾಡಬೇಕಾದ ಅನಿವಾರ್ಯತೆಯ ನಂತರ ಅಸ್ಪೃಶ್ಯತೆ, ಅಸಮಾನತೆಯ ಭಾದೆಗಳು ಮುಕ್ರಿಯರನ್ನು ಕಾಡತೊಡಗಿದವು.

೨೧ನೇ ಶತಮಾನಕ್ಕೆ ಕಾಲಿರಿಸಿದ ಈ ದಿನಗಳಲ್ಲೂ ಭಾರತೀಯ ಜಾತಿಯ ಶ್ರೇಣೀಕರಣ ಪರಿಸ್ಥಿತಿಯಲ್ಲಿ ಈ ಸಮುದಾಯದ ಕುರಿತು ಯಾವುದೇ ಆಶಾದಾಯಕ ಭಾವನೆಯನ್ನು ಮೂಡಿಸದೇ ಇರುವುದನ್ನು ಕಾಣಬಹುದು. "ಸ್ವಾತಂತ್ರ್ಯ ನಂತರದ ಕಾಲದಲ್ಲಿ ಭಾರತ ಮತ್ತು ಪಾಕಿಸ್ತಾನಗಳಲ್ಲಿ ಆರೋಗ್ಯ, ಶಿಕ್ಷಣ, ಭೂ ಸುಧಾರಣೆಗಳನ್ನು ಸಂಪೂರ್ಣ

ನಿರ್ಲಕ್ಷಿಸಲಾಯಿತು. ನಂತರದ ದಿನಗಳಲ್ಲಿ ತಮ್ಮ ಆರ್ಥಿಕತೆಯನ್ನು ಜಾಗತೀಕರಣದ ಪೈಪೋಟಿಗಳಿಗೆ ಒಳಪಡಿಸಿದಾಗ ಜಾಗತಿಕ ಪೈಪೋಟಿಯನ್ನು ಎದುರಿಸಲು ಈ ರಾಷ್ಟ್ರಗಳು ಸಾಮರ್ಥ್ಯ ಹೊಂದಲಾರದೆ ಹೋದವು"[೪] ಅಮಾರ್ತ್ಯಸೇನ್‌ರು ತಿಳಿಸುವುದು ಇದನ್ನೇ. ಸಾಮರ್ಥ್ಯ ಹೊಂದಿದ ಸಮುದಾಯಗಳು ಜಾಗತೀಕರಣ ಪ್ರಕ್ರೀಯೆಗೆ ತಮ್ಮನ್ನು ತೆರೆದುಕೊಂಡರೆ ಸಾಮರ್ಥ್ಯ ಪಡೆಯದ ಸಮುದಾಯಗಳು ಜಾಗತೀಕರಣ ಪ್ರಕ್ರಿಯೆಯಿಂದ ಇನ್ನು ಮುದುಡುವ ಸ್ಥಿತಿಗೆ ಇಳಿಯುತ್ತದೆ.[೫]

ಆಧುನಿಕತೆ ಹೆಚ್ಚಿದಂತೆಲ್ಲಾ ಇಂತಹ ಸಮುದಾಯಗಳು ಹೆಚ್ಚಿನ ಆತಂಕಗಳಿಗೆ ಒಳಗಾಗುತ್ತಲೇ ಇವೆ. ಆಧುನಿಕತೆ ಪರಿಣಾಮವಾಗಿ ದೈಹಿಕ ಕಸರತ್ತನ್ನು ನಂಬಿ ಜೀವನ ನಿರ್ವಹಣೆ ಮಾಡುತ್ತ ಅದನ್ನೇ ಬದುಕಿನ ಮೂಲವಾಗಿಸಿಕೊಂಡಿದ್ದ ಸಮುದಾಯಗಳು ಪ್ರಸ್ತುತ ಆಧುನಿಕ ಜನತೆಯ ಕಣ್ಣಿನಿಂದ ದೂರಾಗುತ್ತಿವೆ. ಸಾಮಾಜಿಕವಾಗಿ ಬಹಿಷ್ಕೃತರಾದ ಮುಕ್ರಿಯರು ತಮ್ಮ ಮೂಲ ವೃತ್ತಿಯಿಂದ ದೂರವಾಗಿ ಬದುಕು ಕಟ್ಟಿಕೊಳ್ಳಲು ಕೂಲಿಗೆ ಆತುಕೊಂಡಿದ್ದರು. ಆದರೆ ಆಧುನಿಕ ಕೃಷಿ ಉಪಕರಣಗಳಿಂದಾಗಿ ಇವರು ಕೃಷಿ ಕೂಲಿಯಿಂದಲೂ ದೂರವಾಗಬೇಕಾಗಿರುವ ಸಂದರ್ಭ ಉಂಟಾಗಿದೆ. ಇಂತಹ ಸಂದರ್ಭದಲ್ಲಿ ಇತರ ಸಮಾಜದವರು ಇವರನ್ನು ಗುರುತಿಸುವುದು ಹೇಗೆ ಸಾಧ್ಯ.

ಸಾಮಾಜಿಕ ನಿರ್ಲಕ್ಷ್ಯ ಹಾಗೂ ಅಪಮಾನದಿಂದಾಗಿ ಕಳೆದು ಹೋಗುತ್ತಿರುವ ಇಂತಹ ಸಮುದಾಯಗಳು ಇಂದು ಸವಕಲು ನಾಣ್ಯವಾಗುತ್ತಿವೆ. ಆಧುನಿಕತೆಯಿಂದಾಗಿ ಅಲಕ್ಷ್ಯ ಕ್ಕೊಳಗಾಗುತ್ತಿರುವ ಮುಕ್ರಿ ಸಮುದಾಯವು ಆರ್ಥಿಕವಾಗಿ ಹಿಂದುಳಿದಂತೆ ರಾಜಕೀಯವಾಗಿಯೂ ಹಿಂದುಳಿದಿದೆ. ಇಂದು ಅನುಸೂಚಿತ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿದೆ ಎಂಬ ಕಾರಣಕ್ಕಾಗಿ ಅಲ್ಲೊಂದು, ಇಲ್ಲೊಂದು ಗ್ರಾಮಪಂಚಾಯಿತಿ, ತಾಲೂಕು ಪಂಚಾಯಿತಿಗಳಲ್ಲಿ ಸದಸ್ಯರಾಗುವ ಅವಕಾಶವನ್ನು ಬೆರಳೆಣಿಕೆಯಷ್ಟು ಪಡೆಯಲು ಸಾಧ್ಯವಾಗಿದೆ. ಆದರೆ ಅಧಿಕಾರವನ್ನು ಚಲಾಯಿಸುವ ಭಾಗ್ಯವನ್ನು ಇವರಿಂದಿಗೂ ಪಡೆಯಲು ಸಾಧ್ಯವಾಗಿಲ್ಲ. ಬಹುತೇಕ ಮುಕ್ರಿ ಸಮುದಾಯವು ತನ್ನ ಪಾಡಿಗೆ ತಾನು ಹೊಟ್ಟೆ ಹೊರೆಯುವ ಕಾಯಕಕ್ಕೆ ಮಾತ್ರ ಸೀಮಿತಗೊಂಡುಬಿಟ್ಟಿವೆ.

ಸಾಮಾಜಿಕವಾಗಿ ಬಹಿಷ್ಕೃತಗೊಂಡು ಕಳಂಕಿತರ ಪಟ್ಟಿಗೆ ಸೇರಿಸಲ್ಪಟ್ಟ ಈ ಸಮುದಾಯಕ್ಕೆ ಅಕ್ಷರ ಜ್ಞಾನದ ಕೊರತೆ, ಆರ್ಥಿಕ ಸ್ವಾವಲಂಬನೆ ಇಲ್ಲದೇ ಇರುವುದು, ಸಾಮಾಜಿಕವಾಗಿ ತುಂಬಾ ಕೀಳಾಗಿ ಕಾಣುವುದು ಮುಂತಾದ ಅನಿಷ್ಟಗಳೆಲ್ಲಾ ಇವರನ್ನು ಕಾಡುತ್ತಿವೆ. ಇಂದು ಮುಕ್ರಿ ಸಮುದಾಯ ಒಂದಿದೆ ಎಂದು ಗುರುತಿಸಲಾರದಷ್ಟು ಕ್ಷೀಣಗೊಂಡಿರುವ ಈ ಸಮುದಾಯ

ಭವಿಷ್ಯತ್ತಿನಲ್ಲಿ ಕಾಣೆಯಾಗುವ ಸಂಭವವೇ ಹೆಚ್ಚು. ಪೂರ್ಣ ಕಾಣೆಯಾದಲ್ಲಿ ಚಿಂತೆ ಇಲ್ಲ. ಆದರೆ ಅದು ತನ್ನ ಮೂಲ ಅನಿಷ್ಟಗಳನ್ನೆಲ್ಲಾ ಮೈಗಂಟಿಸಿಕೊಂಡು ರೂಪಾಂತರಗೊಳ್ಳುವ ಭಯ ಕಾಡುವುದುಂಟು ಎಂದು ನಿರ್ಲಕ್ಷಿತ ಸಮುದಾಯಗಳ ಕುರಿತು ಅಧ್ಯಯನ ಮಾಡುವ ಸಮಾಜಶಾಸ್ತ್ರಜ್ಞರೂ, ಮಾನವಶಾಸ್ತ್ರಜ್ಞರೂ ಆತಂಕಗಳನ್ನು ತೋರ್ಪಡಿಸಿದ್ದಾರೆ.

ಒಟ್ಟಿನಲ್ಲಿ ಆಧುನಿಕ ಜಗತ್ತಿನಲ್ಲಿ ತನ್ನ ಸ್ವಾಭಿಮಾನಿ ಮೂಲ ವೃತ್ತಿಯನ್ನು ಕಳೆದುಕೊಂಡು ಕೇವಲ ಇತರರ ಚಾಕರಿಯ ಆಳಾಗಿ ಮಾತ್ರ ಸಂತೃಪ್ತಿಯನ್ನು ಕಾಣುತ್ತಿರುವ ಮುಕ್ರಿ ಸಮುದಾಯ ಆಧುನಿಕ ಜಗತ್ತಿನಲ್ಲಿಯೂ ಯಾವುದೇ ಹೊಸ ಭರವಸೆಗಳಿಲ್ಲದೆ ಅತಂತ್ರ ಬದುಕಿನೊಂದಿಗೆ ಕಾಲ ತಳ್ಳುತ್ತ ಸಾಗುತ್ತಿರುವ ಒಂದು ಸವಕಲು ನಾಣ್ಯವಾಗಿ ಪರಿಗಣಿತ ಗೊಂಡಿದೆ ಎಂಬ ಮಾತಿನಲ್ಲಿ ಯಾವುದೇ ಅತಿಶಯೋಕ್ತಿಯಾಗಲಾರದು.

ಕೊನೆ ಟಿಪ್ಪಣಿಗಳು

೧. ಸಂಕ್ಷಿಪ್ತ ಕನ್ನಡ ನಿಘಂಟು, ೧೯೭೭, ಪು. ೮೨೦

೨. ರಾಮಚಂದ್ರ ಸಿ ಎನ್, ಲೇಖನ: ಸಾಹಿತ್ಯ ಮತ್ತು ರಾಜಕೀಯ; ಪ್ರಜಾವಾಣಿ: ೪.೧೨.೨೦೧೭

೩. ಬೋರಲಿಂಗಯ್ಯ ಹಿ.ಚಿ, ಪ್ರಜಾವಾಣಿ, ದಿನಾಂಕ ೧೪.೧೧.೧೯೯೯

೪. ಸ್ವಾಮಿನಾಥನ್ ಅಯ್ಯರ್, ಎಕನಾಮಿಕ್ ಟೈಮ್ಸ್ ೧೬.೧೦.೧೯೯೮

೫. ಟಿ.ಆರ್. ಚಂದ್ರಶೇಖರ್, ಅಮಾರ್ತ್ಯಸೇನ್ ೧೯೯೮, ಪು. ೧೯

ಅಧ್ಯಾಯ ಏಳು

ಸಮಾರೋಪ

೭.೧. ಅಧ್ಯಯನದ ಫಲಿತಗಳು

೭.೨. ಅಧ್ಯಯನದ ಮುಂದಿನ ಸಾಧ್ಯತೆಗಳು

ಅಧ್ಯಾಯ ಏಳು

ಸಮಾರೋಪ

ಭಾರತದಂತೆಯೇ ಕರ್ನಾಟಕವೂ ಭೌಗೋಳಿಕವಾಗಿ ಹಾಗೂ ಸಾಮಾಜಿಕವಾಗಿ ವೈವಿಧ್ಯತೆಯನ್ನು ಹೊಂದಿದ ನಾಡು. ಇಲ್ಲಿ ವಿಭಿನ್ನ ಸಂಸ್ಕೃತಿಯ ವಿವಿಧ ಜಾತಿ, ಸಮುದಾಯಗಳಿವೆ. ಇನ್ನೂ ಒಂದು ಕಡೆ ಅತ್ಯಂತ ಸ್ಥಿತಿವಂತಿಕೆಯನ್ನು ಅನುಭವಿಸುವ ಜನಸಮುದಾಯ, ಮತ್ತೊಂದು ಕಡೆ ಇಂದಿಗೂ ಇರಲು ನೆಲೆಯಿಲ್ಲದೆ ಬದುಕಿಗಾಗಿ ಹೋರಾಟ ನಡೆಸುತ್ತಿರುವ ತಳ ಸಮುದಾಯಗಳು. ಅಲ್ಲದೇ ಪ್ರಾದೇಶಿಕ ಭಿನ್ನತೆಯೊಂದಿಗೆ ಆಯಾ ಪ್ರದೇಶಕ್ಕೆ ಸೀಮಿತವಾದ ಜಾತಿ, ಸಮುದಾಯಗಳಿವೆ ಹೀಗೆ ವಿವಿಧ ಮಜಲುಗಳನ್ನು ಈ ನಾಡಿನಲ್ಲಿ ಗುರುತಿಸಬಹುದು. ಈ ಅಧ್ಯಯನಕ್ಕೆ ಮುಕ್ರಿಯರ ಸಾಮಾಜಿಕ ಸಂಕಥನ ಎಂದು ಕರೆಯಲಾಗಿದೆ. ಸಂಕಥನ ಎಂಬುದನ್ನು ಡಿಸ್‌ಕೋರ್ಸ್ ಎಂಬುದಕ್ಕೆ ಸಂವಾದಿಯಾಗಿ ಬಳಸಲಾಗುತ್ತದೆ. ಡಿಸ್‌ಕೋರ್ಸ್ ಎಂಬುದಕ್ಕೆ ಇಂಗ್ಲೀಷ್-ಕನ್ನಡ ಶಬ್ಧಕೋಶದಲ್ಲಿ ವ್ಯಾಖ್ಯಾನ ಎಂದು ಅರ್ಥೈಸಲಾಗಿದೆ. ವ್ಯಾಖ್ಯಾನ ಎಂಬುದು ಡಿಫಿನೇಷನ್ ಎಂಬ ಪದಕ್ಕೆ ಸಮಾನಾರ್ಥಕವಾಗಿ ಬಳಕೆಗೊಳ್ಳುವಂಥಾದ್ದು. ಸಂಕಥನಕ್ಕೂ, ಡಿಸ್‌ಕೋರ್ಸ್ ಎರಡೂ ಪದಗಳನ್ನು ಸಮಾನವಾಗಿ ಪರಿಕಲ್ಪಿಸಿಕೊಳ್ಳುವಲ್ಲಿಯೇ ಅಸಂಬದ್ಧತೆ ಇದೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ ಸಂಕಥನ ಎಂಬುದಕ್ಕೆ ೧ ವಿವರಿಸುವಿಕೆ, ವಿಶದಪಡಿಸುವಿಕೆ, ವಿವರಣೆ, ೨ ಹೇಳಿಕೆ ಎಂದಿದೆ(ನೋಡಿ: ಸಂಕ್ಷಿಪ್ತ ಕನ್ನಡ ನಿಘಂಟು, ೧೯೭೭: ೮೨೦).

ಯಾವುದೇ ಒಂದು ಸಮಾಜದ ಸಂಕಥನವೆಂಬುದು ಅದು ಒಳಗೊಂಡಿರುವ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಸ್ಥಿತಿಗತಿಗಳನ್ನೊಳಗೊಂಡಿರುತ್ತದೆ.

ಕರ್ನಾಟಕದಲ್ಲಿ ಅನುಸೂಚಿತ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ೧೦೧ ಸಮುದಾಯಗಳಿವೆ. ದಕ್ಷಿಣಕನ್ನಡದಲ್ಲಿ ಅಗೇರ, ಪಂಬದ, ಮೋಗೇರ ಇತ್ಯಾದಿ ಪರಿಶಿಷ್ಟ ಜಾತಿ ಸಮುದಾಯ ಗಳಿರುವಂತೆ ಉತ್ತರಕನ್ನಡ ಜಿಲ್ಲೆಯಲ್ಲಿ 'ಮುಕ್ರಿ' ಇತ್ಯಾದಿ ಪರಿಶಿಷ್ಟ ಜಾತಿಯ ಸಮುದಾಯಗಳಿವೆ. ಮುಕ್ರಿ ಎಂಬ ಸಮುದಾಯವು ಹಾಲಕ್ಕಿ ಒಕ್ಕಲಿಗರನ್ನು ಹೋಲುವುದಾದರೂ ಅದು ಹಾಲಕ್ಕಿ ಒಕ್ಕಲರಿಗಿಂತ ಭಿನ್ನವಾದ ಸಂಸ್ಕೃತಿಯನ್ನೊಳಗೊಂಡಿದೆ. ಹಾಲಕ್ಕಿ ಒಕ್ಕಲಿಗರು ಸ್ಪೃಶ್ಯರು. ಆದರೆ ಮುಕ್ರಿಯರು ಅಸ್ಪೃಶ್ಯರು. ಅವರನ್ನು ಕರ್ನಾಟಕದ ಇತರೆಡೆ ಹೊಲೆಮಾದಿಗರನ್ನು ನಡೆಸಿಕೊಂಡಂತೆಯೇ ನಡೆಸಿಕೊಳ್ಳಲಾಗುತ್ತದೆ. ಈ ಸಮುದಾಯವು ಸಾಂಸ್ಕೃತಿಕವಾಗಿ ಬುಡಕಟ್ಟು ಲಕ್ಷಣಗಳನ್ನು ಹೊಂದಿದೆಯಾದರೂ ಅದನ್ನು ಬುಡಕಟ್ಟೆಂದು ಸರ್ಕಾರದ ಪಟ್ಟಿಯಲ್ಲಿ ಗುರುತಿಸಿಲ್ಲದಿರುವುದು ವಿಪರ್ಯಾಸವಾಗಿದೆ. ಕರ್ನಾಟಕದಲ್ಲಿ ವಿಶೇಷವಾಗಿ ಉತ್ತರಕನ್ನಡ ಜಿಲ್ಲೆಯಲ್ಲಿ ಮಾತ್ರ ಕಂಡುಬರುವ ಈ ಸಮುದಾಯವು ಕರ್ನಾಟಕದ ಇತರ ಭಾಗಗಳಲ್ಲಿ ಅತ್ಯಂತ ಬೆರಳೆಣಿಕೆಯಷ್ಟು ಜನ ಮಾತ್ರ ನೆಲೆಸಿರಬಹುದು. ಹೀಗೆ ನೆಲೆಸಿದವರು ಹೊಟ್ಟೆಪಾಡಿಗಾಗಿ ಸರ್ಕಾರಿ ಹುದ್ದೆಯನ್ನು ನೆಚ್ಚಿಕೊಂಡು ಮಾತ್ರ ಹೋದವರಾಗಿದ್ದಾರೆ. ಇದರ ಹೊರತಾಗಿ ಉತ್ತರಕನ್ನಡದ ಕಾರವಾರಕ್ಕೆ ಅಂಟಿಕೊಂಡಿರುವ ಗೋವಾ ರಾಜ್ಯಕ್ಕೆ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ದುಡಿಮೆಯನ್ನು ಅರಸಿಕೊಂಡು ಹೋಗಿರುವುದಾಗಿ ತಿಳಿದುಬರುತ್ತದೆ. ಮುಕ್ರಿಯರ ಮನೆಮಾತು ಕನ್ನಡವಾಗಿದ್ದರೂ ವಿಶಿಷ್ಟವಾದ ಕೊಂಕಣಿ ಮಿಶ್ರಿತ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಸ್ಥಳೀಯವಾಗಿ ಕೊಂಕಣಿಯ ಪ್ರಭಾವ ಹೆಚ್ಚಾಗಿರುವುದರಿಂದ ಮುಕ್ರಿಯರ ಮೇಲೂ ಕೊಂಕಣಿ ಭಾಷೆಯ ಪ್ರಭಾವವಾಗಿರುವ ಸಾಧ್ಯತೆ ಇದೆ. ಉತ್ತರಕನ್ನಡದ ಎಲ್ಲಾ ತಾಲೂಕುಗಳಲ್ಲಿ ಮುಕ್ರಿಗಳು ಕಂಡುಬರುತ್ತಾರೆ. ಇವರ ಕೊಪ್ಪಗಳು ಊರಿನಿಂದ ದೂರದಲ್ಲಿ ಕಾಡಿಗೆ ಹೊಂದಿಕೊಂಡ ಪ್ರದೇಶದಲ್ಲಿವೆ. ಪ್ರಾಯಶಃ ನಾಡಿನ ಜನ ಇವರು ಅಸ್ಪೃಶ್ಯರೆಂಬ ಕಾರಣಕ್ಕಾಗಿ ದೂರವಿರಿಸಿರುವ ಸಾಧ್ಯತೆಯು ಇದೆ. ಹೀಗಾಗಿ ಊರಿನಿಂದ ದೂರಕ್ಕೆ ಕಾಡಂಚಿಗೆ ಹೊಂದಿಕೊಂಡಂತೆ ಕೊಪ್ಪಗಳನ್ನು ರಚಿಸಿಕೊಂಡು ಮುಕ್ರಿಯರು ಜೀವನ ಸಾಗಿಸುತ್ತಿದ್ದಾರೆ. ಕೃಷಿ ಕಾರ್ಯಗಳಲ್ಲಿ ತೊಡಗುವ ವರಾಗಿದ್ದರೂ ಕೃಷಿಕಾರರಾಗಲು ಮುಕ್ರಿಯರಿಗೆ ಸಾಧ್ಯವಾಗಿಲ್ಲ. ಕೇವಲ ಕೃಷಿಕೂಲಿಯನ್ನು ನಂಬಿಯೇ ಜೀವನ ಸಾಗಿಸಬೇಕಾಗಿರುವ ಸ್ಥಿತಿ ಮುಕ್ರಿಯರದಾಗಿದೆ. ಉತ್ತರಕನ್ನಡದಲ್ಲಿ ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿಯೇ ಈ ಸಮುದಾಯ ನೆಲೆಯನ್ನು ಕಂಡುಕೊಂಡಿದೆ. ನಗರ ಪ್ರದೇಶದಲ್ಲಿ ಈ ಸಮುದಾಯ ಇಲ್ಲವೆನ್ನುವಷ್ಟು ಕಡಿಮೆ ಪ್ರಮಾಣದಲ್ಲಿ ನೆಲೆಸಿದೆ. ದಲಿತ ಸಮುದಾಯ ಗಳಲ್ಲೊಂದಾದ ಮುಕ್ರಿಗಳಿಗೆ ಇಂದಿಗೂ ಮೂಲಭೂತ ಸೌಲಭ್ಯದ ಕೊರತೆಯಿರುವುದನ್ನು ಅವರು ನೆಲೆಸಿರುವ ಕೊಪ್ಪಗಳೇ ಹೇಳುತ್ತವೆ.

ಮುಕ್ರಿ ಸಮುದಾಯವು ತಾವು ಹಾಲಕ್ಕಿ ಒಕ್ಕಲಿಗರಿಗೆ ಸಹೋದರರಾಗುತ್ತೇವೆ, ತಾವೂ ಅವರು ಅಣ್ಣ ತಮ್ಮಂದಿರೆಂದು ಹೇಳಿಕೊಳ್ಳುತ್ತಾರಾದರೂ ಇವರ ಮಾತನ್ನು ಹಾಲಕ್ಕಿಗಳು ಒಪ್ಪಿಕೊಳ್ಳುವುದಿಲ್ಲ. ಮುಕ್ರಿಯರನ್ನು ಇಂದಿಗೂ ಜೀತಗಾರ ಸಮುದಾಯವೆಂದೇ ಮೇಲ್ಜಾತಿಗಳಿಂದ ಗುರುತಿಸಲಾಗುತ್ತದೆ. ಮುಕ್ರಿಯರು ಒಂದೊಂದು ಗುಂಪಾಗಿ ಕೊಪ್ಪಗಳನ್ನು ರಚಿಸಿಕೊಂಡು ಜೀವಿಸುವ ಸಮುದಾಯವಾಗಿದೆ. ಕಾಡನ್ನೇ ನಂಬಿಕೊಂಡು ಜೀವನ ಕಟ್ಟಿಕೊಂಡಿದ್ದ ಮುಕ್ರಿಗಳ ಆಚರಣೆಗಳೆಲ್ಲಾ ಬಹುತೇಕ ಕೃಷಿ ಸಂಬಂಧಿ ಆಚರಣೆಗಳಾಗಿವೆ. ಆದರೆ ಕೃಷಿ ಮಾಡುವ ಭೂಮಿಯೇ ಇವರ ಬಳಿಇಲ್ಲ. ಮುಕ್ರಿಯರನ್ನು ಈ ಕುರಿತು ಕೇಳಿದರೆ ತಮ್ಮ ಪೂರ್ವಜರು ಕಾಡಂಚಿನ ಇಳಿಜಾರು ಪ್ರದೇಶಗಳಲ್ಲಿ ಕುಮ್ರಿ ಪದ್ಧತಿಯ ಬೇಸಾಯವನ್ನು ಮಾಡುತ್ತಿದ್ದರು. ತಮ್ಮ ಬದುಕಿಗೆ ಅವಶ್ಯವಾದ ರಾಗಿಯಂತಹ ಸಿರಿಧಾನ್ಯಗಳನ್ನು ಬೆಳೆಯುತ್ತಿದ್ದರು. ಆದರೆ ಕಾಡಿಗೆ ಸಂಬಂಧಿಸಿದ ನೀತಿ ನಿಯಮಗಳು, ಪ್ರತ್ಯೇಕ ಇಲಾಖೆ ಪ್ರಾರಂಭಗೊಂಡ ತರುವಾಯ ತಾವು ತಬ್ಬಲಿಗಳಾಗಬೇಕಾಯಿತೆಂದು ಹೇಳುತ್ತಾರೆ. ಇವರು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಕುಮ್ರಿ ಬೇಸಾಯದಂತೆಯೇ ಬೇಟೆಯನ್ನು ನೆಚ್ಚಿಕೊಂಡಿದ್ದರು. ಆದರೆ ಅರಣ್ಯನೀತಿ ಬೇಟೆಯಾಡಲು ನಿರ್ಬಂಧವೆರಿತು ಮತ್ತು ಕಾಡಿನ ಕಿರು ಉತ್ಪನ್ನಗಳನ್ನು ಸಂಗ್ರಹಿಸಿ ಮಾರುವುದಕ್ಕೂ ಅರಣ್ಯ ಇಲಾಖೆ ತಡೆಯೊಡ್ಡಿತು. ಹೀಗಾಗಿ ಕೇವಲ ಕೃಷಿಕೂಲಿಯಾಗಿ, ಜೀತದಾಳಾಗಿ ಬದುಕನ್ನು ಸಾಗಿಸುವಂತಹ ಹೀನಾಯ ಸ್ಥಿತಿ ಮುಕ್ರಿಗಳ ಪಾಲಿಗೆ ಉಳಿಯಿತು.

ದೈಹಿಕವಾಗಿ ಬಲಿಷ್ಠರೂ, ಮಧ್ಯಮ ನಿಲುವುಳ್ಳವರಾದ ಮುಕ್ರಿಯರು ನೋಡಲು ವಿಶಿಷ್ಟ ದೈಹಿಕ ಲಕ್ಷಣಗಳನ್ನು ಹೊಂದಿದ್ದಾರೆ. ಹಳೆತಲೆಮಾರಿನ ಪುರುಷರು ಮೊಂಡು ದೋತರ, ತಲೆ ಮೇಲೊಂದು ಮುಂಡಾಸು ಸುತ್ತಿಕೊಂಡು ಅರೆಬೆತ್ತಲೆಯಾಗಿರುತ್ತಿದ್ದರು. ವಿಶೇಷ ದಿನಗಳಲ್ಲಿ ಅರೆತೋಳಿನ ಕಸೆ ಅಂಗಿಗಳನ್ನು ತೊಡುತ್ತಾರೆ. ಸಾಮಾನ್ಯವಾಗಿ ಕೂದಲು ಕತ್ತರಿಸದೆ ಪುರುಷರೂ ಸಹ ಉದ್ದನೆಯ ಕೂದಲನ್ನು ಬಿಟ್ಟಿರುತ್ತಾರೆ. ಇತ್ತೀಚಿನ ಯುವಕರು ಕೂದಲನ್ನು ಕತ್ತರಿಸಿಕೊಳ್ಳುವುದು, ಪ್ಯಾಂಟ್ ಷರ್ಟ್‌ಗಳನ್ನು ತೊಡುವುದನ್ನು ನೋಡುತ್ತೇವೆ. ಮಹಿಳೆಯರು ಹಾಲಕ್ಕಿಗಳಂತೆ ಸೀರೆಯನ್ನು ಕತ್ತರಿಯಾಕಾರದಲ್ಲಿ ಕೊರಳಿಗೆ ಕಟ್ಟಿಕೊಳ್ಳುತ್ತಾರೆ. ಮೊಣಕಾಲಿಗಿಂತ ಸ್ವಲ್ಪ ಕೆಳಗೆ ಬರುವಂತೆ ಸೀರೆ ಉಡುತ್ತಾರೆ. ಕುಪಸ ತೊಡುವುದಿಲ್ಲ. ಕಡಿಮೆ ಬೆಲೆಯ ಲೋಹದ ಆಭರಣಗಳನ್ನು ಕಿವಿಗೆ ಧರಿಸುತ್ತಾರೆ. ಕೊರಳೊಳಗೆ ಹಾಲಕ್ಕಿಗಳಂತೆ ಮಣಿಸರಗಳ ಗುಚ್ಚಿನ ಸರಗಳನ್ನು ಹಾಕಿಕೊಳ್ಳುತ್ತಾರೆ. ಬಹುತೇಕ ಇವರ ಉಡುಗೆ ತೊಡುಗೆಗಳು ಹಾಲಕ್ಕಿ ಒಕ್ಕಲಿಗರನ್ನು ಹೋಲುತ್ತವೆ.

ಮುಕ್ರಿ ಸಮುದಾಯದಲ್ಲಿ ಇಂದಿಗೂ ಬಾಲ್ಯ ವಿವಾಹ ಪದ್ಧತಿ ಕಂಡುಬರುತ್ತದೆ. ಸಾಮಾನ್ಯವಾಗಿ ಸೋದರತ್ತೆ ಮಗಳು ಅಥವಾ ಸೋದರಮಾವನ ಮಗಳನ್ನು ಮದುವೆ

ಯಾಗುವುದೇ ಹೆಚ್ಚು. ವಿಧವಾ ವಿವಾಹ ಪದ್ಧತಿ ಇವರಲ್ಲಿದೆ. ಇವರಲ್ಲಿ ಮದುವೆ ನಡೆಯುವುದು ಬಹುತೇಕ ಬೆಡಗುಗಳ ಆಧಾರದಲ್ಲಿ. ಬೆಡಗುಗಳನ್ನು ಇವರು ಬಳಿಯೆಂದು ಕರೆಯುತ್ತಾರೆ. ಪ್ರಾಣಿ ಹಾಗೂ ಸಸ್ಯಗಳ ಹೆಸರಿನಿಂದ ಕೂಡಿದ ಬಳಿ ಇವರಲ್ಲಿದೆ. ಯಾರು ಯಾವ ಪ್ರಾಣಿ ಹೆಸರಿನ ಬಳಿಯನ್ನು ಹೊಂದಿರುತ್ತಾರೆಯೋ ಅವರು ಆ ಪ್ರಾಣಿ ತಿನ್ನುವುದಿಲ್ಲ ಮತ್ತು ಆ ಪ್ರಾಣಿಯನ್ನು ದೈವವೆಂದೇ ಭಾವಿಸುತ್ತಾರೆ. ಅದೇ ರೀತಿಯಾಗಿ ಯಾವುದಾದರೂ ಸಸ್ಯದ ಹೆಸರನ್ನು ಹೊಂದಿದ ಬಳಿಯವರಿದ್ದರೆ ಆ ಸಸ್ಯವನ್ನು ಉರುವಲು ಇತ್ಯಾದಿಗಾಗಿ ಕಡಿಯುವುದಿಲ್ಲ ಮತ್ತು ಆ ಸಸ್ಯ ಮೂಲದ ಪದಾರ್ಥಗಳನ್ನು ಉಪಯೋಗಿಸುವುದಿಲ್ಲ. ಉದಾಹರಣೆಗೆ ಶೆಂಡಿ ಮರದ ಬೆಡಗಿನವರು ಆ ಮೂಲದ ಶೇಂದಿಯನ್ನು ಕುಡಿಯುವುದಿಲ್ಲ. ಆ ಮರದ ನೆರಳನ್ನೂ ಆಶ್ರಯಿಸುವುದಿಲ್ಲ. ಶೆಂಡಿ ಬಳಿಯವರಿಗೆ ಶೆಂಡಿ ಮರ ದೈವತ್ವಕ್ಕೆ ಸಮಾನವೆಂದು ಭಾವಿಸುತ್ತಾರೆ.

ವಿಜಾತಿ ಬೆಡಗುಗಳ ಮಧ್ಯದಲ್ಲಿ ಮಾತ್ರ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿ ಕೊಳ್ಳುತ್ತಾರೆ. ಮದುವೆಯಲ್ಲಿ ಬ್ರಾಹ್ಮಣ ಪುರೋಹಿತನಿಗೆ ಪ್ರವೇಶವಿಲ್ಲ. ಕುಲದ ಹಿರಿಯ ಅಥವಾ ಬುದುವಂತನೇ ಮದುವೆಯನ್ನು ಮಾಡಿಸುತ್ತಾನೆ. ಇವರಲ್ಲಿ ಒಳಾಡಳಿತ ಪದ್ಧತಿ ಇದೆ. ಪ್ರತಿ ಊರಿಗೂ ಒಬ್ಬ ಬುದುವಂತನಿರುತ್ತಾನೆ. ಹಾಗೆ ಅವನೊಂದಿಗೆ ಕೋಲ್ಕಾರ ಮುಂತಾದ ದೈವದ ಹಿರಿಯರಿರುತ್ತಾರೆ. ಸಮುದಾಯದಲ್ಲಿ ನಡೆಯುವ ಪ್ರತಿಯೊಂದು ಕಾರ್ಯವನ್ನು ಅವರ ಸಮ್ಮುಖದಲ್ಲಿಯೇ ಮಾಡಬೇಕು. ಯಾವುದೇ ವ್ಯಕ್ತಿ ತಪ್ಪು ಮಾಡಿದರೆ ಶಿಕ್ಷೆಕೊಡುವ ಮತ್ತು ದಂಡ ವಿಧಿಸುವ ಹಕ್ಕು ಅವರಿಗಿದೆ. ಮದುವೆ, ಸಾವು ಮುಂತಾದ ಪ್ರತಿಯೊಂದು ಕಾರ್ಯವೂ ಅವರ ಸಮ್ಮುಖದಲ್ಲಿಯೇ ನಡೆಯಬೇಕು. ಸಾವಿಗೆ ಸಂಬಂಧಿಸಿದಂತೆ ವಿಶಿಷ್ಟವಾದ ಆಚರಣೆಗಳು ಇವರಲ್ಲಿವೆ. ಹೆಣವನ್ನು ತೆಂಗಿನ ಗರಿಯಲ್ಲಿ ಮುಚ್ಚಿ ಹೊತ್ತೊಯ್ಯುವ ಪದ್ಧತಿ ಇದೆ. ಬಲಿ ಸಂಪ್ರದಾಯವಿದೆ. ಮುಕ್ರಿಯರು ಜಟಿಗನನ್ನು ತಮ್ಮ ಸಾಂಸ್ಕೃತಿಕ ನಾಯಕನೆಂದು ತಿಳಿದಿದ್ದಾರೆ. ಪ್ರತಿಯೊಂದು ಕೊಪ್ಪದಲ್ಲಿಯೂ ಜಟಿಗ ಇರಲೇಬೇಕು. ತಮ್ಮ ಕೊಪ್ಪವನ್ನು ಕಾಯುವವನು ಜಟಿಗನೆಂದು ನಂಬುತ್ತಾರೆ. ಮುಕ್ರಿಯರು ಚಂದಾವರದ ಹನುಮಂತ, ಕಲಿವೀರಭದ್ರನಂತಹ ಪುರುಷ ದೈವಗಳ ಆರಾಧಕರಾದಂತೆಯೇ ಶಿರಸಿಯ ಮಾರಿ ಮತ್ತು ಇತರ ಸ್ತ್ರೀ ದೈವ ಆರಾಧಕರೂ ಆಗಿದ್ದಾರೆ. ವೈಷ್ಣವಾರಾಧನೆಯ ಪ್ರಭಾವ ಇವರ ಮೇಲಾಗಿದೆ. ಹೀಗಾಗಿ ತಿರುಪತಿ ತಿಮ್ಮಪ್ಪನನ್ನು, ತುಳಸಿಯನ್ನು ಆರಾಧಿಸುತ್ತಾರೆ.

ಪೂರ್ವದಲ್ಲಿ ಕಾಡಿನಲ್ಲಿ ಬೇಟೆಯಾಡಿದ ಪ್ರಾಣಿಗಳನ್ನು ಆಹಾರವಾಗಿ ಬಳಸುತ್ತಿದ್ದರಂತೆ. ಆದರೆ ಮುಕ್ರಿಯರು ಬೇಟೆಯಿಂದ ಪ್ರಸ್ತುತ ದೂರವಾಗಿದ್ದಾರೆ. ರಾಗಿ ಅಂಬಲಿಯೋ, ನುಚ್ಚಕ್ಕಿಯ ಗಂಜಿಯೇ ಇವರ ಪ್ರಧಾನ ಆಹಾರ. ಜೊತೆಗೊಂದಿಷ್ಟು ಸುಟ್ಟ ಒಣಮೀನಿನ ತುಂಡೊಂದಿದ್ದರೆ

ಇವರ ಊಟ ಮುಗಿಯಿತು. ವಿಶೇಷ ದಿನಗಳಲ್ಲಿ ಮಾತ್ರ ತಾವು ಸಾಕಿದ ಕೋಳಿಯನ್ನು ಆಹಾರಕ್ಕಾಗಿ ಬಳಕೆ ಮಾಡುವುದುಂಟು. ಕುರಿ ಮುಂತಾದ ಪ್ರಾಣಿಗಳ ಮಾಂಸ ತಿನ್ನುವ ಆಸೆಯಿದ್ದರೂ ಮುಕ್ರಿಯರ ಆರ್ಥಿಕ ಸ್ಥಿತಿ ಅದಕ್ಕೆ ಅಡ್ಡಿಯಾಗಿದೆ.

ಮುಕ್ರಿ ಸಮುದಾಯದ ಕುರಿತು ಎಂಥೋವನ್, ಕೆ.ಎಸ್. ಸಿಂಗ್‌ರಂತಹ ಕೆಲವೇ ಕೆಲವು ವಿದ್ವಾಂಸರು ತಮ್ಮ ಕೃತಿಗಳಲ್ಲಿ ಮಾಹಿತಿಗಳನ್ನು ನೀಡಿದ್ದಾರೆ. ಹಾಗೆಯೇ ಉತ್ತರ ಕನ್ನಡದವರಾದ ನಾಯಕರಂತಹ ಕೆಲವರು ಮಾತ್ರ ಮುಕ್ರಿಯರ ಕುರಿತು ಸಂಕ್ಷಿಪ್ತವಾಗಿ ಬರೆದಿದ್ದಾರೆ. ಇತ್ತೀಚೆಗೆ ಮೋಹನ ಚಂದ್ರಗುತ್ತಿಯವರು ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ಯೋಜನೆಯೊಂದಕ್ಕಾಗಿ ಅಧ್ಯಯನ ನಡೆಸಿ ರಚಿಸಿದ ಕೃತಿಯೊಂದು ಪ್ರಕಟವಾಗಿದೆ. ಆದರೆ ಆ ಕೃತಿಯು ಮುಕ್ರಿ ಸಮುದಾಯವನ್ನು ಅರ್ಥೈಸಿಕೊಳ್ಳಲು ಪೂರ್ಣವಾಗಿ ಸಹಾಯ ಮಾಡಲಾರದು. ಮುಕ್ರಿ ಸಮುದಾಯದ ಕುರಿತು ಸಮಗ್ರ ಮಾಹಿತಿಯನ್ನು ನೀಡುವ ಮಹತ್ವದ ಅಧ್ಯಯನಗಳಾವೂ ಇಲ್ಲಿಯವರೆಗೂ ನಡೆದಿರುವುದಿಲ್ಲ.

ಪ್ರಸ್ತುತ ಈ ಕೃತಿಯಲ್ಲಿ ಮುಕ್ರಿ ಸಮುದಾಯದ ಪಾರಂಪರಿಕ ವೃತ್ತಿ ಹಾಗೂ ಪ್ರಸ್ತುತ ಅವರು ಅನುಸರಿಸುತ್ತಿರುವ ವೃತ್ತಿ, ಅವರ ಸಾಮಾಜಿಕ ಆರ್ಥಿಕ, ಶೈಕ್ಷಣಿಕ, ರಾಜಕೀಯ ಸಂಕಥನಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಹಾಗೆಯೇ ಅವರಲ್ಲಿರುವ ಜನಪದೀಯ ಅಂಶಗಳನ್ನು ಗುರುತಿಸುವುದು ಹಾಗೂ ಮುಕ್ರಿ ಸಮುದಾಯದ ಮೇಲೆ ಆಧುನಿಕತೆಯ ಪ್ರಭಾವ ಯಾವ ರೀತಿಯಲ್ಲಿ ಆಗಿದೆ ಎಂಬುದನ್ನು ಅರಿಯುವ ಪ್ರಯತ್ನ ಪ್ರಸ್ತುತ ಅಧ್ಯಯನದ್ದು, ಸಾಮಾಜಿಕ ವಲಯದಲ್ಲಿ ಪರಿಶಿಷ್ಟ ಜಾತಿಯ ಮುಕ್ರಿಯರಿಗೆ ಸಿಕ್ಕಿರುವ ಸ್ಥಾನಮಾನಗಳು, ಮೀಸಲಾತಿಯ ಪರಿಣಾಮವಾಗಿ ಅವರ ಬದುಕಿನಲ್ಲಿ ಉಂಟಾಗಿರುವ ಅನುಕೂಲ ಅನಾನುಕೂಲಗಳನ್ನು ಕುರಿತಂತೆ ಇಡೀ ಅಧ್ಯಯನದುದ್ದಕ್ಕೂ ಸಾದರ ಪಡಿಸಲಾಗಿದೆ.ಇಡೀ ಉತ್ತರಕನ್ನಡ ಜಿಲ್ಲೆಯ ಮುಕ್ರಿಯರ ಕುರಿತಾಗಿ ಅಮೂಲಾಗ್ರವಾಗಿ ಅಧ್ಯಯನ ಮಾಡುವುದು ಕಷ್ಟಸಾಧ್ಯದ ಕೆಲಸವೆಂಬ ಕಾರಣಕ್ಕೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಹಾಗೂ ಕುಮಟಾ ತಾಲೂಕುಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಈ ಎರಡೂ ತಾಲೂಕುಗಳಲ್ಲಿ ಪ್ರತಿ ತಾಲೂಕಿಗೆ ಮುಕ್ರಿಯರು ನೆಲೆಸಿರುವ ಎಂಟು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಅವುಗಳಲ್ಲಿ ನೆಲೆಸಿರುವ ಮುಕ್ರಿ ಸಮುದಾಯದ ಕುಟುಂಬಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ಸಾಮಾಜಿಕ ಜೀವನದಲ್ಲಿ ತೀರಾ ನಿಕೃಷ್ಟ ಸ್ಥಿತಿಯಲ್ಲಿರುವ ತಳಸಮುದಾಯದ (ಪರಿಶಿಷ್ಟ ಜಾತಿ) ಮುಕ್ರಿಯರನ್ನು ಇತರ ಮೇಲ್ವರ್ಗಗಳು ಹೇಗೆ ನೋಡಿಕೊಳ್ಳುತ್ತಿವೆ, ಕೃಷಿಕೂಲಿಗಳಾಗಿ

ಕಾರ್ಯನಿರ್ವಹಿಸುವ ಮುಕ್ರಿಯರು ಗೇಣಿದಾರರಾಗಲೂ ಸಾಧ್ಯವಾಗದಿರಲು ಇರುವ ಕಾರಣ, ಮುಕ್ರಿಯರಿಗೆ ನೀಡಲಾಗಿರುವ ಮೀಸಲಾತಿಯನ್ನು ಮೇಲ್ವರ್ಗಗಳು ಹೇಗೆ ಉಪಯೋಗಿಸಿ ಕೊಳ್ಳಬಲ್ಲವು ಎಂಬುದನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡುವ ಪ್ರಯತ್ನ ಈ ಅಧ್ಯಯನದಲ್ಲಿ ಮಾಡಲಾಗಿದೆ. ಮೀಸಲಾತಿ ಸೌಲಭ್ಯವಿದ್ದರೂ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಮುಕ್ರಿಯರಿಗೆ ಆಗುತ್ತಿರುವ ಅಡ್ಡಿಗಳು ಹಾಗೂ ಅದರ ಹಿಂದಿರುವ ಕಾರಣಗಳು ಯಾವುವು ಇರಬಹುದು ಎಂಬುದರ ಕುರಿತು ದೃಷ್ಟಿ ಹರಿಸಲಾಗಿದೆ.

ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿರುವ ಪರಿಶಿಷ್ಟ ಜಾತಿಯ ಮುಕ್ರಿಯರಿಗೆ ವೈಯಕ್ತಿಕವಾಗಿ ರಾಜಕೀಯದ ಅಭಿಲಾಷೆ ಇರದಿದ್ದರೂ ಅವರನ್ನು ಮೇಲ್ಜಾತಿಗಳು ಹೇಗೆ ದುರುಪಯೋಗ ಮಾಡಿಕೊಳ್ಳುತ್ತಿವೆ ಎಂಬುದು ಆಶ್ಚರ್ಯಕರವಾದ ವಿಚಾರ. ಮುಕ್ರಿಯರ ರಾಜಕೀಯ ಸ್ಥಿತಿ ಬಹುತೇಕ ಕೀಳರಿಮೆಯಿಂದಲೇ ಕೂಡಿರುತ್ತದೆ.

ಪರಿಶಿಷ್ಟ ಜಾತಿಯ ಮುಕ್ರಿಯರು ಸಾಮಾಜಿಕವಾಗಿ ಮಾತ್ರವಲ್ಲದೆ ರಾಜಕೀಯ ಹಾಗೂ ಇತರ ರಂಗಗಳಲ್ಲಿಯೂ ಕೀಳರಿಮೆಯನ್ನು ಉಂಟುಮಾಡುವ ವಾತಾವರಣವನ್ನೇ ಸೃಷ್ಟಿಸಿದೆ.

ಮುಕ್ರಿಯರ ಒಟ್ಟಾರೆ ಸ್ಥಿತಿಯನ್ನು ಅರಿಯಲು ಉತ್ತರಕನ್ನಡ ಜಿಲ್ಲೆಯಲ್ಲಿರುವ ಪ್ರತಿಯೊಂದು ಮುಕ್ರಿ ಕುಟುಂಬವನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡುವುದು ಕಷ್ಟಸಾಧ್ಯದ ಕೆಲಸ. ಹೀಗಾಗಿ ಆ ಸಮುದಾಯಕ್ಕೆ ಸೇರಿದ ಹಲವು ಕುಟುಂಬಗಳನ್ನು ಗಮನಿಸುವ ಮೂಲಕ ಮುಕ್ರಿ ಸಮುದಾಯದ ಜನರ ಜೀವನ ಸ್ವರೂಪದ ಸಮಗ್ರ ಮಾಹಿತಿ ದೊರೆಯಬಲ್ಲದು. ಈ ಆಶಯದಿಂದಲೇ ಉತ್ತರಕನ್ನಡ ಜಿಲ್ಲೆಯಲ್ಲಿ ನೆಲೆಸಿರುವ ಮುಕ್ರಿ ಸಮುದಾಯದ ಎಲ್ಲಾ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸದೆ ಕೇವಲ ಕುಮುಟಾ ಹಾಗೂ ಹೊನ್ನಾವರ ತಾಲೂಕುಗಳಲ್ಲಿರುವ ಮುಕ್ರಿಯರು ವಾಸಿಸುವ ತಲಾ ಎಂಟು ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಎರಡೂ ತಾಲೂಕುಗಳಲ್ಲಿರುವ ಒಟ್ಟು ೧೬ ಗ್ರಾಮಗಳಲ್ಲಿ ನೆಲೆಸಿರುವ ಮುಕ್ರಿಯರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಜೀವನದ ವಿವಿಧ ಮಜಲುಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆಗೆ ಆಕರವಾಗಿ ವಿವಿಧ ಮೂಲದ ಮಾಹಿತಿಗಳನ್ನು ಸಹ ಬಳಸಿಕೊಳ್ಳಲಾಗಿದೆ.

ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ಪರಿಶಿಷ್ಟ ಜಾತಿಯ ಮುಕ್ರಿಯರ ಸಾಮಾಜಿಕ ಸ್ಥಿತಿಗತಿಯೊಂದಿಗೆ ಅವರ ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಗಳನ್ನು ಅರಿಯಲು ಸಾಧ್ಯವಾಗಿದೆ.

ಸ್ವಾತಂತ್ರ್ಯಾನಂತರ ಭಾರತದಲ್ಲಿ ಕಂಡುಬಂದ ಉದಾರೀಕರಣ, ನಗರೀಕರಣ, ಆಧುನಿಕರಣ, ಜಾಗತೀಕರಣದಂತಹ ಚಿಂತನೆಗಳಿಂದ ಭಾರತೀಯರ ಸಾಮಾಜಿಕ ಬದುಕಿನಲ್ಲಿ ಹಲವಾರು ಬದಲಾವಣೆಗಳಾಗಿವೆ ಎಂಬುದೇನೋ ಸರಿ, ಆದರೆ ಪರಿಶಿಷ್ಟ ಜಾತಿಯಲ್ಲಿರುವ ಅಸ್ಪೃಶ್ಯರನ್ನು ಇವು ಬದಲಿಸುವ ಬದಲಾಗಿ ಅವುಗಳನ್ನು ಮತ್ತಷ್ಟು ಸಂಕಷ್ಟಕ್ಕೆ ಸಿಲುಕುವಂತೆ ಮಾಡಿವೆ. ಹೀಗಾಗಿ ಇಂದು ಭಾರತದ ಬಹುತೇಕ ಪರಿಶಿಷ್ಟ ಜಾತಿ, ಪಂಗಡಗಳು ಮತ್ತು ಕುಶಲಕರ್ಮಿ ಸಮುದಾಯಗಳು ಹೆಚ್ಚು ಶೋಷಣೆಗೆ ಒಳಗಾಗುತ್ತ ಸಾಗಿವೆ. ಈ ಸಮುದಾಯಗಳಲ್ಲಿ ಹುಟ್ಟಿದ ಮಹಿಳೆಯರ ಸ್ಥಿತಿಯಂತೂ ಇನ್ನೂ ಚಿಂತನಾಮಯವಾಗಿದೆ. ಹಿಂದುಳಿದ ಮತ್ತು ತಳಸಮುದಾಯ ಗಳಿಗೆ ಸಾಂವಿಧಾನಿಕವಾಗಿ ಮೀಸಲಾತಿಯನ್ನು ನೀಡಲಾಗಿದೆ. ಆದರೆ ಮೇಲ್ವರ್ಗಗಳ ಕಬಂಧಬಾಹುವಿನಲ್ಲಿರುವ ಇಲ್ಲಿಯ ವ್ಯವಸ್ಥೆಯು ಮೀಸಲಾತಿಯನ್ನು ಪಡೆಯುವ ಸಮುದಾಯಗಳ ಕುರಿತು ಹೊಂದಿರುವ ಮನೋಭಾವನೆ ಎಂತಹದ್ದು ಹಾಗೂ ಅವು ತಳಸಮುದಾಯಗಳು ಮೀಸಲಾತಿಯ ಕಾರಣಕ್ಕಾಗಿ ಪಡೆಯಬಹುದಾಗಿದ್ದ ಸೌಲಭ್ಯಗಳಿಂದ ಎಷ್ಟು ನಾಜೂಕಾಗಿ ದೂರವಿಟ್ಟಿವೆ ಎಂಬುದನ್ನು ಸಮುದಾಯಗಳ ಸಾಮಾಜಿಕ ಬದುಕಿನ ಆಳಕ್ಕೆ ಇಳಿದು ನೋಡಿದಾಗಲೇ ತಿಳಿಯುವುದು. ಮೀಸಲಾತಿಯನ್ನು ಪಡೆಯುವ ಮುಖಾಂತರ ಸಬಲರಾಗಿ ಆತ್ಮಸ್ಥೈರ್ಯವನ್ನು ಪಡೆಯಬೇಕಾಗಿದ್ದ ತಳಸಮುದಾಯಗಳು ಅಧೀರತೆಗೆ, ಶೋಷಣೆಗೆ ಒಳಗಾಗುತ್ತಿರುವುದು ಕಂಡುಬರುತ್ತಿದೆ. ಬಂಡವಾಳಶಾಹಿ ಮತ್ತು ಮೇಲ್ಜಾತಿಗಳ ಹಿಡಿತದಲ್ಲಿರುವ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ವಲಯದಲ್ಲಿ ತಳಸಮುದಾಯದ ಜನರಿಗೆ ನಿಜವಾಗಿಯು ಇರಬೇಕಾಗಿದ್ದ ಅಸ್ತಿತ್ವ ಇಲ್ಲವಾಗಿದೆ. ಸಾಮಾಜಿಕ ವಲಯದಲ್ಲಿ ಅತ್ಯಂತ ದುರ್ಬಲವಾದ ಪರಿಶಿಷ್ಟ ಜಾತಿಗಳು ತಮ್ಮ ಅಧಿಕಾರ ಮಿತಿಯಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ ಎಂಬುದನ್ನು ಈ ಅಧ್ಯಯನದ ಪ್ರತಿ ಅಧ್ಯಾಯಗಳ ಮೂಲಕ ಗುರುತಿಸಲಾಗಿದೆ. ಇಲ್ಲಿ ಒಟ್ಟು ಎಂಟು ಅಧ್ಯಾಯಗಳಲ್ಲಿ ಈ ಅಧ್ಯಯನವು ತೆರೆದುಕೊಂಡಿದೆ. ಜೊತೆಗೆ ಇವುಗಳಿಗೆ ಪೂರಕವಾಗಿ ಉಲ್ಲೇಖದಲ್ಲಿ ಕೋಷ್ಟಕಗಳು, ನಕ್ಷೆ ಮತ್ತು ಪರಾಮಾರ್ಶನ ಗ್ರಂಥಗಳ ವಿವರಗಳನ್ನು ನೀಡಲಾಗಿದೆ.

ಅಧ್ಯಯನದ ಫಲಿತಗಳು

ಪ್ರಸ್ತುತ ಅಧ್ಯಯನದ ವಿಶ್ಲೇಷಣೆಯಲ್ಲಿ ಕಂಡುಕೊಂಡ ಫಲಿತಗಳನ್ನು ಇಲ್ಲಿ ನೋಡಲಾಗಿದೆ.

* ಸಾಮಾಜಿಕವಾಗಿ ಮುಕ್ರಿ ಸಮುದಾಯವು ಮೀಸಲಾತಿಯನ್ನು ಪಡೆದು ಸಬಲೀಕರಣ ವಾಗುವ ಬದಲು ಜಾತಿ ಹಾಗೂ ಅಸ್ಪೃಶ್ಯತೆಯ ಕಾರಣದಿಂದಲೇ ಕೀಳರಿಮೆ ಅನುಭವಿಸುವಂತಾಗಿದೆ.

* ಮುಕ್ರಿಯರು ಅಸ್ಪೃಶ್ಯತೆಯ ಕಾರಣಕ್ಕಾಗಿಯೇ ಇತರ ಸಮುದಾಯಗಳ ನೆಲೆಗಳಿಂದ ದೂರವಾಗಿ ತಮ್ಮದೇ ಪ್ರತ್ಯೇಕ ಕೊಪ್ಪಗಳಲ್ಲಿ ನೆಲೆನಿಂತಿದ್ದಾರೆ.

* ಮುಕ್ರಿ ಸಮುದಾಯದಲ್ಲಿ ನಿಸರ್ಗದಲ್ಲಿ ದೊರೆಯುವ ಪ್ರಾಣಿ, ಸಸ್ಯಗಳ ಹೆಸರನ್ನು ಕುಲಗಳಾಗಿ ಇರಿಸಿಕೊಳ್ಳಲಾಗಿದೆ. ಹಳೆಯ ತಲೆಮಾರಿನವರಿಗೆ ಪರಿಚಯವಿರುವ ಕುಲಗಳು ಯುವಸಮುದಾಯದ ತಿಳುವಳಿಕೆಯಿಂದ ದೂರವಾಗಿವೆ.

* ಆಧುನಿಕ ಪ್ರಭಾವಕ್ಕೆ ಒಳಗಾದ ಯುವ ಸಮುದಾಯ ತಮ್ಮ ಕುಲಗಳನ್ನು ಮರೆತಂತೆಯೇ ತಮ್ಮ ಉಡುಗೆ ತೊಡುಗೆಗಳಿಂದಲೂ ದೂರವಾಗುತ್ತಿವೆ.

* ಅರಣ್ಯವನ್ನು ನಂಬಿಯೇ ಬದುಕುತ್ತಿದ್ದ ಮುಕ್ರಿ ಸಮುದಾಯವು ಅರಣ್ಯ ಕಾಯ್ದೆಯ ಕಾರಣಕ್ಕಾಗಿ ಅರಣ್ಯದಿಂದ ಹೊರಬರುವಂತಾಗಿದೆ.

* ಅರಣ್ಯ ಉತ್ಪಾದನೆಗಳನ್ನು ನಂಬಿಯೇ ಜೀವನ ಸಾಗಿಸುತ್ತಿದ್ದ ಮುಕ್ರಿಯರು ಕೂಲಿ ಕಾರ್ಮಿಕರಾಗಿ ಜೀವನ ಸಾಗಿಸುತ್ತಿದ್ದಾರೆ.

* ಉತ್ತರ ಕನ್ನಡದ ಮೂಲಿಗ ಸಮುದಾಯಗಳಲ್ಲಿ ಮುಕ್ರಿ ಸಮುದಾಯವೂ ಒಂದು. ತಮ್ಮ ಮೂಲ ಕುಮ್ರಿ ಬೇಸಾಯದಿಂದ ಇವರು ದೂರ ಉಳಿದಿದ್ದಾರೆ.

* ಮುಕ್ರಿಯರು ತಮ್ಮ ಮೂಲ ಕಸುಬಿನಿಂದ ವಿಮುಖರಾಗಿದ್ದಾರೆ. ಇವರ ಒಡೆತನದಲ್ಲಿ ಕೃಷಿ ಭೂಮಿಗಳಿಲ್ಲದಿರುವುದು ಕಂಡುಬರುತ್ತದೆ.

* ಕೃಷಿಕರಲ್ಲದಿದ್ದರೂ ಕೃಷಿಕೂಲಿ ಕಾರ್ಮಿಕರಾಗಿ ಇವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

* ಕೃಷಿ ಕೂಲಿಗಳಾಗಿ ಭೂಒಡೆಯರಲ್ಲಿ ಕೂಲಿ ಮಾಡುವ ಮುಕ್ರಿಯರು ಹೊಸ ರೀತಿಯ ಜೀತಗಾರಿಕೆಗೆ ತಳ್ಳಲ್ಪಟ್ಟಿದ್ದಾರೆ.

* ಮುಕ್ರಿಯರು ಆರ್ಥಿಕವಾಗಿ ತುಂಬಾ ದುರ್ಬಲರಾಗಿದ್ದಾರೆ.

* ಕಡುಬಡವರಿಗೆಂದೇ ಸರ್ಕಾರವು ಅನ್ನಭಾಗ್ಯ, ಉದ್ಯೋಗ ಖಾತ್ರಿ ಇತ್ಯಾದಿ ಯೋಜನೆ ಗಳನ್ನು ಜಾರಿಗೆ ತಂದಿದೆ. ಅದರೊಂದಿಗೆ ಆಧಾರ ಸಂಖ್ಯೆಯೊಂದಿಗೆ ಅನ್ನಭಾಗ್ಯ ಯೋಜನೆಯ ಕಾರ್ಡಿಗೆ ಹೊಂದಾಣಿಕೆ ಮಾಡಿಸಬೇಕೆಂಬ ಕಾನೂನಿದೆ. ಆದರೆ ಆಧಾರ ಸಂಖ್ಯೆಯನ್ನು ಲಿಂಕ್ ಮಾಡಿಸದೇ ಎಷ್ಟೋ ಮುಕ್ರಿಯರ ಪಡಿತರ ಚೀಟಿಗಳು ರದ್ದಾಗಿವೆ. ಅಷ್ಟೇ ಅಲ್ಲದೆ ಪ್ರತಿ ತಿಂಗಳೂ ಅನ್ನಭಾಗ್ಯ ಯೋಜನೆಯಲ್ಲಿ ಧಾನ್ಯಗಳನ್ನು ಕಡ್ಡಾಯವಾಗಿ ಪಡೆಯಲೇಬೇಕು. ಅಕಸ್ಮಾತ್ ಒಂದು ತಿಂಗಳು ಪಡಿತರ ಧಾನ್ಯಗಳನ್ನು ಪಡೆಯದೇ

ಹೋದರೂ ಪಡಿತರ ಚೀಟಿ ರದ್ದಾಗುತ್ತದೆಂದು ಹೇಳಲಾಗುತ್ತದೆ. ಭೂಮಿ ಇರದೆ ದುಡಿಮೆಯನ್ನು ಹುಡುಕಿಕೊಂಡು ಪಕ್ಕದ ಗೋವಾ ಮುಂತಾದ ರಾಜ್ಯಗಳಿಗೆ ಹೋಗುವ ಮುಕ್ರಿಗಳು ಆ ಕಾರಣಕ್ಕಾಗಿಯು ಪಡಿತರ ಚೀಟಿಯನ್ನು ಕಳೆದುಕೊಂಡ ಉದಾಹರಣೆಗಳಿವೆ.

* ಶೈಕ್ಷಣಿಕವಾಗಿ ಕರ್ನಾಟಕದಲ್ಲಿ ಮುಂಚೂಣಿಯಲ್ಲಿರುವ ಜಿಲ್ಲೆಗಳಲ್ಲಿ ಉತ್ತರ ಕನ್ನಡ ಜಿಲ್ಲೆಯೂ ಒಂದು. ಆದರೆ ಮುಕ್ರಿ ಸಮುದಾಯವು ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿದೆ.
* ಪರಿಶಿಷ್ಟ ಜಾತಿಗೆ ಸೇರಿದ ಮುಕ್ರಿಯರು ಚುನಾವಣಾ ಮೀಸಲಾತಿಯ ಕಾರಣಕ್ಕಾಗಿ ಬೆರಳೆಣಿಕೆಯಷ್ಟು ಜನ ತಾಲೂಕು ಪಂಚಾಯತಿ, ಗ್ರಾಮಪಂಚಾಯತಿ ಪ್ರತಿನಿಧಿ ಗಳಾಗಿದ್ದಾರೆ. ಆದರೆ ಈ ಸಮುದಾಯಕ್ಕೆ ಸೇರಿದ ಚುನಾವಣಾ ಪ್ರತಿನಿಧಿಗಳ ಚುನಾವಣೆಯಿಂದ ಹಿಡಿದು ಅವರ ಆಡಳಿತ ನಿರ್ವಹಣೆಯವರೆಗಿನ ಪ್ರತಿಯೊಂದು ವಿಷಯಗಳನ್ನು ಪ್ರಬಲ ಜಾತಿಗಳು ಮತ್ತು ಬಂಡವಾಳಶಾಹಿಗಳೇ ನಿಯಂತ್ರಿಸುತ್ತಾರೆ.
* ತಳಸಮುದಾಯವಾದ ಮುಕ್ರಿ ಸಮುದಾಯವು ಮೇಲ್ವರ್ಗಗಳನ್ನು ಎದುರುಹಾಕಿಕೊಂಡು ಸ್ವಂತ ನಿರ್ಧಾರ, ಸ್ವಹಿತ ಕಾಪಾಡಿಕೊಳ್ಳುವಲ್ಲಿ ಆತಂಕ ಪಡುವ ಸ್ಥಿತಿ ಏರ್ಪಟ್ಟಿದೆ ಮತ್ತು ಬಹುತೇಕ ಆ ವಿಷಯದಲ್ಲಿ ಸಮುದಾಯ ಸೋತಿದೆ.
* ಮುಕ್ರಿಯರು ಸ್ವ ಇಚ್ಛೆಗಿಂತಲೂ ಒತ್ತಾಯಪೂರ್ವಕವಾಗಿ ರಾಜಕೀಯ ಪ್ರವೇಶವನ್ನು ಮಾಡುತ್ತಿರುವುದು ಕಂಡುಬರುತ್ತದೆ.

ಪ್ರಸ್ತುತ ಜಾತಿ ವ್ಯವಸ್ಥೆ, ಬಂಡವಾಳಶಾಹಿ ವ್ಯವಸ್ಥೆ ಮತ್ತು ಅಧಿಕಾರಶಾಹಿ ವ್ಯವಸ್ಥೆಯೂ ಸೇರಿ ಸರ್ಕಾರ ಮತ್ತು ಸಮಾಜವನ್ನು ನಿಯಂತ್ರಿಸುತ್ತಿವೆ. ಇಂತಹ ಸ್ಥಾಪಿತ ಪ್ರಭುತ್ವಗಳಡಿಯಲ್ಲಿ ಸಿಲುಕಿದ ಪರಿಶಿಷ್ಟ ಜಾತಿ, ಸಮುದಾಯಗಳ ಅಸ್ತಿತ್ವಕ್ಕೆ ಪೆಟ್ಟಾಗುತ್ತಿದೆ. ಜಾತಿ ವ್ಯವಸ್ಥೆಯ ಕಬಂಧಬಾಹುಗಳು ತಳಸಮುದಾಯಗಳನ್ನು ಹೇಗೆ ಹಿಡಿತದಲ್ಲಿ ಇರಿಸಿಕೊಂಡಿದೆ ಎಂಬುದು ಸಹ ಈ ಅಧ್ಯಯನದ ಮೂಲಕ ಅರಿಯಬಹುದಾಗಿದೆ.

ಅಧ್ಯಯನದ ಮುಂದಿನ ಸಾಧ್ಯತೆಗಳು

* ಅಧ್ಯಯನದ ಮಿತಿ ಹಾಗೂ ಕಾಲಾವಧಿಯ ಮಿತಿಯಿಂದಾಗಿ ಉತ್ತರಕನ್ನಡದ ತಳ ಸಮುದಾಯಗಳ ಮಧ್ಯದ ಅಂತರಗಳ ಕುರಿತು ಅಮೂಲಾಗ್ರವಾಗಿ ನೋಡಲು ಸಾಧ್ಯವಾಗಿಲ್ಲ. ಕೇವಲ ಮುಕ್ರಿ ಸಮುದಾಯದ ಸಾಮಾಜಿಕ ಸಂಕಥನವನ್ನಷ್ಟೇ ದೃಷ್ಟಿಯಲ್ಲಿರಿಸಿಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ. ಅದಕ್ಕೆ ಪೂರಕವಾದ ಶಿಕ್ಷಣ, ಆರ್ಥಿಕ, ರಾಜಕೀಯ ಸಂಗತಿಗಳನ್ನು ಪೂರಕವಾಗಿ ನೋಡಲಾಗಿದೆ. ಹೀಗಾಗಿ ಈ ಅಧ್ಯಯನವು ಅಷ್ಟಕ್ಕೆ

ಮಾತ್ರ ಸೀಮಿತವಾಗಿಸಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಮುಕ್ರಿಯರೊಂದಿಗೆ ಇತರ ತಳಸಮುದಾಯಗಳ ಕುರಿತು ಅಮೂಲಾಗ್ರವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗುವುದು.

* ಪರಿಶಿಷ್ಟ ಜಾತಿಯ ಮುಕ್ರಿಯರ ಕುರಿತು ಸಾಮಾಜಿಕ ಮತ್ತು ಅದಕ್ಕೆ ಪೂರಕವಾದ ಹಿನ್ನೆಲೆಗಳನ್ನು ಮಾತ್ರ ಅಧ್ಯಯನ ಮಾಡಲು ಸಾಧ್ಯವಾಗಿದೆ. ಮುಕ್ರಿ ಸಮುದಾಯದ ಆರ್ಥಿಕ, ಮನಶಾಸ್ತ್ರೀಯ, ಶೈಕ್ಷಣಿಕ, ರಾಜಕೀಯ ಹಿನ್ನೆಲೆಯಲ್ಲಿ ಆಳವಾಗಿ ಅಧ್ಯಯನ ಮಾಡಬಹುದಾಗಿದೆ.

* ಸಾಮಾಜಿಕವಾಗಿ ಜಾತಿ ಶ್ರೇಣೀಕರಣದಲ್ಲಿ ಮುಕ್ರಿಯರು ಪೂರ್ಣ ತಳಮಟ್ಟದಲ್ಲಿದ್ದಾರೆ. ಇವರನ್ನು ಸಾಮಾಜಿಕವಾಗಿ ಮೇಲೊಯ್ಯಲು ಯಾವ ಬದಲಾವಣೆಗಳಿಂದ ಸಾಧ್ಯವೆಂಬುದನ್ನು ಕಂಡುಕೊಳ್ಳಬೇಕಾಗಿದೆ.

* ರಾಜಕೀಯ ಸಹಭಾಗಿತ್ವದಲ್ಲಿ ಮುಕ್ರಿಯರ ಸ್ಥಿತಿ ಕೇವಲ ಗಾಣದೆತ್ತಿನ ಸ್ಥಿತಿಯಾಗಿದೆ. ಅವರನ್ನು ಈ ಹಿನ್ನೆಲೆಯಲ್ಲಿ ಹಾಗೂ ರಾಜಕೀಯ ಸಹಭಾಗಿತ್ವದ ಅಂತರ್ ಸಂಬಂಧಗಳು ಕುರಿತು ಅಧ್ಯಯನ ಮಾಡಬಹುದಾಗಿದೆ.

* ಪ್ರಸ್ತುತ ಅಧ್ಯಯನ ವ್ಯಾಪ್ತಿಯು ಉತ್ತರಕನ್ನಡ ಜಿಲ್ಲೆಯ ಕುಮಟಾ ಹಾಗೂ ಹೊನ್ನಾವರ ತಾಲೂಕುಗಳಿಗೆ ಸೀಮಿತಗೊಂಡಿದೆ. ಇಲ್ಲಿಯ ಮುಕ್ರಿ ಸಮುದಾಯದ ಕುಟುಂಬಗಳ ಸ್ಥಿತಿಗತಿಗೂ ಇನ್ನುಳಿದ ತಾಲೂಕುಗಳಲ್ಲಿ ನೆಲೆಸಿರುವ ಮುಕ್ರಿಯರ ಸ್ಥಿತಿಗತಿಗಳ ಕುರಿತು ತೌಲನಿಕವಾಗಿ ಅಧ್ಯಯನ ಮಾಡಬಹುದಾಗಿದೆ.

ಒಟ್ಟಾರೆಯಾಗಿ ಉತ್ತರ ಕನ್ನಡ ಜಿಲ್ಲೆಯ ಮುಕ್ರಿ ಸಮುದಾಯದ ಸಾಮಾಜಿಕ ಸಂಕಥನದ ಕುರಿತು ಅಧ್ಯಯನ ಮಾಡಲಾಗಿ ಕಂಡುಬಂದ ಫಲಿತಗಳು ಮತ್ತು ಮುಂದೆ ಅಧ್ಯಯನ ನಡೆಸಲು ಇರಬಹುದಾದ ಸಾಧ್ಯತೆಗಳ ಕುರಿತು ಇಲ್ಲಿ ವಿವರಿಸಲಾಗಿದೆ. ಅಧ್ಯಯನ ಮಿತಿ ಹಾಗೂ ಕಾಲಮಿತಿಗಳಿಂದಾಗಿ ಪ್ರಸ್ತುತ ಅಧ್ಯಯನವನ್ನು ಉತ್ತರಕನ್ನಡ ಜಿಲ್ಲೆಯ ಎರಡು ತಾಲೂಕುಗಳಿಗೆ ಮಾತ್ರ ಸೀಮಿತಗೊಳಿಸಲಾಯಿತು ಮತ್ತು ಆ ತಾಲೂಕುಗಳಲ್ಲಿ ಪ್ರತಿಯೊಂದು ತಾಲೂಕಿಗೆ ಎಂಟು ಗ್ರಾಮಗಳನ್ನು ಮಾತ್ರ ಗಮನಿಸಲು ಸಾಧ್ಯವಾಯಿತು. ಈ ಅಧ್ಯಯನವು ಮುಕ್ರಿ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಗಳನ್ನು ಅರಿಯುವ ಒಂದು ಪ್ರಯತ್ನವಾಗಿದೆ. ಈ ಅಧ್ಯಯನವು ಮುಂದೆ ಮುಕ್ರಿ ಸಮುದಾಯದ ಕುರಿತು ಅಧ್ಯಯನ ಮಾಡುವವರಿಗೆ ಒಂದು ಕೈದೀವಿಗೆಯಾದೀತೆಂದು ಭಾವಿಸಲಾಗಿದೆ.

ಅನುಬಂಧಗಳು

೧. ತಿಳುವಳಿಕೆದಾರರ ವಿವರ

೨. ಕ್ಷೇತ್ರಾಧ್ಯಯನ ಅಂಕಿ ಅಂಶಗಳು

೩. ಪರಾಮರ್ಶನ ಗ್ರಂಥಗಳು

೪. ನಕ್ಷೆಗಳು

೫. ಛಾಯಾಚಿತ್ರಗಳು

ಅನುಬಂಧ ೧

ತಿಳುವಳಿಕೆದಾರರ ವಿವರ

ಕ್ರ.ಸಂ.	ತಿಳುವಳಿಕೆದಾರರ ಹೆಸರುಗಳು	ವಯಸ್ಸು	ವೃತ್ತಿ	ಊರು
ಹೊನ್ನಾವರ ತಾಲೂಕು				
೧.	ಬಿಳಿಯ ಸುಬ್ಬರಾಯ ಮುಕ್ರಿ	೫೦	ಕೂಲಿ	ಮುಗ್ವಾ
೨.	ಸುನೀತಾ ಗೊವಿಂದ ಮುಕ್ರಿ	೪೫	ಕೂಲಿ	ಮುಗ್ವಾ
೩.	ಪ್ರೀತಿ ಗೋವಿಂದ ಮುಕ್ರಿ	೨೩	ಬಿ.ಎಡ್. ವಿದ್ಯಾರ್ಥಿ	ಮುಗ್ವಾ
೪.	ಪೂರ್ಣಿಮಾ ಗೋವಿಂದ ಮುಕ್ರಿ	೨೦	ಬಿ.ಕಾಂ. ವಿದ್ಯಾರ್ಥಿ	ಮುಗ್ವಾ
೫.	ಹಣಮಂತ ಮಾರು ಮುಕ್ರಿ	೨೬	ಕೂಲಿ	ಮುಗ್ವಾ
೬.	ಈಶ್ವರ ಮುಕ್ರಿ ಮಠದಕೇರಿ		ಗುಮಾಸ್ತ	ಮಠದಕೇರಿ
೭	ಸೋಮಯ್ಯ ಜೆಚ್ಚ ಮುಕ್ರಿ	೪೫	ಸಮಾಜ ಸೇವೆ	ಹಳದಿಪುರ
೮.	ನಾರಯಣ ಕುಪ್ಪು ಮುಕ್ರಿ	೩೫	ಕೂಲಿ	ಹಳದಿಪುರ
೯.	ನಾರಾಯಣ ಸುಬ್ಬರಾಯ ಮುಕ್ರಿ	೪೦	ಕೂಲಿ	ಸಂತೆಗುಳಿ
೧೦.	ಗೋವಿಂದು ಆರ್. ಮುಕ್ರಿ	೪೧	ಕೂಲಿ	ಸಂತೆಗುಳಿ
೧೧.	ಕಣಿಯಾ ಮುಕ್ರಿ	೬೦	ಕೂಲಿ	ಬಾಸಕೇರಿ
೧೨.	ಸರಸ್ವತಿ ಕಣಿಯಾ ಮುಕ್ರಿ	೧೮	ಕೂಲಿ	ಬಾಸಕೇರಿ
೧೩.	ನಾಗು ಮಾಸ್ತಿ ಮುಕ್ರಿ	೫೬	ಕೃಷಿ ಕೂಲಿ	ಬಾಸಕೇರಿ
೧೪.	ಗಣಪತಿ ದೇವು ಮುಕ್ರಿ	೨೮	ಗ್ಯಾರೇಜ್ ಕೆಲಸ	ಬಾಸಕೇರಿ
೧೫.	ನಾಗೇಶ್ ಮುಕ್ರಿ	೫೬	ಸಮಾಜ ಸೇವೆ	ಹಬ್ಬುಗದ್ದೆ
೧೬.	ತಿಮ್ಮಪ್ಪ ನಾರಯಣ ಮುಕ್ರಿ	೪೭	ಕೂಲಿ	ನವಿಲು ಗೋಣು
೧೭.	ಮಂಜುನಾಥ ಕೆ. ಮುಕ್ರಿ	೩೫	ಸಮಾಜ ಸೇವೆ	ಮೊಗೆಚಿಟ್ಟಿ
೧೮.	ಪಾರ್ವತಿ ಸೋಮಯ್ಯ ಮುಕ್ರಿ	೩೫	ಸಮಾಜ ಸೇವೆ	ಮೊಗೆಚಿಟ್ಟಿ ಹಳದಿಪುರ
೧೯.	ನಾರಾಯಣ ನಾಗು ಮುಕ್ರಿ	೪೯	ಗಾರ್ಡ್	ಕರ್ಕಿ
೨೦.	ಮಂಜು ನಾಗು ಮುಕ್ರಿ	೪೩	ಪಿ.ಎಲ್.ಡಿ.ಬ್ಯಾಂಕ್ ಪಿವನ್	ಕರ್ಕಿ
೨೧.	ನಾರಾಯಣ ಹೊಸ್ಮನೆ	೫೨	ಅಟೆಂಡರ್	ಹೊನ್ನಾವರ

ಕ್ರಸಂ.	ತಿಳುವಳಿಕೆದಾರರ ಹೆಸರುಗಳು	ವಯಸ್ಸು	ವೃತ್ತಿ	ಊರು
೨೨.	ಶಿವಾ ಅಮಾಸೆ ಮುಕ್ರಿ	೫೮	ಕೂಲಿ	ರಾಮೇಶ್ವರ ಕಂಬಿ, ಕರ್ಕಿ
೨೩.	ಮಂಜುನಾಥ ಮುಕ್ರಿ	೨೭	ಕೂಲಿ	ರಾಮೇಶ್ವರ ಕಂಬಿ, ಕರ್ಕಿ
೨೪.	ನಾಗಿ ಬಳಿಯ ಮುಕ್ರಿ	೭೦	ವೃದ್ದೆ	ರಾಮೇಶ್ವರ ಕಂಬಿ, ಕರ್ಕಿ
೨೫.	ನಾರಯಣ ಎನ್. ಮುಕ್ರಿ	೩೮	ಕೂಲಿ	ಕಮ್‌ಕುಡಿ(ಕರ್ಕಿ)
೨೬.	ಕಣಿಯಾ ನಾರಾಯಣ ಮುಕ್ರಿ	೪೦	ಕೂಲಿ	ಕಮ್‌ಕುಡಿ(ಕರ್ಕಿ)
೨೭.	ಮಂಜುನಾಥ ಎಚ್ ಮುಕ್ರಿ	೨೮	ಕೂಲಿ	ಕಮ್‌ಕುಡಿ(ಕರ್ಕಿ)
೨೮.	ತಿಮ್ಮ ಜಿ. ಮುಕ್ರಿ	೫೦	ಕೂಲಿ	ನಡಚಿಟ್ಟೆ(ಕರ್ಕಿ)
೨೯.	ಗೋವಿಂದು ಮಾಸ್ತಿ ಮುಕ್ರಿ	೩೮	ಕೂಲಿ	ಬಡ್ನಿಕೇರಿ ಹಳದಿಪುರ
೩೦.	ನವೀನ ಎಸ್. ಕಡತೋಕ	೨೭	ಸಣ್ಣ ವ್ಯಾಪಾರ	ಕಡತೋಕ
೩೧.	ಗಣಪತಿ ಮುಕ್ರಿ	೫೮	ಗ್ಯಾರೆಜ್	ಕಡತೋಕ
೩೨.	ಜೆಟ್ಟಿ ನಾಗು ಮುಕ್ರಿ	೩೬	ಕೂಲಿ	ಕಡತೋಕ
೩೩.	ನಾರಾಯಣ ಎಸ್ ಕಡತೋಕ	೨೯	ಕೂಲಿ	ಕಡತೋಕ
೩೪.	ವೆಂಕಟೇಶ ಜಿ. ಮುಕ್ರಿ	೩೯	ಅಟೆಂಡರ್	ಕಡತೋಕ
೩೫.	ಗಣಪು ದೇವು ಮುಕ್ರಿ	೪೮	ಕೂಲಿ	ಬೆಲೆಗದ್ದೆ(ಕರ್ಕಿ)
೩೬.	ಗಣಪತಿ ಜಿ ಮುಕ್ರಿ (ಕ್ರಿಶ್ಚಿಯನ್‌ಗೆ ಮತಾಂತರ)	೨೫	ಕೂಲಿ	ಮಠದಕೇರಿ
೩೭.	ಬೀರಪ್ಪ ಕುಪ್ಪು ಮುಕ್ರಿ	೪೫	ಸಮಾಜ ಸೇವೆ	ನವಿಲು ಗೋಣ
೩೮.	ಈಶ್ವರ ಮುಕ್ರಿ	೪೮	ಕೃಷಿ ಕೂಲಿ	ಹಬ್ಬುಗದ್ದೆ
೩೯.	ಗಣಪತಿ ರಾಮಾ ಮುಕ್ರಿ	೪೫	ಕೃಷಿ ಕೂಲಿ	ಹೆಬ್ಬಾನಕೇರೆ
೪೦.	ಎಮ್.ಆರ್. ಮುಕ್ರಿ	೪೧	ಶಿಕ್ಷಕರು	ತೊಪ್ಪಲ್‌ಕೇರಿ

ಕ್ರಸಂ.	ತಿಳುವಳಿಕೆದಾರರ ಹೆಸರುಗಳು	ವಯಸ್ಸು	ವೃತ್ತಿ	ಊರು
ಕುಮಟಾ ತಾಲೂಕು				
೧.	ಹೇಮಂತ ಕುಮಾರ ಹಳಕಾರ	೫೦	ಸಮಾಜ ಸೇವೆ	ಕುಮಾಟಾ
೨.	ಎನ್. ಎನ್. ಹಳಕಾರ	೭೫	ವೃದ್ಧರು	ಕುಮಾಟಾ
೩.	ವಿನಾಯಕ ಹಣಮಂತ ಮುಕ್ರಿ	೩೨	ಕೂಲಿ	ಕೈಗಾರಿಕಾ ವಲಯ, ಕುಮಾಟಾ ನಗರ
೪.	ಮಹೇಶ ಎನ್. ಮುಕ್ರಿ	೨೯	ಕೂಲಿ	ಕೈಗಾರಿಕಾ ವಲಯ, ಕುಮಾಟಾ ನಗರ
೫.	ಮಂಜು ಮುಕ್ರಿ	೨೭	ಕೂಲಿ	ಗಾಂಧಿ ನಗರ, ಕುಮಾಟಾ
೬.	ರವಿ ಮುಕ್ರಿ	೨೫	ಕೂಲಿ	ಗಾಂಧಿ ನಗರ, ಕುಮಾಟಾ
೭	ಶಿವು ಕುಜಹಳ್ಳಿ	೪೩	ಅಟೋ ಡ್ರೈವರ್	ಕುಜಹಳ್ಳಿ
೮.	ಪರಮೇಶ್ವರ ಬೀರ ಮುಕ್ರಿ	೫೬	ಗೌಂಡಿ	ಉಪ್ಪಿನ ಪಟ್ಟಣ
೯.	ಮಹಾಬಲೇಶ್ವರ ಕೃಷ್ಣಾ ಮುಕ್ರಿ	೪೯	ಕೂಲಿ	ಉಪ್ಪಿನ ಪಟ್ಟಣ
೧೦.	ರಾಮಾ ಎನ್ ಮುಕ್ರಿ	೬೦	ನೋಟ ನೋಡುವುದು	ಹಳಕಾರ
೧೧.	ನಾರಾಯಣ ಶಿವು ಮುಕ್ರಿ	೭೨	ವೃದ್ದೆ	ಕತಗಾಲ
೧೨.	ಶಿವಶಂಕರ ನಾರಾಯಣ ಮುಕ್ರಿ	೩೭	ಅಟೋ ಡ್ರೈವರ್	ಕತಗಾಲ
೧೩.	ನಾರಾಯಣ ಎನ್ ಅಡಗೂಳಿ	೬೭	ನಿವೃತ ಅಧಿಕಾರಿ ಅರಣ್ಯ ಇಲಾಖೆ	ಹೆಗೆಡೆ (ತಾಡಕೊಪ್ಪ)
೧೪.	ಶಶಿಧರ ನಾರಾಯಣ ಅಡಗೂಳಿ	೩೩	ನಿರುದ್ಯೋಗಿ	ಹೆಗೆಡೆ
೧೫.	ಮಾರುತಿ ಮುಕ್ರಿ	೫೫	ಕೂಲಿ	ಹೆಗೆಡೆ
೧೬.	ರಾಜೇಶ್ ಮುಕ್ರಿ	೪೫	ಕೃಷಿಕೂಲಿ	ಹೆಗೆಡೆ
೧೭.	ಮಂಜುನಾಥ ನಾಗು ಮುಕ್ರಿ	೪೦	ಸಮಾಜ ಸೇವೆ	ಹೆಗಡೆ
೧೮.	ಮಹಾದೇವ ಪುಟ್ಟು ಮುಕ್ರಿ	೩೮	ಕೂಲಿ	ಚಿಟ್ಟಿಕಂಬಿ(ಹೆಗಡೆ)
೧೯.	ಲಕ್ಷ್ಮಿಕಾಂತ ಮಾಲು ಮುಕ್ರಿ	೩೫	ಕೂಲಿ	ಚಿಟ್ಟಿಕಂಬಿ(ಹೆಗಡೆ)
೨೦.	ಈಶ್ವರ ನಾಗು ಮುಕ್ರಿ	೪೫	ಸಮಾಜ ಸೇವೆ	ಹಳಗೇರಿ(ಹೆಗಡೆ)

ಕ್ರಸಂ.	ತಿಳುವಳಿಕೆದಾರರ ಹೆಸರುಗಳು	ವಯಸ್ಸು	ವೃತ್ತಿ	ಊರು
೨೧.	ರಾಮಾ ಮಾಸ್ತಿ ಮುಕ್ರಿ	೪೨	ಕೂಲಿ	ಹಳಗೇರಿ(ಹೆಗಡೆ)
೨೨.	ರಾಮಾ ಪರಮೇಶ್ವರ ಮುಕ್ರಿ	೪೫	ಪೂಜಾರಿ (ಕೂಲಿ)	ಹಳಗೇರಿ(ಹೆಗಡೆ)
೨೩.	ಕೆ.ಎಮ್. ಮುಕ್ರಿ	೫೫	ಶಿಕ್ಷಕರು	ಹಳಗೇರಿ(ಹೆಗಡೆ)
೨೪.	ಜಟ್ಟಿ ದೇವು ಮುಕ್ರಿ	೫೫	ಕೃಷಿ ಕೂಲಿ	ಹಳಗೇರಿ(ಹೆಗಡೆ)
೨೫.	ಜೆಟ್ಟಿ ಮಾಸ್ತಿ ಮುಕ್ರಿ	೫೦	ಕೂಲಿ	ದೇವಗಿರಿ ದಾರೇಶ್ವರ
೨೬.	ತಿಮ್ಮಪ್ಪ ನಾಗು ಮುಕ್ರಿ	೩೮	ಕೂಲಿ	ನಾಗತಿರ್ಥ ದಾರೇಶ್ವರ
೨೭.	ಪರಮೇಶ್ವರ ಶಿವು ಮುಕ್ರಿ	೪೦	ಕೂಲಿ	ಚಂದಾವರ
೨೮.	ಪರಮೇಶ್ವರ ಮುಕ್ರಿ	೪೯	ಗುಮಾಸ್ತ, ಶಿಕ್ಷಣ ಇಲಾಖೆ	ವಾಲಗಳ್ಳಿ
೨೯.	ಈಶ್ವರ ವಾಲಗಳ್ಳಿ	೪೮	ಸಮಾಜ ಸೇವೆ	ವಾಲಗಳ್ಳಿ
೩೦.	ಸುಬ್ಬರಾಯ ಮುಕ್ರಿ ವೆಂಕ್ಟಿಮನೆ	೬೦	ಕೂಲಿ	ಹಡಿನಗದ್ದೆ (ಅಳಕೋಡು)
೩೧.	ಲೀಲಾವತಿ ಚಂದ್ರಕಾಂತ ವೆಂಕ್ಟಿಮನೆ	೩೩	ಗ್ರಾ.ಪಂ. ಸದಸ್ಯರು	ಹಡಿನಗದ್ದೆ (ಅಳಕೋಡು)
೩೨.	ಎನ್.ಆರ್. ಮುಕ್ರಿ	೬೩	ನಿವೃತ್ತ ಪೋಲೀಸ್ ಅಧಿಕಾರಿ	ಹಂದಿಗೋಣ
೩೩.	ಮಂಜುಳಾ ಎನ್ ಮುಕ್ರಿ	೪೨	ಬ್ಯೂಟಿಪಾರ್ಲರ್ ಅಂಗಡಿ	ಹಂದಿಗೋಣ
೩೪.	ನಾಗು ಗಣಪು ಮುಕ್ರಿ (ಎನ್.ಜಿ. ಮುಕ್ರಿ)	೬೧	ನಿವೃತ್ತ ಪೋಲೀಸ್ ಅಧಿಕಾರಿ	ಕಡಿಮನೆಕೆರೆ ಹಂದಿಗೋಣ
೩೫.	ನಾರಾಯಣ ಕಣೆಯಾ ಮುಕ್ರಿ(ಅಯ್ಯಪ್ಪನ್)	೫೭	ಕೂಲಿ	ಹೊಸಹಿತ್ತಲು ವಾಲಗಳ್ಳಿ
೩೬.	ಮಾಳು ಕರಿಯಾ ಮುಕ್ರಿ	೬೦	ಕೂಲಿ	ಕುಜಳ್ಳಿ
೩೭.	ಮಂಜುನಾಥ ನಾಗು ಮುಕ್ತಿ	೪೨	ಕಾರ್‌ಪೆಂಟರ್ ಕೆಲಸ	ಮಿರ್ಜಾನ್
೩೮.	ಮಾಸ್ತಿ ನಾಗು ಮುಕ್ರಿ	೬೩	ಕೂಲಿ	ಮಿರ್ಜಾನ
೩೯.	ನಾಗಮ್ಮ ಮುಕ್ರಿ	೩೧	ಕೂಲಿ	ಮಿರ್ಜಾನ
೪೦.	ಕಾಮಾಷಿ ಮಂಜು ಮುಕ್ರಿ	೩೧	ಗೃಹಿಣಿ	ಮಿರ್ಜಾನ
೪೧.	ರಾಮಚಂದ್ರ ಎಮ್. ಮುಕ್ರಿ	೨೬	ಅತಿಥಿ ಶಿಕ್ಷಕರು	ಹೆಬ್ಬಳಗದ್ದೆ (ಸಿದ್ದಾಪುರ)

ಕ್ರಸಂ.	ತಿಳುವಳಿಕೆದಾರರ ಹೆಸರುಗಳು	ವಯಸ್ಸು	ವೃತ್ತಿ	ಊರು
೪೨.	ವಿನಾಯಕ ಎನ್. ಮುಕ್ರಿ	೨೮	ಸಮಾಜ ಸಂಘಲನೆ	ಶಿರಸಿ
೪೩.	ವಿಜಯ ಗುನಗಾ	೩೫	ಶಿಕ್ಷಕರು	ದೊಡ್ಡಬಳಸ, ಭಟ್ಕಳ
೪೪.	ಗೌರಿ ನಾರಾಯಣ ಮುಕ್ರಿ	೬೫	ವೃದ್ದೆ	ಬೊರೊಳ್ಳಿ ಅಚಿವೆ
೪೫.	ಮಾರುತಿ ಮಾಸ್ತಿ ಮುಕ್ರಿ	೨೪	ಎಂ.ಎ. ವಿದ್ಯಾರ್ಥಿ	ಬರಗದ್ದೆ ನಿಲಕೋಡ
೪೬.	ಶಂಕರ ಎನ್. ಹಳಕಾರ	೫೦	ವಕೀಲ	ಶಿರಸಿ
೪೭.	ಎಸ್.ಎನ್. ಮುಕ್ರಿ	೪೬	ಎಲ್.ಐ.ಸಿ. ಅಭಿವೃದ್ಧಿ ಅಧಿಕಾರಿ	ಹಾನಗಲ್

ಅಂಕಿ ಅಂಶಗಳು: 1. ಸಮೀಕ್ಷೆಗೊಳಪಟ್ಟ ಕಾರವಾರ (ಉತ್ತರ ಕನ್ನಡ) ಜಿಲ್ಲೆಯ ಕುಮುಟಾ ಮತ್ತು ಹೊನ್ನಾವರ ತಾಲೂಕಿನ ಪಂಚಾಯತ್‌ವಾರು, ಕುಟುಂಬವಾರು ಲಿಂಗವಾರು ಜನಸಂಖ್ಯೆ ಪ್ರಮಾಣ

ಕ್ರಸಂ.	ಜಿಲ್ಲೆಗಳು	ತಾಲೂಕುಗಳು	ಪಂಚಾಯತ್	ಕುಟುಂಬಗಳು	ಜನಸಂಖ್ಯೆ		
					ಗಂಡು	ಹೆಣ್ಣು	ಒಟ್ಟು
೧	ಕಾರವಾರ (ಉ.ಕ)	ಕುಮುಟಾ	ಪುರಸಭೆ	೬೭	೧೨೬	೧೪೬	೨೭೨
			ಕಲಬಾಗ	೭	೧೮	೧೮	೩೬
			ಕೂಜಳ್ಳಿ	೨೫	೫೬	೬೫	೧೨೧
			ಗೋಕರ್ಣ	೭೪	೧೫೪	೧೬೭	೩೨೧
			ದಿವಗಿ	೧೯	೩೮	೩೮	೭೬
			ಮಿರ್ಜಾನ	೨೩	೪೮	೪೧	೮೯
			ವಾಲಗಳ್ಳಿ	೧೮	೪೬	೩೯	೮೫
			ಹೆಗಡೆ	೨೦೯	೪೪೯	೪೬೭	೯೧೬
		ಕುಮುಟಾ ತಾಲೂಕಿನ ಒಟ್ಟಾರೆ		**೪೪೨**	**೯೩೫**	**೯೮೧**	**೧೯೧೬**
೨	ಕಾರವಾರ (ಉ.ಕ)	ಹೊನ್ನಾವರ	ಕರ್ಕಿ	೧೨೧	೨೬೫	೨೯೧	೫೫೬
			ಕಡತೋಕ	೧೪೧	೩೨೬	೩೨೯	೬೫೫
			ಚಂದಾವರ	೨೨	೪೭	೫೫	೧೦೨
			ಧರೇಶ್ವರ	೫	೭	೧೩	೨೦
			ನವಿಲುಗೋಣ	೧೪	೩೨	೩೪	೬೬
			ಮುಗ್ವಾ	೫೯	೯೭	೧೩೧	೨೨೮
			ಹಳದಿಪುರ	೧೩೦	೩೪೯	೩೨೪	೬೭೩
			ಹೊಸಕುಳಿ	೨೮	೪೩	೬೦	೧೦೩
		ಹೊನ್ನಾವರ ತಾಲೂಕಿನ ಒಟ್ಟಾರೆ		**೫೨೦**	**೧೧೬೬**	**೧೨೩೭**	**೨೪೦೩**

ಅಂಕಿ ಅಂಶಗಳು: 2. ಸಮೀಕ್ಷೆಗೊಳಪಟ್ಟ ಕಾರವಾರ (ಉತ್ತರ ಕನ್ನಡ) ಜಿಲ್ಲೆಯ ಕುಮುಟಾ ಮತ್ತು ಹೊನ್ನಾವರ ತಾಲೂಕಿನ ಪಂಚಾಯತ್‌ವಾರು, ಕುಟುಂಬವಾರು ಲಿಂಗವಾರು ವಯೋಗುಂಪು ಪ್ರಮಾಣ

ಕ್ರಸಂ.	ತಾಲೂಕುಗಳು	ಪಂಚಾಯತ್	ಕುಟುಂಬಗಳು	ವಯೋಗುಂಪು														
				0–5			6–17			18–40			41–60			61ರ ಮೇಲ್ಪಟ್ಟ ಗಂ		
				ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕುಮುಟಾ	ಪುರಸಭೆ	೬೭	೬	೪	೧೦	೯	೨೧	೩೦	೭೩	೭೫	೧೪೮	೩೪	೩೬	೭೦	೪	೧೦	೧೪
		ಕಲಬಾಗ	೭	೩	೪	೭	೨	೨	೪	೮	೬	೧೪	೫	೪	೯		೨	೨
		ಕೂಜಳ್ಳಿ	೨೫	೨	೪	೬	೬	೮	೧೪	೩೧	೩೯	೭೦	೧೬	೧೨	೨೮	೧	೨	೩
		ಗೋಕರ್ಣ	೭೪	೫	೩	೮	೨೭	೨೭	೫೪	೮೫	೯೮	೧೮೩	೩೧	೨೯	೬೦	೬	೧೦	೧೬
		ದಿವಗಿ	೧೯	೪		೪	೭	೬	೧೩	೧೭	೧೭	೩೪	೮	೧೧	೧೯	೨	೪	೬
		ಮಿರ್ಜಾನ	೨೩	೭	೪	೧೧	೨	೪	೬	೨೨	೨೦	೪೨	೧೦	೧೧	೨೧	೭	೨	೯
		ವಾಲಗಳ್ಳಿ	೧೮	೨	೨	೪	೯	೪	೧೩	೨೧	೧೮	೩೯	೧೨	೧೨	೨೦	೨	೩	೫
		ಹೆಗಡೆ	೨೦೯	೩೭	೨೬	೬೩	೭೧	೭೧	೧೪೨	೨೧೨	೨೩೫	೪೪೭	೮೭	೯೨	೧೭೯	೪೨	೪೩	೮೫
	ಕುಮುಟಾ ತಾಲೂಕಿನ ಒಟ್ಟಾರೆ		೪೪೨	೬೬	೪೭	೧೧೩	೧೩೩	೧೪೩	೨೭೬	೪೭೯	೫೦೮	೯೭೭	೨೦೩	೨೦೭	೪೦೬	೬೪	೭೬	೧೪೦
೨	ಹೊನ್ನಾವರ	ಕರ್ಕಿ	೧೨೧	೧೬	೧೫	೩೧	೪೮	೪೦	೯೦	೧೩೧	೧೪೭	೨೭೧	೪೫	೬೯	೧೧೪	೨೫	೨೫	೫೦
		ಕಡತೋಕ	೧೪೧	೩೪	೨೯	೬೩	೫೨	೪೯	೧೦೧	೧೪೭	೧೭೦	೩೧೭	೬೧	೬೨	೧೨೩	೩೧	೨೦	೫೧
		ಚಂದಾವರ	೨೨		೨	೨	೭	೭	೧೪	೨೬	೩೦	೫೬	೧೦	೧೫	೨೫	೪	೧	೫
		ಧರೇಶ್ವರ	೫				೧	೩	೪	೩	೭	೧೦	೩	೨	೫		೧	೧
		ನವಿಲುಗೋಣ	೧೪	೧	೨	೩	೫	೭	೧೨	೧೮	೨೦	೩೮	೫	೪	೯	೩	೧	೪
		ಮುಗ್ವಾ	೫೯	೬	೧೧	೧೭	೯	೧೯	೨೮	೬೦	೬೨	೧೨೨	೧೬	೩೦	೪೬	೬	೯	೧೫
		ಹಳದಿಪುರ	೧೩೦	೩೧	೩೧	೬೨	೭೪	೫೯	೧೩೩	೧೫೧	೧೪೮	೨೯೯	೬೭	೬೭	೧೩೪	೨೬	೧೯	೪೫
		ಹೊಸಕುಳಿ	೨೮	೨	೧	೩	೧೦	೧೬	೨೬	೨೦	೩೧	೫೧	೮	೭	೧೫	೩	೫	೮
	ಹೊನ್ನಾವರ ತಾಲೂಕಿನ ಒಟ್ಟಾರೆ		೫೨೦	೯೦	೯೧	೧೮೧	೨೦೬	೨೦೦	೪೦೮	೫೫೬	೬೧೦	೧೧೬೪	೨೧೫	೨೫೬	೪೭೧	೯೮	೮೧	೧೭೯

ಅಂಕಿ ಅಂಶಗಳು: 3. ಸಮೀಕ್ಷೆಗೊಳಪಟ್ಟ ಕಾರವಾರ (ಉತ್ತರ ಕನ್ನಡ) ಜಿಲ್ಲೆಯ ಕುಮುಟಾ ಮತ್ತು ಹೊನ್ನಾವರ ತಾಲೂಕಿನ ಪಂಚಾಯತ್‌ವಾರು, ಲಿಂಗವಾರು ಶೈಕ್ಷಣಿಕ ಮಟ್ಟ

ಕ್ರಸಂ.	ತಾಲೂಕು ಗಳು	ಪಂಚಾಯತ್	ಶೈಕ್ಷಣಿಕ ಮಟ್ಟ																							
			ಪ್ರಾಥಮಿಕ			ಮಾಧ್ಯಮಿಕ			ಪ್ರೌಢಶಾಲೆ			ಡಿಪ್ಲೋಮಾ			ಪದವಿಪೂರ್ವ			ಪದವಿ			ಸ್ನಾತಕೋತ್ತರ			ಇತರೆ		
			ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
೧	ಕುಮುಟಾ	ಪುರಸಭೆ	೨೬	೨೫	೫೧	೧೩	೧೪	೨೭	೩೫	೩೦	೬೫	೨	೧	೩	೧೦	೧೦	೨೦	೯	೧೫	೨೪	೩		೩	೨	೩	೫
		ಕಲಬಾಗ	೪	೪	೮	೨	೧	೩	೩	೪	೭				೪	೧	೫	೧	೩	೪						
		ಕೂಜಳ್ಳಿ	೧೨	೬	೧೮	೩	೫	೮	೯	೬	೧೫	೧		೧	೫	೮	೧೩	೭	೧೨	೧೯						
		ಗೋಕರ್ಣ	೨೦	೨೦	೪೦	೩೮	೩೧	೬೯	೩೯	೩೨	೭೧				೭	೧೪	೨೧	೫	೧೦	೧೫				೧	೧	೨
		ದಿವಗಿ	೬	೨	೮	೮	೬	೧೪	೫	೬	೧೧	೧		೧	೯	೨	೧೧	೧	೧	೨						
		ಮಿರ್ಜಾನ	೧೦	೧೦	೨೦	೫	೩	೮	೮	೧೧	೧೯				೪	೩	೭	೩	೧	೪						
		ವಾಲಗಳ್ಳಿ	೧೬	೯	೨೫	೫	೮	೧೩	೬	೪	೧೦	೧	೧	೨	೨	೧	೩	೩	೨	೫	೧		೧			
		ಹೆಗಡೆ	೬೦	೭೧	೧೩೧	೮೦	೫೮	೧೩೮	೯೮	೭೯	೧೭೭	೧		೧	೩೯	೩೭	೭೬	೨೧	೨೬	೪೭	೫	೧	೬	೯	೪	೧೩
ಕುಮುಟಾ ತಾಲೂಕಿನ ಒಟ್ಟಾರೆ			೧೫೪	೧೪೭	೩೦೧	೧೫೪	೧೨೬	೨೮೦	೨೦೩	೧೭೨	೩೭೫	೬	೨	೮	೮೦	೭೬	೧೫೬	೫೦	೭೦	೧೨೦	೯	೧	೧೦	೧೨	೮	೨೦
೨	ಹೊನ್ನಾವರ	ಕರ್ಕಿ	೩೭	೩೬	೭೩	೪೪	೪೬	೯೦	೭೫	೪೧	೧೧೬	೧		೧	೨೨	೨೭	೪೯	೯	೭	೧೬		೧	೧	೭	೬	೧೩
		ಕಡತೋಕ	೩೬	೨೯	೬೫	೫೮	೫೨	೧೧೦	೮೭	೬೮	೧೫೫	೨	೧	೩	೩೦	೨೩	೫೩	೮	೧೩	೨೧	೧		೧	೪	೧೦	೧೪
		ಚಂದಾವರ	೪	೫	೯	೮	೬	೧೪	೮	೬	೧೪	೧		೧	೭	೪	೧೧	೨	೫	೭	೧		೧	೧	೨	೩
		ಧರೇಶ್ವರ	೧		೧	೧	೨	೩	೩	೨	೫				೧	೧	೨		೪	೪				೧		೧
		ನವಿಲುಗೊಣ	೨	೭	೯	೭	೫	೧೨	೯	೨	೧೧				೪	೧	೫	೨	೨	೪	೧		೧	೨	೩	೫
		ಮುಗ್ವಾ	೨೪	೨೩	೪೭	೧೪	೧೬	೩೦	೨೧	೨೧	೪೨		೧	೧	೪	೯	೧೩	೨	೭	೯				೧	೧	೨
		ಹಳದಿಪುರ	೬೮	೬೭	೧೩೫	೪೬	೪೦	೮೬	೬೬	೩೫	೧೦೧	೨	೧	೩	೨೦	೧೫	೩೫	೫	೧೩	೧೮	೩		೩	೭	೩	೧೦
		ಹೊಸಕುಳಿ	೪	೫	೯	೬	೮	೧೪	೧೧	೧೪	೨೫				೮	೮	೧೬		೫	೫					೧	೧
ಹೊನ್ನಾವರ ತಾಲೂಕಿನ ಒಟ್ಟಾರೆ			೧೭೬	೧೭೨	೩೪೮	೧೮೪	೧೭೫	೩೫೯	೨೮೦	೧೮೯	೪೬೯	೬	೩	೯	೯೬	೮೮	೧೮೪	೨೮	೫೬	೮೪	೬	೧	೭	೨೩	೨೬	೪೯

ಅಂಕಿ ಅಂಶಗಳು: 4. ಸಮೀಕ್ಷೆಗೊಳಪಟ್ಟ ಕಾರವಾರ (ಉತ್ತರ ಕನ್ನಡ) ಜಿಲ್ಲೆಯ ಕುಮುಟಾ ಮತ್ತು ಹೊನ್ನಾವರ ತಾಲೂಕಿನ ಪಂಚಾಯತ್‌ವಾರು, ಕುಟುಂಬವಾರು, ಲಿಂಗವಾರು ವೈವಾಹಿಕ ಸ್ಥಾನಮಾನಗಳು

ಕ್ರಸಂ.	ತಾಲೂಕುಗಳು	ಪಂಚಾಯತ್	ಕುಟುಂಬಗಳು	ವೈವಾಹಿಕ ಸ್ಥಾನಮಾನ								
				ಅವಿವಾಹಿತ			ವಿವಾಹಿತ			ವಿಧುರ ಮತ್ತು ವಿಧವೆಯರು		
				ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕುಮುಟಾ	ಪುರಸಭೆ	೬೭	೬೬	೬೯	೧೩೫	೫೮	೫೮	೧೧೬	೨	೧೯	೨೧
		ಕಲಬಾಗ	೭	೧೩	೧೦	೨೩	೫	೫	೧೦		೩	೩
		ಕೂಜಳ್ಳಿ	೨೫	೩೨	೩೫	೬೭	೨೪	೨೪	೪೮		೬	೬
		ಗೋಕರ್ಣ	೭೪	೮೧	೭೭	೧೫೮	೭೨	೭೨	೧೪೪	೧	೧೮	೧೯
		ದಿವಗಿ	೧೯	೨೦	೧೪	೩೪	೧೮	೧೯	೩೭		೫	೫
		ಮಿರ್ಜಾನ	೨೩	೨೩	೧೩	೩೬	೨೪	೨೪	೪೮	೧	೪	೫
		ವಾಲಗಳ್ಳಿ	೧೮	೩೧	೧೮	೪೯	೧೫	೧೫	೩೦		೬	೬
		ಹೆಗಡೆ	೨೦೯	೨೨೮	೨೦೧	೪೨೯	೨೧೦	೨೧೦	೪೨೦	೧೧	೫೬	೬೭
	ಕುಮುಟಾ ತಾಲೂಕಿನ ಒಟ್ಟಾರೆ		**೪೪೨**	**೪೯೪**	**೪೩೭**	**೯೩೧**	**೪೨೬**	**೪೨೭**	**೮೫೩**	**೧೫**	**೧೧೭**	**೧೩೨**
೨	ಹೊನ್ನಾವರ	ಕರ್ಕಿ	೧೨೧	೧೪೭	೧೩೦	೨೭೭	೧೧೪	೧೧೩	೨೨೭	೪	೪೮	೫೨
		ಕಡತೋಕ	೧೪೧	೧೭೬	೧೫೬	೩೩೨	೧೪೩	೧೪೩	೨೮೬	೭	೩೦	೩೭
		ಚಂದಾವರ	೨೨	೨೮	೨೯	೫೭	೧೯	೧೯	೩೮		೭	೭
		ಧರೇಶ್ವರ	೫	೨	೬	೮	೫	೫	೧೦		೨	೨
		ನವಿಲುಗೋಣ	೧೪	೧೭	೧೯	೩೬	೧೩	೧೩	೨೬	೨	೨	೪
		ಮುಗ್ವಾ	೫೯	೪೭	೫೬	೧೦೩	೪೮	೪೯	೯೭	೨	೨೬	೨೮
		ಹಳದಿಪುರ	೧೩೦	೧೮೦	೧೨೮	೩೦೮	೧೬೪	೧೬೪	೩೨೮	೫	೩೨	೩೭
		ಹೊಸಕುಳಿ	೨೮	೨೫	೩೨	೫೭	೧೭	೧೭	೩೪	೧	೧೧	೧೨
	ಹೊನ್ನಾವರ ತಾಲೂಕಿನ ಒಟ್ಟಾರೆ		**೫೨೦**	**೬೨೨**	**೫೫೬**	**೧೧೭೮**	**೫೨೩**	**೫೨೩**	**೧೦೪೬**	**೨೧**	**೧೫೮**	**೧೭೯**

ಅಂಕಿ ಅಂಶಗಳು: 5. ಸಮೀಕ್ಷೆಗೊಳಪಟ್ಟ ಕಾರವಾರ (ಉತ್ತರ ಕನ್ನಡ) ಜಿಲ್ಲೆಯ ಕುಮುಟಾ ಮತ್ತು ಹೊನ್ನಾವರ ತಾಲೂಕಿನ ಪಂಚಾಯತ್‌ವಾರು, ಕುಟುಂಬವಾರು, ಲಿಂಗವಾರು ಕಸುಬು(ವೃತ್ತಿ)ಗಳು

ಕ್ರಸಂ.	ತಾಲೂಕುಗಳು	ಪಂಚಾಯತ್	ಕುಟುಂಬಗಳು	ಕಸುಬುಗಳು																	
				ಕೃಷಿ			ಕೃಷಿಕೂಲಿ			ಬೀದಿ ವ್ಯಾಪಾರ			ಸರ್ಕಾರಿ			ಖಾಸಗಿ			ಇತರೆ		
				ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕುಮುಟಾ	ಪುರಸಭೆ	೬೭				೮೧	೭೫	೧೫೬				೩		೩	೧	೧	೨	೨	೧	೩
		ಕಲಬಾಗ	೭				೫	೬	೧೧				೧		೧						
		ಕೂಜಳ್ಳಿ	೨೫				೨೩	೧೦	೩೩				೧		೧				೧		೧
		ಗೋಕರ್ಣ	೭೪				೮೨	೮೫	೧೬೭				೧		೧				೪	೬	೧೦
		ದಿವಗಿ	೧೯				೨೬	೧೯	೪೫												
		ಮಿರ್ಜಾನ	೨೩				೨೭	೨೯	೫೬							೧		೧	೧		೧
		ವಾಲಗಳ್ಳಿ	೧೮				೨೦	೨೨	೪೨	೧	೧	೨							೪	೧	೫
		ಹೆಗಡೆ	೨೦೯	೨	೨	೪	೨೪೩	೨೦೯	೪೫೨		೧	೧	೩	೪	೭	೩	೨	೫	೨೩	೧೩	೩೬
	ಕುಮುಟಾ ತಾಲೂಕಿನ ಒಟ್ಟಾರೆ		೪೪೨	೨	೨	೪	೫೦೭	೪೫೫	೯೬೨	೧	೨	೩	೯	೪	೧೩	೫	೩	೮	೩೫	೨೧	೫೬
೨	ಹೊನ್ನಾವರ	ಕರ್ಕಿ	೧೨೧				೧೭೩	೧೮೯	೩೬೨				೩		೩	೨	೨	೪	೧೬	೧೦	೨೬
		ಕಡತೋಕ	೧೪೧				೨೦೪	೧೯೪	೩೯೮							೧	೩	೪	೧೦	೧೦	೨೦
		ಚಂದಾವರ	೨೨				೩೨	೩೧	೬೩										೩	೨	೫
		ಧರೇಶ್ವರ	೫				೫	೬	೧೧												
		ನವಿಲುಗೋಣ	೧೪				೧೫	೧೬	೩೧							೩	೧	೪	೪	೧	೫
		ಮುಗ್ವಾ	೫೯				೬೪	೭೫	೧೩೯								೨	೨	೨	೨	೪
		ಹಳದಿಪುರ	೧೩೦				೧೮೬	೧೬೮	೩೫೪	೧		೧	೩೯	೪೨	೮೧	೩	೮	೧೧	೧	೧	೨
		ಹೊಸಕುಳಿ	೨೮				೨೭	೩೨	೫೯												
	ಹೊನ್ನಾವರ ತಾಲೂಕಿನ ಒಟ್ಟಾರೆ		೫೨೦				೭೦೬	೭೧೧	೧೪೧೭	೧		೧	೪೨	೪೨	೮೪	೯	೧೬	೨೫	೩೬	೨೬	೬೨

ಅಂಕಿ ಅಂಶಗಳು: 6. ಸಮೀಕ್ಷೆಗೊಳಪಟ್ಟ ಕಾರವಾರ (ಉತ್ತರ ಕನ್ನಡ) ಜಿಲ್ಲೆಯ ಕುಮುಟಾ ಮತ್ತು ಹೊನ್ನಾವರ ತಾಲೂಕಿನ ಪಂಚಾಯತ್‌ವಾರು, ಕುಟುಂಬವಾರು, ಲಿಂಗವಾರು ಸರ್ಕಾರಿ ಸೌಲಭ್ಯಗಳು

ಕ್ರಸಂ.	ತಾಲೂಕುಗಳು	ಪಂಚಾಯತ್	ಕುಟುಂಬಗಳು	ಸರ್ಕಾರಿ ಸೌಲಭ್ಯಗಳು															ಪಡಿತರ ಚೀಟಿ
				ಓಟಿನ ಕಾರ್ಡ್			ವಿಧವಾವೇತನ			ಅಂಗವಿಕಲ			ವೃದಾಪ			ಶಿಷ್ಯವೇತನ			
				ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	
೧	ಕುಮುಟಾ	ಪುರಸಭೆ	೬೭	೧೦೮	೧೧೪	೨೨೨		೩	೩					೧	೧	೧೩	೨೨	೩೫	೬೫
		ಕಲಬಾಗ	೭	೧೧	೯	೨೦										೧	೪	೫	೭
		ಕೂಜಳ್ಳಿ	೨೫	೩೮	೪೯	೮೭		೨	೨	೨		೨		೩	೩	೭	೬	೧೩	೨೩
		ಗೋಕರ್ಣ	೭೪	೧೧೭	೧೩೧	೨೪೮								೧	೧				೭೨ [uncertain: total implies ೭೩]
		ದಿವಗಿ	೧೯	೨೩	೨೭	೫೦													೧೯
		ಮಿರ್ಜಾನ	೨೩	೩೬	೩೭	೭೩					೧	೧	೧	೧	೨	೬	೨	೮	೨೦
		ವಾಲಗಳ್ಳಿ	೧೮	೩೭	೩೦	೬೭				೧	೧	೧					೧	೧	೧೭
		ಹೆಗಡೆ	೨೦೯	೩೧೨	೩೩೪	೬೪೬		೨೧	೨೧	೨		೨	೭	೧೨	೧೬	೮೨	೭೫	೧೫೭	೨೦೦
	ಕುಮುಟಾ ತಾಲೂಕಿನ ಒಟ್ಟಾರೆ		೪೪೨	೬೮೨	೭೩೧	೧೪೧೩		೨೬	೨೬	೫	೨	೬	೮	೧೮	೨೩	೧೦೯	೧೧೦	೨೧೯	೪೨೩
೨	ಹೊನ್ನಾವರ	ಕರ್ಕಿ	೧೨೧	೧೮೫	೨೧೬	೪೦೧		೩೭	೩೭		೧	೧	೧೨	೧೦	೨೨	೧೬	೨೪	೪೦	೧೧೭
		ಕಡತೋಕ	೧೪೧	೨೨೯	೨೩೬	೪೬೫		೨೪	೨೪				೭	೧	೮	೩೬	೨೭	೬೩	೧೩೮
		ಚಂದಾವರ	೨೨	೩೮	೩೯	೭೭		೭	೭	೧		೧	೨		೨	೨	೨	೪	೨೨
		ಧರೇಶ್ವರ	೫	೪	೧೨	೧೬		೨	೨										೫
		ನವಿಲುಗೋಣ	೧೪	೨೫	೨೨	೪೭							೧		೧	೬	೬	೧೨	೧೨
		ಮುಗ್ವಾ	೫೯	೭೬	೯೨	೧೬೮		೧೭	೧೭	೧		೧	೨	೯	೧೧	೯	೨೫	೩೩	೫೭
		ಹಳದಿಪುರ	೧೩೦	೨೨೪	೨೧೫	೪೩೯		೧೩	೧೩	೧	೧	೧	೧೦	೧೩	೩೦	೬೭	೬೬	೧೩೧	೧೦೮
		ಹೊಸಕುಳಿ	೨೮	೩೦	೪೧	೭೧		೧೦	೧೦				೨		೨	೫	೭	೧೨	೨೭
	ಹೊನ್ನಾವರ ತಾಲೂಕಿನ ಒಟ್ಟಾರೆ		೫೨೦	೮೧೧	೮೭೩	೧೬೮೪		೧೧೦	೧೧೦	೩	೨	೪	೩೬	೩೩	೭೬	೧೪೧	೧೫೭	೨೯೫	೪೮೬

ಅಂಕಿ ಅಂಶಗಳು: 7. ಸಮೀಕ್ಷೆಗೊಳಪಟ್ಟ ಕಾರವಾರ (ಉತ್ತರ ಕನ್ನಡ) ಜಿಲ್ಲೆಯ ಕುಮುಟಾ ಮತ್ತು ಹೊನ್ನಾವರ ತಾಲೂಕಿನ ಪಂಚಾಯತ್‌ವಾರು, ಕುಟುಂಬವಾರು, ಭೂಹಿಡುವಳಿ ಮತ್ತು ಭೂಶ್ರೇಣಿಗಳಲ್ಲಿ ಹಾಗೂ ಪಶುಸಂಪತ್ತು

ಕ್ರಸಂ.	ತಾಲೂಕುಗಳು	ಪಂಚಾಯತ್	ಕುಟುಂಬ ಗಳು	ಭೂ ಹಿಡುವಳಿ (ಎಕರೆಗಳಲ್ಲಿ)			ಭೂ ಹಿಡುವಳಿ ಶ್ರೇಣಿಗಳು (ಎಕರೆಗಳಲ್ಲಿ)					ಪಶುಸಂಪತ್ತು				
							10.1–25	5.1–10	2.51–5	0.5–2.50	ಭೂರಹಿತ					
				ಒಣಭೂಮಿ	ನೀರಾವರಿ	ಒಟ್ಟು	ಬಿ	ಸಿ	ಡಿ	ಇ	ಎಫ್	ಎತ್ತು	ಆಕಳು	ಕುರಿ	ಕೋಳಿ	ಹಂದಿ
೧	ಕುಮುಟಾ	ಪುರಸಭೆ	೬೭								೬೭		೧		೮	
		ಕಲಬಾಗ	೭								೭		೨		೨	
		ಕೂಜಳ್ಳಿ	೨೫		೧	೧				೧	೨೪	೧	೨೩		೩೫	
		ಗೋಕರ್ಣ	೭೪		೬	೬		೧		೧	೭೨		೩		೫೦	
		ದಿವಗಿ	೧೯								೧೯				೧	
		ಮಿರ್ಜಾನ	೨೩								೨೩				೩೧	
		ವಾಲಗಳ್ಳಿ	೧೮								೧೮				೩೧	
		ಹೆಗಡೆ	೨೦೯	೧೦.೫		೧೦.೫				೧೮	೧೯೧	೪	೧೪		೧೧೭	
	ಕುಮುಟಾ ತಾಲೂಕಿನ ಒಟ್ಟಾರೆ		೪೪೨	೧೦.೫	೭	೧೭.೫		೧		೨೦	೪೨೧	೫	೪೩		೨೭೫	
೨	ಹೊನ್ನಾವರ	ಕರ್ಕಿ	೧೨೧								೧೨೧		೧		೩೭	
		ಕಡತೋಕ	೧೪೧							೯	೧೩೨	೨	೩೨		೬೪	
		ಚಂದಾವರ	೨೨								೨೨		೭			
		ಧರೇಶ್ವರ	೫								೫					
		ನವಿಲುಗೋಣ	೧೪								೧೪				೧	
		ಮುಗ್ವಾ	೫೯	೫.೯೬	೧೦.೩೫	೧೫.೭೭				೧೭	೪೨				೪೮	
		ಹಳದಿಪುರ	೧೩೦	೮.೯೨	೨.೧೫	೩೪.೩೮	೧	೫	೪	೨೧	೯೯	೨೪	೩೬	೧೬	೧೧೫	೧೩
		ಹೊಸಕುಳಿ	೨೮								೨೫	೨	೨		೧೨	
	ಹೊನ್ನಾವರ ತಾಲೂಕಿನ ಒಟ್ಟಾರೆ		೫೨೦	೧೪.೮೮	೧೨.೫	೫೦.೧೫	೧	೫	೪	೪೭	೪೬೦	೨೮	೭೮	೧೬	೨೭೭	೧೩

ಅಂಕಿ ಅಂಶಗಳು: ೪. ಸಮೀಕ್ಷೆಗೊಳಪಟ್ಟ ಕಾರವಾರ (ಉತ್ತರ ಕನ್ನಡ) ಜಿಲ್ಲೆಯ ಕುಮುಟಾ ಮತ್ತು ಹೊನ್ನಾವರ ತಾಲೂಕಿನ ಪಂಚಾಯತ್‌ವಾರು, ಕುಟುಂಬವಾರು, ಮನೆಗಳ ಮಾದರಿ ಹಾಗೂ ನಿವೇಶನ, ಮನೆ, ವಿದ್ಯುತ್(ಸ್ವಂತ/ಸರ್ಕಾರ)ಗಳ ವರ್ಗೀಕರಣ

ಕ್ರಸಂ.	ತಾಲೂಕುಗಳು	ಪಂಚಾಯತ್	ಕುಟುಂಬ ಗಳು	ಮನೆಗಳ ಮಾದರಿ								ನಿವೇಶನ		ಮನೆ		ವಿದ್ಯುತ್	
				ಗುಡಾರ	ಗುಡಿಸಲು	ಟಿನ್	ಮಾಳಿಗೆ	ಆರ್‌ಸಿಸಿ	ಹೆಂಚಿನ	ಜನತಾ	ಬಾಡಿಗೆ	ಸ್ವಂತದ್ದು	ಸರ್ಕಾರ	ಸ್ವಂತದ್ದು	ಸರ್ಕಾರ	ಸ್ವಂತದ್ದು	ಸರ್ಕಾರ
೧	ಕುಮುಟಾ	ಪುರಸಭೆ	೬೭		೩	೧			೬೦	೨	೧	೩೮	೨೬	೪೧	೨೪	೩೪	೨೧
		ಕಲಬಾಗ	೭					೧	೬			೪		೪	೩	೫	೧
		ಕೂಜಳ್ಳಿ	೨೫					೧	೨೪			೧೪	೭	೭	೧೭	೩	೧೮
		ಗೋಕರ್ಣ	೭೪		೧೫				೫೧	೬	೨	೩೮	೩೭	೨೬	೩೯	೨೫	೪೩
		ದಿವಗಿ	೧೯		೧				೧೫	೩		೧೧	೭	೯	೧೦	೯	೧೦
		ಮಿರ್ಜಾನ	೨೩	೧	೧				೧೯	೨		೧೮	೪	೭	೧೨	೫	೧೩
		ವಾಲಗಳ್ಳಿ	೧೮						೧೬	೨		೮	೯	೭	೧೦	೯	೭
		ಹೆಗಡೆ	೨೦೯		೧೯	೨		೫	೧೭೦	೧೩		೧೩೨	೬೩	೧೦೪	೯೬	೨೫	೯೭
	ಕುಮುಟಾ ತಾಲೂಕಿನ ಒಟ್ಟಾರೆ		೪೪೨	೧	೩೯	೩		೭	೩೬೧	೨೮	೩	೨೬೩	೧೫೩	೨೦೫	೨೧೧	೧೧೫	೨೧೦
೨	ಹೊನ್ನಾವರ	ಕರ್ಕಿ	೧೨೧	೪	೧೦	೫	೨	೫	೮೪	೧೧		೯೬	೨೨	೯೫	೨೨		
		ಕಡತೋಕ	೧೪೧		೧೦			೬	೧೦೦	೨೫		೧೦೫	೩೨	೧೦೫	೩೨		
		ಚಂದಾವರ	೨೨					೨	೧೬	೪		೧೯	೩	೧೯	೩		
		ಧರೇಶ್ವರ	೫						೫				೫		೫		೫
		ನವಿಲುಗೋಣ	೧೪					೧	೯	೪		೮	೪	೮	೪		
		ಮುಗ್ವಾ	೫೯	೫	೭	೧		೧	೩೬	೯		೫೦	೫	೨೪	೩೦	೧೬	೩೬
		ಹಳದಿಪುರ	೧೩೦	೬	೧೩	೧೩	೮	೧೩	೫೩	೧೩	೧೧	೧೦೧	೧೬	೬೬	೪೧	೫೮	೩೭
		ಹೊಸಕುಳಿ	೨೮		೧				೬	೨೦		೫	೨೨	೫	೨೨		
	ಹೊನ್ನಾವರ ತಾಲೂಕಿನ ಒಟ್ಟಾರೆ		೫೨೦	೧೫	೪೧	೧೯	೧೦	೨೮	೩೦೯	೮೬	೧೧	೩೮೪	೧೦೯	೩೨೨	೧೫೯	೭೪	೭೮

ಅನುಬಂಧ ೩

ಪರಾಮರ್ಶನ ಗ್ರಂಥಗಳು

ಅಂಬಳಿಕೆ ಹಿರಿಯಣ್ಣ, ಮಲೆನಾಡ ಜಾನಪದ ಸಂಪ್ರದಾಯಗಳು, ಪುಸ್ತಕ ಚಿಲುಮೆ ಪ್ರಕಾಶನ, ಮೈಸೂರು, ೧೯೭೮

ಅಂಬೇಡ್ಕರ್, ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು (ಸಂ) ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೧

ಅನುಪಮಾ ಎಚ್.ಎಸ್., ಕೃಷ್ಣ ಜಿ. (ಸಂ), ಅಸಮಾನ ಭಾರತ, ಲಡಾಯಿ ಪ್ರಕಾಶನ, ಗದಗ, ೨೦೧೦

ಅಬ್ದುಲ್ ಅಜೀಜ್ ಮತ್ತು ವಾಸುಕಿ ಕೆ.ಜಿ., ಕರ್ನಾಟಕ ಆರ್ಥಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

ಅಮಾರ್ತ್ಯಸೇನ್ (ಅನು), ಚಂದ್ರಶೇಖರ ಟಿ.ಆರ್., ಅಮಾರ್ತ್ಯಸೇನ್‌ರವರ ಅಭಿವೃದ್ಧಿ ಅಧ್ಯಯನಗಳು, ಕನ್ನಡ ಸಂಘ ಕ್ರೈಸ್ತ ಕಾಲೇಜು, ಬೆಂಗಳೂರು, ೧೯೯೯

ಆರಾಧ್ಯ ಬಿ.ಎಂ., ಪರಿಶಿಷ್ಟ ಜನಾಂಗದವರಿಗೆ ಸಂವಿಧಾನದ ಕೊಡುಗೆ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು, ೧೯೮೫

ಇಂದಿರಾ ಆರ್., ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

ಕರೀಗೌಡ ಬೀಚನಹಳ್ಳಿ, ಕರಕುಶಲ ಕಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಕರೀಂಸಾಬ್ ಎಸ್.ಕೆ., ಜನಪದ ವೈದ್ಯ, ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೮೯.

ಕೇಶವಶರ್ಮ ಕೆ., ಮಾರ್ಕವಾದಿ ಸಾಹಿತ್ಯ ವಿಮರ್ಶೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ಕೋಟಗಾನಹಳ್ಳಿ ರಾಮಯ್ಯ, ಸಿಂಧ್ ಮಾದಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೧೧.

ಕೊಸಾಂಬಿ ಡಿ.ಡಿ., (ಅನು) ಟಿ.ಎಸ್. ವೇಣುಗೋಪಾಲ್ ಶೈಲಜಾ, ಪುರಾಣ ಮತ್ತು ವಾಸ್ತವ, ಚಿಂತನ ಪ್ರಕಾಶನ, ಉತ್ತರ ಕನ್ನಡ, ೨೦೦೨.

ಖಂಡೋಬಾ ಪಿ.ಕೆ., (ಪ್ರ.ಸಂ.) ನಾಯಕ ಡಿ.ಬಿ., ಗಿರಿಜನ ಸಿರಿ, ಖಂಡೋಬಾ ಅಭಿನಂದನಾ ಸಮಿತಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೩.

ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಗಂಗಾಧರ ದೈವಜ್ಞ, ಕಚ್ಚೆಗೌಳಿಗರ ಪರಂಪರೆ ಮತ್ತು ಆಧುನಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

ಗಂಗಾಧರ ದೈವಜ್ಞ, ಕೊರಗರು ಸಮಕಾಲೀನ ಸ್ಪಂದನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

ಗೋಪಾಲ ಕೃಷ್ಣರಾವ್, ಸಾಮಾಜಿಕ ರಾಜಕೀಯ ಜ್ಞಾನದ ಮೂಲ ಪಾಠಗಳು, ಪ್ರಗತಿ ಪ್ರಕಾಶನ, ಬೆಂಗಳೂರು, ೧೯೮೬.

ಗೋಪಾಲಕೃಷ್ಣ ಪಿ. ನಾಯಕ, ಉತ್ತರ ಕನ್ನಡ ದರ್ಶನ, ಗೋಕರ್ಣ, ೧೯೯೭.

ಚಂದ್ರ ಪೂಜಾರಿ ಎಂ., ದೇಶೀಯತೆಯ ನೆರಳಿನಲ್ಲಿ ವಿಕೇಂದ್ರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

ಚಂದ್ರ ಪೂಜಾರಿ ಎಂ., ರಾಜಕೀಯದ ಬಡತನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೮.

ಚಂದ್ರ ಪೂಜಾರಿ ಎಂ., ಯಾಕೀಗ ಭೂಮಿ ಪ್ರಶ್ನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಚಂದ್ರ ಕಾಳೇನಹಳ್ಳಿ, ಸೋಲಿಗರ ಸಂಸ್ಕೃತಿ ಉಪ ಸಂಸ್ಕೃತಿ ಮಾಲೆ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

ಚಂದ್ರಶೇಖರ ಟಿ.ಆರ್., ಅಮತ್ಯಸೇನ್‌ರ ಅಭಿವೃದ್ಧಿ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

ಚಂದ್ರಶೇಖರ ಟಿ.ಆರ್., ಕರ್ನಾಟಕ ಜನಗಣತಿ–೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

ಚಂದ್ರಶೇಖರ ಟಿ.ಆರ್., ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ, ಗಾಯತ್ರಿ ಪ್ರಕಾಶನ, ಬಳ್ಳಾರಿ, ೨೦೧೪.

ಚಂದ್ರಶೇಖರ ಟಿ.ಆರ್., ಕಷ್ಟಕುಲದ ಕಥೆ, ಲಡಾಯಿ ಪ್ರಕಾಶನ, ಗದಗ, ೨೦೧೩.

ಚಲುವರಾಜು, ಪಕ್ಕಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೯.

ಡೋಮನಿಕ್ ಡಿ., ಜಾಗತೀಕರಣ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು, ಸಖಿ ಪ್ರಕಾಶನ, ಹೊಸಪೇಟೆ, ೨೦೦೭.

ದಸ್ತಗೀರ್‌ಸಾಬ್ ದಿನ್ನಿ, ಜಾಗತೀಕರಣ ಮತ್ತು ಸಂಸ್ಕೃತಿ, ಕನಸು ಪ್ರಕಾಶನ, ರಾಯಚೂರು, ೨೦೦೪.

ದಿವಾಕರ ನಾ., ದಲಿತರು ವಿವೇಚನೆ ಒಂದು ಅವಲೋಕನ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೯.

ದೇವಿಪ್ರಸಾದ್ ಚಟೋಪಾಧ್ಯಾಯ (ಅನು), ಕುಮಾರಪ್ಪ ಜಿ. ಮಾತೆಯರು ಮಾನ್ಯರಾಗಿದ್ದಾಗ, ನವಕರ್ನಾಟಕ ಪ್ರಕಾಶನ, ೧೯೯೬.

ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಪ್ರಾಚೀನ ಭಾರತದಲ್ಲಿ ಭೌತಿಕವಾದ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೬.

ನಾಗಭೂಷಣ ಟಿ.ಎಸ್., ಲೋಹಿಯಾ ಸಮಾಜವಾದದ ದರ್ಶನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪.

ನಾಗೇಶ ಎಚ್.ವಿ., ಬುಡಕಟ್ಟು ಜನರ ನ್ಯಾಯ ತಿರ್ಮಾನಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೩.

ನಾಯಕ ಎನ್.ಆರ್. ಹಳ್ಳೇರ ಜಾನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೦.

ನಾಯಕ ಎನ್.ಆರ್., ಉತ್ತರ ಕನ್ನಡ ಜಿಲ್ಲೆಯ ಗ್ರಾಮದೇವತೆಗಳ ಹಾಡುಗಳು, ಜಾನಪದ ಪ್ರಕಾಶನ, ಹೊನ್ನಾವರ(ಉತ್ತರ ಕನ್ನಡ ಜಿಲ್ಲೆ), ೨೦೦೨.

ನಾಯಕ ಎನ್.ಆರ್., ಗಾಮೊಕ್ಕಲು ಒಂದು ಸಾಂಸ್ಕೃತಿಕ ಅಧ್ಯಯನ, ಜಾನಪದ ಪ್ರಕಾಶನ, ಹೊನ್ನಾವರ್, ಉತ್ತರ ಕನ್ನಡ ಜಿಲ್ಲೆ, ೨೦೦೪.

ನಾಯಕ ಎನ್.ಆರ್., ಕರಾವಳಿ ಕರ್ನಾಟಕದ ಆಹಾರ ಪದ್ಧತಿ, ಜಾನಪದ ಪ್ರಕಾಶನ, ಹೊನ್ನಾವರ್, ಉತ್ತರ ಕನ್ನಡ ಜಿಲ್ಲೆ, ೨೦೦೯.

ನಾರಾಯಣ ಕಿಕ್ಕೇರಿ, ಬುಡಕಟ್ಟು ಸಂಸ್ಕೃತಿ, ಅರುಹು-ಕುರುಹು ಪ್ರಕಾಶನ, ಕುವೆಂಪುನಗರ, ಮೈಸೂರು, ೨೦೧೧.

ಪುಟ್ಟಯ್ಯ ಬಿ.ಎಂ., ದಲಿತರು ಮತ್ತು ಭೂಮಿಯ ಪ್ರಶ್ನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ಪೋತೆ ಎಚ್.ಟಿ. (ಸಂ), ಜಾಗತೀಕ ಚಿಂತಕರು ಮತ್ತು ಬಸವಣ್ಣ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೧೧.

ಪ್ರಭಾಕರ ಎ.ಎಸ್., ಮ್ಯಾಸಬೇಡರ ಕಥನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಪ್ರಭಾಕರ ಎ.ಎಸ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಪ್ರಭಾಕರ ಎ.ಎಸ್. (ಸಂ), ಆದಿವಾಸಿ ಅಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೬.

ಪ್ರಭಾಕರ ಎ.ಎಸ್., ಕರ್ನಾಟಕದ ಡೊಂಬರು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ಪ್ರಭಾಕರ ಎ.ಎಸ್., ಚಂದ್ರಕಾಂತ ಟಿ.ಎನ್., ದೊಂಬರು ಒಂದು ಚಾರಿತ್ರಿಕ ಹಿನ್ನೋಟ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೬.

ಪ್ರಶಾಂತ ಎಚ್.ಡಿ., (ಸಂ), ಜನ ಸಮುದಾಯ ಸಂಪುಟ ರಾಜ್ಯಕೋಶ–೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಪ್ರಶಾಂತ ಎಚ್.ಡಿ. ಮತ್ತು ಇತರರು(ಅನು), ಸಾಮಾಜಿಕ ಆಕಾರರೇಖೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪುರುಷೋತ್ತಮ ಬಿಳಿಮಲೆ, ಜಾನಪದ ಕ್ಷೇತ್ರಕಾರ್ಯ ಆಧುನಿಕ ವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩.

ಬೋರಲಿಂಗಯ್ಯ ಹಿ.ಚಿ., ಗಿರಿಜನ ನಾಡಿಗೆ ಪಯಣ, ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು, ೧೯೯೧.

ಬೋರಲಿಂಗಯ್ಯ ಹಿ.ಚಿ., ಕಾಡುಕಾಂಕ್ರೀಟ್ ಮತ್ತು ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೫.

ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ದೈವರಾಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಬೋರಲಿಂಗಯ್ಯ ಹಿ.ಚಿ., ವಿಸ್ಮೃತಿ ಮತ್ತು ಸಂಸ್ಕೃತಿ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧.

ಬೋರಲಿಂಗಯ್ಯ ಹಿ.ಚಿ., ಗೊಂಡರ ರಾಮಾಯಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

ಬೋರಲಿಂಗಯ್ಯ ಹಿ.ಚಿ., ಸಿದ್ದಿಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೧೧.

ಬೋರಲಿಂಗಯ್ಯ ಹಿ.ಚಿ., ಪ್ರಭಾಕರ ಎ.ಎಸ್., ಕರ್ನಾಟಕ ಬುಡಕಟ್ಟುಗಳ ಚಿತ್ರ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩.

ಮಂಗಳ ಶ್ರೀಧರ, ಬುಡಕಟ್ಟು ವೈದ್ಯ ಸಂಸ್ಕೃತಿ, ಮುದ್ದಣ ಪ್ರತಿಷ್ಠಾನ, ರಾಮನಗರ, ೨೦೦೮.

ಮೊಗಳ್ಳಿ ಗಣೇಶ, ದೇಶಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

ಮೊಗಳ್ಳಿ ಗಣೇಶ, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಮಂಜುನಾಥ ಬೇವಿನಕಟ್ಟಿ, ಜನಪದ ನಂಬಿಕೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬.

ಮೈತ್ರಿ ಕೆ.ಎಂ., ಮರುಗ ಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಮೋಹನ್ ಕೃಷ್ಣ ರೈ ಕೆ. (ಸಂ), ಪರಿಸರ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಮೋಹನ್ ಕೃಷ್ಣ ರೈ, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಮೋಹನ್ ಚಂದ್ರಗುತ್ತಿ, ಸಮಪಾಲು, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ, ೨೦೦೩.

ಮೋಹನ್ ಎಚ್.ಎಸ್., ಮುಕ್ರಿ ಸಮುದಾಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನೆ ಸಂಸ್ಥೆ ಬೆಂಗಳೂರು, ೨೦೧೬

ಮಹದೇವಯ್ಯ ಪಿ., ಸಾಮಾಜಿಕ ಉಪಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ರಾಜಾರಾಮ ಹೆಗ್ಗಡೆ (ಸಂ), ಭಾರತೀಯ ಇತಿಹಾಸ ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

ರಾಮಚಂದ್ರಪ್ಪ ಬರಗೂರು, ಸಂಸ್ಕೃತಿ ಉಪಸಂಸ್ಕೃತಿ, ಭೂಮಿ ಬಳಗ, ಮಾನಸಗಂಗೋತ್ರಿ, ಮೈಸೂರು, ೧೯೮೪.

ರಾಮಕೃಷ್ಣ ಆರ್., ಕರ್ನಾಟಕದ ಬುಡಕಟ್ಟುಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೭.

ರಹಮತ್ ತರೀಕೆರೆ, ಪ್ರತಿ ಸಂಸ್ಕೃತಿ, ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೯೩.

ರವೀಂದ್ರನಾಥ ಕೆ., ಅಧ್ಯಯನ ವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ಲಕ್ಕಪ್ಪಗೌಡ ಎಚ್.ಜಿ., ಕರ್ನಾಟಕ ಬುಡಕಟ್ಟುಗಳು, ಸಂಪುಟ–೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦.

ಲಿಂಗಯ್ಯ ಡಿ., ಚಕ್ಕರೆ ಶಿವಶಂಕರ, ಸ್ಥಳನಾಮಗಳ ಅಧ್ಯಯನ ಸಂವಾದ, ಜಾನಪದ ಪರಿಷತ್, ಬೆಂಗಳೂರು, ೨೦೦೮.

ವೆಂಕಟೇಶಮೂರ್ತಿ ಎಚ್.ಟಿ., ಸಮಾಜ ಪರಿವರ್ತನಾ ಚಳುವಳಿ ಮತ್ತು ಕರ್ನಾಟಕ ದಲಿತ ಚಳವಳಿ, ಈಶ್ವರಿ ಪ್ರಕಾಶನ, ಮೈಸೂರು, ೨೦೦೬.

ವೆಂಕಟಸ್ವಾಮಿ ಎಂ., ಅಸ್ಪೃಶ್ಯರು(ಒಂದು ಪರಿಶೀಲನೆ), ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೩.

ವಂದನಾಶಿವ (ಅನು), ಮಾಧವ ಐತಾಳ್, ಒತ್ತಡ ಚಿಲುಮೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

ವೆರಿಯರ್ ಎರ್ವಿನ್ (ಅನು), ಎಚ್.ಎಲ್. ನಾಗೇಗೌಡ, ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು, ೨೦೦೪.

ವಿವೇಕ ರೈ ಬಿ.ಎ., ಕರ್ನಾಟಕ ಜನಪದ ನಂಬಿಕೆಗಳು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೧.

ವಿವೇಕ ರೈ ಬಿ.ಎ. ಮತ್ತು ಯದುಪತಿಗೌಡ ಡಿ., ಮಲೆಕುಡಿಯರು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು, ೧೯೯೬.

ವಿಷ್ಣುನಾಯಕ, ಉತ್ತರ ಕನ್ನಡ-ಮೆಲುಕು-ಮುನ್ನೋಟ, ರಾಘವೇಂದ್ರ ಪ್ರಕಾಶನ, ಅಂಕೋಲಾ, ಉತ್ತರ ಕನ್ನಡ, ೨೦೦೭.

ವೇಣುಗೋಪಾಲ್ ಟಿ.ಎಸ್., ಶೈಲಜಾ, ಮೂಲ: ಡಿ.ಡಿ. ಕೊಸಾಂಬಿ, ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ ಚಾರಿತ್ರಿಕ ರೂಪರೇಷೆ, ಚಿಂತನ ಪುಸ್ತಕ ಬೆಂಗಳೂರು, ೨೦೧೧.

ಶಂಕರರಾವ್ ಚ.ನ., ಭಾರತದಲ್ಲಿ ಸಾಮಾಜಿಕ ಸಮಸ್ಯೆಗಳು ಮತ್ತು ಸಾಮಾಜಿಕ ವಿಘಟನೆ, ಜೈ ಭಾರತ ಪ್ರಕಾಶನ, ಮಂಗಳೂರು, ೧೯೯೯.

ಶಂಕರ ನಾರಾಯಣ ತೀ.ನಂ., ಕಾಡುಗೊಲ್ಲರ ನಂಬಿಕೆಗಳು ಮತ್ತು ಆಚರಣೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

ಶಂಕರನಾರಾಯಣ ಎನ್.ಪಿ., ಸ್ವಾತಂತ್ರ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೩.

ಶಂಬಾಜೋಷಿ, ಕರ್ನಾಟಕ ಸಂಸ್ಕೃತಿಕ ಪೂರ್ವಪೀಠಿಕೆ, ಭಾಗ–೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯.

ಶರ್ಮ ಆರ್.ಎಸ್., **ಪ್ರಾಚೀನ ಭಾರತ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೦.

ಶ್ರೀನಿವಾಸ ಎಂ.ಎನ್. (ಅನು), ಶಾಮಭಟ್ಟ ಟಿ.ಆರ್., ನೆನಪಿನ ಹಳ್ಳಿ, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೧೫.

ಶೈಲಜಾ ಹಿರೇಮಠ, ಮಾತೃ ಪ್ರಧಾನ ಪರಿಕಲ್ಪನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಸರ್ದೇಸಾಯಿ ಎಸ್.ಜಿ., ಪ್ರಾಚೀನ ಭಾರತದಲ್ಲಿ ಅಂಧಶ್ರದ್ಧೆಗೆ ಎದುರಾಗಿ ವಿಜ್ಞಾನ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೪.

ಸುಂದರಯ್ಯ ಪಿ. (ಅನು), ಸುಜ್ಞಾನಮೂರ್ತಿ, ತೆಲಂಗಾಣ ಹೋರಾಟ, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೧೩.

ಸೌರಭ್ ದುಬೆ, ಪಣಿಂದಂ ದೇವ, ಇಶಿತಾ ಬ್ಯಾನರ್ಜಿ, ಅನುವಾದ: ಜಿ. ರಾಜಶೇಖರ, ದಾರು ಪ್ರತಿಮಾ ನ ಪೂಜಿವೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೩.

ಹಿರೇಮಠ ಎಸ್.ಎಸ್., ದಲಿತ ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

ನಿಯತಕಾಲಿಕೆಗಳು

ಯಲ್ಲಪ್ಪ ರೆಡ್ಡಿ (ಸಂ), ಲತಾ ಎಂ., ಪ್ರಕೃತಿಯೊಡನೆ ಒಂದು ನಡಿಗೆ, ಪೂರ್ಣ ಪ್ರಮತಿ ವಿಶೇಷ ಸಂಚಿಕೆ, ಪು.೮, ಡಿಸೆಂಬರ್ ೨೦೧೩

ಅನಂತ್ ಟಿ.ಸಿ.ಎ., ಬಡತನ ಅಳತೆಗೋಲು, ಯೋಜನಾಭಿವೃದ್ಧಿ, ಮಾಸಪತ್ರಿಕೆ, ಪು.೩, ಅಕ್ಟೋಬರ್, ೨೦೧೩

ಮಾದೇಗೌಡ ಸಿ., ಅರಣ್ಯವಾಸಿಗಳ ಬದುಕಿನಲ್ಲಿ ಬೆಳಕು, ಯೋಜನಾ ಅಭಿವೃದ್ಧಿ ಮಾಸಪತ್ರಿಕೆ, ಪು. ೪೨, ನವೆಂಬರ್ ೨೦೧೧.

ಜೈರಾಮ ರಮೇಶ (ಅನು) ಕುಬ್ಯಾ ಶ್ರೀನಿವಾಸ, ಭೂಸ್ವಾದೀನ ಪುನರ್ವಸತಿ ಮತ್ತು ಮರುನೆಲೆ

ಕರಡು ಮಸೂದು–೨೦೧೧, ಯೋಜನಾ ಅಭಿವೃದ್ಧಿ ಮಾಸಪತ್ರಿಕೆ, ಪು.೨, ಅಕ್ಟೋಬರ್ ೨೦೧೧.

ನಾರಾಯಣ ಕಕ್ಕೇರಿ, ಜಾಗತೀಕರಣ ಮತ್ತು ಬುಡಕಟ್ಟು, ಯೋಜನ ಅಭಿವೃದ್ಧಿ ಮಾಸಪತ್ರಿಕೆ, ಪು. ೨೭, ಜನವರಿ ೨೦೧೪.

ದ್ವಾರಕನಾಥ ಆರ್., ಕವಲು ದಾರಿಯಲ್ಲಿ ಯುವಪೀಳಿಗೆ, ಜನಪದ ಮಾಸಪತ್ರಿಕೆ, ಸಂಚಿಕೆ–೮, ಸಂಪುಟ–೫೫, ಪು. ೩೮, ನವೆಂಬರ್ ೨೦೧೨.

ಪಿಎಚ್.ಡಿ. ಮಹಾಪ್ರಬಂಧಗಳು

ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ಲೋಕದೃಷ್ಟಿ (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಪ್ರಭಾಕರ ಎ.ಎಸ್., ಕರ್ನಾಟಕದ ಡೊಂಬರು, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ವಿಜಯಲಕ್ಷ್ಮಿ ಆರ್., ಹಾಲಕ್ಕಿ ಒಕ್ಕಲಿಗರ ಮಹಿಳೆ (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

ಕೊಂತಮ್ ಸತೀಶ, ಬೇಡಗಂಪಣರ ಸಾಮಾಜಿಕ ಹಾಗೂ ಆರ್ಥಿಕ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

ಮಹೇಂದ್ರಕುಮಾರ ಎ.ಎಸ್., ಇರುಳಿಗ ಸಮುದಾಯದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ" (ರಾಮನಗರ ಜಿಲ್ಲೆಯನ್ನು ಪರಿಗಣಿಸಿ) (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬.

ಶಶಿಕಿರಣ ಜಿ., ಒಂದು ಬುಡಕಟ್ಟಿನ ಅರ್ಥವ್ಯವಸ್ಥೆ, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪.

ಅಂಕಿ ಅಂಶಗಳು

ಚಂದ್ರಶೇಖರ ಟಿ.ಆರ್., ಕರ್ನಾಟಕ ಜನಗಣತಿ–೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

ಉತ್ತರ ಕನ್ನಡ ಜಿಲ್ಲೆಯ ಅಂಕಿ–ಅಂಶಗಳ ನೋಟ ೨೦೧೨–೧೩, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಕಾರವಾರ.

ಕುಮಟಾ ಮತ್ತು ಹೊನ್ನಾವರ ತಾಲೂಕುಗಳ ಸಾಮಾಜಿಕ ಮತ್ತು ಆರ್ಥಿಕ ಅವಲೋಕನ ೨೦೧೪–೧೫, ಜಿಲ್ಲಾ ಸಂಖ್ಯಾ ಸಂಗ್ರಣಾಧಿಕಾರಿಗಳ ಕಚೇರಿ, ಉ.ಕ. ಜಿಲ್ಲೆ.

English Books

Abbe Dabois, Hindu Manneru Customs and Coremonies, Oxford University Press, New Delhi, 1990.

Ananth Krishna Iyer, The Mysore Tribes and Castes Mittal Publication, New Delhi, 1922.

Buchanan Francis, A Journey from Madras through the countiries of Mysore Canare and Madras, Vol-II, Asia Educational Seres, New Delhi, 1972.

David Arnold, Ramachandra Gulha (Ed), Nature Cultare Imperialism, Essayson The Envirnomental History of South India, Oxford University Press, 1995.

Edgar Thurston, Rangachari K., Castes and Tribes of Southern India, Vol-6, Asian Educational Services, New Delhi, 1909.

Hayavadana Rao, Indian Caste System A Study, Asian Educational Services, New Delhi, 1988.

Luiz A.A.D., Tribes of Mysore, C.S. Viswa and co., Bangalore, 1961.

Nirmal Kumar Bose, Tribal Life in India, National Book Trust, New Delhi, 2002.

Nanjundiah H.V., Ananth Krishanna Iyer, The Mysore Tribes and Castes, Mittal Publication, New Delhi, 1928.

Odeyar D. Heggade, Women's Political Representation in India, Arjun Publication, Mysore, 2007.

Romilathapar, The Past and Prejudice, National Book Trust, New Delhi, 2002.

Sachchidanandan, Encyclopaedie Profile of Indian Tribes, Vol-II, Discovery Publication, New Delhi, 1998.

Singh K.S., People of India National Series, Vol-II, Monohar Publication, New Delhi, 2006.

Srinivasa M.N., Cast Modern India and other Essays Asia Publication House, Bombay, 1962.

Srinivas M.N., Caste in Modren India, Mediapromoteru Publication pvt. Ltd., Bombay, 1992.

Stephen Fuchs, At the Bottom of Indian Society, Manshiram Manoharalal Publication Pvt. Ltd., 1981.

Guzetter

Suryanth Kamath (Ed), Karnataka State Gazetter Bangalore Rural District Gazetter. 1989.

ನಕ್ಷೆ: ಕರ್ನಾಟಕ ರಾಜ್ಯ

ಸಮೀಕ್ಷೆಗೊಳಪಟ್ಟ ಉತ್ತರ ಕನ್ನಡ ಜಿಲ್ಲೆ



ನಕ್ಷೆ: ಉತ್ತರ ಕನ್ನಡ ಜಿಲ್ಲೆ
ಸಮೀಕ್ಷೆಗೊಳಪಟ್ಟ ತಾಲೂಕುಗಳು



ಛಾಯಾಚಿತ್ರಗಳು



ಮುಕ್ರಿಯರ ಗುಡಿಸಲು




ಕೆಲಸದಲ್ಲಿ ತೊಡಗಿರುವ ಮುಕ್ರಿಯರು



ಭತ್ತದ ಸಸಿ ನೆಡುತ್ತಿರುವ ಮುಕ್ರಿ ಮಹಿಳೆಯರು



ಮತದಕೇರಿ ಮನೆಯ ಮುಂದೆ ಕುಳಿತಿರುವ ಈಶ್ವರ ಮುಕ್ರಿ ಕುಟುಂಬ



ಭತ್ತದ ಸಸಿ ಹೊರುತ್ತಿರುವ ಮುಕ್ರಿ ಪುರುಷರು



ಸಾಂಪ್ರದಾಯಿಕ ಉಡುಪಿನಲ್ಲಿ
ಗದ್ದೆಯಲ್ಲಿರುವ ಮುಕ್ರಿ ಮಹಿಳೆ



ಮುಕ್ರಿ ಸಮುದಾಯದವರನ್ನು ಸಂದರ್ಶಿಸುತ್ತಿರುವ ಸಂಶೋಧಕರು



ನಾರಾಯಣ ಅಡಗೂಳಿ ನಿವೃತ್ತ ಸರಕಾರಿ ನೌಕರರು



ಮುಕ್ರಿ ಸಮುದಾಯದ ಹೋರಾಟಗಾರ
ಹೇಮಂತ್ ಹಳಕಾರ್ - ಕುಮಟಾ



ಕೊಳಗ – ಮುಕ್ರಿಯರು ಬಳಸುವ ಅಳತೆ ಮಾಪನ




ಸಲುಗೆ ಮತ್ತು ಅಳ್ಳ – ಅಳತೆ ಮಾಪನಗಳು



ಸಿದ್ದೆ – ಅಳತೆ ಮಾಪನ



ಭತ್ತ ಕುಟ್ಟುವ ಒನಕೆ ಹಿಡಿದಿರುವ ಮಹಿಳೆ



ಸಾಂಪ್ರದಾಯಿಕ ಉಡುಗೆ ತೊಟ್ಟಿರುವ
ಹಿರಿಯ ಮಹಿಳೆ



ಮುಕ್ರಿಯರು ಬಳಸುವ ರಾಗಿ ಕಡಕ



ಮುಕ್ರಿಯರ ಕಲಿ ವೀರಭದ್ರ ದೇವಸ್ಥಾನ – ಹಳಗೇರಿ



ಕಲಿ ವೀರಭದ್ರ ದೇವರ ಮೂಲ ಸ್ಥಾನ




ಕಲಿ ವೀರಭದ್ರ ದೇವಸ್ಥಾನದ ಮುಕ್ರಿ ಸಮುದಾಯದ ಗುನುಗರು (ಪೂಜಾರಿ)



ರಾಮ ಮುಕ್ರಿಯವರ ದೇವರ ಮನೆಯಲ್ಲಿ ಪೂಜೆಗೊಳ್ಳುತ್ತಿರುವ ಹುತ್ತ



ಮುಕ್ರಿ ಕೇರಿಯಲ್ಲಿರುವ ಕಾಮದೇವರ ಕಟ್ಟೆ – ವಾಲಗಳ್ಳಿ



ಮುಕ್ರಿ ಸಮುದಾಯದ ಹಿರಿಯ ಪುರುಷ



ಮುಕ್ರಿ ಸಮುದಾಯದ ಯುವಕರು



ಹಂದಿಗೋಣದ ಮುಕ್ರಿ ಕೇರಿಯಲ್ಲಿರುವ ಬಾವಿ



ಬಾವಿಯಿಂದ ನೀರು ಸೇದುತ್ತಿರುವ ಹಿರಿಯ ಮಹಿಳೆ



ಮರದ ಬುಡದಲ್ಲಿರುವ ಮುಕ್ರಿ ದೇವರು



ಮುಕ್ರಿಯರ ತುಳಸಿ ಕಟ್ಟೆ



ಕೆಕ್ಕಾರು ಮಠದ ಆರಾಧನಾ ಕಾರ್ಯಕ್ರಮದಲ್ಲಿರುವ ಮುಕ್ರಿ ಸಮುದಾಯದವರು




ಗೇರುಬೀಜ ಸುಲಿಯುವ ಕಾಯಕದಲ್ಲಿ ಮುಕ್ರಿ ಮಹಿಳೆ



ಕಿರಾಣಿ ಅಂಗಡಿ ವ್ಯವಹಾರದ ಮುಕ್ರಿ ವ್ಯಾಪಾರಿ





ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ